KA / BG-GPO /2515 / WPP-47 / 2009-2011



# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು


| ಸಂಪುಟ ೧೪೪ | ಬೆಂಗಳೂರು, ಗುರುವಾರ, ಜುಲೈ ೨, ೨೦೦೯ ( ಆಷಾಢ ೧೧, ಶಕವರ್ಷ ೧೯೩೧) | ಸಂಚಿಕೆ ೨೭ |
|---|---|---|


## ವಿಷಯಸೂಚಿ

# ವಿಶೇಷ ರಾಜ್ಯಪತ್ರಗಳು

| ಸಂಖ್ಯೆ | ದಿನಾಂಕ | ಅಧಿಸೂಚನೆ ಸಂಖ್ಯೆ, ದಿನಾಂಕ ಮತ್ತು ವಿವರ |
|---|---|---|
| 458 | 20.6.2009 | No. SAMVYASHAE 30 SHASANA 2008, Dt. 20.6.2009 - The Karnataka State Law University Act, 2009. |
| 459 | 20.6.2009 | No. RDP 145 ZPS 2008, Dt. 20.6.2009 - Governor of Karnataka do hereby appoint Shri C.R.Chikmath as the State Election Commissioner. |
| 460 | 22.6.2009 | No. DPAL 14 Samvyavi 2009, Dt. 22.6.2009 - Governor of Karnataka to hereby Summon the KLA & KLC |
| 461 | 22.6.2009 | ಸಂ. ಸಿಐ 608 ಎಸ್‌ಪಿಕ್ಯೂ 2008, ದಿ. 22.6.2009 - ರಾಮನಗರ ಜಿಲ್ಲೆಯ ಅಬ್ಬನಕುಪ್ಪೆ ಗ್ರಾಮಕ್ಕೆ ಸಂಬಂಧಿಸಿದಂತೆ ಕೆ.ಐ.ಎ.ಡಿ. ಕಾಯ್ದೆ ಕಲಂ 28(4)ರ ಅಂತಿಮ ಅಧಿಸೂಚನೆ. |
| 462 | 22.6.2009 | ಸಂ. ಸಿಐ 868 ಎಸ್‌ಪಿಕ್ಯೂ 2007, ದಿ. 22.6.2009 - ರಾಮನಗರ ಜಿಲ್ಲೆಯ ಅಬ್ಬನಕುಪ್ಪೆ ಗ್ರಾಮಕ್ಕೆ ಸಂಬಂಧಿಸಿದಂತೆ ಕೆ.ಐ.ಎ.ಡಿ. ಕಾಯ್ದೆ ಕಲಂ 28(4)ರ ಅಂತಿಮ ಅಧಿಸೂಚನೆ. |
| 463 | 23.6.2009 | ಸಂ. ಗ್ರಾಅಪ 132 ಜಿಪಸ 2009, ದಿ. 22.6.2009 - ಕೊಪ್ಪಳ ಜಿಲ್ಲಾ ಪಂಚಾಯತಿಗೆ ಆಡಳಿತಾಧಿಕಾರಿ ನೇಮಿಸುವ ಬಗ್ಗೆ. |
| 464 | 23.6.2009 | ಸಂ. ಇಸಿಐ/45/ಐಎಂಎಲ್/ಕೆಎಸ್‌ಬಿಸಿಎಲ್/2009, ದಿ. 18.6.2009 - ಕ.ರಾ.ಪಾ.ನಿ. ನಿಯಮಿತ ಇವರ ಮದ್ಯ ಸಂಗ್ರಹಣಾ ಡಿಪೋಗಳಿಂದ ಚಿಲ್ಲರೆ ಮದ್ಯ ಮಾರಾಟಗಾರರು ಮದ್ಯವನ್ನು ಖರೀದಿಸುವ ಬಗ್ಗೆ. |
| 465 | 23.6.2009 | No. FD 20 PES 2005, Dt. 22.6.2009 - The Karnataka Excise (Lease of Right of Retail Vend of Wine) (Amendment) Rules, 2009. |
| 466 | 24.6.2009 | No. FD 70 EPS 2006, Dt. 24.6.2009 - The Karnataka Excise Services (Recruitment) (Amendment) Rules, 2009. |
| 467 | 24.6.2009 | ಸಂ. ರಾಚುಆ:18:ಇಜಿಪಿ:2009, ದಿ. 20.6.2009 - ಕ.ಪ.ರಾ.ಅ. 1993ರ ಪ್ರಕಾರ ರಾಮನಗರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ "ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯನ್ನಾಗಿ ಮಾಡಿ ಅಧಿಕಾರ ನೀಡುವ ಬಗ್ಗೆ". |
| 468 | 24.6.2009 | ಸಂ. ಲೋಇ 78 ಇಎಪಿ 2009, ದಿ. 24.6.2009 - ರಾಜ್ಯ ಹೆದ್ದಾರಿ ಸಂಖ್ಯೆ. 61 (ಲಿಂಕ್ ನಂ. 13ಎ)ನ್ನು ಅಭಿವೃದ್ಧಿಪಡಿಸಲು ಬೇಕಾಗಿರುವ ಜಮೀನುಗಳಿಗೆ ಸಂಬಂಧಿಸಿದಂತೆ ಭೂಸ್ವಾಧೀನ ಅಧಿಚೂಚನೆ. |
| 469 | 24.6.2009 | ಸಂ. ಲೋಇ 79 ಇಎಪಿ 2009, ದಿ. 24.6.2009 - ರಾಜ್ಯ ಹೆದ್ದಾರಿ ಸಂಖ್ಯೆ. 22 (ಲಿಂಕ್ ನಂ. 6ಸಿ)ನ್ನು ಅಭಿವೃದ್ಧಿಪಡಿಸಲು ಬೇಕಾಗಿರುವ ಜಮೀನುಗಳಿಗೆ ಸಂಬಂಧಿಸಿದಂತೆ ಭೂಸ್ವಾಧೀನ ಅಧಿಚೂಚನೆ. |
| 470 | 24.6.2009 | ಸಂ. ಲೋಇ 80 ಇಎಪಿ 2009, ದಿ. 24.6.2009 - ರಾಜ್ಯ ಹೆದ್ದಾರಿ ಸಂಖ್ಯೆ. 15 (ಲಿಂಕ್ ನಂ. 13ಬಿ)ನ್ನು ಅಭಿವೃದ್ಧಿಪಡಿಸಲು ಬೇಕಾಗಿರುವ ಜಮೀನುಗಳಿಗೆ ಸಂಬಂಧಿಸಿದಂತೆ ಭೂಸ್ವಾಧೀನ ಅಧಿಚೂಚನೆ. |
| 471 | 24.6.2009 | ಸಂ. ಇ3/ಪ್ರೌಶಾಶಿನೇ/27/2008-09, ದಿ. 24.6.2009 - ತಿದ್ದುಪಡಿ ಜ್ಞಾಪನ - 2008-09ನೇ ಸಾಲಿನ ಪ್ರೌಢ ಶಾಲಾ ಶಿಕ್ಷಕರ ನೇಮಕಾತಿ. |
| 472 | 25.6.2009 | ಸಂ. ಚುನಾವಣೆ:ಸಿಆರ್:172/2008-09, ದಿ. 25.6.2009 - ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ಕೃ.ಉ.ಮಾ. ಸಮಿತಿಯ ಆನಿವಾಳ ಕೃಷಿಕ ಮತಕ್ಷೇತ್ರಕ್ಕೆ ಚುನಾವಣಾ ವೇಳಾಪಟ್ಟಿ. |
| 473 | 25.6.2009 | No. ED 32 TEC 2009, Dt. 17.6.2009 - 2009-10 ನೇ ಸಾಲಿನ ಇಂಜಿನಿಯರಿಂಗ್/ಆರ್ಕಿಟೆಕ್ಚರ್ ಕೋರ್ಸುಗಳ ಸೀಟ್ ಮ್ಯಾಟ್ರಿಕ್ಸ್. |

| ಸಂಖ್ಯೆ | ದಿನಾಂಕ | ಅಧಿಸೂಚನೆ ಸಂಖ್ಯೆ, ದಿನಾಂಕ ಮತ್ತು ವಿವರ |
|---|---|---|
| 474 | 25.6.2009 | No. SARIE 101 SAEPA 2009, Dt. 25.6.2009 – Under Sub-rule (2) of rule 16 and rule 48 of the CMV Rules 1989 – Smart Cards |
| 475 | 25.6.2009 | ಸಂ. ನಅಇ 83 ನಯೋಸೇ 2009, ದಿ. 25.6.2009 – ರಾಜ್ಯದ ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳ ನ.ಯೋ.ಸ. ಹುದ್ದೆಯ ಹಾಗೂ ಎಲ್ಲಾ ಯೋಜನಾ ಪ್ರಾದಿಕಾರಿಗಳಿಗೆ ಸ.ಕಾ. ಹುದ್ದೆಯ ವೃಂದವನ್ನು ಮಾರ್ಪಡಿಸುವ ಬಗ್ಗೆ. |
| 476 | 25.6.2009 | No. SAMVYASHAE 21 SHASANA 2008, Dt. 25.6.2009 – Karnataka Act No. 1 of 2009 – THE KARNATAKA PROHIBITION OF VIOLENCE AGAINST MEDICARE SERVICE PERSONNEL AND DAMAGE TO PROPERTY IN MEDICARE SERVICE INSTITUTIONS ACT , 2009 |
| 477 | 25.6.2009 | No. UDD 162 MNU 2009, Dt. 25.6.2009 – Bruhat Bangalore Mahanagara Palike Property Tax (Amendment) Rules. 2009. |
| 478 | 25.6.2009 | ಸಂ. ಸಂವ್ಯಶಾಇ 16 ಶಾಸನ 2009 (ಭಾ), ದಿ. 25.6.2009 – ತಿದ್ದೋಲೆ – ಕರ್ನಾಟಕ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ಅಧಿನಿಯಮ, 2009. |
| 479 | 25.6.2009 | No. DCA 1 ARB 2009, Dt. 25.6.2009 – Karnataka Government (Allocation of Business) (Amendment) Rules, 2009. |
| 480 | 25.6.2009 | No. RD 37 AQW 2009, Dt. 19.6.2009 – Under Sub-section (1) of section 9 of the Manoeuvres, Field Firing and Artillery Practice Act, 1938. |
| 481 | 26.6.2009 | ಸಂ. ಕವಿಸಸ/ಆ–1/90/ಸಿ.ಡಿ.ನೇ.ನೇ/2009, ದಿ. 26.6.2009 – ಕ.ವಿ.ಸ. ಸಚಿವಾಲಯದ ಕಿರಿಯ ಸಹಾಯಕ ಹಾಗೂ ದಲಾಯತ್ ಹುದ್ದೆಗಳನ್ನು ನೇರ ನೇಮಕಾತಿಯ ಮೂಲಕ ಭರ್ತಿ ಮಾಡುವ ಬಗ್ಗೆ. |
| 482 | 27.6.2009 | No. PWD 156 SPG 2009, Dt. 27.6.2009 - ಲೋಕೋಪಯೋಗಿ ಮತ್ತು ಜಲಸಂಪನ್ಮೂಲ ಇಲಾಖೆಯ ಕಾರ್ಯಪಾಲಕ ಇಂಜಿನಿಯರ್ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿ. |
| 483 | 27.6.2009 | No. FD 17 PES 2009, Dt. 27.6.2009 – Karnataka Excise (Sale of Indian & Foreign Liquors) (Amendment) Rules, 2009. |

# ಕರ್ನಾಟಕ ರಾಜ್ಯಪತ್ರವನ್ನು ಅಂತರಜಾಲದಲ್ಲಿ ವೀಕ್ಷಿಸಬಹುದು
# http//www.Kar.nic.in/gazette.

## ೨೦೦೯-೨೦೧೦ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪರಿಷ್ಕೃತ ಚಂದಾ ದರ

| ಕ್ರಮ ಸಂಖ್ಯೆ | ರಾಜ್ಯಪತ್ರದ ಭಾಗಗಳು | ಪ್ರತಿ ಒಂದಕ್ಕೆ ರೂ. ಪೈ. | ವಾರ್ಷಿಕ ಚಂದಾ ದರ ರೂ. ಪೈ. |
|---|---|---|---|
| 1. | ಭಾಗ - 1 ........................................ | 12-00 | 700-00 |
| 2. | ಭಾಗ - 2 ........................................ | 4-00 | 208-00 |
| 3. | ಭಾಗ - 3 ........................................ | 30-00 | 1075-00 |
| 4. | ಭಾಗ - 4 ........................................ | 3-00 | 240-00 |
| 5. | ಭಾಗ - 4ಎ ........................................ | 8-00 | 285-00 |
| 6. | ಭಾಗ - 5 ........................................ | 13-00 | 528-00 |
| 7. | ಭಾಗ - 6 (ಬೆಂಗಳೂರು).................................. | 7-00 | 325-00 |
| 8. | ಭಾಗ - 6ಎ (ಮೈಸೂರು).................................. | 50-00 | 1111-00 |
| 9. | ಭಾಗ - 6ಬಿ (ಧಾರವಾಡ).................................. | 25-00 | 1637-00 |
| 10. | ಭಾಗ - 6ಸಿ (ಗುಲ್ಬರ್ಗ).................................. | 29-00 | 1469-00 |
| 11. | ಸಂಪೂರ್ಣ ಕರ್ನಾಟಕ ರಾಜ್ಯಪತ್ರ ಕ್ರ. ಸ. 1 ರಿಂದ 7 (ಭಾಗ-1 ರಿಂದ 6) ವಿಶೇಷ ರಾಜ್ಯಪತ್ರವನ್ನು ಹೊರತುಪಡಿಸಿ | 77-00 | 3360-00 |
| 12. | ವಿಶೇಷ ರಾಜ್ಯಪತ್ರಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ಪಡೆಯಿರಿ ಮತ್ತು ಸರ್ಕಾರಿ ಪುಸ್ತಕ ಮಳಿಗೆಗಳಲ್ಲಿ ಮಾರಾಟಕ್ಕೆ ಲಭ್ಯವಿರುತ್ತವೆ. | | |

## ೨೦೦೯-೨೦೧೦ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪ್ರಕಟಣೆ ದರ

| ಕ್ರಮ ಸಂಖ್ಯೆ | ಪ್ರಕಟಣೆ ದರಗಳು | | ಮೊತ್ತ ರೂ. ಪೈ. |
|---|---|---|---|
| 1. | ಸ್ಥಳೀಯ / ಸ್ಥಾನಿಕ ಸಂಸ್ಥೆ ಮತ್ತು ಸರ್ಕಾರದ ಇಲಾಖೆ ಎ4 ಅಳತೆಯ ಪ್ರತಿ ಪುಟಕ್ಕೆ | | 500-00 |
| 2. | ಪ್ರತಿ ಸಾಲಿನ 43 ಎಮ್ಸ್ ಅಥವಾ 2 ಸಾಲಿನ 21 ಎಮ್ಸ್ | ... | 7-00 |
| 3. | ಖಾಸಗಿ ಸಂಸ್ಥೆ ಮತ್ತು ವಾಣಿಜ್ಯಕ್ಕೆ ಸಂಬಂಧಿಸಿದಂತೆ (ಕೆಪಿಟಿಸಿಎಲ್, ಕೆಎಸ್‌ಆರ್‌ಟಿಸಿ ತರಹ ಇತ್ಯಾದಿ ಪ್ರತಿ ಪುಟಕ್ಕೆ) | ... | 750-00 |
| 4. | ಪ್ರತಿ ಸಾಲಿನ 43 ಎಮ್ಸ್ ಅಥವಾ 2 ಸಾಲಿನ 21 ಎಮ್ಸ್ | ... | 11-00 |
| 5. | ಅರ್ಧ ಪುಟಕ್ಕೆ ಅಥವಾ ಕಾಲು ಪುಟಕ್ಕೆ ಬರುವ ವಿಷಯ | ... | ½ ಅಥವಾ ¼ ಪುಟಕ್ಕೆ ದರ ನಿಗಧಿ |
| 6. | ಕಾಲು ಪುಟಕ್ಕಿಂತ ಕಡಿಮೆ ಇರುವ ವಿಷಯಕ್ಕೆ | ... | ಕ್ರಮ ಸಂಖ್ಯೆ 1 ಮತ್ತು 3 ಕ್ರಮ ಸಂಖ್ಯೆ 2 ಮತ್ತು 4 ರಲ್ಲಿ ನಮೂದಿಸಿರುವಂತೆ ಪ್ರತಿ ಸಾಲಿಗೆ ದರ ನಿಗಧಿಪಡಿಸಿರುವುದು. |
| 7. | ಹೆಚ್ಚಾಗಿ ಬೇಕಾಗಿರುವ ಪ್ರತಿ ಹಾಳೆಯ ಬೆಲೆ (ಮುದ್ರಿಸಿರುವ ಹಾಳೆಯ ಅಳತೆಯನ್ನು ನಿರೂಪಿಸಿ) | ... | 1-00 |

ಸೂಚನೆ :-

1. ಚಂದಾಹಣದ / ಪ್ರಕಟಣಾ ವೆಚ್ಚದ ಮೊತ್ತವನ್ನು " 0058 ಲೇಖನ ಸಾಮಗ್ರಿ ಮತ್ತು ಮುದ್ರಣ (I) ರಾಜ್ಯಪತ್ರ ಮತ್ತು ಇತರ ಪ್ರಕಟಣಾ ವೆಚ್ಚಗಳು " ಖಜಾನೆಗೆ ಸಲ್ಲಿಸಿ, ಮೂಲ ಚಲನನ್ನು ಮುಂದಿನ ಕ್ರಮಕ್ಕಾಗಿ ಈ ಕಛೇರಿಗೆ ಕಳುಹಿಸಬೇಕು.
2. ಭಾಗ VI-ಎ, VI-ಬಿ, VI-ಸಿ ಗಳನ್ನು ಅನುಕ್ರಮವಾಗಿ ಮೈಸೂರು, ಧಾರವಾಡ ಮತ್ತು ಗುಲ್ಬರ್ಗಾದ ಶಾಖಾ ಮುದ್ರಣಾಲಯಗಳಿಂದ ಪಡೆಯಬಹುದು.
3. ಕರ್ನಾಟಕ ರಾಜ್ಯ ಪತ್ರಕ್ಕಾಗಿ ಈ ಕೆಳಕಂಡ ವಿಳಾಸದಲ್ಲಿ ಪತ್ರ ವ್ಯವಹರಿಸತಕ್ಕದ್ದು.

ಸಂಕಲನಾಧಿಕಾರಿಗಳು,
ಕರ್ನಾಟಕ ರಾಜ್ಯಪತ್ರ,
ಸರ್ಕಾರಿ ಹೊರವಲಯ ಮುದ್ರಣಾಲಯ,
ಮೈಸೂರು ರಸ್ತೆ, ಬೆಂಗಳೂರು-59.

ಮುದ್ರಕರು :- ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು-59

KA / BG-GPO / 2515 / WPP-47 / 2009-2011

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

| ಸಂಪುಟ ೧೪೪ | ಬೆಂಗಳೂರು, ಗುರುವಾರ, ಜುಲೈ ೨, ೨೦೦೯ (ಆಷಾಢ ೧೧, ಶಕ ವರ್ಷ ೧೯೩೧) | ಸಂಚಿಕೆ ೨೭ |
|---|---|---|

## ಭಾಗ – ೧

## ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

### ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

ವಿಷಯ: ಎಸ್‌ಜಿಎಸ್‌ವೈ ಲೆಕ್ಕ ಶೀರ್ಷಿಕೆ 2501–01–198–6–01 ಯಡಿ ಅನುದಾನವನ್ನು ಪುನರ್ವಿನಿಯೋಗದ ಮೂಲಕ ಭರಿಸುವ ಬಗ್ಗೆ.

ಓದಲಾಗಿದೆ:
1 ಸರ್ಕಾರದ ಆದೇಶದ ಸಂಖ್ಯೆ ಎಫ್‌ಡಿ 9 ಟಿಎಫ್‌ಪಿ 2005 ದಿನಾಂಕ: 07.04.2005.
2 ಸರ್ಕಾರದ ಆದೇಶದ ಸಮಸಂಖ್ಯೆ ದಿನಾಂಕ 03.03.2009
3 ಸರ್ಕಾರದ ಆದೇಶದ ಸಮಸಂಖ್ಯೆ ದಿನಾಂಕ 11.03.2009
4 ಕೇಂದ್ರ ಸರ್ಕಾರದ ಪತ್ರದ ಸಂಖ್ಯೆ ಜೆ 12022/1/2008 ಎಸ್‌ಜಿಎಸ್‌ವೈ I (226) ದಿನಾಂಕ 12.03.2009

ಪ್ರಸ್ತಾವನೆ:

ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯ ಲೆಕ್ಕ ಶೀರ್ಷಿಕೆ 2501–01–198–6–01 ಯಡಿ 2008–2009ನೇ ಸಾಲಿಗೆ ರಾಜ್ಯದ ಆಯವ್ಯಯದಲ್ಲಿ ರಾಜ್ಯದ ಪಾಲಿನ ಅನುದಾನ ರೂ.2562.39 ಲಕ್ಷಗಳನ್ನು ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳಿಗೆ ಹಂಚಿಕೆ ಮಾಡಿದೆ. ಈ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿರುವುದರಿಂದ ರಾಜ್ಯವು ಕೇಂದ್ರದ ಪಾಲಿನ ಅನುದಾನಕ್ಕನುಗುಣವಾಗಿ ರಾಜ್ಯದ ಪಾಲಿನ ಅನುದಾನ ಬಿಡುಗಡೆ ಮಾಡಬೇಕಾಗಿದೆ. ಓದಲಾಗಿದೆ (2) ರ ಆದೇಶದಲ್ಲಿ ಬಾಗಲಕೋಟೆ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಚಾಮರಾಜನಗರ, ದಕ್ಷಿಣ ಕನ್ನಡ ಮತ್ತು ರಾಮನಗರ ಜಿಲ್ಲಾ ಪಂಚಾಯತ್‌ಗಳಿಗೆ ಕೊರತೆಯಾಗಿರುವ ರೂ.1,32,34,000 ಅನುದಾನವನ್ನು ಪುನರ್ವಿನಿಯೋಗ ಮಾಡಿಕೊಂಡು ಓದಲಾಗಿದ (3)ರ ಆದೇಶದಲ್ಲಿ ಅನುದಾನ ರೂ.1,36,60,000 ಬಿಡುಗಡೆ ಮಾಡಲಾಗಿತ್ತು. ಎರಡನೇ ಕಂತಿನ ಅನುದಾನವಾಗಿ ಕೇಂದ್ರ ಸರ್ಕಾರ ಓದಲಾಗಿದೆ (4) ರಲ್ಲಿ ಕೋಲಾರ ಜಿಲ್ಲಾ ಪಂಚಾಯತಿಗೆ ರೂ. 33,46,000 ಹಾಗೂ ರಾಮನಗರ ಜಿಲ್ಲಾ ಪಂಚಾಯತಿಗೆ ರೂ.93,47,000 ಬಿಡುಗಡೆ ಮಾಡಿದೆ. ಕೇಂದ್ರ ಬಿಡುಗಡೆಗೊಳಿಸಿದ ಅನುದಾನಕ್ಕೆ ಅನುಗುಣವಾಗಿ, ಈ ಜಿಲ್ಲೆಗಳಿಗೆ ಕ್ರಮವಾಗಿ ರಾಜ್ಯದ ಪಾಲಿನ ಅನುದಾನ ರೂ.11,15,000 ಹಾಗೂ 31,16,000 ಬಿಡುಗಡೆ ಮಾಡಬೇಕಾಗಿದೆ. ಆದರೆ, ರಾಜ್ಯದ ಆಯವ್ಯಯದಲ್ಲಿ ಕೋಲಾರ ಜಿಲ್ಲಾ ಪಂಚಾಯತಿಗೆ ರೂ.6,79,000 ಮಾತ್ರ ಲಭ್ಯತೆ ಇದ್ದು, ಮತ್ತು ರಾಮನಗರ ಜಿಲ್ಲಾ ಪಂಚಾಯತಿಯಲ್ಲಿ ಅನುದಾನ ಲಭ್ಯತೆ ಇರುವುದಿಲ್ಲ. ಆದ ಕಾರಣ, ಕೋಲಾರ ಮತ್ತು ರಾಮನಗರ ಜಿಲ್ಲಾ ಪಂಚಾಯತಿಗಳಲ್ಲಿ ಕೊರತೆಯಿರುವ ರೂ.35,52,000 ಗಳನ್ನು ಚಿಕ್ಕಮಗಳೂರು ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಉಳಿಯಬಹುದಾದ ಅನುದಾನದಿಂದ ಪುನರ್ವಿನಿಯೋಗ ಮಾಡಿಕೊಳ್ಳಬೇಕಾಗಿದೆ. ಆದುದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 65 ಎಸ್‌ಜಿವೈ 2008, ಬೆಂಗಳೂರು, ದಿನಾಂಕ: 19ನೇ ಮಾರ್ಚ್ 2009**

ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯ ಲೆಕ್ಕ ಶೀರ್ಷಿಕೆ 2501–01–198–6–01 ಯಡಿ 2008–2009ನೇ ಸಾಲಿಗೆ ರಾಜ್ಯ ಸರ್ಕಾರವು ಕೋಲಾರ ಮತ್ತು ರಾಮನಗರ ಜಿಲ್ಲಾ ಪಂಚಾಯತ್‌ಗೆ ಅಗತ್ಯವಿರುವ ರೂ.35,52,000ಗಳನ್ನು (ರೂ. ಮೂವತ್ತೈದು ಲಕ್ಷದ ಐವತ್ತೆರಡು ಸಾವಿರ ಮಾತ್ರ) ಪುನರ್ವಿನಿಯೋಗದ ಮೂಲಕ ಭರಿಸಲು ಮಂಜೂರಾತಿ ನೀಡಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 9 ಟಿಎಫ್‌ಪಿ 2005 ದಿನಾಂಕ 07.04.2005ರಲ್ಲಿ ಆಡಳಿತ ಇಲಾಖೆಯ ಕಾರ್ಯದರ್ಶಿಗಳಿಗೆ ಪ್ರದತ್ತವಾದ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಡಾ: ಶಮ್ಲಾ ಇಕ್ಬಾಲ್

ನಿರ್ದೇಶಕರು (ಸ್ವಉಕಾ) ಹಾಗೂ ಪ.ನಿ. ಸರ್ಕಾರದ ಉಪ ಕಾರ್ಯದರ್ಶಿಗಳು,

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಶಾಖೆ : ಸ್ವಯಂ ಉದ್ಯೋಗ ಕಾರ್ಯಕ್ರಮ ಯೋಜನೆ : ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ

ಆಯವ್ಯಯ ಪತ್ರದಲ್ಲಿ ಅಥವಾ ಹೆಚ್ಚಿನ ಹಂಚಿಕೆ (ಅಲಾಟ್‌ಮೆಂಟ್) ಗಳಲ್ಲಿ ಉಪಬಂಧ ಕಲ್ಪಿಸಿಲ್ಲದ ಎಲ್ಲಾ ವಿನಿಯೋಗಗಳಿಗೆ ಅಥವಾ ಮಂಜೂರಾತಿಗೆ ಲಗತ್ತಿಸಬೇಕಾದ ಪುನರ್ವಿನಿಯೋಗದ ವಿವರಣೆ

ವರ್ಷ : 2008–09 (ರೂ.ಲಕ್ಷಗಳಲ್ಲಿ)

| ಮುಂಗಡ ಪತ್ರ ಪ್ರಧಾನ ಚಿಕ್ಕ ಉಪ ವಿವರವಾದ ಶೀರ್ಷಿಕೆಗಳು 2501 – ಗ್ರಾಮೀಣಾಭಿವೃದ್ಧಿಗಾಗಿ ವಿಶೇಷ ಕಾರ್ಯಕ್ರಮಗಳು 01–ಸಮಗ್ರ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು 198–ಗ್ರಾಮ ಪಂಚಾಯತ್‌ಗಳಿಗೆ ಸಹಾಯ 6–ಗ್ರಾಮ ಪಂಚಾಯತ್ 01–ಬ್ಲಾಕ್ ಅನುದಾನ (ಯೋಜನೆ) ಎಸ್‌ಜಿಎಸ್‌ವೈ | | ಹೆಚ್ಚಿಸಲು ಪ್ರಸ್ತಾವಿಸಲಾದ ಅಂದಾಜಿನ ಶೀರ್ಷಿಕೆ 2501-01-198-6-01 | | | | ಕಡಿಮೆ ಮಾಡಲು ಪ್ರಸ್ತಾವಿಸಲಾದ ಅಂದಾಜಿನ ಶೀರ್ಷಿಕೆ 2501-01-18-6-01 | | | | ಪರಾ ಹಣ ಹಂಚಿಕೆ (ಅಲಾಟ್‌ಮೆಂಟ್) ಮೀರಿರುವುದಕ್ಕೆ ಮತ್ತು ಉಳಿತಾಯ ನಿರೀಕ್ಷಿಸುವುದಕ್ಕೆ ಕಾರಣಗಳನ್ನು ಇಲ್ಲಿ ಪೂರ್ಣವಾಗಿ ವಿವರಿಸಬೇಕು. |
|---|---|---|---|---|---|---|---|---|---|---|
| ಜಿಲ್ಲಾ ಕೋಡ್ | ಜಿಲ್ಲಾ ಪಂಚಾಯತ್ | ಮಂಜೂರಾದ ಆಯವ್ಯಯ ಅಂದಾಜಿನಲ್ಲಿರುವ ಮೊತ್ತ | ಈವರೆಗೆ ಆಗಿರುವ ವಾಸ್ತವಿಕ ವೆಚ್ಚ (ಎಂದರೆ) | ವರ್ಷದ ಉಳಿದ ಅವಧಿಯಲ್ಲಿ ಸಂಭವನೀಯ ವೆಚ್ಚ | ಬೇಕಾದ ಹೆಚ್ಚಿನ ಅಲಾಟ್‌ಮೆಂಟ್ ವಿವರ | ಮಂಜೂರಾದ ಆಯವ್ಯಯ ಅಂದಾಜಿನಲ್ಲಿರುವ ಮೊತ್ತ | ಈವರೆಗೆ ಆಗಿರುವ ವಾಸ್ತವಿಕ ವೆಚ್ಚ (ಎಂದರೆ) | ವರ್ಷದ ಉಳಿದ ಅವಧಿಯಲ್ಲಿ ಸಂಭವನೀಯ ವೆಚ್ಚ | ಪುನರ್ವಿನಿಯೋಗಕ್ಕೆ ಲಭ್ಯವಿರುವ ಮೊತ್ತ | |
| 1 | | 2 | 3 | 4 | 5 | 6 | 7 | 8 | 9 | 10 |
| 404 | ಕೋಲಾರ | 45.60 | 38.81 | 11.15 | 4.36 | | | | | ಕೋಲಾರ ಮತ್ತು ರಾಮನಗರ ಜಿಲ್ಲೆಗೆ ಕೇಂದ್ರ ಸರ್ಕಾರ ಅನುದಾನ ಪುನರ್ ನಿಗದಿಗೊಳಿಸಿ ಬಿಡುಗಡೆ ಮಾಡಲಾಗಿತ್ತು. ಇದಕ್ಕನುಗುಣವಾಗಿ ರಾಜ್ಯದ ಆಯವ್ಯಯದಲ್ಲಿ ರಾಜ್ಯದ ಪಾಲಿನ ಅನುದಾನ ಒದಗಿಸಿಲ್ಲ ಚಿಕ್ಕಮಗಳೂರು ಮತ್ತು ಉತ್ತರ ಕನ್ನಡ ಜಿಲ್ಲೆಗಳಿಗೆ ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ 2ನೇ ಕಂತಿನ ಅನುದಾನಕ್ಕೆ ಅನುಗುಣವಾಗಿ ರಾಜ್ಯದ ಪಾಲಿನ ಅನುದಾನ ಬಿಡುಗಡೆ ಮಾಡಲು ಅನುದಾನ ಕಾಯ್ದಿರಿಸಿದ ಉಳಿದ ಅನುದಾನ ಪುನರ್ವಿನಿಯೋಗಕ್ಕೆ ಉಪಯೋಗಿಸಿಕೊಳ್ಳಲಾಗುವುದು. |
| 452 | ರಾಮನಗರ | 31.16 | 31.16 | 31.16 | 31.16 | | | | | |
| | | 76.76 | 69.97 | 42.31 | 35.52 | | | | | |
| 408 | ಚಿಕ್ಕಮಗಳೂರು | | | | | 59.40 | 42.72 | 0.00 | 16.68 | |
| 416 | ಉತ್ತರ ಕನ್ನಡ | | | | | 66.16 | 33.08 | 14.24 | 18.84 | |
| | ಒಟ್ಟು | | | | | **125.56** | **75.80** | **14.24** | **35.52** | |

ಪಿ. ರವಿಕುಮಾರ್
ಸರ್ಕಾರದ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪಿ.ಆರ್. 956

## ಕಂದಾಯ ಸಚಿವಾಲಯ

ವಿಷಯ: ಶ್ರೀ ಹೆಚ್.ಎಸ್. ನಾಗರಾಳ, ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂ ದಾಖಲೆಗಳ ಉಪ ನಿರ್ದೇಶಕರು, ಇವರ ಅಮಾನತ್ತು ಆದೇಶವನ್ನು ರದ್ದುಗೊಳಿಸುವ ಬಗ್ಗೆ.

ಓದಲಾಗಿದೆ:
1. ಸ.ಆ,ಸಂ.ಕಂಇ 23 ಭೂದಾಸೇ(1) 2008 ದಿನಾಂಕ 31.5.2008.
2. ಕರ್ನಾಟಕ ಆಡಳಿತ ನ್ಯಾಯಮಂಡಳಿಯ ಆದೇಶ ಸಂಖ್ಯೆ: ಕೆ.ಎ.ಟಿ.ಆದೇಶ ಸಂ.5304/2008 ದಿನಾಂಕ: 7.1.2009.
3. ಶ್ರೀ ಹೆಚ್.ಎಸ್.ನಾಗರಾಳ, ಭೂ ದಾಖಲೆಗಳ ಉಪ ನಿರ್ದೇಶಕರು, ಇವರು ಸಲ್ಲಿಸಿರುವ ಮನವಿ ದಿನಾಂಕ 16.1.2009.

ಪ್ರಸ್ತಾವನೆ:

ಅಪರ ಆರಕ್ಷಕ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಪತ್ರ ಸಂ.ಲೋಕ್/ಐಎನ್‌ವಿ(ಜಿ)ಎಲ್.36/ಸಿಆರ್.3/2007 ಧಾರವಾಡ ದಿನಾಂಕ:3.5.2008ರ ಪತ್ರದಲ್ಲಿ ಶ್ರೀ ಹೆಚ್.ಎಸ್.ನಾಗರಾಳ, ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಉಪ ನಿರ್ದೇಶಕರು, ಭೂದಾಖಲೆಗಳ ವಿಭಾಗ, ಧಾರವಾಡ ರವರು ತಮ್ಮ ಬಲ್ಲ ಮೂಲಗಳ ಅದಾಯಕ್ಕಿಂತ ಹೆಚ್ಚಿನ ಪ್ರಮಾಣದ ಆಸ್ತಿಯನ್ನು ಹೊಂದಿರುವರೆಂದು ತಿಳಿದುಬಂದ ವಿಶ್ವಾಸಾರ್ಹ ಮಾಹಿತಿಯನ್ವಯ ಅವರ ವಿರುದ್ಧ ಪೋಲಿಸ್ ಉಪಾಧೀಕ್ಷರು, ಕರ್ನಾಟಕ ಲೋಕಾಯುಕ್ತ, ಗದಗ್ ರವರು ದಿನಾಂಕ 24.8.2007 ರಂದು ಲಂಚ ನಿರೋಧಕ ಕಾಯ್ದೆ 1988 ರ ಕಲಂ 13(1) (ಇ) ಸಹ ಕಲಂ13(2)ರ ಪ್ರಕಾರ ಮೊಕದ್ದಮೆ ಸಂ.3/2007 ಪ್ರಕರಣ ದಾಖಲು ಮಾಡಿಕೊಂಡು ತನಿಖೆಯನ್ನು ಕೈಗೊಂಡಿರುತ್ತಾರೆಂದು ತಿಳಿಸುತ್ತಾ ಶ್ರೀಯುತರನ್ನು ಕೂಡಲೇ ಅಮಾನತ್ತಿನಲ್ಲಿಡಲು ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದ ಹಿನ್ನಲೆಯಲ್ಲಿ ಮೇಲೆ(1)ರಲ್ಲಿ ಓದಲಾದ ದಿನಾಂಕ 31.5.2008ರ ಆದೇಶದಲ್ಲಿ ಶ್ರೀ ಹೆಚ್.ಎಸ್.ನಾಗರಾಳ ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂದಾಖಲೆಗಳ ಉಪ ನಿರ್ದೇಶಕರು, ಧಾರವಾಡರವರ ವಿರುದ್ಧ ಶಿಸ್ತು ಕ್ರಮ ಕಾಯ್ದಿರಿಸಿ ಅವರನ್ನು ಸೇವೆಯಿಂದ ಅಮಾನತ್ತುಗೊಳಿಸಲಾಗಿತ್ತು ಮತ್ತು ಹೆಚ್.ಎಸ್.ನಾಗರಾಳ ರವರ ಲೀನ್ ಅನ್ನು ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂದಾಖಲೆಗಳ ಉಪ ನಿರ್ದೇಶಕರು, ಜಿಲ್ಲಾಧಿಕಾರಿಗಳ ಕಛೇರಿ, ಚಿತ್ರದುರ್ಗ ಜಿಲ್ಲೆಗೆ ಖಾಲಿ ಇರುವ ಹುದ್ದೆಗೆ ವರ್ಗಾಯಿಸಲಾಗಿತ್ತು.

ಶ್ರೀ ಹೆಚ್.ಎಸ್.ನಾಗರಾಳ ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂದಾಖಲೆಗಳ ಉಪ ನಿರ್ದೇಶಕರು, ಇವರು ಸದರಿ ಅಮಾನತ್ತು ಆದೇಶದ ವಿರುದ್ಧ ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ಅರ್ಜಿ ಸಂ.5304/2008 ನ್ನು ಸಲ್ಲಿಸಿದ್ದರು. ಮೇಲೆ (2) ರಲ್ಲಿ ಓದಲಾದ ಗೌರವಾನ್ವಿತ ಕರ್ನಾಟಕ ಆಡಳಿತ ನ್ಯಾಯಮಂಡಳಿಯ ಅರ್ಜಿ ಸಂ.5304/2008 ದಿನಾಂಕ 7.1.2009ರ ಆದೇಶದಲ್ಲಿ ಈ ಕೆಳಕಂಡಂತೆ ಆದೇಶಿಸಿರುತ್ತಾರೆ.

For the above said reasons, the application is aloowed and Government Order No. ಕಂಇ 23 ಭೂದಾಸೇ (1) 2008 dated 31.5.2008 (Annexure-A1) suspending the applicant from service is hereby quashed, keeping liberty to the appointing authority or the competent authority to pass a fresh order, if it so desires.

ಶ್ರೀ ಹೆಚ್.ಎಸ್. ನಾಗರಾಳ ರವರು ಪ್ರಸ್ತುತ ಅಮಾನತ್ತಿನಲ್ಲಿ ಇರುವ ಇವರು ಮೇಲೆ (3)ರಲ್ಲಿ ಓದಲಾದ ದಿನಾಂಕ 16.1.2009ರ ಮನವಿಯಲ್ಲಿ ಸರ್ಕಾರದಿಂದ ಹೊರಡಿಸಲಾದ ಅಮಾನತ್ತಿನ ಆದೇಶವನ್ನು ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯ ಅರ್ಜಿ ಸಂ. 5304/2008 ದಿನಾಂಕ 7.1.2009ರ ಆದೇಶದಲ್ಲಿ ರದ್ದುಗೊಳಿಸಿರುವುದರಿಂದ ಪುನಃ ಸೇವೆ ಮಾಡಲು ಅನುಕೂಲ ಮಾಡಿಕೊಡಬೇಕೆಂದು ಕೋರಿರುತ್ತಾರೆ.

ಮೇಲ್ಕಂಡ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ಕಂಇ 5 ಭೂದಾಸೇ(1) 2009, ಬೆಂಗಳೂರು, ದಿನಾಂಕ: 19ನೇ ಮಾರ್ಚ್ 2009**

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟ ಕಾರಣಗಳಿಂದಾಗಿ, ಸರ್ಕಾರವು ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆಯ ಶ್ರೀ ಹೆಚ್.ಎಸ್. ನಾಗರಾಳ, ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂದಾಖಲೆಗಳ ಉಪ ನಿರ್ದೇಶಕರು (ಅಮಾನತ್ತಿನಲ್ಲಿರುವವರು)ರವರ ಬಗ್ಗೆ ಕರ್ನಾಟಕ ಆಡಳಿತ ನ್ಯಾಯಮಂಡಳಿಯ ಅರ್ಜಿ ಸಂಖ್ಯೆ 5304/2008 ದಿನಾಂಕ 7.1.2009ರಲ್ಲಿ ಮಾಡಿರುವ ಆದೇಶದಂತೆ, ಅವರ ಅಮಾನತ್ತು ಆದೇಶ ಸಂ.ಕಂಇ 23 ಭೂದಾಸೆ(1) 2008 ದಿನಾಂಕ 31.5.2008 ನ್ನು ರದ್ದುಪಡಿಸಿ, ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂದಾಖಲೆಗಳ ಉಪ ನಿರ್ದೇಶಕರು, ಜಿಲ್ಲಾಧಿಕಾರಿಗಳ ಕಛೇರಿ, ಬೀದರ್ ಇಲ್ಲಿ ಖಾಲಿ ಇರುವ ಹುದ್ದೆಗೆ ನೇಮಿಸಿ ಆದೇಶಿಸಿದೆ.

ಶ್ರೀಯುತರನ್ನು ಅಮಾನತ್ತುಗೊಳಿಸದೆ ಇದ್ದರೆ ಯಾವ ಸೌಲಭ್ಯವನ್ನು ಪಡೆಯುತ್ತಿದ್ದರೋ ಅಂತಹ ಎಲ್ಲಾ ಸೌಲಭ್ಯಗಳನ್ನು ಪಡೆಯಲು ಅರ್ಹರಿರುತ್ತಾರೆ.

ನೇಮಿಸಲಾದ ಹುದ್ದೆಗೆ ಹಾಜರಾಗಿ ಸರ್ಕಾರಕ್ಕೆ ವರದಿ ನೀಡುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 977

ಎಚ್. ಬಿ. ಸಸಾಲಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಭೂಮಾಪನ)

**ಕಾರ್ಮಿಕ ಸಚಿವಾಲಯ**

ವಿಷಯ: ಕಾರ್ಮಿಕ ಇಲಾಖೆಯ ಮುಂದುವರೆದ ಯೋಜನಾ ಕಾರ್ಯಕ್ರಮಗಳನ್ನು 2009–10ನೇ ಆರ್ಥಿಕ ವರ್ಷಕ್ಕೆ ಮುಂದುವರೆಸುವ ಬಗ್ಗೆ.

ಓದಲಾಗಿದೆ: 1. ಕಾರ್ಮಿಕ ಆಯುಕ್ತರು, ಬೆಂಗಳೂರು ಇವರ ಪತ್ರ ಸಂಖ್ಯೆ: ಎಸಿಟಿ–1/ಸಿಆರ್–61/2008–09, ದಿನಾಂಕ:13.03.2009.

2. ದಿನಾಂಕ:21.03.2009ರಂದು ಕಾರ್ಯದರ್ಶಿ, ಕಾರ್ಮಿಕ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಮುಂದುವರೆದ ಯೋಜನೆಗಳನ್ನು ಮುಂದುವರೆಸಲು ಮಂಜೂರಾತಿ ನೀಡುವ ಸಮಿತಿ ಸಭೆಯ ನಡವಳಿಗಳು.

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ಕಾರ್ಮಿಕ ಆಯುಕ್ತರ ದಿನಾಂಕ:13.3.2009ರ ಪತ್ರದಲ್ಲಿ ಕಾರ್ಮಿಕ ಇಲಾಖೆಗೆ ಸಂಬಂಧಿಸಿದ 2008–09ನೇ ಸಾಲಿನಲ್ಲಿ ಮುಂದುವರೆದ ಯೋಜನಾ ಕಾರ್ಯಕ್ರಮಗಳನ್ನು ಮತ್ತು ಯೋಜನೆ ಅಡಿ ಮುಂದುವರೆಸಲಾದ ಹುದ್ದೆಗಳನ್ನು 2009–10ನೇ ಸಾಲಿನಲ್ಲಿ ಮುಂದುವರೆಸುವಂತೆ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. 2008–09ನೇ ಸಾಲಿನಲ್ಲಿನ ಯೋಜನಾ ಕಾರ್ಯಕ್ರಮಗಳನ್ನು ಮತ್ತು ಯೋಜನೆ ಅಡಿ ಇರುವ ಹುದ್ದೆಗಳನ್ನು 2009–10ನೇ ಸಾಲಿನಲ್ಲಿ ಮುಂದುವರೆಸುವ ಬಗ್ಗೆ ಕಾರ್ಮಿಕ ಇಲಾಖೆಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ:21.3.2009ರಂದು ನಡೆದ ಸಭೆಯಲ್ಲಿ ವಿವರವಾಗಿ ಚರ್ಚಿಸಿ. 2008–09ನೇ ಸಾಲಿನಲ್ಲಿ ಮುಂದುವರೆದ ಯೋಜನಾ ಕಾರ್ಯಕ್ರಮಗಳನ್ನು ಹಾಗೂ ಯೋಜನೆಯಡಿ ಇರುವ 62 ಹುದ್ದೆಗಳನ್ನು 2009–10ನೇ ಸಾಲಿಗೆ ನಿಗದಿಪಡಿಸಿರುವ ಆಯವ್ಯಯದಂತೆ ಮುಂದುವರೆಸಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಕಾಇ 119 ಎಲ್‌ಇಟಿ 2009, ಬೆಂಗಳೂರು, ದಿನಾಂಕ: 3ನೇ ಏಪ್ರಿಲ್ 2009**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಈ ಆದೇಶಕ್ಕೆ ಲಗತ್ತಿಸಿದ ಅನುಬಂಧದಲ್ಲಿ ಇರುವ ಯೋಜನೆಗಳನ್ನು ಹಾಗೂ ಅದರ ಅಡಿಯಲ್ಲಿನ ಹುದ್ದೆಗಳನ್ನು 2009–10ನೇ ಸಾಲಿಗೆ ನಿಗದಿಪಡಿಸಿರುವ ಆಯವ್ಯಯದಂತೆ ಮುಂದುವರೆಸಲು ಈ ಕೆಳಕಾಣಿಸಿದ ಷರತ್ತುಗಳಿಗೆ ಒಳಪಟ್ಟು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

1) 2008–09ನೇ ಸಾಲಿನಲ್ಲಿ ಹೊಸದಾಗಿ ಮಂಜೂರಾದ ಯೋಜನಾ ಕಾರ್ಯಕ್ರಮಗಳನ್ನು ಮಾತ್ರ ಮುಂದುವರೆಸಬೇಕು.

2) 2008–09ನೇ ಸಾಲಿನಲ್ಲಿ ಮುಂದುವರೆದ ಯೋಜನಾ ಹುದ್ದೆಗಳು ರದ್ದಾದಲ್ಲಿ, ಅಂತಹವುಗಳನ್ನು 2009–10ನೇ ಸಾಲಿನಲ್ಲಿ ಮುಂದುವರೆದ ಯೋಜನಾ ಕಾರ್ಯಕ್ರಮಗಳಿಂದ ತೆಗೆದು ಹಾಕುವುದು ಹಾಗೂ 2008–09ನೇ ಸಾಲಿನಲ್ಲಿ ಯೋಜನಾ ಕಾರ್ಯಕ್ರಮವನ್ನು ಕೈಬಿಟ್ಟಿದ್ದರೆ, ಅಂತಹ ಕಾರ್ಯಕ್ರಮಗಳನ್ನು 2009–10ನೇ ಸಾಲಿನಲ್ಲಿ ಯೋಜನೆ ಅಡಿಯಲ್ಲಿ ಮುಂದುವರೆದ ಕಾರ್ಯಕ್ರಮಗಳ ಪಟ್ಟಿಯಿಂದ ತೆಗೆದು ಹಾಕಬೇಕು.

3) ಮುಂದುವರೆದ ಯೋಜನಾ ಕಾರ್ಯಕ್ರಮಗಳಲ್ಲಿ ಯಾವುದೇ ಹೊಸ ಘಟಕಗಳ ಪ್ರಸ್ತಾಪವಿದ್ದಲ್ಲಿ, ಅವುಗಳಿಗೆ ಪ್ರತ್ಯೇಕವಾದ ಪ್ರಸ್ತಾವನೆಗಳನ್ನು ಸಲ್ಲಿಸಿ, ನಿಯಮಾನುಸಾರ ಮಂಜೂರಾತಿ ಪಡೆಯಬೇಕು.

4) ಕೇಂದ್ರ ಪರಿಷ್ಕೃತ ಹಾಗೂ ಕೇಂದ್ರ ಯೋಜನಾ ಕಾರ್ಯಕ್ರಮಗಳನ್ನು ಕೇಂದ್ರ ಸರ್ಕಾರವು 2009–10ನೇ ಸಾಲಿನಲ್ಲಿ ಮುಂದುವರೆಸುವುದನ್ನು ಮತ್ತು ಕೇಂದ್ರ ಸರ್ಕಾರವು 2009–10ನೇ ಸಾಲಿನ ಲೇಖಾನುದಾನ ಆಯವ್ಯಯದಲ್ಲಿ ಹಣ ಒದಗಿಸಿರುವುದನ್ನು ಖಚಿತಪಡಿಸಿಕೊಂಡ ನಂತರ, 2009–10ನೇ ಸಾಲಿನಲ್ಲಿ ಇಂತಹ ಯೋಜನಾ ಕಾರ್ಯಕ್ರಮಗಳನ್ನು ಮುಂದುವರೆಸಬೇಕು.

5) ಆರ್ಥಿಕ ಇಲಾಖೆಯು ಕಾಲಕಾಲಕ್ಕೆ ಹೊರಡಿಸುವ ಆರ್ಥಿಕ ಮಿತವ್ಯಯ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಎಫ್‌ಡಿ 1 ಟಿಎಫ್‌ಪಿ 96, ದಿನಾಂಕ:10.07.96ರನ್ವಯ ಇಲಾಖಾ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಲಾಗಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಯು.ಎನ್. ನಾಗೇಂದ್ರ**

ಸರ್ಕಾರದ ಅಧೀನ ಕಾರ್ಯದರ್ಶಿ, ಕಾರ್ಮಿಕ ಇಲಾಖೆ

## 2009–10ನೇ ಸಾಲಿಗೆ ಮುಂದುವರೆದ ಯೋಜನೆಗಳ ವಿವರಗಳು

ಕಾರ್ಮಿಕ ಇಲಾಖೆ

ಅನುಬಂಧ

| ಕ್ರ. ಸಂ. | ಯೋಜನೆಯ ಹೆಸರು | ಯೋಜನೆಯನ್ನು ಮಂಜೂರು ಮಾಡಿದ ಸರ್ಕಾರಿ ಆದೇಶ ಸಂಖ್ಯೆ ಮತ್ತು ದಿನಾಂಕ | 2009–10ನೇ ಸಾಲಿನಲ್ಲಿ ವೆಚ್ಚವನ್ನು ಭರಿಸಬೇಕಾದ ಲೆಕ್ಕ ಶೀರ್ಷಿಕೆ | ಮೂಲತಃ ಮಂಜೂರಾದ ಹುದ್ದೆಗಳ ಸಂಖ್ಯೆ | | ಯೋಜನೆಯಲ್ಲಿ 2009–10ನೇ ಸಾಲಿನಲ್ಲಿ ಮುಂದುವರೆಸಬೇಕಾದ ಹುದ್ದೆಗಳು | | 2009–10ನೇ ಸಾಲಿನಲ್ಲಿ ಯೋಜನೆಗೆ ಒದಗಿಸಿರುವ ಮೊತ್ತ ರೂ.ಲಕ್ಷಗಳಲ್ಲಿ |
|---|---|---|---|---|---|---|---|---|
| 1 | 2 | 3 | 4 | 5 | | 6 | | 7 |
| 1. | ಕಾರ್ಮಿಕ ಕಾನೂನುಗಳ ಸಮಾಚರಣೆ | ಸಂಖ್ಯೆ:ಸಿಆಸುಇ 3 ಸಸೇವ 97 ದಿನಾಂಕ 17.6.1997 | 2230–01–101–0–01 | 1.ವಿಶೇಷಾಧಿಕಾರಿ, ಬಾಲಕಾರ್ಮಿಕ ಕೋಶ | –1 | 1.ಉಪ ವಿಶೇಷಾಧಿಕಾರಿ, ಬಾಲಕಾರ್ಮಿಕ ಕೋಶ | –1 | 39.20 |
| | | | | 2.ಉಪ ವಿಶೇಷಾಧಿಕಾರಿ, ಬಾಲಕಾರ್ಮಿಕ ಕೋಶ | –1 | 2.ಸಹಾಯಕರು | –2 | |
| | | | | 3.ಸಹಾಯಕರು | –2 | 3.ಶೀಘ್ರಲಿಪಿಗಾರರು | –1 | |
| | | | | 4.ಶೀಘ್ರಲಿಪಿಗಾರರು | –1 | 4.ವಾಹನ ಚಾಲಕರು | –1 | |
| | | | | 5.ವಾಹನ ಚಾಲಕರು | –1 | 5.ಗ್ರೂಪ್–ಡಿ ನೌಕರರು | –2 | |
| | | | | 6.ಗ್ರೂಪ್–ಡಿ ನೌಕರರು | –2 | | | |
| | | | | ಒಟ್ಟು | 8 | ಒಟ್ಟು | 7 | |
| 2. | ಕಾರ್ಮಿಕ ಕಾನೂನುಗಳ ಸಮಾಚರಣೆ | ಸಂ.ಕಂಇ/27/ಭೂದಾಪು 2006 ದಿನಾಂಕ: 21.8.2007 | 2230–01–101–0–01 | ಕಾರ್ಮಿಕ ಅಧಿಕಾರಿ–2 | | ಕಾರ್ಮಿಕ ಅಧಿಕಾರಿ, ರಾಮನಗರ | 1 | |
| | | | | | | ಕಾರ್ಮಿಕ ಅಧಿಕಾರಿ, ಚಿಕ್ಕಬಳ್ಳಾಪುರ | 1 | |
| | | | | ಒಟ್ಟು | 2 | ಒಟ್ಟು | 2 | |
| 3. | ಕಾರ್ಮಿಕ ಕಾನೂನುಗಳ ಸಮಾಚರಣೆ | ಸಂ.ಕಂಇ/27/ಭೂದಾಪು 2006 ದಿನಾಂಕ: 21.8.2007 | | ಪ್ರಥಮ ದರ್ಜೆ ಸಹಾಯಕರು–2 | | ಕಾರ್ಮಿಕ ಅಧಿಕಾರಿ ಕಚೇರಿ, ಚಿಕ್ಕಬಳ್ಳಾಪುರ | 1 | |
| | | | | | | ಕಾರ್ಮಿಕ ಅಧಿಕಾರಿ ಕಚೇರಿ ರಾಮನಗರ | 1 | |
| | | | | ಒಟ್ಟು | 2 | ಒಟ್ಟು | 2 | |
| | | ಸಂ.ಕಂಇ 314 ಎಲ್ಇಟಿ 98 ದಿನಾಂಕ: 18.09.1998 | | ದ್ವಿತೀಯ ದರ್ಜೆ ಸಹಾಯಕರು | 13 | ದ್ವಿತೀಯ ದರ್ಜೆ ಸಹಾಯಕರು | 6 | |
| | | | | | | 1.ಕಾರ್ಮಿಕ ಅಧಿಕಾರಿ ಕಛೇರಿ, ಬಾಗಲಕೋಟೆ | | |

| 1 | 2 | 3 | 4 | 5 | 6 | 7 |
|---|---|---|---|---|---|---|
| | | | | | 2.ಕಾರ್ಮಿಕ ಅಧಿಕಾರಿ, ಕಛೇರಿ, ಕೊಪ್ಪಳ | |
| | | | | | 3.ಕಾರ್ಮಿಕ ಅಧಿಕಾರಿ ಕಛೇರಿ, ಚಿಕ್ಕಮಗಳೂರು | |
| | | | | | 4.ಕಾರ್ಮಿಕ ಅಧಿಕಾರಿ ಕಛೇರಿ, ಉಪ ವಿಭಾಗ–2, ಬಳ್ಳಾರಿ | |
| | | | | | 5.ಕಾರ್ಮಿಕ ಅಧಿಕಾರಿ ಕಛೇರಿ, ಉಪ ವಿಭಾಗ–2, ಮಂಡ್ಯ | |
| 4. | ಕಾರ್ಮಿಕ ಕಾನೂನುಗಳ ಸಮಾಚರಣೆ | ಸಂ.ಕಂಇ/27/ಭೂದಾಪು 2006 ದಿನಾಂಕ: 21.8.2007 | | | 6.ಕಾರ್ಮಿಕ ಅಧಿಕಾರಿ ಕಛೇರಿ, ರಾಮನಗರ | |
| | | | | ಒಟ್ಟು 14 | ಒಟ್ಟು 6 | |
| 5. | ಕಾರ್ಮಿಕ ಕಾನೂನುಗಳ ಸಮಾಚರಣೆ | ಸಂಖ್ಯೆ:ಕಾಇ 314 ಎಲ್ಇಟಿ 98, ದಿನಾಂಕ: 18.09.1998 | 2230–01–101–0–01 | ಶೀಘ್ರಲಿಪಿಗಾರರು 13 | ಶೀಘ್ರಲಿಪಿಗಾರರು 10 | |
| | | | | | 1. ಕಾರ್ಮಿಕ ಅಧಿಕಾರಿ ಕಛೇರಿ, ಉಪ ವಿಭಾಗ–6, ಬೆಂಗಳೂರು | |
| | | | | | 2. ಕಾರ್ಮಿಕ ಅಧಿಕಾರಿ ಕಛೇರಿ, ಉಪ ವಿಭಾಗ–2, ಮಂಗಳೂರು | |
| | | | | | 3. ಕಾರ್ಮಿಕ ಅಧಿಕಾರಿ ಕಛೇರಿ, ಉಪ ವಿಭಾಗ–2, ಹುಬ್ಬಳ್ಳಿ | |
| | | | | | 4. ಕಾರ್ಮಿಕ ಅಧಿಕಾರಿ ಕಛೇರಿ, ಉಪ ವಿಭಾಗ–2, ಬಿಜಾಪುರ | |
| | | | | | 5. ಕಾರ್ಮಿಕ ಅಧಿಕಾರಿ ಕಛೇರಿ, ಉಪ ವಿಭಾಗ–2, ಬಳ್ಳಾರಿ | |
| | | | | | 6. ಕಾರ್ಮಿಕ ಅಧಿಕಾರಿ ಕಛೇರಿ, ಚಾಮರಾಜನಗರ | |
| | | | | | 7. ಕಾರ್ಮಿಕ ಅಧಿಕಾರಿ ಕಛೇರಿ, ಕೊಪ್ಪಳ | |
| | | | | | 8. ಕಾರ್ಮಿಕ ಅಧಿಕಾರಿ ಕಛೇರಿ, ಬಾಗಲಕೋಟೆ | |
| 6. | ಕಾರ್ಮಿಕ ಕಾನೂನುಗಳ ಸಮಾಚರಣೆ | ಸಂಖ್ಯೆ:ಕಂಇ/27/ಭೂದಾಪು 2006, ದಿನಾಂಕ: 21.8.2007 | | ಶೀಘ್ರಲಿಪಿಗಾರರು 2 | 9. ಕಾರ್ಮಿಕ ಅಧಿಕಾರಿ ಕಛೇರಿ, ಚಿಕ್ಕಬಳ್ಳಾಪುರ | |

| 1 | 2 | 3 | 4 | 5 | 6 | 7 |
|---|---|---|---|---|---|---|
| | | | | | 10. ಕಾರ್ಮಿಕ ಅಧಿಕಾರಿ ಕಛೇರಿ, ರಾಮನಗರ | |
| | | | | ಒಟ್ಟು 15 | ಒಟ್ಟು 10 | |
| 7. | ಕಾರ್ಮಿಕ ಕಾನೂನುಗಳ ಸಮಾಚರಣೆ | ಸಂಖ್ಯೆ:ಕಾಇ 166 ಎಲ್‌ಇಟಿ 97 ದಿನಾಂಕ: 24.6.99 | 2230-01-101-0-01 | ಕಾರ್ಮಿಕ ನಿರೀಕ್ಷಕರು 26 | ಕಾರ್ಮಿಕ ನಿರೀಕ್ಷಕರು 19 | |
| | | | | | 1. ಕಾನಿ [ಬಾಕಾ] ಬೆಂಗಳೂರು ನಗರ ಜಿಲ್ಲೆ | |
| | | | | | 2. ಕಾನಿ [ಬಾಕಾ] ಬೆಂಗಳೂರು ನಗರ ಜಿಲ್ಲೆ | |
| | | | | | 3. [ಬಾಕಾ] ಬೆಂಗಳೂರು ಗ್ರಾಮಾಂತರ ಜಿಲ್ಲೆ | |
| | | | | | 4. [ಬಾಕಾ] ಬೆಂಗಳೂರು ಗ್ರಾಮಾಂತರ ಜಿಲ್ಲೆ | |
| | | | | | 5. [ಬಾಕಾ] ಮಂಗಳೂರು | |
| | | | | | 6. [ಬಾಕಾ] ಮಂಗಳೂರು | |
| | | | | | 7. [ಬಾಕಾ] ಬಳ್ಳಾರಿ | |
| | | | | | 8. [ಬಾಕಾ] ಬಳ್ಳಾರಿ | |
| | | | | | 9. [ಬಾಕಾ] ಮೈಸೂರು 1ನೇ ವೃತ್ತ | |
| | | | | | 10. [ಬಾಕಾ] ಮೈಸೂರು 2ನೇ ವೃತ್ತ | |
| | | | | | 11. [ಬಾಕಾ] ಚಿಕ್ಕಮಗಳೂರು | |
| | | | | | 12. [ಬಾಕಾ] ಮಂಡ್ಯ | |
| | | | | | 13. [ಬಾಕಾ] ರಾಯಚೂರು | |
| | | | | | 14. [ಬಾಕಾ] ಬಿಜಾಪುರ | |
| | | | | | 15. [ಬಾಕಾ] ಬಿಜಾಪುರ | |
| | | | | | 16. [ಬಾಕಾ] ಹುಬ್ಬಳ್ಳಿ | |
| | | | | | 17. [ಬಾಕಾ] ಹುಬ್ಬಳ್ಳಿ | |
| | | | | | 18. ಬಿಜಾಪುರ | |
| | | | | | 19. ಚಿತ್ರದುರ್ಗ | |

| 1 | 2 | 3 | 4 | 5 | 6 | 7 |
|---|---|---|---|---|---|---|
| 8. | ಕಾರ್ಮಿಕ ಕಾನೂನುಗಳ ಸಮಾಚರಣೆ | ಸಂಖ್ಯೆ:ಕಾಇ 314 ಎಲ್ಇಟಿ 98<br>ದಿನಾಂಕ: 18.09.08 | 2230–01–101–0–01 | ಡಿ ಗ್ರೂಪ್ – 13<br>ಜವಾನರು | ಡಿ ಗ್ರೂಪ್ – 10<br>ಜವಾನರು | |
| | | | | | 1. ಕಾರ್ಮಿಕ ಅಧಿಕಾರಿಯವರ ಕಛೇರಿ, ಉಪವಿಭಾಗ–5, ಬೆಂಗಳೂರು | |
| | | | | | 2. ಕಾರ್ಮಿಕ ಅಧಿಕಾರಿಯವರ ಕಛೇರಿ, ಉಪವಿಭಾಗ–6, ಬೆಂಗಳೂರು | |
| | | | | | 3. ಕಾರ್ಮಿಕ ಅಧಿಕಾರಿಯವರ ಕಛೇರಿ, ಉಪವಿಭಾಗ–2, ಮಂಗಳೂರು | |
| | | | | | 4. ಕಾರ್ಮಿಕ ಅಧಿಕಾರಿಯವರ ಕಛೇರಿ, ಉಪವಿಭಾಗ–2, ಚಿಕ್ಕಮಗಳೂರು | |
| | | | | | 5. ಕಾರ್ಮಿಕ ಅಧಿಕಾರಿಯವರ ಕಛೇರಿ, ಉಪವಿಭಾಗ–2, ಮಂಡ್ಯ | |
| | | | | | 6. ಕಾರ್ಮಿಕ ಅಧಿಕಾರಿಯವರ ಕಛೇರಿ, ಉಪವಿಭಾಗ–2, ಬಿಜಾಪುರ | |
| | | | | | 7. ಕಾರ್ಮಿಕ ಅಧಿಕಾರಿಯವರ ಕಛೇರಿ, ಹಾವೇರಿ | |
| | | | | | 8. ಕಾರ್ಮಿಕ ಅಧಿಕಾರಿಯವರ ಕಛೇರಿ, ಬಾಗಲಕೋಟೆ | |
| | | | | | 9. ಕಾರ್ಮಿಕ ಅಧಿಕಾರಿಯವರ ಕಛೇರಿ, ಚಾಮರಾಜನಗರ | |
| | ಕಾರ್ಮಿಕ ಕಾನೂನುಗಳ ಸಮಾಚರಣೆ | ಸಂ.ಕಂಇ/27/ಭೂದಾಪು 2006<br>ದಿನಾಂಕ: 21.8.2007 | | ಡಿ ಗ್ರೂಪ್–ಜವಾನರು 1 | 10. ಕಾರ್ಮಿಕ ಅಧಿಕಾರಿಯವರ ಕಛೇರಿ, ರಾಮನಗರ | |
| | | | | ಒಟ್ಟು 14 | ಒಟ್ಟು 10 | |

| 1 | 2 | 3 | 4 | 5 | 6 | 7 |
|---|---|---|---|---|---|---|
| 9. | ಕಾರ್ಮಿಕ ಕಾನೂನುಗಳ ಸಮಾಚರಣೆ | ಕಾಇ–7, ಎಲ್‌ಇಟಿ 98 20.3.1999<br>ಕಾಇ–195, ಎಲ್‌ಇಟಿ 93 2.2.1999 | 2230–01–101–0–01 | ವಾಹನ ಚಾಲಕರು 3 | ವಾಹನ ಚಾಲಕರು 2 | |
| | | | | ವಾಹನ ಚಾಲಕರು 2 | 1. ಸಹಾಯಕ ಕಾರ್ಮಿಕ ಆಯುಕ್ತರ ಕಛೇರಿ, ಚಿಕ್ಕಮಗಳೂರು–1 | |
| | | | | | 2. ಕೇಂದ್ರ ಕಛೇರಿ–1 | |
| 10. | ಕಾರ್ಮಿಕ ಕಾನೂನುಗಳ ಸಮಾಚರಣೆ | ಎಲ್‌ಡಿ 106 ಆರ್ ಅಂಡ್ ಐ 2000, 19.6.2000 | 2230–01–101–0–01 | ಜೂನಿಯರ್ ಪ್ರೋಗ್ರಾಮರ್–ಕೇಂದ್ರ ಕಛೇರಿ | ಜೂನಿಯರ್ ಪ್ರೋಗ್ರಾಮರ್, ಕೇಂದ್ರ ಕಛೇರಿ –1 | |
| 11. | ಕಾರ್ಮಿಕ ಕಾನೂನುಗಳ ಸಮಾಚರಣೆ | ಎಲ್‌ಡಿ 106 ಆರ್ ಅಂಡ್ ಐ 2000, 19.6.2000 | 2230–01–101–0–01 | ಡಾಟಾ ಎಂಟ್ರಿ ಆಪರೇಟರ್ ಕೇಂದ್ರ ಕಛೇರಿ | ಡಾಟಾ ಎಂಟ್ರಿ ಆಪರೇಟರ್ ಕೇಂದ್ರ ಕಛೇರಿ –2 | |
| | | | | | **ಒಟ್ಟು ಯೋಜನೆ ಹುದ್ದೆಗಳು 62** | |
| 12. | ಕಾರ್ಮಿಕ ಭವನದ ಭದ್ರತಾ ಸ್ವಚ್ಛತಾ ಸಿಬ್ಬಂದಿ ವೇತನದ ಮತ್ತು ಆಧುನೀಕರಣ | 2009–10ನೇ ಸಾಲಿನ ಆಯವ್ಯಯ ಹಂಚಿಕೆ ದಸ್ತಾವೇಜು | 2230–01–101–0–01–051 ಸಾಮಾನ್ಯ ವೆಚ್ಚಗಳು | – | 2009–10ನೇ ಸಾಲಿನಲ್ಲಿ ಸದರಿ ಶೀರ್ಷಿಕೆಯಡಿಯಲ್ಲಿ ಸಾಮಾನ್ಯ ವೆಚ್ಚಗಳಿಗಾಗಿ ರೂ. 16.22 ಲಕ್ಷಗಳು ಹಂಚಿಕೆಯಾಗಿ ಇದರಲ್ಲಿ ಕಾರ್ಮಿಕ ಭವನದ ಭದ್ರತಾ ಸ್ವಚ್ಛತಾ ಸಿಬ್ಬಂದಿ ವೇತನ ಹಾಗೂ ಯೋಜನೆಯಡಿಯಲ್ಲಿ ಕಛೇರಿ ವೆಚ್ಚಗಳೂ ಸೇರಿದಂತೆ ವೆಚ್ಚ ಭರಿಸಲಾಗುವುದು. | 16.22 |
| | | 041–ಪ್ರಯಾಣ ವೆಚ್ಚಗಳು | – | | ಹಾಗೂ 62 ಹುದ್ದೆಗಳಿಗೆ ಪ್ರಯಾಣ ವೆಚ್ಚಕ್ಕಾಗಿ ರೂ. 3.15 ಲಕ್ಷಗಳು ಹಂಚಿಕೆಯಾಗಿರುತ್ತದೆ. | 3.15 |

| 1 | 2 | 3 | 4 | 5 | 6 | 7 |
|---|---|---|---|---|---|---|
| | | 195–ಸಾರಿಗೆ ವೆಚ್ಚಗಳು | – | | ಬಾಡಿಗೆ ಆಧಾರದ ಮೇಲೆ ವಾಹನ ಸೌಲಭ್ಯಕ್ಕಾಗಿ ಸಹಾಯಕ ಕಾರ್ಮಿಕ ಆಯುಕ್ತರುಗಳಿಗೆ ಹಾಗೂ ಕಾರ್ಮಿಕ ಅಧಿಕಾರಿಗಳಿಗೆ ವಿತರಿಸಲು ರೂ.108.42 ಲಕ್ಷಗಳ ಆಯವ್ಯಯ ಹಂಚಿಕೆಯಾಗಿರುತ್ತದೆ. | 108.42 |
| 13. | | 071–ಕಟ್ಟಡ ವೆಚ್ಚ | – | | ರಾಮನಗರ ಮತ್ತು ಚಿಕ್ಕಬಳ್ಳಾಪುರ ಕಛೇರಿಗಳ ಕಟ್ಟಡದ ಬಾಡಿಗೆ ಬಾಬ್ತು | 1.05 |
| | | | | | **ಒಟ್ಟು ವೇತನ+ವೇತನೇತರ** | **188.04** |
| II | ಬಾಲಕಾರ್ಮಿಕ ಪದ್ಧತಿ ನಿರ್ಮೂಲನಾ ಕ್ರಿಯಾಯೋಜನೆ | ಎಲ್ ಡಿ 54 ಸಿಎಲ್‌ಸಿ 2001[ಐ] 29.5.2001 | 2230–01–103–6–01 | – | ಈ ಯೋಜನೆಯು 2001 ರಿಂದ ಪ್ರಾರಂಭವಾಗಿದ್ದು, ಸರ್ಕಾರದ ಆದೇಶದಂತೆ ಪ್ರತಿ ವರ್ಷ 600.00 ಲಕ್ಷ ರೂಪಾಯಿ ಬಿಡುಗಡೆ ಮಾಡಬೇಕಾಗಿರುತ್ತದೆ. ಈ ಯೋಜನೆಯು ಮತ್ತೆ 5 ವರ್ಷಗಳ ಅವಧಿಗೆ ಅಂದರೆ 2012 ರವರೆಗೆ ವಿಸ್ತರಿಸಲಾಗಿರುತ್ತದೆ. 2009–10ನೇ ಸಾಲಿಗೆ ರೂ. 450.00 ಲಕ್ಷ ಆಯವ್ಯಯವನ್ನು ಹಂಚಿಕೆ ಮಾಡಲಾಗಿದೆ. ಈ ಆಯವ್ಯಯವನ್ನು ವಿಶೇಷ ವಸತಿ ಶಾಲೆಗಳಿಗೆ, ಜನಜಾಗೃತಿ ಕಾರ್ಯಕ್ರಮಕ್ಕೆ, ರೇಷ್ಮೆ ಉದ್ದಿಮೆಯಲ್ಲಿನ ಬಾಲಕಾರ್ಮಿಕರ ಪುನರ್ವಸತಿಗೆ ಉಪಯೋಗಿಸಿಕೊಳ್ಳಲಾಗುವುದು. ಈ ಯೋಜನೆಯನ್ನು ಮುಂದುವರೆಸಲು ಅನುಮತಿ ಆದೇಶ ಅವಶ್ಯಕವಾಗಿರುತ್ತದೆ. | 450.00 |
| III | ಕಾರ್ಮಿಕ ಭವನದ 1ನೇ ಹಂತದ 3ನೇ ಮಹಡಿ ನಿರ್ಮಾಣಕ್ಕೆ | 2009–10ನೇ ಸಾಲಿನ ಆಯವ್ಯಯ ಹಂಚಿಕೆ ದಸ್ತಾವೇಜು | 4250–00–201–0–04 ಕಾಇ 234 ಎಲ್‌ಇಟಿ 89, ದಿನಾಂಕ: 27.10.1997 | – | ಕಾರ್ಮಿಕ ಭವನದ 1ನೇ ಹಂತದ 3ನೇ ಮಹಡಿಯಲ್ಲಿ ಹೆಚ್ಚುವರಿ ಕೊಠಡಿಗಳನ್ನು ನಿರೀಕ್ಷಕರು ಹಾಗೂ ಕಾರ್ಮಿಕ ತರಬೇತಿ ಸಂಸ್ಥೆ ಆಡಳಿತ ಕಛೇರಿಗೆ ಹಾಗೂ ಉಳಿಕೆ ಕಾಮಗಾರಿಗಳಿಗೆ ಮತ್ತು ಲಿಫ್ಟ್ ಅಳವಡಿಸುವುದಕ್ಕಾಗಿ 2009–10ನೇ ಸಾಲಿನಲ್ಲಿ ರೂ. 40.00 ಲಕ್ಷಗಳ ಆಯವ್ಯಯ ಹಂಚಿಕೆ ಮಾಡಲಾಗಿರುವ ಮೊತ್ತವನ್ನು ಉಪಯೋಗಿಸಿಕೊಳ್ಳಲಾಗುವುದು. | 40.00 |

| 1 | 2 | 3 | 4 | 5 | 6 | 7 |
|---|---|---|---|---|---|---|
| V | ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿಗೆ ಅಂಶ ಧನ | 2009–10ನೇ ಆಯವ್ಯಯ ದಸ್ತಾವೇಜು | 2230–01–103–4–00 | – | ಕಾರ್ಮಿಕ ಕಲ್ಯಾಣ ನಿಧಿಗೆ ಅಂಶ ಧನ ರೂ. 24.00 ಲಕ್ಷಗಳನ್ನು ಹಂಚಿಕೆ ಮಾಡಲಾಗಿದೆ. ಈ ಹಣವನ್ನು ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಗೆ ಕಾರ್ಮಿಕರು ನೀಡಿದ ಒಟ್ಟು ಮೊತ್ತದ ಸಮಾನ ಪ್ರಮಾಣದ ಮೊತ್ತವನ್ನು ಸರ್ಕಾರದ ವಂತಿಗೆಯಾಗಿ ಸದರಿ ಮಂಡಳಿಗೆ ಪಾವತಿಸಲು ವಿನಿಯೋಗಿಸಲಾಗುವುದು. ಈ ದಿಸೆಯಲ್ಲಿ ಹಂಚಿಕೆ ಮಾಡಲಾಗಿರುವ ರೂ. 24.00 ಲಕ್ಷಗಳನ್ನು ಪ್ರಸಕ್ತ ವರ್ಷದಲ್ಲಿ ಉಪಯೋಗಿಸಿಕೊಳ್ಳಲು ಸಂಬಂಧಿಸಿದ ಮಂಡಳಿಗೆ ನೀಡಲಾಗುವುದು. | 24.00 |
| VI | ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಗೆ ಸಹಾಯಾನುದಾನ | 2009–10ನೇ ಸಾಲಿನ ಆಯವ್ಯಯ ದಸ್ತಾವೇಜು | 2230–01–103–7–00 | – | ಕಾರ್ಮಿಕ ಕಲ್ಯಾಣ ಮಂಡಳಿಗೆ ಸಹಾಯಾನುದಾನ ರೂ. 1.00 ಲಕ್ಷಗಳನ್ನು ಹಂಚಿಕೆ ಮಾಡಲಾಗಿದೆ. ಈ ಹಣವನ್ನು ಕಾರ್ಮಿಕ ಕಲ್ಯಾಣ ಮಂಡಳಿಯ ಆಡಳಿತಾತ್ಮಕ ವೆಚ್ಚಗಳನ್ನು ಭರಿಸಲು ಮತ್ತು ಕಾರ್ಮಿಕರಿಗೆ ಸಮುದಾಯ ಭವನ ಮತ್ತು ಹಾಲಿಡೇ ಹೋಮ್ ನಿರ್ಮಿಸುವ ಉದ್ದೇಶದಿಂದ ಈ ಮೊತ್ತವನ್ನು ಉಪಯೋಗಿಸಿಕೊಳ್ಳಲು ಕಾರ್ಮಿಕ ಕಲ್ಯಾಣ ಮಂಡಳಿಗೆ ನೀಡಲಾಗುವುದು. | 1.00 |
| VII | ಕರ್ನಾಟಕ ಕಾರ್ಮಿಕ ತರಬೇತಿ ಸಂಸ್ಥೆ | 2009–10ನೇ ಸಾಲಿನ ಆಯವ್ಯಯ ದಸ್ತಾವೇಜು | 2230–01–277–0–01 | – | ಯೋಜನೆಯು ಅನುಮೋದನೆಯಾಗಿದ್ದು, ಅನುಷ್ಠಾನಕ್ಕಾಗಿ ಸೊಸೈಟಿ ಸ್ಥಾಪಿಸಲಾಗಿದೆ | 56.05 |
| VIII | ವೈದ್ಯಕೀಯ ವೆಚ್ಚದ ಮರುಪಾವತಿ | 2009–10ನೇ ಸಾಲಿನ ಆಯವ್ಯಯ ದಸ್ತಾವೇಜು | 2230–01–001–0–03 | – | ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ 62 ಅಧಿಕಾರಿ ಮತ್ತು ಸಿಬ್ಬಂದಿವರ್ಗದವರ ವೈದ್ಯಕೀಯ ವೆಚ್ಚದ ಮರುಪಾವತಿಗೆ ವೆಚ್ಚ ಭರಿಸಲಾಗುವುದು. | 4.00 |

**ಯು.ಎನ್. ನಾಗೇಂದ್ರ**

ಸರ್ಕಾರದ ಅಧೀನ ಕಾರ್ಯದರ್ಶಿ, ಕಾರ್ಮಿಕ ಇಲಾಖೆ

ಪಿ.ಆರ್. 1215

## ಜಲಸಂಪನ್ಮೂಲ ಸಚಿವಾಲಯ

ವಿಷಯ:– ಕೋಲಾರ ಜಿಲ್ಲೆ, ಶ್ರೀನಿವಾಸಪುರ ತಾಲ್ಲೂಕು ಬಡಿಪಲ್ಲಿ ಹೊಸಕೆರೆ ನಿರ್ಮಾಣದ ಕಾಮಗಾರಿಯ ಏಕಮಧ್ಯಸ್ಥಿಕೆ ಪ್ರಕರಣಕ್ಕೆ ಹಣ ಪಾವತಿಸುವ ಕುರಿತು.

ಓದಲಾಗಿದೆ:– ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ರವರ ಪತ್ರ ವ್ಯವಹಾರ ಅಂತ್ಯಗೊಂಡ ಪತ್ರದ ಸಂಖ್ಯೆ: ಮುಸನೀ(ದ)/ ಐಜಿಎನ್/ಕೋಲಾರ/ಏಕಮಧ್ಯಸ್ಥಿಕೆ/08–09/3808, ದಿನಾಂಕ: 10/10/2008.

ಪ್ರಸ್ತಾವನೆ:–

ಕೋಲಾರ ಜಿಲ್ಲೆ, ಶ್ರೀನಿವಾಸಪುರ ತಾಲ್ಲೂಕು ಬಡಿಪಲ್ಲಿ ಹೊಸಕೆರೆ ಕಾಮಗಾರಿಯನ್ನು ರೂ. 29,70,912.00 ಗಳ ಟೆಂಡರ್‌ಗೆ ಇಟ್ಟ ಮೊತ್ತದಂತೆ ರೂ. 28,63,993.00 ಗಳಿಗೆ ಎಲ್.ಸಿ.ಬಿ ಟೆಂಡರ್ ಆಧಾರದ ಮೇಲೆ ಶ್ರೀ ಎ. ವೆಂಕಟರೆಡ್ಡಿ 1ನೇ ದರ್ಜೆ ಗುತ್ತಿಗೆದಾರರಿಗೆ ವಹಿಸಲಾಗಿದೆ. ಗುತ್ತಿಗೆದಾರರು ಮತ್ತು ಇಲಾಖೆ ನಡುವೆ ಉಂಟಾದ ವಿವಾದ ಇತ್ಯರ್ಥ ಮಾಡಲು ಶ್ರೀ ಸಿ.ಬಿ.ಲಕ್ಷ್ಮಣರಾವ್, ನಿರ್ದೇಶಕರು, ಕೆ.ಇ.ಆರ್.ಎಸ್. ಕೃಷ್ಣರಾಜಸಾಗರ ರವರನ್ನು ದಿನಾಂಕ: 30/12/1988ರಲ್ಲಿ ಏಕ ಮಧ್ಯಸ್ಥಿಕೆ ದಾರರನ್ನಾಗಿ ನೇಮಿಸಲಾಗಿತ್ತು. ಸದರಿ ಏಕಮಧ್ಯಸ್ಥಿಕೆದಾರರು ದಿನಾಂಕ: 01/09/1989ರಂದು ಐತೀರ್ಪು ನೀಡಿರುತ್ತಾರೆ. ಸದರಿ ಐತೀರ್ಪಿನಲ್ಲಿ ಅಸಲು ಮೊತ್ತದ ಮೇಲೆ ಶೇ.12 ರಂತೆ ಬಡ್ಡಿ ನೀಡಲು ಸೂಚಿಸಲಾಗಿದೆ. ಈ ಪ್ರಕರಣದಲ್ಲಿ ಅಸಲು ಮೊತ್ತ ರೂ. 57,738.00ಗಳು. ಈ ಪ್ರಕರಣದಲ್ಲಿ ಮೇಲ್ಮನವಿ ಸಲ್ಲಿಸುವಂತಹ ಯಾವುದೇ ಅಂಶಗಳು ಇಲ್ಲವೆಂಬುವುದಾಗಿ ಇಲಾಖಾ ಕಾನೂನು ಸಲಹೆಗಾರರು ಅಭಿಪ್ರಾಯ ನೀಡಿರುತ್ತಾರೆ. ಗುತ್ತಿಗೆದಾರರು ಈ ಪ್ರಕರಣದಲ್ಲಿ ನ್ಯಾಯಾಲಯದಿಂದ ಡಿಕ್ರಿ ಮಾಡಿರುವುದಿಲ್ಲ. ಆದರೆ ಕಾನೂನು ಇಲಾಖೆಯು ಮಧ್ಯಸ್ಥಿಕೆದಾರರ ಐತೀರ್ಪಿಗೆ ನ್ಯಾಯಾಲಯದಿಂದ ನ್ಯಾಯಾಜ್ಞೆ/ಡಿಕ್ರಿ ಮಾಡಿಸುವ ಅವಶ್ಯಕತೆ ಇಲ್ಲವೆಂಬುದಾಗಿ ಇಂತಹ ಪ್ರಕರಣದಲ್ಲಿ ಅಭಿಪ್ರಾಯ ನೀಡಿದೆ.

ಈ ಪ್ರಕರಣದಲ್ಲಿ ಗುತ್ತಿಗೆದಾರರೊಂದಿಗೆ ಬಡ್ಡಿ ಪಾವತಿಸುವ ವಿಷಯದಲ್ಲಿ ಇಲಾಖಾ ಅಧಿಕಾರಗಳು ಸಮಾಲೋಚಿಸಿದ್ದು, ಗುತ್ತಿಗೆದಾರರು ಶೇ. 12ರ ಬದಲು ಶೇ. 10ರ ಬಡ್ಡಿ ದರದಲ್ಲಿ ಐತೀರ್ಪಿನ ಮೊತ್ತವನ್ನು ಸ್ವೀಕರಿಸಲು ಒಪ್ಪಿರುತ್ತಾರೆ. ಅದರಂತೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ರವರು ರೂ. 1,75,130.00 ಗಳನ್ನು ಪಾವತಿಸಲು ಅನುಮೋದನೆ ಕೋರಿ ಪ್ರಸ್ತಾವನೆ ಸಲ್ಲಿಸಿದ್ದಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಸನೀಇ 21 ಡಬ್ಲ್ಯೂಟಿಎಸ್ 89 ಬೆಂಗಳೂರು, ದಿನಾಂಕ: 15ನೇ ಮೇ 2009**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕೋಲಾರ ಜಿಲ್ಲೆ, ಶ್ರೀನಿವಾಸಪುರ ತಾಲ್ಲೂಕು ಬಡಿಪಲ್ಲಿ ಸಣ್ಣ ನೀರಾವರಿ ಕೆರೆ ಕಾಮಗಾರಿಯ 2ನೇ ಮಧ್ಯಸ್ಥಿಕೆ ಪ್ರಕರಣದಲ್ಲಿ ಗುತ್ತಿಗೆದಾರರಿಗೆ ಪಾವತಿಸ ಬೇಕಾದ ಮೊತ್ತ ರೂ. 1,75,130.00 (ಒಂದು ಲಕ್ಷದ ಎಪ್ಪತ್ತೈದು ಸಾವಿರದ ಒಂದು ನೂರ ಮೂವತ್ತು ರೂಪಾಯಿಗಳು ಮಾತ್ರ)ಗಳನ್ನು ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

1) ಲೆಕ್ಕಾಚಾರದ ತಃಖ್ತೆಯನ್ನು ಮುಖ್ಯ ಲೆಕ್ಕಾಧಿಕಾರಿಗಳಿಂದ ದೃಢೀಕರಿಸಿಕೊಂಡು ಪಾವತಿ ಮಾಡತಕ್ಕದ್ದು,
2) ಏಕ ಮಧ್ಯಸ್ಥಿಕೆದಾರರ ನಿರ್ಣಯದಂತೆ ಹಣ ಪಾವತಿ ಮಾಡಲು ಗುತ್ತಿಗೆದಾರರಿಂದ ಬರಬೇಕಾದ ಕಾನೂನುಬದ್ಧವಾದ ಎಲ್ಲಾ ಬಾಕಿಗಳನ್ನು ಹೊಂದಾಣಿಕೆ ಮಾಡಿಕೊಳ್ಳಬೇಕು,
3) ಹಣ ಸಂದಾಯಕ್ಕೆ ಮೊದಲು ಮೂಲ ಗುತ್ತಿಗೆ ಕರಾರಿನಲ್ಲಿರುವ ಏಕಮಧ್ಯಸ್ಥಿಕೆ ಕಾಲಂನ್ನು ಪರಸ್ಪರ ಒಪ್ಪಿಗೆಯೊಂದಿಗೆ ಕೈಬಿಟ್ಟು ಮೇಲಿನ ಎಲ್ಲಾ ಅಂಶಗಳನ್ನು ಒಳಗೊಂಡಂತೆ ಸೂಕ್ತವಾದ ಪೂರಕ ಕರಾರನ್ನು ಗುತ್ತಿಗೆದಾರರಿಂದ ಪಡೆಯಬೇಕು,
2) ಈ ಉದ್ದೇಶಕ್ಕಾಗಿ ತಗಲುವ ವೆಚ್ಚವನ್ನು ಲೆಕ್ಕಶೀರ್ಷಿಕೆ 4702–00–101–1–02–139 ಹೊಸಕೆರೆಗಳ ನಿರ್ಮಾಣ ಪ್ರಧಾನ ಕಾಮಗಾರಿಗಳು (ಯೋಜನೆ)ಅಡಿ 2009–10ನೇ ಸಾಲಿಗೆ ಒದಗಿಸಿರುವ ಅನುದಾನದಿಂದ ಭರಿಸುವುದು.
3) ಈ ಆದೇಶವನ್ನು ಕಾನೂನು ಇಲಾಖೆಯ ದಿನಾಂಕ:04/07/2007ರ ಟಿಪ್ಪಣಿ ಸಂಖ್ಯೆ: ಎಲ್‌ಎಡಬ್ಲ್ಯೂ 246 ಒಪಿಎನ್ 2007ರಲ್ಲಿ ನೀಡಿರುವ ಸಹಮತಿಯ ಪ್ರಕಾರ ಹಾಗೂ ಆದೇಶ ಸಂಖ್ಯೆ: ಎಫ್‌ಡಿ 21 ಟಿಎಫ್‌ಪಿ 2006, ದಿನಾಂಕ:02/09/2006ರಲ್ಲಿ ಇಲಾಖಾ ಕಾರ್ಯದರ್ಶಿಗಳಿಗೆ ಪ್ರದತ್ತವಾದ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1249

**ಕೆ. ಸುಧಾಕರ ಶೆಟ್ಟಿ,**

ಸರ್ಕಾರದ ಅಧೀನ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

ವಿಷಯ: ಬಾಗಲಕೋಟೆ ಜಿಲ್ಲೆ, ಮುಧೋಳ ತಾಲ್ಲೂಕು, ಜಂಬಗಿ ಗ್ರಾಮದ ಹತ್ತಿರ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಟೆಂಡರ್ ಅಂಗೀಕರಿಸುವ ಕುರಿತು.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ:ಸನೀಇ 02 ನಯೋಕಾ 2009, ದಿನಾಂಕ 05/02/09.

2. ದಿನಾಂಕ 27/02/09ರ ಮುಖ್ಯ ಇಂಜನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ರವರ ಪತ್ರ ಸಂಖ್ಯೆ:ಮುಇಂ/ಸನೀ(ಉ)ವ/ಬಿಜೆಪಿ/ಎಇ–6/2008–09/1589.

3. ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ, ಸಣ್ಣ ನೀರಾವರಿ ಇಲಾಖೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ರವರ ಪತ್ರ ಸಂಖ್ಯೆ:ಮುಸದ/ಆಪ್ತಶಾಖೆ/ಟೆಂಡರ್/08--09/1336, ದಿನಾಂಕ 28/02/09.

ಪ್ರಸ್ತಾವನೆ:

ಬಾಗಲಕೋಟೆ ಜಿಲ್ಲೆ, ಮುಧೋಳ ತಾಲ್ಲೂಕು, ಜಂಬಗಿ ಗ್ರಾಮದ ಹತ್ತಿರ ಬ್ಯಾರೇಜ್ ನಿರ್ಮಾಣ ಕಾಮಗಾರಿಯ 227.00 ಲಕ್ಷ ರೂ.ಗಳ ಅಂದಾಜು ಪಟ್ಟಿಗೆ ಮೇಲೆ(1)ರಲ್ಲಿ ಓದಲಾದ ದಿನಾಂಕ 05/02/09ರ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಬಿಜಾಪುರ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ದ್ವಿಲಕೋಟೆ ಪದ್ಧತಿಯಲ್ಲಿ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

| | | |
|---|---|---|
| 1 | ರಾಜ್ಯ ಟೆಂಡರ್ ಬುಲೆಟಿನ್ | ದಿ:13/02/09 |
| 2 | ವಿಜಯ ಕರ್ನಾಟಕ ಹಾಗೂ ಇಂಡಿಯನ್ ಎಕ್ಸ್‌ಪ್ರೆಸ್ ದಿನಪತ್ರಿಕೆಗಳು | ದಿ: 14/02/09 |

ಈ ಟೆಂಡರ್ ಕರೆಗೆ ಪ್ರತಿಕ್ರಯಿಸಿ ಖಾಲಿ ಟೆಂಡರ್ ಫಾರಂ ಪಡೆದ 5 ಜನ ಗುತ್ತಿಗೆದಾರರು ನಿಗದಿತ ದಿನದಂದು ಇಬ್ಬರು ಗುತ್ತಿಗೆದಾರರು ಮಾತ್ರ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಿರುತ್ತಾರೆ. ಸ್ವೀಕರಿಸಲಾದ ತಾಂತ್ರಿಕ ಬಿಡ್‌ನ್ನು ದಿನಾಂಕ 25/02/09ರಂದು ತೆರೆಯಲಾಗಿ ಈ ಪೈಕಿ ಒಬ್ಬರು ಗುತ್ತಿಗೆದಾರರು ಮಾತ್ರ ಅರ್ಹತೆ ಹೊಂದಿದ್ದು, ಇವರ ಆರ್ಥಿಕ ಬಿಡ್‌ನ್ನು ದಿನಾಂಕ 25/02/09ರಂದು ತೆರೆಯಲಾಗಿದೆ. ಆರ್ಥಿಕ ಬಿಡ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳ ತುಲನಾತ್ಮಕ ವಿವರ ಕೆಳಕಂಡಂತಿದೆ:

| | |
|---|---|
| ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ | ರೂ.2,49,63,565/– |
| ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿದಾಗ ಟೆಂಡರಿಗೆ ಇಡಲಾದ ಮೊತ್ತ | ರೂ.2,40,32,096/– |

| ಕ್ರಸಂ | ಗುತ್ತಿಗೆದಾರರ ಹೆಸರು ಮತ್ತು ದರ್ಜೆ<br>ಶ್ರೀ/ಮೆಸರ್ಸ್ | ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ | ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ | ಪ್ರಸಕ್ತ ಸಾಲಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ |
|---|---|---|---|---|
| 1 | ಜಿ.ಮಸ್ತಾನಯ್ಯ,<br>1ನೇ ದರ್ಜೆ ಗುತ್ತಿಗೆದಾರರು | ರೂ.2,90,31,716/– | 16.29 ಹೆಚ್ಚು | 20.80 ಹೆಚ್ಚು |

ಮೇಲ್ಕಂಡಂತೆ ಶ್ರೀ ಮಸ್ತಾನಯ್ಯ, 1ನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ (2,40,32,096–00) ಹೋಲಿಸಿದಾಗ ಶೇಕಡ 20.80ರಷ್ಟು ಹೆಚ್ಚಾಗಿದ್ದು, ಸದರಿಯವರ ರೂ.2,90,31,716–00ರ ಮೊತ್ತದ ಟೆಂಡರ್‌ನ್ನು ಅಂಗೀಕರಿಸಲು ಮುಖ್ಯ ಇಂಜಿನಿಯರ್‌ರವರು ಸರ್ಕಾರದ ಅನುಮೋದನೆ ಕೋರಿರುತ್ತಾರೆ.

ಗುತ್ತಿಗೆದಾರರು ಸೂಚಿಸಿರುವ ದರಗಳನ್ನು ಕಡಿಮೆಗೊಳಿಸುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ 28/02/09ರಂದು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಗುತ್ತಿಗೆದಾರರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿದಾಗ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ.2,40,32,096–00ಗಳ ಮೇಲೆ ಶೇಕಡ 14.50ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ.2,75,16,750–00ಗಳಿಗೆ ಕಾಮಗಾರಿಯನ್ನು ಶ್ರೀ ಜಿ.ಮಸ್ತಾನಯ್ಯ 1ನೇ ದರ್ಜೆ ಗುತ್ತಿಗೆದಾರರು, ಬಿಜಾಪುರ ಇವರಿಗೆ ವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ನಿರ್ಧಾರಕ್ಕೆ ಗುತ್ತಿಗೆದಾರರು ತಮ್ಮ ಒಪ್ಪಿಗೆಯನ್ನು ತಮ್ಮ ಒಪ್ಪಿಗೆಯನ್ನು ಸೂಚಿಸಿರುವುದಾಗಿ ತಿಳಿಸಿ ಈ ಮೊತ್ತಕ್ಕೆ ಟೆಂಡರ್ ಅಂಗೀಕರಿಸಲು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಮೇಲೆ 3ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 15 ಅಪಿಬಿಂ 2009(2), ಬೆಂಗಳೂರು, ದಿನಾಂಕ 11ನೇ ಮೇ 2009.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬಾಗಲಕೋಟೆ ಜಿಲ್ಲೆ, ಮುಧೋಳ ತಾಲ್ಲೂಕು, ಜಂಬಗಿ ಗ್ರಾಮದ ಹತ್ತಿರ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಮಂಜೂರಾದ ಅಂದಾಜು ಪಟ್ಟಿ ಹಾಗೂ ಪ್ರಸಕ್ತ ಸಾಲಿನ ದರಪಟ್ಟಿಯಂತೆ ಪರಿಷ್ಕರಿಸಿದ ಟೆಂಡರಿಗೆ ಇಡಲಾದ ಮೊತ್ತ ರೂ.2,40,32,096–00ಗಳ ಮೇಲೆ ಶೇಕಡ 14.50ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ.2,75,16,750–00ಗಳಿಗೆ (ಎರಡು ಕೋಟಿ ಎಪ್ಪತ್ತೈದು ಲಕ್ಷದ ಹದಿನಾರು ಸಾವಿರದ ಏಳುನೂರ ಐವತ್ತು ರೂ.ಗಳು ಮಾತ್ರ) ಶ್ರೀ ಜಿ.ಮಸ್ತಾನಯ್ಯ, 1ನೇ ದರ್ಜೆ ಗುತ್ತಿಗೆದಾರರು, ಬಿಜಾಪುರ ಇವರಿಗೆ ಕಾಮಗಾರಿಯನ್ನು ಕೆಳಕಂಡ ಷರತ್ತುಗಳೊಂದಿಗೆ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.
3. ಅಸಹಜ ದರಗಳನ್ನು ಸಮನ್ವಯಪಡಿಸಿಕೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ:20/01/2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1250 **ಕೆ. ಸುಧಾಕರ ಶೆಟ್ಟಿ**

ಸರ್ಕಾರದ ಅಧೀನ ಕಾರ್ಯದರ್ಶಿ, ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

**ವಿಷಯ:** ಶಿವಮೊಗ್ಗ ಜಿಲ್ಲೆ, ಸಾಗರ ತಾಲ್ಲೂಕು, ಯಲಕುಂದ್ಲಿ ಗ್ರಾಮದ ಹತ್ತಿರ ಮಾವಿನ ಹೊಳೆಗೆ ಅಡ್ಡಲಾಗಿ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಟೆಂಡರ್ ಅಂಗೀಕರಿಸುವ ಕುರಿತು.

**ಓದಲಾಗಿದೆ:** 1. ಸರ್ಕಾರದ ಆದೇಶ ಸಂಖ್ಯೆ:ಸನೀಇ 10 ನಯೋಕಾ 2007, ದಿನಾಂಕ 29/01/09.

2. ದಿನಾಂಕ 28/02/09ರ ಸಣ್ಣ ನೀರಾವರಿ ದಕ್ಷಿಣ ವಲಯದ ಮುಖ್ಯ ಇಂಜಿನಿಯರ್ ರವರ ಪತ್ರದ ಸಂಖ್ಯೆ:ಮುಸ(ದ)/ತಾಂ–3/ಸಇಂ–8/ಶಿವಮೊಗ್ಗ/ಟೆಂಡರ್/2008–09/1176.

3. ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ರವರ ಪತ್ರ ಸಂಖ್ಯೆ:ಮುಸದ/ಆಪ್ತ ಶಾಖೆ/ಟೆಂಡರ್/08–09/1336, ದಿನಾಂಕ 28/02/09.

**ಪ್ರಸ್ತಾವನೆ:**

ಹೆಚ್ಚಿನ ಆತ್ಮಹತ್ಯೆ ಪ್ರಕರಣಗಳು ವರದಿಯಾಗಿರುವ ರಾಜ್ಯದ ಜಿಲ್ಲೆಗಳಲ್ಲಿ ರೈತರ ಪುನರ್ವಸತಿಗಾಗಿ ವಿಶೇಷ ಪ್ಯಾಕೇಜ್‌ನಡಿ ಕಾಮಗಾರಿಗಳನ್ನು ಕೈಗೊಳ್ಳಲು ಮೇಲೆ (1)ರಲ್ಲಿ ಓದಲಾದ ದಿನಾಂಕ: 29/01/09ರ ಸರ್ಕಾರದ ಆದೇಶದಲ್ಲಿ ಅನುಮೋದನೆ ನೀಡಲಾಗಿದೆ. ಈ ಆದೇಶದಲ್ಲಿ 58.50 ಲಕ್ಷ ರೂ.ಗಳ ಅಂದಾಜು ಮೊತ್ತದಲ್ಲಿ ಸಾಗರ ತಾಲ್ಲೂಕು, ಯಲಕುಂದ್ಲಿ ಗ್ರಾಮದ ಹತ್ತಿರ ಮಾವಿನ ಹೊಳೆಗೆ ಅಡ್ಡಲಾಗಿ ಬ್ಯಾರೇಜ್ ನಿರ್ಮಾಣ ಮಾಡುವ ಕಾಮಗಾರಿ ಸಹ ಸೇರಿದೆ.

ಈ ಕಾಮಗಾರಿ ಕೈಗೊಳ್ಳಲು ಶಿವಮೊಗ್ಗ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಶಿವಮೊಗ್ಗ ಜಿಲ್ಲಾ ಟೆಂಡರ್ ಬುಲೆಟಿನ್‌ನಲ್ಲಿ ದಿನ ಆಂಕ: 31/01/09ರಂದು ಹಾಗೂ ಕನ್ನಡಪ್ರಭ ದಿನಪತ್ರಿಕೆಯಲ್ಲಿ ದಿನಾಂಕ 10/02/09ರಂದು ಪ್ರಕಟಿಸಲಾಗಿದೆ.

ಈ ಟೆಂಡರ್ ಕರೆಗೆ ಪ್ರತಿಕ್ರಿಯಿಸಿ ಖಾಲಿ ಟೆಂಡರ್ ಫಾರಂ ಪಡೆದ 5 ಜನ ಗುತ್ತಿಗೆದಾರರಲ್ಲಿ ನಿಗಧಿತ ದಿನದಂದು ಇಬ್ಬರು ಗುತ್ತಿಗೆದಾರರು ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಿರುತ್ತಾರೆ. ಸ್ವೀಕರಿಸಲಾದ ಟೆಂಡರ್‌ಗಳನ್ನು ದಿನಾಂಕ 24/02/09ರಂದು ತೆರೆಯಲಾಗಿದೆ. ಇದರಲ್ಲಿ ಅರ್ಹರಾಗಿದ್ದ ಇಬ್ಬರು ಗುತ್ತಿಗೆದಾರರ ಟೆಂಡರ್‌ಗಳಲ್ಲಿ ಅವರು ನಮೂದಿಸಿರುವ ವಿವರ ಕೆಳಕಂಡಂತಿದೆ:

| | |
|---|---|
| ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ | **ರೂ.49,72,415/–** |
| ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿದಾಗ ಟೆಂಡರಿಗೆ ಇಡಲಾದ ಮೊತ್ತ | **ರೂ.49,57,140/–** |

| ಕ್ರಸಂ | ಗುತ್ತಿಗೆದಾರರ ಹೆಸರು ಮತ್ತು ದರ್ಜೆ<br>ಶ್ರೀ/ಮೆಸರ್ಸ್ | ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ | ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ | ಪ್ರಸಕ್ತ ಸಾಲಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ |
|---|---|---|---|---|
| 1 | ವೆಂಕಟೇಶ್ ಬಿ.ನಾಯಕ್, 1ನೇ ದರ್ಜೆ ಗುತ್ತಿಗೆದಾರರು, | ರೂ.59,42,550/– | 19.51 ಹೆಚ್ಚು | 19.88 ಹೆಚ್ಚು |

| ಕ್ರಸಂ | ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್ | ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ | ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ | ಪ್ರಸಕ್ತ ಸಾಲಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ |
|---|---|---|---|---|
| 2 | ಡಿ.ಕೆ.ಸಿದ್ದೇಶ್ವರ ಪ್ರಸಾದ್, 1ನೇ ದರ್ಜೆ ಗುತ್ತಿಗೆದಾರರು, | ರೂ.63,24,921/- | 27.20 ಹೆಚ್ಚು | 27.59 ಹೆಚ್ಚು |

ಮೇಲ್ಕಂಡಂತೆ ಕ್ರ.ಸಂ:1ರಲ್ಲಿರುವ ಶ್ರೀ ವೆಂಕಟೇಶ್ ಬಿ.ನಾಯಕ್, 1ನೇ ದರ್ಜೆ ಗುತ್ತಿಗೆದಾರರು ಇವರು ನಮೂದಿಸಿರುವ ಮೊತ್ತ ರೂ.59,42,550-00ಗಳು ಅತಿ ಕಡಿಮೆ ಮೊತ್ತವಾಗಿದ್ದು, ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 19.88ರಷ್ಟು ಹೆಚ್ಚಾಗಿದ್ದು, ಈ ಮೊತ್ತಕ್ಕೆ ಸದರಿಯವರ ಟೆಂಡರ್‌ನ್ನು ಅಂಗೀಕರಿಸಲು ಮುಖ್ಯ ಇಂಜಿನಿಯರ್‌ರವರು ಮೇಲೆ (2)ರಲ್ಲಿ ಓದಲಾದ ದಿನಾಂಕ 28/02/09ರ ಪತ್ರದಲ್ಲಿ ಸರ್ಕಾರದ ಅನುಮೋದನೆ ಕೋರಿರುತ್ತಾರೆ.

ಗುತ್ತಿಗೆದಾರರು ಸೂಚಿಸಿರುವ ದರಗಳು ಹೆಚ್ಚೆಂದು ಕಂಡು ಬಂದ ಹಿನ್ನೆಲೆಯಲ್ಲಿ ಈ ದರಗಳನ್ನು ಕಡಿಮೆಗೊಳಿಸುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ 28/02/09ರಂದು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಗುತ್ತಿಗೆದಾರರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಟೆಂಡರಿಗಿಡಲಾದ ಮೊತ್ತ ರೂ.49,57,140-00ಗಳ ಮೇಲೆ ಶೇಕಡ 14.00ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ.56,51,140-00 ಗಳಿಗೆ ಕಾಮಗಾರಿಯನ್ನು ಶ್ರೀ ವೆಂಕಟೇಶ್ ಬಿ.ನಾಯಕ್, 1ನೇ ದರ್ಜೆ ಗುತ್ತಿಗೆದಾರರು, ಸಾಗರ ಇವರಿಗೆ ವಹಿಸಲು ಸಭೆಯಲ್ಲಿ ನಿರ್ಧರಿಸಲಾಯಿತು. ಈ ನಿರ್ಧಾರಕ್ಕೆ ಗುತ್ತಿಗೆದಾರರು ತಮ್ಮ ಒಪ್ಪಿಗೆಯನ್ನು ಸೂಚಿಸಿರುವುದಾಗಿ ತಿಳಿಸಿ ಈ ಮೊತ್ತಕ್ಕೆ ಟೆಂಡರ್ ಅಂಗೀಕರಿಸಲು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಮೇಲೆ 3ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸನೀಇ 49 ಮಸಾವಿ 2009, ಬೆಂಗಳೂರು, ದಿನಾಂಕ 11ನೇ ಮೇ 2009.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶಿವಮೊಗ್ಗ ಜಿಲ್ಲೆ, ಸಾಗರ ತಾಲ್ಲೂಕು ಯಲಕುಂದ್ಲಿ ಗ್ರಾಮದ ಹತ್ತಿರ ಮಾವಿನ ಹೊಳೆಗೆ ಅಡ್ಡಲಾಗಿ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಮಂಜೂರಾದ ಅಂದಾಜು ಪಟ್ಟಿ ಹಾಗೂ ಪ್ರಸಕ್ತ ಸಾಲಿನ ದರಪಟ್ಟಿಯಂತೆ ಟೆಂಡರಿಗೆ ಇಡಲಾದ ಮೊತ್ತ ರೂ.49,57,140-00ಗಳ ಮೇಲೆ ಶೇಕಡ 14.00 ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ.56,51,140-00 ಗಳಿಗೆ (ಐವತ್ತಾರು ಲಕ್ಷದ ಐವತ್ತೊಂದು ಸಾವಿರದ ನೂರ ನಲವತ್ತು ರೂ.ಗಳು ಮಾತ್ರ) ಶ್ರೀ ವೆಂಕಟೇಶ್ ಬಿ.ನಾಯಕ್, 1ನೇ ದರ್ಜೆ ಗುತ್ತಿಗೆದಾರರು, ಸಾಗರ ಇವರಿಗೆ ಕಾಮಗಾರಿಯನ್ನು ಕೆಳಕಂಡ ಷರತ್ತುಗಳೊಂದಿಗೆ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.
3. ಅಸಹಜ ದರಗಳನ್ನು ಸಮನ್ವಯಪಡಿಸಿಕೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ:20/01/2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1251 **ಕೆ. ಸುಧಾಕರ ಶೆಟ್ಟಿ**

ಸರ್ಕಾರದ ಅಧೀನ ಕಾರ್ಯದರ್ಶಿ, ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

**ವಿಷಯ:** ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆ ತಾಲ್ಲೂಕು ಜಾಜೂರು ಕೆರೆಗೆ ಅಣೆಕಟ್ಟು ಮತ್ತು ಪೂರಕ ಕಾಲುವೆ ನಿರ್ಮಾಣ ಕಾಮಗಾರಿಯ ಟೆಂಡರ್ ಅಂಗೀಕರಿಸುವ ಕುರಿತು.

**ಓದಲಾಗಿದೆ:** 1. ಸರ್ಕಾರದ ಆದೇಶ ಸಂಖ್ಯೆ:ಸನೀಇ 10 ನಯೋಕಾ 2007, ದಿನಾಂಕ 13/05/08.

2. ದಿನಾಂಕ 12/03/09ರ ಸಣ್ಣ ನೀರಾವರಿ ದಕ್ಷಿಣ ವಲಯದ ಮುಖ್ಯ ಇಂಜಿನಿಯರ್ ರವರ ಪತ್ರದ ಸಂಖ್ಯೆ:ಮುಸ(ದ)/ತಾಂ-4/ಸಇಂ-9/2007/ 1625.

3. ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ರವರ ಪತ್ರ ಸಂಖ್ಯೆ:ಮುಸದ/ಆಪ್ತ ಶಾಖೆ/ಟೆಂಡರ್/08-09/1744, ದಿನಾಂಕ 01/04/09.

ಪ್ರಸ್ತಾವನೆ:

ಹೆಚ್ಚಿನ ಆತ್ಮಹತ್ಯೆ ಪ್ರಕರಣಗಳು ವರದಿಯಾಗಿರುವ ರಾಜ್ಯದ ಜಿಲ್ಲೆಗಳಲ್ಲಿ ರೈತರ ಪುನರ್ವಸತಿಗಾಗಿ ವಿಶೇಷ ಪ್ಯಾಕೇಜ್‌ನಡಿ ಕಾಮಗಾರಿಗಳನ್ನು ಕೈಗೊಳ್ಳಲು ಮೇಲೆ (1)ರಲ್ಲಿ ಓದಲಾದ ದಿನಾಂಕ: 13/05/08ರ ಸರ್ಕಾರದ ಆದೇಶದಲ್ಲಿ ಅನುಮೋದನೆ ನೀಡಲಾಗಿದೆ. ಈ ಆದೇಶದಲ್ಲಿ 518.00 ಲಕ್ಷ ರೂ.ಗಳ ಅಂದಾಜು ಮೊತ್ತದಲ್ಲಿ ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆ ತಾಲ್ಲೂಕು ಜಾಜೂರು ಕೆರೆಗೆ ಅಣೆಕಟ್ಟು ಮತ್ತು ಪೂರಕ ಕಾಲುವೆ ನಿರ್ಮಾಣ ಮಾಡುವ ಕಾಮಗಾರಿ ಸಹ ಸೇರಿದೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಚಿತ್ರದುರ್ಗ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ದ್ವಿಲಕೋಟೆ ಪದ್ಧತಿಯಲ್ಲಿ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

| | | |
|---|---|---|
| 1 | ಪ್ರಜಾವಾಣಿ ಹಾಗೂ ಉದಯವಾಣಿ ದಿನಪತ್ರಿಕೆ | ದಿ:17/07/2008 |
| 2 | ಚಿತ್ರದುರ್ಗ ಜಿಲ್ಲಾ ಟೆಂಡರ್ ಬುಲೆಟಿನ್ | ದಿ:19/07/2008 |
| 3 | ರಾಜ್ಯ ಟೆಂಡರ್ ಬುಲೆಟಿನ್ | ದಿ:24/07/2008 |

ಕಾರಣಾಂತರಗಳಿಂದ ಈ ಅಧಿಸೂಚನೆಯನ್ನು ಹಲವಾರು ಬಾರಿ ಮುಂದೂಡಿ ಅಂತಿಮವಾಗಿ ದಿನಾಂಕ 29/01/09ರಂದು ಅವಧಿ ವಿಸ್ತರಣಾ ಅಧಿಸೂಚನೆ ಹೊರಡಿಸಲಾಗಿದೆ. ಈ ಟೆಂಡರ್ ಕರೆಗೆ ಪ್ರತಿಕ್ರಯಿಸಿ ಖಾಲಿ ಟೆಂಡರ್ ಫಾರಂ ಪಡೆದ 27 ಜನ ಗುತ್ತಿಗೆದಾರರಲ್ಲಿ ನಿಗದಿತ ದಿನದಂದು 3 ಜನ ಗುತ್ತಿಗೆದಾರರು ಮಾತ್ರ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಿರುತ್ತಾರೆ. ಸ್ವೀಕರಿಸಲಾದ ತಾಂತ್ರಿಕ ಬಿಡ್‌ನ್ನು ದಿನಾಂಕ 02/03/09ರಂದು ತೆರೆಯಲಾಗಿದೆ. ಇದರಲ್ಲಿ ಅರ್ಹರಾಗಿದ್ದ ಇಬ್ಬರು ಗುತ್ತಿಗೆದಾರರ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗಿದ್ದು, ಇದರಲ್ಲಿ ಅವರುಗಳು ನಮೂದಿಸಿರುವ ವಿವರ ಕೆಳಕಂಡಂತಿದೆ:

| | |
|---|---|
| ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ | **ರೂ.4,53,44,361/–** |
| ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿದಾಗ ಟೆಂಡರಿಗೆ ಇಡಲಾದ ಮೊತ್ತ | **ರೂ.4,51,82,.104/–** |

| ಕ್ರಸಂ | ಗುತ್ತಿಗೆದಾರರ ಹೆಸರು ಮತ್ತು ದರ್ಜೆ<br>ಶ್ರೀ/ಮೆಸರ್ಸ್ | ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ | ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ | ಪ್ರಸಕ್ತ ಸಾಲಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ |
|---|---|---|---|---|
| 1 | ಬಿ.ಹೆಚ್. ಕೃಷ್ಣಾರೆಡ್ಡಿ, 1ನೇ ದರ್ಜೆ ಗುತ್ತಿಗೆದಾರರು | **ರೂ.5,52,62,422/–** | **21.67 ಹೆಚ್ಚು** | **22.31 ಹೆಚ್ಚು** |
| 2 | ಪಿ.ಕೆ. ಶಿವರಾಂ, 1ನೇ ದರ್ಜೆ ಗುತ್ತಿಗೆದಾರರು | **ರೂ.5,52,75,998/–** | **21.90 ಹೆಚ್ಚು** | **22.34 ಹೆಚ್ಚು** |

ಮೇಲ್ಕಂಡಂತೆ ಕ್ರ.ಸಂ:1ರಲ್ಲಿರುವ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, 1ನೇ ದರ್ಜೆ ಗುತ್ತಿಗೆದಾರರು ಇವರು ನಮೂದಿಸಿರುವ ಮೊತ್ತ ರೂ.5,52,62,422–00ಗಳು ಅತಿ ಕಡಿಮೆ ಮೊತ್ತವಾಗಿದ್ದು, ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 22.31ರಷ್ಟು ಹೆಚ್ಚಾಗಿದ್ದು, ಈ ಮೊತ್ತಕ್ಕೆ ಸದರಿಯವರ ಟೆಂಡರ್‌ನ್ನು ಅಂಗೀಕರಿಸಲು ಮುಖ್ಯ ಇಂಜಿನಿಯರ್‌ರವರು ಮೇಲೆ (2)ರಲ್ಲಿ ಓದಲಾದ ದಿನಾಂಕ 12/03/09ರ ಪತ್ರದಲ್ಲಿ ಸರ್ಕಾರದ ಅನುಮೋದನೆ ಕೋರಿರುತ್ತಾರೆ.

ಗುತ್ತಿಗೆದಾರರು ಸೂಚಿಸಿರುವ ದರಗಳು ಹೆಚ್ಚೆಂದು ಕಂಡು ಬಂದ ಹಿನ್ನೆಲೆಯಲ್ಲಿ ಈ ದರಗಳನ್ನು ಕಡಿಮೆಗೊಳಿಸುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ 23/03/09ರಂದು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಗುತ್ತಿಗೆದಾರರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಟೆಂಡರಿಗಿಡಲಾದ ಮೊತ್ತ ರೂ.4,51,82,104–00ಗಳ ಮೇಲೆ ಶೇಕಡ 14.25ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ.5,16,20,554–00ಗಳಿಗೆ ಕಾಮಗಾರಿಯನ್ನು ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, 1ನೇ ದರ್ಜೆ ಗುತ್ತಿಗೆದಾರರು, ಬೆಂಗಳೂರು ಇವರಿಗೆ ವಹಿಸಲು ಸಭೆಯಲ್ಲಿ ನಿರ್ಧರಿಸಲಾಯಿತು. ಈ ನಿರ್ಧಾರಕ್ಕೆ ಗುತ್ತಿಗೆದಾರರು ತಮ್ಮ ಒಪ್ಪಿಗೆಯನ್ನು ಸೂಚಿಸಿರುವುದಾಗಿ ತಿಳಿಸಿ ಈ ಮೊತ್ತಕ್ಕೆ ಟೆಂಡರ್ ಅಂಗೀಕರಿಸಲು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಮೇಲೆ 3ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸನೀಇ 20 ಅಪಿಬಂ 2009, ಬೆಂಗಳೂರು, ದಿನಾಂಕ 11ನೇ ಮೇ 2009.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆ ತಾಲ್ಲೂಕು ಜಾಜೂರು ಕೆರೆಗೆ ಅಣೆಕಟ್ಟು ಮತ್ತು ಪೂರಕ ಕಾಲುವೆ ನಿರ್ಮಾಣ ಕಾಮಗಾರಿಯ ಮಂಜೂರಾದ ಅಂದಾಜು ಪಟ್ಟಿ ಹಾಗೂ ಪ್ರಸಕ್ತ ಸಾಲಿನ

ದರಪಟ್ಟಿಯಂತೆ ಟೆಂಡರಿಗೆ ಇಡಲಾದ ಮೊತ್ತ ರೂ.4,51,82,104-00ಗಳ ಮೇಲೆ ಶೇಕಡ 14.25ರಷ್ಟು ಹೆಚ್ಚಿನ ದರಗಳಗ ಅಂದರೆ ರೂ.5,16,20,554-00ಗಳಿಗೆ (ಐದು ಕೋಟಿ ಹದಿನಾರು ಲಕ್ಷದ ಇಪ್ಪತ್ತು ಸಾವಿರದ ಐನೂರ ಐವತ್ನಾಲ್ಕು ರೂ.ಗಳು ಮಾತ್ರ) ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, 1ನೇ ದರ್ಜೆ ಗುತ್ತಿಗೆದಾರರು, ಬೆಂಗಳೂರು ಇವರಿಗೆ ಕಾಮಗಾರಿಯನ್ನು ಕೆಳಕಂಡ ಷರತ್ತುಗಳೊಂದಿಗೆ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.
3. ಅಸಹಜ ದರಗಳನ್ನು ಸಮನ್ವಯಪಡಿಸಿಕೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ:20/01/2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1252

**ಕೆ. ಸುಧಾಕರ ಶೆಟ್ಟಿ**

ಸರ್ಕಾರದ ಅಧೀನ ಕಾರ್ಯದರ್ಶಿ, ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

**ವಿಷಯ:** ಬಿಜಾಪುರ ಜಿಲ್ಲೆ, ಇಂಡಿ ತಾಲ್ಲೂಕು, ಹಾವಿನಾಳ ಹತ್ತಿರ ಬೋರಿ ನಾಲಾಕ್ಕೆ ಸೇತುವೆ ಸಹಿತ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಟೆಂಡರ್ ಅಂಗೀಕರಿಸುವ ಕುರಿತು.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ:ಸನೀಇ 02 ನಯೋಕಾ 2009, ದಿನಾಂಕ 05/02/09.
2. ದಿನಾಂಕ 27/02/09ರ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ರವರ ಪತ್ರ ಸಂಖ್ಯೆ:ಮುಇಅ/ಸನೀ(ಉ)ವ/ಬಿಜೆಪಿ/ಪಿಬಿ-9/ ಹಾವಿನಾಳ ಸೇತುವೆ ಸಹಿತ ಬ್ಯಾರೇಜ್/ 2008-09/1588.
3. ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ, ಸಣ್ಣ ನೀರಾವರಿ ಇಲಾಖೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ರವರ ಪತ್ರ ಸಂಖ್ಯೆ:ಮುಸದ/ಆಪ್ತಶಾಖೆ/ಟೆಂಡರ್/ 08-09/1336, ದಿನಾಂಕ 28/02/09.

ಪ್ರಸ್ತಾವನೆ:

ಬಿಜಾಪುರ ಜಿಲ್ಲೆ, ಇಂಡಿ ತಾಲ್ಲೂಕು, ಹಾವಿನಾಳ ಹತ್ತಿರ ಬೋರಿನಾಲಾಕ್ಕೆ ಸೇತುವೆ ಸಹಿತ ಬ್ಯಾರೇಜ್ ನಿರ್ಮಾಣ ಮಾಡುವ ಕಾಮಗಾರಿಯ 226.00 ಲಕ್ಷ ರೂ.ಗಳ ಅಂದಾಜು ಪಟ್ಟಿಗೆ ಮೇಲೆ(1)ರಲ್ಲಿ ಓದಲಾದ ದಿನಾಂಕ 05/02/09ರ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಬಿಜಾಪುರ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ದ್ವಿಲಕೋಟೆ ಪದ್ಧತಿಯಲ್ಲಿ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

| | | |
|---|---|---|
| 1 | ರಾಜ್ಯ ಟೆಂಡರ್ ಬುಲೆಟಿನ್ | ದಿ:13/02/09 |
| 2 | ವಿಜಯ ಕರ್ನಾಟಕ ಹಾಗೂ ಇಂಡಿಯನ್ ಎಕ್ಸ್‌ಪ್ರೆಸ್ ದಿನಪತ್ರಿಕೆಗಳು | ದಿ: 14/02/09 |

ಈ ಟೆಂಡರ್ ಕರೆಗೆ ಪ್ರತಿಕ್ರಯಿಸಿ ಖಾಲಿ ಟೆಂಡರ್ ಫಾರಂ ಪಡೆದ 8 ಜನ ಗುತ್ತಿಗೆದಾರರಲ್ಲಿ ನಿಗದಿತ ದಿನದಂದು ಇಬ್ಬರು ಗುತ್ತಿಗೆದಾರರು ಮಾತ್ರ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಿರುತ್ತಾರೆ. ಸ್ವೀಕರಿಸಲಾದ ತಾಂತ್ರಿಕ ಬಿಡ್‌ನ್ನು ದಿನಾಂಕ 25/02/09ರಂದು ತೆರೆಯಲಾಗಿ ಈ ಪೈಕಿ ಒಬ್ಬರು ಗುತ್ತಿಗೆದಾರರು ಮಾತ್ರ ಅರ್ಹತೆ ಹೊಂದಿದ್ದು, ಇವರ ಆರ್ಥಿಕ ಬಿಡ್‌ನ್ನು ಅಂದೇ ತೆರೆಯಲಾಗಿರುತ್ತದೆ. ಆರ್ಥಿಕ ಬಿಡ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳ ತುಲನಾತ್ಮಕ ವಿವರ ಕೆಳಕಂಡಂತಿದೆ:

| | |
|---|---|
| ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ | ರೂ.2,02,54,454/- |
| ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿದಾಗ ಟೆಂಡರಿಗೆ ಇಡಲಾದ ಮೊತ್ತ | ರೂ.1,97,22,665/- |

| ಕ್ರಸಂ | ಗುತ್ತಿಗೆದಾರರ ಹೆಸರು ಮತ್ತು ದರ್ಜೆ<br>ಶ್ರೀ/ಮೆಸರ್ಸ್ | ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ | ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ | ಪ್ರಸಕ್ತ ಸಾಲಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ |
|---|---|---|---|---|
| 1 | ಜಿ.ಮಸ್ತಾನಯ್ಯ,<br>1ನೇ ದರ್ಜೆ ಗುತ್ತಿಗೆದಾರರು | ರೂ.2,33,94,961/- | 15.50 ಹೆಚ್ಚು | 18.62 ಹೆಚ್ಚು |

ಮೇಲ್ಕಂಡಂತೆ ಶ್ರೀ ಮಸ್ತಾನಯ್ಯ, 1ನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಳ ಮೊತ್ತಕ್ಕೆ (1,19,22,665–00) ಹೋಲಿಸಿದಾಗ ಶೇಕಡ 18.62ರಷ್ಟು ಹೆಚ್ಚಾಗಿದ್ದು, ಇವರುಗಳ ರೂ.2,33,49,961–00ರ ಮೊತ್ತದ ಟೆಂಡರ್‌ನ್ನು ಅಂಗೀಕರಿಸಲು ಮುಖ್ಯ ಇಂಜಿನಿಯರ್‌ರವರು ಸರ್ಕಾರದ ಅನುಮೋದನೆ ಕೋರಿರುತ್ತಾರೆ.

ಗುತ್ತಿಗೆದಾರರು ಸೂಚಿಸಿರುವ ದರಗಳನ್ನು ಕಡಿಮೆಗೊಳಿಸುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ 28/02/09ರಂದು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಗುತ್ತಿಗೆದಾರರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿದಾಗ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ.1,97.22,665–00ಗಳ ಮೇಲೆ ಶೇಕಡ 14.50ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ.2,25,82,451–00ಗಳಿಗೆ ಕಾಮಗಾರಿಯನ್ನು ಶ್ರೀ ಜಿ.ಮಸ್ತಾನಯ್ಯ, 1ನೇ ದರ್ಜೆ ಗುತ್ತಿಗೆದಾರರು, ಬಿಜಾಪುರ ಇವರಿಗೆ ವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ನಿರ್ಧಾರಕ್ಕೆ ಗುತ್ತಿಗೆದಾರರು ತಮ್ಮ ಒಪ್ಪಿಗೆಯನ್ನು ತಮ್ಮ ಒಪ್ಪಿಗೆಯನ್ನು ಸೂಚಿಸಿರುವುದಾಗಿ ತಿಳಿಸಿ ಈ ಮೊತ್ತಕ್ಕೆ ಟೆಂಡರ್ ಅಂಗೀಕರಿಸಲು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಮೇಲೆ 3ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸನೀಇ 15 ಅಪಿಬಿಂ 2009(1), ಬೆಂಗಳೂರು, ದಿನಾಂಕ 11ನೇ ಮೇ 2009.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬಿಜಾಪುರ ಜಿಲ್ಲೆ, ಇಂಡಿ ತಾಲ್ಲೂಕು, ಹಾವಿನಾಳ ಹತ್ತಿರ ಬೋರಿನಾಲಾಕ್ಕೆ ಸೇತುವೆ ಸಹಿತ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಮಂಜೂರಾದ ಅಂದಾಜು ಪಟ್ಟಿ ಹಾಗೂ ಪ್ರಸಕ್ತ ಸಾಲಿನ ದರಪಟ್ಟಿಯಂತೆ ಪರಿಷ್ಕರಿಸಿದ ಟೆಂಡರಿಗೆ ಇಡಲಾದ ಮೊತ್ತ ರೂ.1,97.22,665–00ಗಳ ಮೇಲ ಶೇಕಡ 14.50ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ.2,25,82,451–00ಗಳಿಗೆ (ಎರಡು ಕೋಟಿ ಇಪ್ಪತ್ತೈದು ಲಕ್ಷದ ಎಂಭತ್ತೆರಡು ಸಾವಿರದ ನಾನೂರ ಐವತ್ತೊಂದು ರೂ.ಗಳು ಮಾತ್ರ) ಶ್ರೀ ಜಿ.ಮಸ್ತಾನಯ್ಯ, 1ನೇ ದರ್ಜೆ ಗುತ್ತಿಗೆದಾರರು, ಬಿಜಾಪುರ ಇವರಿಗೆ ಕಾಮಗಾರಿಯನ್ನು ಕೆಳಕಂಡ ಷರತ್ತುಗಳೊಂದಿಗೆ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.
3. ಅಸಹಜ ದರಗಳನ್ನು ಸಮನ್ವಯಪಡಿಸಿಕೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ:20/01/2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1253

**ಕೆ. ಸುಧಾಕರ ಶೆಟ್ಟಿ**

ಸರ್ಕಾರದ ಅಧೀನ ಕಾರ್ಯದರ್ಶಿ, ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

**ಒಳಾಡಳಿತ ಸಚಿವಾಲಯ**

**ತಿದ್ದೋಲೆ**

**ಸಂಖ್ಯೆ: ಒಇ 70 ಪೊಸಿಅ 2009, ಬೆಂಗಳೂರು, ದಿನಾಂಕ: 6ನೇ ಮೇ 2009**

ಸರ್ಕಾರದ ಆದೇಶ ಸಂಖ್ಯೆ: ಒಇ 219 ಪೊಸಿಅ 2007 ದಿ:10.03.2008ರ ಆದೇಶ ಭಾಗದ ಅಂಶ–2. "ಈ ಆದೇಶವು ಶಿಸ್ತು ಪ್ರಾಧಿಕಾರ ಹೊರಡಿಸಿದ ಆದೇಶದ ದಿನಾಂಕದಿಂದಲೇ ಜಾರಿಗೆ ಬರುತ್ತದೆ" ಎಂಬುದರ ಬದಲಾಗಿ "ಇವರು ಸೇವೆಯಿಂದ ವಜಾ ಹೊಂದಿ, ಸೇವೆಗೆ ಪುನರ್‌ನೇಮಕ ಮಾಡುವ ವರೆಗಿನ ಅವಧಿಯನ್ನು ಲೆಕ್ಕಕ್ಕಿಲ್ಲದ ಅವಧಿ [Dies-Non]" ಎಂದು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1254

**ಟಿ.ಎನ್. ರವಿಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

**ವಿಷಯ:** ಶ್ರೀ ಎಚ್.ಎಸ್.ಪರಮೇಶ್ವರ, ಪೊಲೀಸ್ ಇನ್ಸ್‌ಪೆಕ್ಟರ್, ಬಸವೇಶ್ವರ ನಗರ ಬೆಂಗಳೂರು, ಇವರು ಸರ್ಕಾರಕ್ಕೆ ಸಲ್ಲಿಸಿರುವ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

**ಓದಲಾಗಿದೆ:** 1) ಶಿಸ್ತು ಪ್ರಾಧಿಕಾರಿ ಹಾಗೂ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಆದೇಶ ಸಂಖ್ಯೆ:ಸಿಬಿ(8) 17/2007–08 ದಿ:20–02–2008.

2) ಅರ್ಜಿದಾರರ ಮೇಲ್ಮನವಿ ಅರ್ಜಿ ದಿನಾಂಕ:30–04–08.

3) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಸಿಬಿ(8) 17/2007-08 ದಿ:05-02-2009.

**ಪ್ರಸ್ತಾವನೆ:**

ಶ್ರೀ ಎಚ್.ಎಸ್.ಪರಮೇಶ್ವರ, ಪೊಲೀಸ್ ಇನ್ಸ್‌ಪೆಕ್ಟರ್, ಬಸವೇಶ್ವರ ಪೊಲೀಸ್ ಠಾಣೆ, (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಇವರು ಸಿಂಧನೂರು ಪೊಲೀಸ್ ಠಾಣೆಯಲ್ಲಿ ಪೊಲೀಸ್ ಸಬ್-ಇನ್ಸ್‌ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಬೇಜವಾಬ್ದಾರಿತನ, ಅಧಿಕಾರ ದುರುಪಯೋಗ, ಅತೀವ ನಿರ್ಲಕ್ಷತನ ಮತ್ತು ಕರ್ತವ್ಯಲೋಪ ಎಸಗಿರುವ ಆರೋಪದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 7 ರಡಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

**ದೋಷರೋಪಣೆ:-**

"ಶ್ರೀ ಎಚ್.ಎಸ್.ಪರಮೇಶ್ವರ, ಪೊಲೀಸ್ ಇನ್ಸ್‌ಪೆಕ್ಟರ್, ಹಾಲಿ ಸಿ.ಓ.ಡಿ. ಬೆಂಗಳೂರು, ಆದ ನೀವು ಸಿಂಧನೂರು ನಗರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ವಾರಸು ದಾರರಿಲ್ಲದ ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಂಡು ಅವುಗಳನ್ನು ಪಿ.ಎಫ್.ಗೆ ಅಳವಡಿಸದೇ, ನಿಯಮಗಳನ್ನು ಪಾಲಿಸದೆ, ನ್ಯಾಯಾಲಯದ ಪರವಾನಗಿ ಇಲ್ಲದೇ ಸದರಿ ದ್ವಿಚಕ್ರ ವಾಹನಗಳನ್ನು ಅನಧಿಕೃತವಾಗಿ ಸಿಬ್ಬಂದಿಗಳಿಗೆ ಉಪಯೋಗಪಡಿಸಿ ಕೊಳ್ಳಲು ನೀಡಿದ್ದಲ್ಲದೆ, ಅವರುಗಳು ವರ್ಗಾವಣೆಗೊಂಡು ಹೋದಾಗ ಸದರಿ ವಾಹನಗಳನ್ನು ಠಾಣೆಯಲ್ಲಿ ಜಮಾ ಮಾಡದೇ ತಮ್ಮೊಂದಿಗೆ ತಮ್ಮ ಸ್ವಂತ ಕೆಲಸಕ್ಕಾಗಿ ಉಪಯೋಗಿಸಲು ತೆಗೆದುಕೊಂಡು ಹೋಗಲು ಕಾರಣರಾಗುವ ಮೂಲಕ ತಮ್ಮ ಕರ್ತವ್ಯದಲ್ಲಿ ಅತೀವ ನಿರ್ಲಕ್ಷತನ, ಬೇಜವಾಬ್ದಾರಿತನ, ಅಧಿಕಾರ ದುರುಪಯೋಗ ಮತ್ತು ಕರ್ತವ್ಯ ಲೋಪ ಎಸಗಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ: (1)ರಲ್ಲಿ ಓದಲಾದ ದಿನಾಂಕ: 20-02-2008ರ ಆದೇಶದಲ್ಲಿ "ಇವರ ಮುಂದಿನ ಒಂದು ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗಳಿಗೆ ಧಕ್ಕೆಯಾಗದಂತೆ ಒಂದು ವರ್ಷಕಾಲ ಮುಂದೂಡುವ ದಂಡನೆಯನ್ನು ವಿಧಿಸಿದ್ದಾರೆ."

ಈ ಆದೇಶದ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಅರ್ಜಿದಾರರು ನಿಯಮಬಾಹಿರವಾಗಿ ನಡೆದುಕೊಂಡಿರುವುದು ಸಾಕ್ಷಾಧಾರಗಳಿಂದ ಸಾಬೀತಾಗಿದ್ದು, ಮೇಲ್ಮನವಿಯಲ್ಲಿ ಪರಿಗಣಿಸಬಹುದಾದಂತಹ ಯಾವುದೇ ಹೊಸ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ, ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವೆಂದು ಪರಿಗಣಿಸುತ್ತಾ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಒಇ 198 ಪೊಸಿಅ 2008 ಬೆಂಗಳೂರು, ದಿನಾಂಕ: 20ನೇ ಏಪ್ರಿಲ್ 2009**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಎಚ್.ಎಸ್.ಪರಮೇಶ್ವರ, ಪೊಲೀಸ್ ಇನ್ಸ್‌ಪೆಕ್ಟರ್, ಬಸವೇಶ್ವರ ನಗರ, ಬೆಂಗಳೂರು, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1255

**ಟಿ.ಎಸ್. ರವಿಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

ವಿಷಯ: ಶ್ರೀ ಎಸ್.ಕೆ.ಧನುಶೇಖರ್, ಪಿ.ಸಿ.-890, 'ಬಿ'ದಳ, 7ನೇ ಪಡೆ. ಕೆ.ಎಸ್.ಆರ್.ಪಿ., ಮಂಗಳೂರು, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ: 1) ಶಿಸ್ತು ಪ್ರಾಧಿಕಾರಿ ಹಾಗೂ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಕೆ.ಎಸ್.ಆರ್.ಪಿ., ಬೆಂಗಳೂರು, ಇವರ ಆದೇಶ ಸಂಖ್ಯೆ:ಡಿಇ/33/2004-05 ದಿನಾಂಕ:17-04-2007

2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಆದೇಶ ಸಂಖ್ಯೆ:ಅಪೀಲು (6)39/2007-08 ಓ.ಬಿ:76/2007-08 ದಿ:05.11.2007

3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:08-04-08

4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ:ಅಪೀಲು (2)16/2008-09 ದಿ:24-07-2008

5) ಕರ್ನಾಟಕ ಲೋಕ ಸೇವಾ ಆಯೋಗದ ಪತ್ರ ಸಂಖ್ಯೆ:ಪಿಎಸ್‌ಸಿ 144 ಸಿಎನ್‌ಎಸ್ 08 ದಿನಾಂಕ: 30.03.2009.

ಪ್ರಸ್ತಾವನೆ:

ಶ್ರೀ ಎಸ್.ಕೆ.ಧನುಶೇಖರ್, ಪಿ.ಸಿ.–890, 'ಬಿ'ದಳ, 7ನೇ ಪಡೆ, ಕೆ.ಎಸ್.ಆರ್.ಪಿ., ಮಂಗಳೂರು, (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಇವರು 5ನೇ ಪಡೆ ಮೈಸೂರಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಕರ್ತವ್ಯದಲ್ಲಿ ಅಶಿಸ್ತು, ತೀವ್ರ ದುರ್ವರ್ತನೆ ಪ್ರದರ್ಶಿಸಿದ ಕಾರಣದ ಮೇಲೆ ಇನ್ನೋರ್ವ ಸಿಬ್ಬಂದಿಯೊಂದಿಗೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಿಯಮಗಳು) ನಿಯಮಾವಳಿ 1965ರ ನಿಯಮ 6 ಮತ್ತು 8ರಡಿ ಜಂಟಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

**ದೋಷರೋಪಣೆ.–**

I. ಶ್ರೀ ಎಸ್.ಕೆ.ಧನುಶೇಖರ್, ಪಿ.ಸಿ.–890, 'ಬಿ'ದಳ, 5ನೇ ಪಡೆ, ಕೆ.ಎಸ್.ಆರ್.ಪಿ., ಮೈಸೂರು, ಆದ ನೀವು ಶ್ರೀ.ಹನುಮಂತಯ್ಯ, ಆರ್.ಪಿ.ಐ., 5ನೇ ಪಡೆ ಕೆ.ಎಸ್.ಆರ್.ಪಿ., ಮೈಸೂರು ಇವರಿಗೆ ವಿಜಯಾ ಬ್ಯಾಂಕ್, ನಜರ್‌ಬಾದ್ ಶಾಖೆ, ಮೈಸೂರು, ಇಲ್ಲಿ ಕ್ರಮವಾಗಿ 2001ರಲ್ಲಿ ರೂ.50,000–00 ಮತ್ತು 2003ರಲ್ಲಿ ರೂ.1,00,000–00 ಸಾಲವನ್ನು ಕೊಡಿಸಿ ಕ್ರಮವಾಗಿ ದಾಖಲೆಗಳಿಗಾಗಿ ರೂ.1,300–00 ಮತ್ತು 5,000–00 ಕಮೀಷನ್ ಹಾಗೂ ದಾಖಲೆಗಳಿಗಾಗಿ ರೂ.1,300–00 ಮತ್ತು 10,000–00 ಕಮೀಷನ್ ಪಡೆದುಕೊಂಡು ನಿಮ್ಮ ಅಧಿಕಾರ ವ್ಯಾಪ್ತಿ ಮೀರಿ ಬ್ಯಾಂಕುಗಳಲ್ಲಿ ಸಾಲ ಕೊಡಿಸುವ ಮೂಲಕ ತೀವ್ರ ದುರ್ವರ್ತನೆ ಮತ್ತು ಅಶಿಸ್ತು ಪ್ರದರ್ಶಿಸಿರುತ್ತೀರಿ.

II. ಶ್ರೀ ಎಸ್.ಕೆ.ಧನುಶೇಖರ್, ಪಿ.ಸಿ.–890, 'ಬಿ'ದಳ, 5ನೇ ಪಡೆ, ಕೆ.ಎಸ್.ಆರ್.ಪಿ., ಮೈಸೂರು, ಆದ ನೀವು ಶ್ರೀ.ರಾಮಕೃಷ್ಣೇಗೌಡ, ಹವ.–156, ಇವರಿಗೆ ವಿಜಯಾ ಬ್ಯಾಂಕ್, ನಜರ್‌ಬಾದ್, ಮೈಸೂರು ಇಲ್ಲಿ 1998 ರಲ್ಲಿ ರೂ.35,000–00ಗಳ ಸಾಲ ಕೊಡಿಸಿ ರೂ.5,000–00 ಕಮೀಷನ್ ಹಣವನ್ನು ಅಕ್ರಮವಾಗಿ ಪಡೆದಿರುತ್ತೀರಿ ಮತ್ತು ಸದರಿ ಶ್ರೀ.ರಾಮಕೃಷ್ಣೇಗೌಡ ಇವರಿಗೆ ಶೇಕಡಾ 10ರ ಬಡ್ಡಿ ದರದಲ್ಲಿ ರೂ.10,000–00ಗಳ ಸಾಲ ನೀಡಿದ್ದು, ತಮ್ಮ ಅಧಿಕಾರ ವ್ಯಾಪ್ತಿ ಮೀರಿ ವರ್ತಿಸಿರುವುದಲ್ಲದೆ, ಕೆ.ಸಿ.ಎಸ್. (ಕಂಡಕ್ಟ್) ನಿಯಮಾವಳಿಗಳು 1966ರ ನಿಯಮ 21ನ್ನು ಉಲ್ಲಂಘಿಸಿ ತೀವ್ರ ದುರ್ವರ್ತನೆ ಪ್ರದರ್ಶಿಸಿರುತ್ತೀರಿ.

III. ಶ್ರೀ ಎಸ್.ಕೆ.ಧನುಶೇಖರ್, ಪಿ.ಸಿ.–890, 'ಬಿ'ದಳ, 5ನೇ ಪಡೆ, ಕೆ.ಎಸ್.ಆರ್.ಪಿ., ಮೈಸೂರು, ಆದ ನೀವು ಶ್ರೀ.ಹನುಮಂತಯ್ಯ, ಆರ್.ಪಿ.ಐ., ಶ್ರೀ.ಆರ್.ರಾಮಚಂದ್ರ, ಹವ.–117 ಇವರುಗಳಿಗೆ ಮತ್ತು ಇವರ ಕುಟುಂಬದವರಿಗೆ ದೂರವಾಣಿ ಮೂಲಕ ಬೆದರಿಕೆ ಹಾಕಿ ತೀವ್ರ ದುರ್ವರ್ತನೆ ಮತ್ತು ಅಶಿಸ್ತು ಪ್ರದರ್ಶಿಸಿರುತ್ತೀರಿ.

IV. ಶ್ರೀ ಎಸ್.ಕೆ.ಧನುಶೇಖರ್, ಪಿ.ಸಿ.–890, 'ಬಿ'ದಳ, 5ನೇ ಪಡೆ, ಕೆ.ಎಸ್.ಆರ್.ಪಿ., ಮೈಸೂರು, ಆದ ನೀವು ಶ್ರೀ.ಟಿ.ಎ.ಸುರೇಶ, ಪಿ.ಸಿ.–725, 'ಇ' ದಳ, 5ನೇ ಪಡೆ, ಕೆ.ಎಸ್.ಆರ್.ಪಿ., ಮೈಸೂರು ಇವರಿಗೆ ಕಾನ್ಸ್‌ಟೇಬಲ್ ಕೆಲಸ ಕೊಡಿಸುವುದಾಗಿ ಹೇಳಿ 1999ರಲ್ಲಿ ರೂ.60,000–00 ಗಳನ್ನು ಅಕ್ರಮವಾಗಿ ಪಡೆದುಕೊಂಡಿರುತ್ತೀರಿ. ತನ್ಮೂಲಕ ಕಾನೂನು ಬಾಹಿರ ಚಟುವಟಿಕೆಯಲ್ಲಿ ತೊಡಗಿ ತೀವ್ರ ಅಶಿಸ್ತು ಮತ್ತು ದುರ್ನಡತೆ ಪ್ರದರ್ಶಿಸಿರುತ್ತೀರಿ.

V. ಶ್ರೀ ಎಸ್.ಕೆ.ಧನುಶೇಖರ್, ಪಿ.ಸಿ.–890, 'ಬಿ'ದಳ, 5ನೇ ಪಡೆ, ಕೆ.ಎಸ್.ಆರ್.ಪಿ., ಮೈಸೂರು, ಆದ ನೀವು ಶ್ರೀ.ಟಿ.ಎ.ಸುರೇಶ, ಪಿಸಿ–725 ಇವರಿಂದ ವಿಜಯಾ ಬ್ಯಾಂಕ್‌ನ ಲೋನ್ ಫಾರ್ಮ್ ಮತ್ತು ವಿತ್‌ಡ್ರಾ ಫಾರಂ ಮೇಲೆ ಸಹಿ ಮಾಡಿಸಿಕೊಂಡು ರೂ.30,000–00ಗಳನ್ನು ಅಕ್ರಮವಾಗಿ ನೀವೇ ತೆಗೆದುಕೊಂಡಿರುತ್ತೀರಿ.

VI. ಶ್ರೀ ಎಸ್.ಕೆ.ಧನುಶೇಖರ್. ಪಿ.ಸಿ.–890, 'ಬಿ'ದಳ, 5ನೇ ಪಡೆ, ಕೆ.ಎಸ್.ಆರ್.ಪಿ., ಮೈಸೂರು, ಆದ ನೀವು ಅನಿತ ಎನ್ನುವ ಹೆಣ್ಣು ಮಗಳನ್ನು ಶ್ರೀ.ಟಿ.ಎ.ಸುರೇಶ, ಪಿಸಿ–725 ಇವರ ವಿರುದ್ಧ ಎತ್ತಿಕಟ್ಟಿ ಸದರಿ ಹೆಣ್ಣುಮಗಳು ಮಾನನಷ್ಟ ಮೊಕದ್ದಮೆ ಹೂಡಿದ್ದು, 3 ಲಕ್ಷ ರೂಪಾಯಿಗಳನ್ನು ಕೊಟ್ಟರೆ ಆ ಕೇಸನ್ನು ವಾಪಸ್ ತೆಗೆದುಕೊಳ್ಳುವುದಾಗಿಯೂ, ವೃತ್ತ ಪತ್ರಿಕೆ ಮತ್ತು ಕ್ರೈಂ ಸ್ಟೋರಿಯಲ್ಲಿ ಹಾಕಿಸುವುದಾಗಿ ಸದರಿ ಸುರೇಶ್ ರವರಿಗೆ ಬೆದರಿಕೆ ಹಾಕಿ ತೀವ್ರ ದುರ್ವರ್ತನೆ ಪ್ರದರ್ಶಿಸಿದ್ದೀರಿ.

VII. ಶ್ರೀ ಎಸ್.ಕೆ.ಧನುಶೇಖರ್, ಪಿ.ಸಿ.–890, 'ಬಿ' ದಳ, 5ನೇ ಪಡೆ, ಕೆ.ಎಸ್.ಆರ್.ಪಿ., ಮೈಸೂರು, ಆದ ನೀವು ಶ್ರೀ.ಎಂ.ಎ.ಭೋಪಯ್ಯ, ನಿವೃತ್ತ ಹವಲ್ದಾರ್ ಇವರಿಗೆ ವಳ್ಳಿ ಫೈನಾನ್ಸ್‌ನಿಂದ ಶೇಕಡಾ 10ರ ಬಡ್ಡಿ ದರದಲ್ಲಿ ರೂ.40,000–00 ಸಾಲ ಕೊಡಿಸಿದ್ದು, ಆ ಮೊತ್ತದಲ್ಲಿ ಕೇವಲ ರೂ.20,000–00 ಗಳನ್ನು ನೀಡಿ ಉಳಿದ ಹಣವನ್ನು ಬಿಡಿಬಿಡಿಯಾಗಿ ಕೊಟ್ಟು ತೊಂದರೆ ಮಾಡಿರುತ್ತೀರಿ. ಸದರಿ ಎಂ.ಎ.ಭೋಪಯ್ಯ ಇವರಿಗೆ ಅವರ ಸಹಿಯನ್ನು ಬಿಳಿ ಕಾಗದದ ಮೇಲೆ ಪಡೆದುಕೊಂಡು ರೂ.1,000–00 ಗಳನ್ನು ಕೊಟ್ಟು ರೂ.10,000–00 ವಸೂಲು ಮಾಡಿದ್ದೀರಿ. ಸದರಿಯವರಿಗೆ ಜಿ.ಪಿ.ಎಫ್.ನಿಂದ ಬಂದ ರೂ.20,000–00 ಗಳಲ್ಲಿ ರೂ.10,000–00

ಗಳನ್ನು ಕಡಿತಗೊಳಿಸಿ ನೀವು ಪಡೆದುಕೊಂಡಿರುತ್ತೀರಿ. ತನ್ಮೂಲಕ ನೀವು ಅಕ್ರಮ, ವಂಚನೆಯಂತಹ ಕೃತ್ಯಗಳಲ್ಲಿ ತೊಡಗಿದ್ದೀರಿ.

VIII. ಶ್ರೀ ಎಸ್.ಕೆ.ಧನುಶೇಖರ್, ಪಿ.ಸಿ.–890, 'ಬಿ'ದಳ, 5ನೇ ಪಡೆ, ಕೆ.ಎಸ್.ಆರ್.ಪಿ., ಮೈಸೂರು, ಆದ ನೀವು 5ನೇ ಪಡೆ, ಕೆ.ಎಸ್.ಆರ್.ಪಿ. ಸಿಬ್ಬಂದಿಗಳಿಗೆ ಪ್ರತಿ ಮಾಹೆ ಶೇಕಡಾ 5 ರಿಂದ 10ರ ವರೆಗೆ ಬಡ್ಡಿ ಸಾಲ ನೀಡುತ್ತಿದ್ದು, ಇದರ ವಸೂಲಿಗಾಗಿ ವಸತಿ ವಲಯಕ್ಕೆ ವಾಹನಗಳಲ್ಲಿ ಸ್ಥಳೀಯ ರೌಡಿಗಳನ್ನು ಕರೆತಂದು ವಸತಿ ವಲಯದಲ್ಲಿ ಭಯಭೀತಿ ವಾತಾವರಣ ಸೃಷ್ಟಿಸುತ್ತಾ, ಬೆದರಿಕೆ ಒಡ್ಡಿ ತೀವ್ರ ದುರ್ನಡತೆ ಪ್ರದರ್ಶಿಸಿದ್ದೀರಿ.

IX. ಶ್ರೀ ಎಸ್.ಕೆ.ಧನುಶೇಖರ್, ಪಿ.ಸಿ.–890, 'ಬಿ'ದಳ, 5ನೇ ಪಡೆ, ಕೆ.ಎಸ್.ಆರ್.ಪಿ., ಮೈಸೂರು, ಆದ ನೀವು 5ನೇ ಪಡೆಯ ಅಡಿಗೆ ಯವರನ್ನು ಬಳಸಿಕೊಂಡು ಖಾಸಗಿ ಮದುವೆ, ಹುಟ್ಟುಹಬ್ಬದಂತಹ ಕಾರ್ಯಕ್ರಮಗಳಿಗೆ ಅಡಿಗೆ ಸಿದ್ಧತೆ ಮಾಡಿ ಪೂರೈಸುತ್ತಾ ಸರ್ಕಾರಿ ನೌಕರರನ್ನು ನಿಮ್ಮ ಸ್ವಂತ ಕೆಲಸಕ್ಕೆ ದುರುಪಯೋಗಪಡಿಸಿಕೊಂಡಿರುತ್ತೀರಿ.

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿಲ್ಲ ಎಂದು ಸಲ್ಲಿಸಿದ ವರದಿಯನ್ನು ಶಿಸ್ತುಪ್ರಾಧಿಕಾರವು ಒಪ್ಪದೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಕೆ.ಎಸ್.ಆರ್.ಪಿ., ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ:17–04–2007ರ ಆದೇಶದಲ್ಲಿ "ಅರ್ಜಿದಾರರ ವೇತನವನ್ನು ಪಿ.ಸಿ. ಹುದ್ದೆಯ ಕನಿಷ್ಠ ವೇತನಕ್ಕೆ ಮೂರು ವರ್ಷಗಳ ಕಾಲ ಮುಂದಿನ ವಾರ್ಷಿಕ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರುವಂತೆ ಇಳಿಸಲಾಗಿದೆ, ಸದರಿಯವರು ಅಮಾನತ್ತಿನಲ್ಲಿ ಕಳೆದ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಿ ಆದೇಶಿಸಿದೆ."

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಮೇಲೆ ಕ್ರಮ ಸಂಖ್ಯೆ:(2)ರಲ್ಲಿ ಓದಲಾದ ದಿನಾಂಕ:05–11–2007ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಇವರ ವಿರುದ್ಧದ ಆರೋಪವು ಸಂಪೂರ್ಣವಾಗಿ ಸಾಬೀತಾಗಿರದ ಕಾರಣ ಅರ್ಜಿದಾರರಿಗೆ ವಿಧಿಸಿದ ದಂಡನೆಯು ಅಧಿಕವಾಗಿದೆ ಎಂದು ಪರಿಗಣಿಸಿ ಈ ಕುರಿತು ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಓದಲಾದ (5)ರ ಪತ್ರದಲ್ಲಿ ಪಡೆದು, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಒಇ 250 ಪೊಸಿಅ 2008 ಬೆಂಗಳೂರು, ದಿನಾಂಕ: 21ನೇ ಏಪ್ರಿಲ್ 2009**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25 ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಎಸ್.ಕೆ.ಧನುಶೇಖರ್, ಪಿ.ಸಿ.–890, 'ಬಿ'ದಳ, 7ನೇ ಪಡೆ, ಕೆ.ಎಸ್.ಆರ್.ಪಿ., ಮಂಗಳೂರು, ಇವರಿಗೆ ಶಿಸ್ತು ಪ್ರಾಧಿಕಾರವು ದಿ:17–04–07ರ ಆದೇಶದಲ್ಲಿ ವಿಧಿಸಿದ ದಂಡನೆಯನ್ನು ಭಾಗಶಃ ಮಾರ್ಪಡಿಸಿ, ಇವರ ವೇತನವನ್ನು ಪಿ.ಸಿ. ಹುದ್ದೆಯ ಕನಿಷ್ಠ ವೇತನಕ್ಕೆ ಎರಡು ವರ್ಷಗಳ ಕಾಲ ಮುಂದಿನ ವಾರ್ಷಿಕ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರುವಂತೆ ಇಳಿಸಿ, ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೇ ಪರಿಗಣಿಸಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1256 **ಟಿ.ಎನ್. ರವಿಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

**ವಿಷಯ:** ಶ್ರೀ ಜಯಕುಮಾರ್, ಸಿ.ಪಿ.ಸಿ.–2124, ಕಾಪು ಪೊಲೀಸ್ ಠಾಣೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

**ಓದಲಾಗಿದೆ:**
1) ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಉಡುಪಿ ಜಿಲ್ಲೆ, ಇವರ ಆದೇಶ ಸಂಖ್ಯೆ: ಸಿಬ್ಬಂದಿ(3)/ಇವಿ/5:ಉಜಿ/2004 ದಿನಾಂಕ:19–12–2005
2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ಪಶ್ಚಿಮ ವಲಯ, ಮಂಗಳೂರು ಇವರ ಆದೇಶ ಸಂಖ್ಯೆ: ಸಿಬ್ಬಂದಿ 2/ಮೇಲ್ಮನವಿ/02/2006 ದಿ:20–04–2006
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:30–05–2008
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)34/2008–09 ದಿ:08–08–2008
5) ಕರ್ನಾಟಕ ಲೋಕ ಸೇವಾ ಆಯೋಗದ ಪತ್ರ ಸಂಖ್ಯೆ:ಪಿಎಸ್‌ಸಿ 139 ಸಿಎನ್‌ಎಸ್ 08 ದಿನಾಂಕ:02.04.2009

ಪ್ರಸ್ತಾವನೆ:

ಶ್ರೀ ಜಯಕುಮಾರ್, ಸಿ.ಪಿ.ಸಿ.–2124, ಕಾಪು ಪೊಲೀಸ್ ಠಾಣೆ, (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಇವರು ಈ ಹಿಂದೆ ಮಣಿಪಾಲ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಕರ್ತವ್ಯದಲ್ಲಿ ತೀವ್ರ ನಿರ್ಲಕ್ಷತೆಯನ್ನು ಪ್ರದರ್ಶಿಸಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಿಯಮಗಳು) ನಿಯಮಾವಳಿ 1965ರ ನಿಯಮ 6ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

**ದೋಷರೋಪಣೆ:–**

"ದಿ:05–05–2004 ರಂದು ಸಂಜೆ ಭಜರಂಗದಳ ಹಿರಿಯಡ್ಕ ಘಟಕದ ಸಹ–ಸಂಚಾಲಕ ಬೊಮ್ಮರಬೆಟ್ಟು ಸುಧಾಕರ್ ಪೂಜಾರಿಯನ್ನು ವೈಯುಕ್ತಿಕ ದ್ವೇಷದಿಂದ ಗುಡ್ಡೆಯಂಗಡಿ ನೀರಿನ ತೊಟ್ಟಿಯ ಬಳಿ ಗುಡ್ಡೆಅಂಗಡಿ ಸಂತು @ ಸಂತೋಷ ಪೂಜಾರಿ ಎಂಬಾತನು ಚೂರಿಯಿಂದ ತಿವಿದು ಕೊಲೆಮಾಡಿದ್ದು, ಈ ಬಗ್ಗೆ ಹಿರಿಯಡ್ಕ ಪೊಲೀಸ್ ಠಾಣೆಯಲ್ಲಿ ಅ.ಕ್ರ:43/2004 ಕಲಂ 302 ಐ.ಪಿ.ಸಿ. ಪ್ರಕರಣವು ದಾಖಲಾಗಿರುತ್ತದೆ. ಶ್ರೀ.ಜಯಕುಮಾರ್, ಸಿ.ಪಿ.ಸಿ.–2124, ಮಣಿಪಾಲ ಪೊಲೀಸ್ ಠಾಣೆ ಆದ ನೀವು ಈ ಘಟನೆಯ ಪ್ರತ್ಯಕ್ಷದರ್ಶಿಯಾಗಿದ್ದು, ನಿಮ್ಮ ಎದುರೇ ಈ ಕೊಲೆ ಕೃತ್ಯ ನಡೆದಿದ್ದು, ಅದನ್ನು ತಪ್ಪಿಸಬಹುದಾಗಿತ್ತು. ಅಲ್ಲದೇ ಘಟನಾಸ್ಥಳಕ್ಕೆ ಆರೋಪಿ ಸಂತು @ ಸಂತೋಷ ಪೂಜಾರಿ ಎಂಬಾತನು ನಿಮ್ಮ ಬಾಬ್ತು ಮೋಟಾರು ಸೈಕಲಿನಲ್ಲಿ ಬಂದ ಬಗ್ಗೆ ತಿಳಿದು ಬಂದಿದ್ದಲ್ಲದೆ ಈ ಘಟನೆ ಆದ ನಂತರವೂ ನೀವು ತಕ್ಷೀರು ಸ್ಥಳದಲ್ಲಿದ್ದು ಗಾಯಗೊಂಡು ಬಿದ್ದಿರುವ ಸುಧಾಕರ ಪೂಜಾರಿಯನ್ನು ಚಿಕಿತ್ಸೆಯ ಬಗ್ಗೆ ಆಸ್ಪತ್ರೆಗೆ ಸಾಗಿಸಲು ವಿಫಲರಾಗಿರುತ್ತೀರಿ. ನೀವು ಒಬ್ಬ ಶಿಸ್ತಿನ ಇಲಾಖೆಯಲ್ಲಿ ಇದ್ದುದಲ್ಲದೆ ಸಾಮಾನ್ಯ ನಾಗರೀಕನಾಗಿಯೂ ಈ ಘಟನೆಯನ್ನು ಹಿರಿಯಡ್ಕ ಪೊಲೀಸ್ ಠಾಣೆಗೆ ತಿಳಿಸಲು ವಿಫಲರಾಗಿ ಕರ್ತವ್ಯ ನಿರ್ಲಕ್ಷತೆಯನ್ನು ಪ್ರದರ್ಶಿಸಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿರುವುದಿಲ್ಲವೆಂದು ಸಲ್ಲಿಸಿದ ವರದಿಯನ್ನು ಶಿಸ್ತುಪ್ರಾಧಿಕಾರವು ಒಪ್ಪದೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಉಡುಪಿ, ಇವರು ಮೇಲೆ ಕ್ರಮ ಸಂಖ್ಯೆ:(1) ರಲ್ಲಿ ಓದಲಾದ ದಿ:19–12–2005 ರ ಆದೇಶದಲ್ಲಿ "ಅರ್ಜಿದಾರರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ತದನಂತರ ಗಳಿಸುವ ವಾರ್ಷಿಕ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರುವಂತೆ ಎರಡು ವರ್ಷಗಳ ಕಾಲ ತಡೆಹಿಡಿದು, ದಿ:27–05–2004 ರಿಂದ 27–11–2004ರ ವರೆಗಿನ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಿ ಆದೇಶಿಸಿದ್ದಾರೆ."

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಪಶ್ಚಿಮ ವಲಯ, ಮಂಗಳೂರು, ಮೇಲೆ ಕ್ರಮ ಸಂಖ್ಯೆ:(2) ರಲ್ಲಿ ಓದಲಾದ ದಿನಾಂಕ:20–04–2006ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಆರೋಪವು ನಿಸ್ಸಂಶಯವಾಗಿ ಸಾಬೀತಾದಂತಾಗಿರದ ಹಿನ್ನೆಲೆಯಲ್ಲಿ ಅರ್ಜಿದಾರರಿಗೆ ವಿಧಿಸಿದ ದಂಡನೆಯ ಪ್ರಮಾಣ ಅಧಿಕವಾಗಿದೆ ಎಂದು ಪರಿಗಣಿಸಿ ಈ ಕುರಿತು ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಓದಲಾದ (5)ರ ಪತ್ರದಲ್ಲಿ ಪಡೆದು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಒಇ 272 ಪೊಸಿಅ 2008 ಬೆಂಗಳೂರು, ದಿನಾಂಕ: 20ನೇ ಏಪ್ರಿಲ್ 2009**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25 ರಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ.ಜಯಕುಮಾರ್, ಸಿ.ಪಿ.ಸಿ.–2124, ಕಾಪು ಪೊಲೀಸ್ ಠಾಣೆ, ಇವರಿಗೆ ಶಿಸ್ತುಪ್ರಾಧಿಕಾರದ ದಿ:19–12–2005ರ ದಂಡನಾದೇಶವನ್ನು ಭಾಗಶ: ಮಾರ್ಪಡಿಸಿ, ಇವರ ಮುಂದಿನ ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮ ರಹಿತವಾಗಿ ಎರಡು ವರ್ಷಗಳ ಕಾಲ ಮುಂದೂಡುವ ದಂಡನೆಯನ್ನು ವಿಧಿಸಿ, ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೇ ಪರಿಗಣಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1257

**ಟಿ.ಎನ್. ರವಿಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

**ವಿಷಯ:** ಶ್ರೀಮತಿ.ರಾಧಾಬಾಯಿ ಕೋಂ ದಿ:ಆರ್.ಮಂಜಪ್ಪ, ಮಾಜಿ ಎಚ್.ಸಿ.–86, ಕೆ.ಎಸ್.ಆರ್.ಪಿ., ಬೆಂಗಳೂರು, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

**ಓದಲಾಗಿದೆ:** 1) ಶಿಸ್ತು ಪ್ರಾಧಿಕಾರಿ ಹಾಗೂ ಕಮಾಂಡೆಂಟ್, 9ನೇ ಪಡೆ, ಕೆ.ಎಸ್.ಆರ್.ಪಿ., ಬೆಂಗಳೂರು, ಇವರ ಆದೇಶ ಸಂಖ್ಯೆ:ಸಿಬ್ಬಂದಿ (1)ಇವಿ:53:97–98 ದಿನಾಂಕ:18–08–1999

2) ಅರ್ಜಿದಾರರ ಪರವಾಗಿ ಸಲ್ಲಿಸಿದ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:11-09-2006
3) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)101/2006-07 ದಿ:06-01-2007
4) ಕರ್ನಾಟಕ ಲೋಕ ಸೇವಾ ಆಯೋಗದ ಪತ್ರ ಸಂಖ್ಯೆ:ಪಿಎಸ್‌ಸಿ 212 ಪಿಎಸ್‌ಎಸ್ 08 ದಿನಾಂಕ:20.03.2009.

**ಪ್ರಸ್ತಾವನೆ:**

ಶ್ರೀ ಆರ್.ಮಂಜಪ್ಪ, ಮಾಜಿ ಎಚ್.ಸಿ.-86, ಕೆ.ಎಸ್.ಆರ್.ಪಿ., ಬೆಂಗಳೂರು, (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಇವರು ಅನಧಿಕೃತವಾಗಿ ಸರ್ಕಾರಿ ಸೇವೆಗೆ ಗೈರುಹಾಜರಾಗುತ್ತಿದ್ದ ಹಿನ್ನೆಲೆಯಲ್ಲಿ ಇವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಿಯಮಗಳು) ನಿಯಮಾವಳಿ 1965ರ ನಿಯಮ 6ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

**ದೋಷರೋಪಣೆ:**

"ಹವಾ ಸಂಖ್ಯೆ:86, ಆರ್.ಮಂಜಪ್ಪ, 'ಎಫ್' ದಳ 9ನೇ ಪಡೆ, ಕೆ.ಎಸ್.ಆರ್.ಪಿ., ಬೆಂಗಳೂರು, ಆದ ನೀವು ದಿ:19.07.97 ರಿಂದ 04.11.98ರ ವರೆಗೆ ಅನಧಿಕೃತವಾಗಿ ಕರ್ತವ್ಯಕ್ಕೆ ಗೈರುಹಾಜರಾಗಿರುವಿರಿ. ಇದೇ ರೀತಿ ದಿ: 08.08.95 ರಿಂದ 14-08-95, 30-04-96 ರಿಂದ 09-05-96, 24-05-96 ರಿಂದ 02-09-96, 01-12-96 ರಿಂದ 27-01-97, 09-07-97 ರಿಂದ 15-07-97ರ ವರೆಗೆ ನೀವು ಕರ್ತವ್ಯಕ್ಕೆ ಅನದಿಕೃತವಾಗಿ ಗೈರುಹಾಜರಾಗಿ ಕರ್ತವ್ಯದಲ್ಲಿ ಮೇಲಿಂದ ಮೇಲೆ ಅನಧಿಕೃತವಾಗಿ ಗೈರುಹಾಜರಿಯಾಗುವ ರೂಢಿಯನ್ನು ಇಟ್ಟುಕೊಂಡ ಆಪಾದನೆ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲ ಅರ್ಜಿದಾರರ ಸಮಜಾಯಿಷಿಯನ್ನು ನೀಡುವಂತೆ 2 ಬಾರಿ ಕೋರಲಾಗಿದ್ದು, ಅರ್ಜಿದಾರರು ಸಮಜಾಯಿಷಿಯನ್ನು ನೀಡದ ಕಾರಣ, ಶಿಸ್ತು ಪ್ರಾಧಿಕಾರಿ ಹಾಗೂ ಕಮಾಂಡೆಂಟ್, 9ನೇ ಪಡೆ, ಕೆ.ಎಸ್.ಆರ್.ಪಿ., ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ: 18-08-1999ರ ಆದೇಶದಲ್ಲಿ "ಅರ್ಜಿದಾರರನ್ನು ಸೇವೆಯಿಂದ ವಜಾಗೊಳಿಸುವ ದಂಡನೆ ವಿಧಿಸಿರುತ್ತಾರೆ."

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿರುವುದಿಲ್ಲ. ಈ ಮಧ್ಯ ಆ.ಪೊ.ಆ. ರವರು ನಿಧನ ಹೊಂದಿರುವುದರಿಂದ ಅವರ ಪತ್ನಿಯಾದ ಶ್ರೀಮತಿ.ರಾಧಾಬಾಯಿ, ಇವರು ತಮ್ಮ ಪತಿಯ ಪರವಾಗಿ ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿಯನ್ನು ಸಲ್ಲಿಸಿದ್ದಾರೆ.

ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ದಿವಂಗತರು ಸರ್ಕಾರದಲ್ಲಿ ಸಲ್ಲಿಸಿದ ಸೇವಾವಧಿಯನ್ನು ಗಮನ ದಲ್ಲಿರಿಸಿಕೊಂಡು ಶಿಸ್ತುಪ್ರಾಧಿಕಾರದ ದಂಡನಾದೇಶವನ್ನು ಭಾಗಶಃ ಮಾರ್ಪಡಿಸಲು ಸರ್ಕಾರವು ತೀರ್ಮಾನಿಸಿ ಈ ಕುರಿತು ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಓದಲಾದ (4)ರ ಪತ್ರದಲ್ಲಿ ಪಡೆದು, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಒಇ 350 ಪೊಶಿಅ 2007 ಬೆಂಗಳೂರು, ದಿನಾಂಕ: 20ನೇ ಏಪ್ರಿಲ್ 2009**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25 ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ದಿ:ಆರ್.ಮಂಜಪ್ಪ, ಹವಲ್ದಾರ್, ಕೆ.ಎಸ್.ಆರ್.ಪಿ. ಇವರಿಗೆ ಶಿಸ್ತುಪ್ರಾಧಿಕಾರ ವಿಧಿಸಿದ ದಂಡನಾದೇಶವನ್ನು ಭಾಗಶಃ ಮಾರ್ಪಡಿಸಿ ಸದರಿ ದಿನಾಂಕ:18-08-1999 ರಿಂದಲೇ ಜಾರಿಗೆ ಬರುವಂತೆ ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳ ನಿಯಮ 285(4)ರ ಪ್ರಕಾರ ಕಡ್ಡಾಯ ನಿವೃತ್ತಿಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1258

**ಟಿ.ಎನ್. ರವಿಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

**ವಿಷಯ:** ಶ್ರೀ ಗಂಗರಂಗಯ್ಯ, ಸಿ.ಎಚ್.ಸಿ.-54, ತಿಲಕ ಪಾರ್ಕ್ ಪೊಲೀಸ್ ಠಾಣೆ, ತುಮಕೂರು, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

**ಓದಲಾಗಿದೆ:** 1) ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ತುಮಕೂರು, ಇವರ ಆದೇಶ ಸಂಖ್ಯೆ: ಪನ್ನಿ/55/2007-08 ಓ.ಬಿ:72/08 ದಿ:23-01-2008
2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಕೇಂದ್ರ ವಲಯ, ಬೆಂಗಳೂರು, ಇವರ ಆದೇಶ ಸಂಖ್ಯೆ:ಅಪೀಲು 59/2007-08 ಓ.ಬಿ.ಸಂ:9/2008-09 ದಿನಾಂಕ:16-04-08
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:09-07-2008

4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)44/2008-09 ದಿ:18-02-2009

ಪ್ರಸ್ತಾವನೆ:-

ಶ್ರೀ ಗಂಗರಂಗಯ್ಯ, ಸಿ.ಎಚ್.ಸಿ.-54, ಇವರು ತಿಲಕ ಪಾರ್ಕ್ ಪೊಲೀಸ್ ಠಾಣೆ, ತುಮಕೂರಲ್ಲಿ, (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯ ನಿರ್ವಹಿಸುತ್ತಿದ್ದಾಗ ಕರ್ತವ್ಯದಲ್ಲಿ ತೀವ್ರ ನಿರ್ಲಕ್ಷತೆ ಮತ್ತು ಬೇಜವಾಬ್ದಾರಿತನ ಪ್ರದರ್ಶಿಸಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 7 ರಡಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

**ದೋಷರೋಪಣೆ:-**

"ನೀವು ಮರಳೂರು ದಿಣ್ಣೆ ಉಪಠಾಣೆಯ ಉಸ್ತುವಾರಿ ಸಿಬ್ಬಂದಿಗಳಾಗಿದ್ದು, ದಿ:07-09-2007 ರಂದು ಮರಳೂರು ದಿಣ್ಣೆಯ ಎಸ್.ಎಸ್.ಐ.ಟಿ. ಕಾಲೇಜಿನ ಹೊರ ರಾಜ್ಯದ ವಿದ್ಯಾರ್ಥಿಗಳು ವೈಷಮ್ಯದಿಂದ ಜಗಳ ಮಾಡಿಕೊಂಡು, ರಕ್ತಗಾಯಗೊಂಡ ಹಿನ್ನೆಲೆ ಯಲ್ಲಿ ತುಮಕೂರು (ಗ್ರಾ) ಪೊಲೀಸ್ ಠಾಣೆಯಲ್ಲಿ ಮೊ.ನಂ:258/ 2007, 259/07 ಹಾಗೂ 261/2007ರ ಅಡಿಯಲ್ಲಿ ಮೊಕದ್ದಮೆ ಗಳು ದಾಖಲಾಗಿರುತ್ತವೆ. ಎಸ್.ಎಸ್.ಐ.ಟಿ. ಕಾಲೇಜು ಹೊರ ಆವರಣದಲ್ಲಿ ಏನು ನಡೆಯುತ್ತಿದೆ ಎಂಬುದರ ಬಗ್ಗೆ ಮಾಹಿತಿ ಸಂಗ್ರಹಿಸಿ ಮೇಲಾಧಿಕಾರಿಗಳಿಗೆ ತಿಳಿಸದೆ ವಿಫಲರಾಗಿರುತ್ತೀರಿ ಮತ್ತು ಗಸ್ತಿನ ಬಗ್ಗೆ ಯಾವುದೇ ತರಹದ ಆಸಕ್ತಿ ವಹಿಸದೇ ಕರ್ತವ್ಯದಲ್ಲಿ ನಿರ್ಲಕ್ಷತೆ ಮತ್ತು ಬೇಜವಾಬ್ದಾರಿತನ ತೋರಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ತುಮಕೂರು, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ: 23-01-2008ರ ಆದೇಶದಲ್ಲಿ "ಇವರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ತದನಂತರದ ವಾರ್ಷಿಕ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರದಂತೆ ಮೂರು ತಿಂಗಳು ಕಾಲ ಮುಂದೂಡುವ ದಂಡನೆಯನ್ನು ವಿಧಿಸಿದ್ದಾರೆ."

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಕೇಂದ್ರ ವಲಯ, ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ:(2)ರಲ್ಲಿ ಓದಲಾದ ದಿನಾಂಕ:16-04-2008ರ ಆದೇಶದಲ್ಲಿ ಮೇಲ್ಮನವಿ ಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಪರಿಷ್ಕರಣ ಮೇಲ್ಮನವಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ, ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವೆಂದು ಪರಿಗಣಿಸುತ್ತಾ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಒಇ 222 ಪೊಸಿಅ 2008 ಬೆಂಗಳೂರು, ದಿನಾಂಕ: 20ನೇ ಏಪ್ರಿಲ್ 2009**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಗಂಗರಂಗಯ್ಯ, ಸಿ.ಎಚ್.ಸಿ.-54, ತಿಲಕ ಪಾರ್ಕ್ ಪೊಲೀಸ್ ಠಾಣೆ, ತುಮಕೂರು, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಆರ್. 1259

**ಟಿ.ಎನ್. ರವಿಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

**ವಿಷಯ:** ಶ್ರೀ ಪಿ.ಸದಾನಂದ, ಎ.ಎಸ್.ಐ., ಸಂಚಾರ ಪಶ್ಚಿಮ ಪೊಲೀಸ್ ಠಾಣೆ, ಮಂಗಳೂರು, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

**ಓದಲಾಗಿದೆ:** 1) ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ದಕ್ಷಿಣ ಕನ್ನಡ, ಮಂಗಳೂರು, ಇವರ ಆದೇಶ ಸಂಖ್ಯೆ:ಇವಿ/6/2005 ದಿನಾಂಕ:07-02-2007

2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಪಶ್ಚಿಮ ವಲಯ, ಮಂಗಳೂರು, ಇವರ ಆದೇಶ ಸಂಖ್ಯೆ:ಸಿಬ್ಬಂದಿ-2/ಮೇಲ್ಮನವಿ/02/2007 ದಿ:02-07-2007

3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:15-10-2007

4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)88/2007-08 ದಿ:25-03-2008
5) ಕಾರಣ ಕೇಳುವ ನೋಟಿಸ್ ಸಂಖ್ಯೆ:ಒಇ 99 ಪೊಸಿಅ 2008 ದಿ:23-09-08
6) ಅರ್ಜಿದಾರರ ಸಮಜಾಯಿಷಿ ದಿನಾಂಕ:15-11-08
7) ಕರ್ನಾಟಕ ಲೋಕ ಸೇವಾ ಆಯೋಗದ ಪತ್ರ ಸಂಖ್ಯೆ:ಪಿಎಸ್‌ಸಿ 188 ಸಿಎನ್‌ಎಸ್ 08 ದಿನಾಂಕ: 01.04.2009

**ಪ್ರಸ್ತಾವನೆ:**

ಶ್ರೀ ಪಿ.ಸದಾನಂದ, ಎ.ಎಸ್.ಐ., ಸಂಚಾರ ಪಶ್ಚಿಮ ಪೊಲೀಸ್ ಠಾಣೆ, ಮಂಗಳೂರು, ಇವರು (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಉಪ್ಪಿನಂಗಡಿ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಕರ್ತವ್ಯದಲ್ಲಿ ತೀವ್ರ ಅಶಿಸ್ತು ಹಾಗೂ ದುರ್ನಡತೆಯನ್ನು ಪ್ರದರ್ಶಿಸಿದ ಕಾರಣದ ಮೇಲೆ ಇವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಿಯಮಗಳು) ನಿಯಮಾವಳಿ 1965ರ ನಿಯಮ 6 ಮತ್ತು 8 ರಡಿ ಜಂಟಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

**ದೋಷಾರೋಪಣೆ:**

1. "ಆ.ಪೊ.ಅ. (1)ನೇ ಶ್ರೀ ಪಿ.ಸದಾನಂದ, ಎ.ಎಸ್.ಐ., ಆದ ನೀವು ಉಪ್ಪಿನಂಗಡಿ ಪೊಲೀಸ್ ಠಾಣೆಯಲ್ಲಿ ಕರ್ತವ್ಯದಲ್ಲಿರುತ್ತೀರಿ. ದಿ:13-09-2005 ರಂದು ಸಂಜೆ ಉಪ್ಪಿನಂಗಡಿ ಠಾಣೆಯಲ್ಲಿ ವರದಿಯಾದ ಮೊ.ನಂ.283/2005 ಕಲಂ 279-337 ಐಪಿಸಿ ಪ್ರಕರಣದಲ್ಲಿ ಸ್ವಾಧೀನ ಪಡಿಸಲಾದ ವಾಹನಗಳನ್ನು ಬಿಡುಗಡೆ ಮಾಡುವಂತೆ ದಿ:14-09-05 ರಂದು ಮಾನ್ಯ ನ್ಯಾಯಾಲಯವು ಆದೇಶಿಸಿರುತ್ತದೆ. ಸದರಿ ಆದೇಶವನ್ನು ಹಾಜರುಪಡಿಸಿದ್ದರೂ ಉಪ್ಪಿನಂಗಡಿ ಠಾಣಾ ಪ್ರಭಾರದಲ್ಲಿದ್ದ ಹಾಗೂ ಪ್ರಕರಣದ ತನಿಖಾಧಿಕಾರಿಯಾದ ನೀವು ನ್ಯಾಯಾಲಯದ ಆದೇಶದಂತೆ ವಾಹನ ನಂ.ಕೆಎ-19ಬಿ-3147ನೇದನ್ನು ಅದರ ಮಾಲಿಕರಿಗೆ ಬಿಟ್ಟುಕೊಡದೆ ಹಣದ ಬೇಡಿಕೆ ಒಡ್ಡಿ ವಾಹನವನ್ನು ಬಿಡುಗಡೆ ಮಾಡಿದಂತೆ ದಾಖಲಾತಿಗಳನ್ನು ತಯಾರಿಸಿ ಹಾಗೂ ಚಾಲಕನ ಮೂಲ ಚಾಲನಾ ಪರವಾನಿಗೆಯನ್ನು ಅನಗತ್ಯವಾಗಿ ಇಟ್ಟುಕೊಂಡು ವಾಹನದ ಮಾಲಿಕರಿಂದ ಅಕ್ರಮ ಸಂಭಾವನೆ ಪಡೆಯುವ ಉದ್ದೇಶದಿಂದ ವಾಹನವನ್ನು ಇಟ್ಟುಕೊಂಡು ನ್ಯಾಯಾಲಯದ ಆದೇಶವನ್ನು ನಿರ್ಲಕ್ಷಿಸಿ ತೀವ್ರ ಅಶಿಸ್ತು ಹಾಗೂ ದುರ್ನಡತೆ ಪ್ರದರ್ಶಿಸಿರುತ್ತೀರಿ.
2. ಅಲ್ಲದೆ ಉಪ್ಪಿನಂಗಡಿ ಠಾಣಾ ಮೊ.ನಂ.283/05 ಪ್ರಕರಣದಲ್ಲಿ ತನಿಖಾಧಿಕಾರಿಯಾಗಿರುವ ನೀವು ಈ ಪ್ರಕರಣದಲ್ಲಿ ಸೊತ್ತು ಸ್ವಾಧೀನಪಡಿಸಿದ ಬಗ್ಗೆ ದಾಖಲಿಸಿದ ರಿಜಿಸ್ಟರ್, ಕೈದಿಶೋಧನೆ ರಿಜಿಸ್ಟರ್ ಮತ್ತು ಬಂಧಪತ್ರ ಮತ್ತು ಜಾಮೀನು ಬಂಧಪತ್ರ ಈ ದಾಖಲೆಗಳಿಗೆ ಸಹಿ ಮಾಡದೆ ತೀವ್ರ ಕರ್ತವ್ಯ ಲೋಪವೆಸಗಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ (2) ಮಾತ್ರ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ದಕ್ಷಿಣ ಕನ್ನಡ, ಮಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ: 07-02-2007ರ ಆದೇಶದಲ್ಲಿ ಅರ್ಜಿದಾರರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ತದನಂತರ ಗಳಿಸುವ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರದಂತೆ ಒಂದು ವರ್ಷ ಕಾಲ ಮುಂದೂಡುವ ದಂಡನೆಯನ್ನು ವಿಧಿಸಿ ದಿ:24-09-2005 ರಿಂದ 17-12-2005ರ ವರೆಗಿನ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೇ ಪರಿಗಣಿಸಿ ಆದೇಶಿಸಿದ್ದಾರೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಪಶ್ಚಿಮ ವಲಯ, ಮಂಗಳೂರು, ಇವರು ಮಾನವೀಯ ದೃಷ್ಟಿಯಿಂದ ಶಿಸ್ತುಪ್ರಾಧಿಕಾರದ ಆದೇಶವನ್ನು ಭಾಗಶ: ಮಾರ್ಪಡಿಸಿ, ಇವರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗಳಿಗೆ ದಕ್ಕೆಯಾಗದಂತೆ ಮೂರು ತಿಂಗಳ ಕಾಲ ಮುಂದೂಡುವ ದಂಡನೆಯನ್ನು ವಿಧಿಸಿ, ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೇ ಪರಿಗಣಿಸಿ ಮೇಲೆ ಕ್ರಮ ಸಂಖ್ಯೆ:(2) ರಲ್ಲಿ ಓದಲಾದ ದಿನಾಂಕ: 02-07-2007ರಲ್ಲಿ ಆದೇಶಿಸಿದ್ದಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿ ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಮೇಲ್ಮನವಿ ಪ್ರಾಧಿಕಾರವು ದಂಡನೆಯನ್ನು ಕಡಿತಗೊಳಿಸಿರುವುದು ಆರೋಪದ ಸ್ವರೂಪಕ್ಕೆ ಅನುಗುಣವಾಗಿರುವುದಿಲ್ಲವೆಂದು ಸರ್ಕಾರವು ತೀರ್ಮಾನಿಸಿ ಅರ್ಜಿದಾರರಿಗೆ ಓದಲಾದ (5)ರಲ್ಲಿ ಕಾರಣ ಕೇಳುವ

ನೋಟೀಸನ್ನು ಜಾರಿಗೊಳಿಸಿ ಸಮಜಾಯಿಷಿಯನ್ನು ನೀಡುವಂತೆ ಸೂಚಿಸಲಾಗಿತ್ತು. ಅರ್ಜಿದಾರರು ಓದಲಾದ (6)ರ ಪತ್ರದಲ್ಲಿ ನೀಡಲಾದ ಸಮಜಾಯಿಷಿಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಬಗ್ಗೆ ಓದಲಾದ (7)ರ ಪತ್ರದಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಪಡೆದು, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಒಇ 99 ಪೊಸಿಅ 2008, ಬೆಂಗಳೂರು, ದಿನಾಂಕ: 20ನೇ ಏಪ್ರಿಲ್ 2009**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25 ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಪಿ.ಸದಾನಂದ, ಎ.ಎಸ್.ಐ., ಸಂಚಾರ ಪಶ್ಚಿಮ ಪೊಲೀಸ್ ಠಾಣೆ, ಮಂಗಳೂರು, ಇವರಿಗೆ ಮೇಲ್ಮನವಿ ಪ್ರಾಧಿಕಾರವು ದಿ:02-07-07ರ ಆದೇಶದಲ್ಲಿ ವಿಧಿಸಿದ ದಂಡನೆಯನ್ನು ಮಾರ್ಪಡಿಸಿ, ಇವರ ಒಂದು ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗೆ ದಕ್ಕೆಯಾಗದಂತೆ ಮುಂದೂಡಿ ಆದೇಶಿಸಿದೆ ಮತ್ತು ಅಮಾನತ್ತಿನಲ್ಲಿನ ಅವಧಿಯನ್ನು ಅಮಾನತ್ತೆಂದೇ ಪರಿಗಣಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1260

**ಟಿ.ಎನ್. ರವಿಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

**ವಿಷಯ:** ಶ್ರೀ ಎಂ.ಎಂ.ನದಾಫ್, ಪಿ.ಎಸ್.ಐ., ಎಕ್ಸೈಜ್ ಸ್ಕ್ವಾಡ್, ಜಿಲ್ಲಾ ಪೊಲೀಸ್ ಕಛೇರಿ, ಹಾವೇರಿ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

**ಓದಲಾಗಿದೆ:**
1) ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಹಾವೇರಿ, ಇವರ ಆದೇಶ ಸಂಖ್ಯೆ: ಪಿಆರ್/143/2007 ಓ.ಬಿ:587/07 ದಿ:31-10-2007
2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಉತ್ತರ ವಲಯ, ಬೆಳಗಾವಿ, ಇವರ ಆದೇಶ ಸಂಖ್ಯೆ:ಅಪೀಲು 8/ಉವ/2008 ದಿನಾಂಕ:22-04-08
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:08-08-2008
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ:ಅಪೀಲು (2)56/2008-09 ದಿ:25-10-2008.

**ಪ್ರಸ್ತಾವನೆ:**

ಶ್ರೀ ಎಂ.ಎಂ.ನದಾಫ್, ಪಿ.ಎಸ್.ಐ., ಇವರು (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಹಾವೇರಿ ಜಿಲ್ಲೆಯ ಗುತ್ತಲ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಕರ್ತವ್ಯದಲ್ಲಿ ಬೇಜವಾಬ್ದಾರಿತನ ಹಾಗೂ ತೀವ್ರ ನಿರ್ಲಕ್ಷತನ ತೋರಿಸಿದ ಕಾರಣಕ್ಕಾಗಿ ಇವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 7 ರಡಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

**ದೋಷರೋಪಣೆ:**

"ಶಿಸ್ತುಪಾಲನಾ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ನೀವು ನಿಮ್ಮ ಠಾಣಾ ವ್ಯಾಪ್ತಿ ಕಾನೂನು ಬಾಹಿರ ಚಟುವಟಿಕೆಗಳಾದ ಓ.ಸಿ., ಮಟಕಾ ಜೂಜಾಟದಂತಹ ಕೃತ್ಯಗಳು ಜರುಗುತ್ತಿದ್ದು ಹಾಗೂ ಅವುಗಳ ಬಗ್ಗೆ ಮಾಹಿತಿ ಇದ್ದರೂ ಸಹ ಯಾವುದೇ ಕ್ರಮ ಜರುಗಿಸದೇ ಆದ್ಯ ಕರ್ತವ್ಯ ನಿರ್ಲಕ್ಷತನ ತೋರಿರುತ್ತೀರಿ. ದಿ:26-09-07 ರಂದು ಬಾತ್ಮಿಯ ಆಧಾರದ ಮೇಲೆ ಹೆಚ್ಚುವರಿ ಎಸ್.ಪಿ. ಹಾಗೂ ಡಿ.ಎಸ್.ಪಿ. ಹಾವೇರಿ, ರವರ ಗುತ್ತಲಕ್ಕೆ ಬಂಧು ರೇಡ್ ಮಾಡಿ, ಗುತ್ತಲ ಪಿ.ಎಸ್. ಅಪರಾಧ ಸಂಖ್ಯೆ:136/07 ಕಲಂ 78(G) ಕೆ.ಪಿ.ಕಾಯ್ದೆಯನ್ವಯ ಪ್ರಕರಣ ದಾಖಲಿಸಲಾಗಿದೆ. ಮೇಲಾಧಿಕಾರಿಗಳು ಈ ಬಗ್ಗೆ ಸಾಕಷ್ಟು ಬಾರಿ ತಿಳುವಳಿಕೆ ನೀಡಿದರೂ ಸಹ ಕಾನೂನು ಬಾಹಿರ ಚಟುವಟಿಕೆಗಳಾದ ಓ.ಸಿ.ಮಟಕಾ ಜೂಜಾಟದಂತಹ ಕೃತ್ಯಗಳನ್ನು ನಿಯಂತ್ರಿಸುವಲ್ಲಿ ವಿಫಲರಾಗಿ ನೀವು ನಿಮ್ಮ ಆದ್ಯ ಕರ್ತವ್ಯದಲ್ಲಿ ತೀವ್ರ ಬೇಜವಾಬ್ದಾರಿತನ ಹಾಗೂ ಕರ್ತವ್ಯ ನಿರ್ಲಕ್ಷತನ ತೋರಿರುವುದು ಉಲ್ಲೇಖಿತ ವರದಿಯಿಂದ ದೃಢಪಟ್ಟಿರುತ್ತದೆ."

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಹಾವೇರಿ, ಇವರು ಮೇಲೆ ಕ್ರಮ ಸಂಖ್ಯೆ: (1)ರಲ್ಲಿ ಓದಲಾದ ದಿನಾಂಕ:31-10-2007ರ ಆದೇಶದಲ್ಲಿ "ಇವರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ತದನಂತರದ ವಾರ್ಷಿಕ ವೇತನ ಬಡ್ತಿಗಳಿಗೆ ಪರಿಣಾಮ ಬೀರದಂತೆ ಒಂದು ವರ್ಷ ಕಾಲ ತಡೆಹಿಡಿಯುವ ದಂಡನೆಯನ್ನು ವಿಧಿಸಿದ್ದಾರೆ."

ಈ ಆದೇಶದ ವಿರುದ್ದ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಉತ್ತರ ವಲಯ, ಬೆಳಗಾವಿ, ಇವರು ಮೇಲೆ ಕ್ರಮ ಸಂಖ್ಯೆ:(2)ರಲ್ಲಿ ಓದಲಾದ ದಿನಾಂಕ: 22.04.08ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಸದರಿ ಪರಿಷ್ಕರಣ ಮೇಲ್ಮನವಿಯಲ್ಲಿ ಪರಿಗಣಿಸುವಂತಹ ಯಾವುದೇ ಹೊಸ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ, ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವೆಂದು ಪರಿಗಣಿಸುತ್ತಾ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಒಇ 244 ಪೊಸಿಅ 2008 ಬೆಂಗಳೂರು, ದಿನಾಂಕ: 20ನೇ ಏಪ್ರಿಲ್ 2009**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಎಂ.ಎಂ.ನದಾಫ್, ಪಿ.ಎಸ್.ಐ., ಎಕ್ಸೈಜ್ ಸ್ಕ್ವಾಡ್, ಜಿಲ್ಲಾ ಪೊಲೀಸ್ ಕಛೇರಿ, ಹಾವೇರಿ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1261

**ಟಿ.ಎನ್. ರವಿಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

**ವಿಷಯ:** ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ-ಕರ್ನಾಟಕ ಇದರಡಿ, 2008-09ನೇ ಸಾಲಿನಲ್ಲಿ ಬಾಕಿ ನೀಡಬೇಕಾದ ರಾಜ್ಯದ ಪಾಲಿನ ಅನುದಾನವನ್ನು ಕೊಪ್ಪಳ ಜಿಲ್ಲೆಗೆ 2009-10ನೇ ಸಾಲಿನಲ್ಲಿ ಬಿಡುಗಡೆ ಮಾಡುತ್ತಿರುವ ಬಗ್ಗೆ.

**ಉಲ್ಲೇಖ:** ಕೇಂದ್ರ ಸರ್ಕಾರದ ಪತ್ರದ ಸಂ.ಜೆ-12022/23/2008-ಎನ್.ಆರ್.ಇ.ಜಿ.ಎ-ಎಸ್.ಎಲ್ ನಂ.977 ದಿ:30.03.2009.

**ಪ್ರಸ್ತಾವನೆ:**

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನಕ್ಕಾಗಿ ಉಲ್ಲೇಖಿತ ಪತ್ರದಲ್ಲಿ 2008-09ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ಕೊಪ್ಪಳ ಜಿಲ್ಲೆಗೆ ರೂ. 200.00 ಲಕ್ಷಗಳನ್ನು ನೇರವಾಗಿ ಬಿಡುಗಡೆ ಮಾಡಿ, ಅದಕ್ಕೆ ಪೂರಕವಾಗಿ ರಾಜ್ಯ ಸರ್ಕಾರವು ತನ್ನ ಪಾಲಿನ ಅನುದಾನವನ್ನು ಹದಿನೈದು ದಿನಗಳೊಳಗಾಗಿ ಬಿಡುಗಡೆ ಮಾಡುವಂತೆ ಆದೇಶಿಸಿರುತ್ತದೆ. 2008-09ನೇ ಸಾಲಿನಲ್ಲಿ ರಾಜ್ಯದಿಂದ ಬಿಡುಗಡೆಗೊಳಿಸಬೇಕಾದ ಅನುದಾನವು ಅನುದಾನದ ಕೊರತೆಯಿಂದಾಗಿ ಬಿಡುಗಡೆಗೊಳಿಸಲಾಗಲಿಲ್ಲ. ಸದರಿ ರಾಜ್ಯದ ಪಾಲಿನ ಅನುದಾನವನ್ನು 2009-10ನೇ ಸಾಲಿನಲ್ಲಿ ಬಿಡುಗಡೆಗೊಳಿಸಬೇಕಾಗಿದ್ದು, ಸದರಿ ಯೋಜನೆಗೆ ಆಯವ್ಯಯದಲ್ಲಿ ಅನುದಾನವನ್ನು ರಾಜ್ಯದ ಪಾಲಾಗಿ, ಸಾಮಗ್ರಿಗಳ ಬಳಕೆಗಾಗಿ ಶೇಕಡ 11.1 ರಷ್ಟಾಗಿ ಬಿಡುಗಡೆ ಮಾಡಲು ಒದಗಿಸಲಾಗಿರುತ್ತದೆ. ಆದುದರಿಂದ, ಪ್ರಸ್ತುತ ಸಾಲಿನಲ್ಲಿ ಕೊಪ್ಪಳ ಜಿಲ್ಲೆಗೆ, ಉದ್ಯೋಗ ಖಾತರಿ ಯೋಜನೆಯಡಿ, ಸಾಮಗ್ರಿಗಳ ಘಟಕದ ಬಳಕೆಗಾಗಿ, ಶೇಕಡಾ 11.1 ರಷ್ಟಾದ ರೂ. 22.20 ಲಕ್ಷಗಳನ್ನು ಅನುಬಂಧದಲ್ಲಿ ನಮೂದಿಸಿದಂತೆ, ಬಿಡುಗಡೆ ಮಾಡಲು ನಿರ್ಧರಿಸಿದೆ. ಆದುದರಿಂದ, ಈ ಆದೇಶ.

**ಸರ್ಕಾರದ ಆದೇಶ ಸಂ.ಗ್ರಾಅಪ.50.ಉಖಾಯೋ.09-10(3) ಬೆಂಗಳೂರು, ದಿನಾಂಕ: 25ನೇ ಏಪ್ರಿಲ್ 2009**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ- ಕರ್ನಾಟಕ ಇದರಡಿ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ, 2008-09ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ಬಿಡುಗಡೆ ಮಾಡಿರುವ ಅನುದಾನಕ್ಕೆ ಅನುಗುಣವಾಗಿ ರಾಜ್ಯದ ಪಾಲನ್ನು ಮೊದಲನೇ ಕಂತಿನ ಅನುದಾನವಾದ ರೂ. 22.20 ಲಕ್ಷಗಳನ್ನು (ರೂ. ಇಪ್ಪತ್ತೆರೆಡು ಲಕ್ಷದ ಇಪ್ಪತ್ತು ಸಾವಿರ ಮಾತ್ರ) ಅನುಬಂಧದಲ್ಲಿ ನಮೂದಿಸಿದಂತೆ, ಸಾಮಗ್ರಿ ಘಟಕದ ವೆಚ್ಚಕ್ಕೆ ಬಳಸಲು ಕೊಪ್ಪಳ ಜಿಲ್ಲೆಗೆ ಬಿಡುಗಡೆ ಮಾಡಿದೆ.

ಆರ್ಥಿಕ ಇಲಾಖೆಯ ಆದೇಶದ ಸಂ:ಎಫ್‌ಡಿ.7ಜೆಡ್‌ಪಿಎ. 2003 ದಿನಾಂಕ:14-7-2005 ಮತ್ತು ಸರ್ಕಾರದ ಸುತ್ತೋಲೆ ಸಂ.ಆಇ 01 ಜಿಪಅ 07 ದಿನಾಂಕ:19-01-2007ರಲ್ಲಿನ ಸೂಚನೆಗಳನ್ವಯ ಈ ಕೆಳಕಂಡ ಲೆಕ್ಕಶೀರ್ಷಿಕೆಯಡಿ ಪೇಯಿಸ್ ರಸೀದಿಯ ಮೇಲೆ ಖಜಾನೆಯಿಂದ ಅನುದಾನ ಪಡೆದು ಕಾರ್ಯಕ್ರಮದ ಅನುಷ್ಠಾನಕ್ಕಾಗಿ ತೆರೆದಿರುವ ಬ್ಯಾಂಕ್ ಖಾತೆಗೆ ಜಮೆ ಮಾಡಿ ವೆಚ್ಚವನ್ನು ಭರಿಸತಕ್ಕದ್ದು. 2008-09ನೇ ಸಾಲಿನ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಲೆಕ್ಕಶೀರ್ಷಿಕೆ "2505 ಗ್ರಾಮೀಣ ಉದ್ಯೋಗ 02 ಗ್ರಾಮೀಣ ಉದ್ಯೋಗ ಖಾತರಿ ಯೋಜನೆ 101 -ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾರ್ಯಕ್ರಮ 0-01 ಕರ್ನಾಟಕ ಗ್ರಾಮೀಣ ಉದ್ಯೋಗ ಭರವಸೆ ಯೋಜನೆ -059 ಇತರೆ ಖರ್ಚು (ಯೋಜನೆ)" (2505-02-101-0-01-059).

ಈಗ ಬಿಡುಗಡೆ ಮಾಡುವ ಅನುದಾನವನ್ನು ಸಾಮಗ್ರಿ ಘಟಕಕ್ಕೆ ಮಾತ್ರ ಬಳಸಿಕೊಳ್ಳತಕ್ಕದ್ದು. ಪಂಚಾಯತ್ ರಾಜ್ ಸಂಸ್ಥೆಗೆ ಸಂಬಂಧಪಟ್ಟ ಅಧಿಕಾರಿಗಳು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ಸಂಬಂಧಿಸಿದಂತೆ ಅಧಿನಿಯಮದ ಪ್ರಕರಣಗಳು, ಕೇಂದ್ರ ಸರ್ಕಾರದ ನಿರ್ವಹಣೆಯ ಮಾರ್ಗಸೂಚಿಗಳು, ಸುತ್ತೋಲೆಗಳು, ಆದೇಶಗಳು ಹಾಗೂ ರಾಜ್ಯ ಸರ್ಕಾರವು ದಿನಾಂಕ:1–2–2007ರಂದು ಅಧಿಸೂಚಿಸಿರುವ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ–ಕರ್ನಾಟಕ ಇದರ ಮಾರ್ಗಸೂಚಿಗಳ ರೀತ್ಯಾ ಕ್ರಮ ತೆಗೆದುಕೊಳ್ಳತಕ್ಕದ್ದು. ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಸಂಬಂಧಿಸಿದ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು, ಉಸ್ತುವಾರಿ, ಅನುಷ್ಠಾನ ಮತ್ತು ಜಾಗೃತಿ ಇವುಗಳನ್ನು ಚಲಾಯಿಸುವ ಸಂಪೂರ್ಣ ಜವಾಬ್ದಾರಿ ಅವರುಗಳದಾಗಿರುತ್ತದೆ.

ಸರ್ಕಾರದ ಆದೇಶವನ್ನು ಈ ಇಲಾಖೆಯ ಮುಖ್ಯಸ್ಥರು (ಹಣಕಾಸು ಮತ್ತು ಲೆಕ್ಕಪತ್ರ) ರವರು ಸಹಮತಿಸಿದಂತೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ಡಾ:ಪಿ.ಸಿ.ಜಾಫರ್**

ನಿರ್ದೇಶಕರು

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹಾಗೂ ಪದನಿಮಿತ್ತ

ಸರ್ಕಾರದ ಉಪ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ANNEXURE TO G.O.NO:RDP;50:NRE:2008, Bangalore, Dated:25-04-2009.**

Statement showing the releases of IIIrd installment of state share of funds, due for the 2008-09, released during the year 2009-10 under NREGA.

(Rs.in lakhs)

| Sl. No. | District | Central share directly to ZP | | State share proposed for releases as per Column No.4 | Funds being released in this Order |
|---|---|---|---|---|---|
| | | Date | Amount | | |
| 1 | 2 | 3 | 4 | 5 | 8 |
| 1 | Koppal | 30-03-2009 | 200.00 | 22.20 | 22.20 |

**Dr.P.C.JAFFER**

Director,

National Rural Employment Guarantee Scheme & E/o.

Dy. Secretary to Government, Rural Development & Panchayat Raj Department.

P.R. 1262

**ವಿಷಯ:** ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ –ಕರ್ನಾಟಕ ಇದರಡಿ, 2008–09ನೇ ಸಾಲಿನಲ್ಲಿ ಬಾಕಿ ನೀಡಬೇಕಾದ ರಾಜ್ಯದ ಪಾಲಿನ ಅನುದಾನವನ್ನು ಕೋಲಾರ ಜಿಲ್ಲೆಗೆ 2009–10ನೇ ಸಾಲಿನಲ್ಲಿ ಬಿಡುಗಡೆ ಮಾಡುತ್ತಿರುವ ಬಗ್ಗೆ.

**ಉಲ್ಲೇಖ:** ಕೇಂದ್ರ ಸರ್ಕಾರದ ಪತ್ರದ ಸಂ.ಜಿ–20011/1/2008–ಎನ್.ಆರ್.ಇ.ಜಿ.ಎ–ಎಸ್.ಎಲ್‌ನಂ.1001 ದಿ:31.03.2009.

**ಪ್ರಸ್ತಾವನೆ:**

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನಕ್ಕಾಗಿ ಉಲ್ಲೇಖಿತ ಪತ್ರದಲ್ಲಿ 2008–09ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ಕೋಲಾರ ಜಿಲ್ಲೆಗೆ ರೂ. 49.20 ಲಕ್ಷಗಳನ್ನು ನೇರವಾಗಿ ಬಿಡುಗಡೆ ಮಾಡಿ, ಅದಕ್ಕೆ ಪೂರಕವಾಗಿ ರಾಜ್ಯ ಸರ್ಕಾರವು ತನ್ನ ಪಾಲಿನ ಅನುದಾನವನ್ನು ಹದಿನೈದು ದಿನಗಳೊಳಗಾಗಿ ಬಿಡುಗಡೆ ಮಾಡುವಂತೆ ಆದೇಶಿಸಿರುತ್ತದೆ. 2008–09ನೇ ಸಾಲಿನಲ್ಲಿ ರಾಜ್ಯದಿಂದ ಬಿಡುಗಡೆಗೊಳಿಸಬೇಕಾದ ಅನುದಾನವು, ಅನುದಾನದ ಕೊರತೆಯಿಂದಾಗಿ ಬಿಡುಗಡೆಗೊಳಿಸಲಾಗಲಿಲ್ಲ. ಸದರಿ ರಾಜ್ಯದ ಪಾಲಿನ ಅನುದಾನವನ್ನು 2009–10ನೇ ಸಾಲಿನಲ್ಲಿ ಬಿಡುಗಡೆಗೊಳಿಸಬೇಕಾಗಿದ್ದು ಸದರಿ ಯೋಜನೆಗೆ ಆಯವ್ಯಯದಲ್ಲಿ ಅನುದಾನವನ್ನು ರಾಜ್ಯದ ಪಾಲಾಗಿ, ಸಾಮಗ್ರಿಗಳ ಬಳಕೆಗಾಗಿ ಶೇಕಡ 11.1 ರಷ್ಟಾಗಿ ಬಿಡುಗಡೆ ಮಾಡಲು ಒದಗಿಸಲಾಗಿರುತ್ತದೆ. ಆದುದರಿಂದ, ಪ್ರಸ್ತುತ ಸಾಲಿನಲ್ಲಿ ಕೋಲಾರ ಜಿಲ್ಲೆಗೆ, ಉದ್ಯೋಗ ಖಾತರಿ ಯೋಜನೆಯಡಿ, ಸಾಮಗ್ರಿಗಳ ಘಟಕದ ಬಳಕೆಗಾಗಿ, ಶೇಕಡಾ 11.1 ರಷ್ಟಾದ ರೂ. 5.46 ಲಕ್ಷಗಳನ್ನು ಅನುಬಂಧದಲ್ಲಿ ನಮೂದಿಸಿದಂತೆ, ಬಿಡುಗಡೆ ಮಾಡಲು ನಿರ್ಧರಿಸಿದೆ. ಆದುದರಿಂದ, ಈ ಆದೇಶ.

**ಸರ್ಕಾರದ ಆದೇಶ ಸಂ.ಗ್ರಾಅಪ.63.ಉಖಾಯೋ.09 ಬೆಂಗಳೂರು, ದಿನಾಂಕ: 25ನೇ ಏಪ್ರಿಲ್ 2009**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ– ಕರ್ನಾಟಕ ಇದರಡಿ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ, 2008–09ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ಬಿಡುಗಡೆ ಮಾಡಿರುವ ಅನುದಾನಕ್ಕೆ ಅನುಗುಣವಾಗಿ ರಾಜ್ಯದ ಪಾಲಿನ ಅನುದಾನವಾದ ರೂ. 5.46 ಲಕ್ಷಗಳನ್ನು (ರೂ. ಐದು ಲಕ್ಷದ ನಲವತ್ತಾರು ಸಾವಿರ ಮಾತ್ರ) ಅನುಬಂಧದಲ್ಲಿ ನಮೂದಿಸಿದಂತೆ, ಸಾಮಗ್ರಿ ಘಟಕದ ವೆಚ್ಚಕ್ಕೆ ಬಳಸಲು ಕೋಲಾರ ಜಿಲ್ಲೆಗೆ ಬಿಡುಗಡೆ ಮಾಡಿದೆ.

ಆರ್ಥಿಕ ಇಲಾಖೆಯ ಆದೇಶದ ಸಂ:ಎಫ್‌ಡಿ.7ಜೆಡಿಎ. 2003 ದಿನಾಂಕ:14–7–2005 ಮತ್ತು ಸರ್ಕಾರದ ಸುತ್ತೋಲೆ ಸಂ.ಆಇ 01 ಜೆಪಿಅ 07 ದಿನಾಂಕ:19–01–2007ರಲ್ಲಿನ ಸೂಚನೆಗಳನ್ವಯ ಈ ಕೆಳಕಂಡ ಲೆಕ್ಕಶೀರ್ಷಿಕೆಯಡಿ ಪೇಯಿಸ್ ರಸೀದಿಯ ಮೇಲೆ ಖಜಾನೆಯಿಂದ ಅನುದಾನ ಪಡೆದು ಕಾರ್ಯಕ್ರಮದ ಅನುಷ್ಠಾನಕ್ಕಾಗಿ ತೆರೆದಿರುವ ಬ್ಯಾಂಕ್ ಖಾತೆಗೆ ಜಮೆ ಮಾಡಿ ವೆಚ್ಚವನ್ನು ಭರಿಸತಕ್ಕದ್ದು. 2008–09ನೇ ಸಾಲಿನ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಲೆಕ್ಕಶೀರ್ಷಿಕೆ "2505 ಗ್ರಾಮೀಣ ಉದ್ಯೋಗ 02 ಗ್ರಾಮೀಣ ಉದ್ಯೋಗ ಖಾತರಿ ಯೋಜನೆ 101 –ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾರ್ಯಕ್ರಮ 0–01 ಕರ್ನಾಟಕ ಗ್ರಾಮೀಣ ಉದ್ಯೋಗ ಭರವಸೆ ಯೋಜನೆ –059 ಇತರೆ ಖರ್ಚು (ಯೋಜನೆ) (2505–02–101–0–01–059). ಬಿಡುಗಡೆ ಮಾಡುವ ಅನುದಾನವನ್ನು ಸಾಮಗ್ರಿ ಘಟಕಕ್ಕೆ ಮಾತ್ರ ಬಳಸಿಕೊಳ್ಳತಕ್ಕದ್ದು. ಪಂಚಾಯತ್ ರಾಜ್ ಸಂಸ್ಥೆಗೆ ಸಂಬಂಧಪಟ್ಟ ಅಧಿಕಾರಿಗಳು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ಸಂಬಂಧಿಸಿದಂತೆ ಅಧಿನಿಯಮದ ಪ್ರಕರಣಗಳು, ಕೇಂದ್ರ ಸರ್ಕಾರದ ನಿರ್ವಹಣೆಯ ಮಾರ್ಗಸೂಚಿಗಳು, ಸುತ್ತೋಲೆಗಳು, ಆದೇಶಗಳು ಹಾಗೂ ರಾಜ್ಯ ಸರ್ಕಾರವು ದಿನಾಂಕ:1–2–2007ರಂದು ಅಧಿಸೂಚಿಸಿರುವ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ– ಕರ್ನಾಟಕ ಇದರ ಮಾರ್ಗಸೂಚಿಗಳ ರೀತ್ಯಾ ಕ್ರಮ ತೆಗೆದುಕೊಳ್ಳತಕ್ಕದ್ದು. ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಸಂಬಂಧಿಸಿದ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು, ಉಸ್ತುವಾರಿ, ಅನುಷ್ಠಾನ ಮತ್ತು ಜಾಗೃತಿ ಚಲಾಯಿಸುವ ಸಂಪೂರ್ಣ ಜವಾಬ್ದಾರಿ ಅವರುಗಳದಾಗಿರುತ್ತದೆ.

ಸರ್ಕಾರದ ಆದೇಶವನ್ನು ಈ ಇಲಾಖೆಯ ಆಂತರಿಕ ಮುಖ್ಯಸ್ಥರು (ಹಣಕಾಸು ಮತ್ತು ಲೆಕ್ಕಪತ್ರ) ರವರು ಸಹಮತಿಸಿದಂತೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ಡಾ:ಪಿ.ಸಿ.ಜಾಫರ್**

ನಿರ್ದೇಶಕರು

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹಾಗೂ ಪದನಿಮಿತ್ತ

ಸರ್ಕಾರದ ಉಪ ಕಾರ್ಯದರ್ಶಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ANNEXURE TO G.O.NO:RDP;63:NRE:2008, Bangalore, Dated: 25-04-2009.**

Statement showing the releases of IIIrd installment of state share of funds due for the year 2008-09, released during the year 2009-10 under NREGA .

(Rs.in lakhs)

| Sl. No. | District | Central share directly to ZP | | State share proposed for releases as per Column No.4 | Funds being released in this Order |
|---|---|---|---|---|---|
| | | Date | Amount | | |
| 1 | 2 | 3 | 4 | 5 | 8 |
| 1 | Kolar | 31-03-2009 | 49.20 | 5.46 | 5.46 |

**Dr.P.C.JAFFER**

Director,

National Rural Employment Guarantee Scheme & E/o.

Dy. Secretary to Government, Rural Development & Panchayat Raj Department.

P.R. 1263

ವಿಷಯ: ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ –ಕರ್ನಾಟಕ ಇದರಡಿ, 2008–09ನೇ ಸಾಲಿನಲ್ಲಿ ಬಾಕಿ ನೀಡಬೇಕಾದ ರಾಜ್ಯದ ಪಾಲಿನ ಅನುದಾನವನ್ನು ಬಿಜಾಪುರ ಜಿಲ್ಲೆಗೆ 2009–10ನೇ ಸಾಲಿನಲ್ಲಿ ಬಿಡುಗಡೆ ಮಾಡುತ್ತಿರುವ ಬಗ್ಗೆ.

ಉಲ್ಲೇಖ: ಕೇಂದ್ರ ಸರ್ಕಾರದ ಪತ್ರದ ಸಂ.ಜೆ–12022/15/2008–ಎನ್.ಆರ್.ಇ.ಜಿ.ಎ–ಎಸ್.ಎಲ್ ನಂ.860 ದಿ:06.03.2009.

ಪ್ರಸ್ತಾವನೆ:

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನಕ್ಕಾಗಿ ಉಲ್ಲೇಖಿತ ಪತ್ರದಲ್ಲಿ 2008–09ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ಬಿಜಾಪುರ ಜಿಲ್ಲೆಗೆ ರೂ.137.00 ಲಕ್ಷಗಳನ್ನ ಎರಡನೇ ಕಂತಾಗಿ ನೇರವಾಗಿ ಬಿಡುಗಡೆ ಮಾಡಿ, ಅದಕ್ಕೆ ಪೂರಕವಾಗಿ ರಾಜ್ಯ ಸರ್ಕಾರವು ತನ್ನ ಪಾಲಿನ ಅನುದಾನವನ್ನು ಹದಿನೈದು ದಿನಗಳೊಳಗಾಗಿ ಬಿಡುಗಡೆ ಮಾಡುವಂತೆ ಆದೇಶಿಸಿರುತ್ತದೆ. 2008–09ನೇ ಸಾಲಿನಲ್ಲಿ ರಾಜ್ಯದಿಂದ ಬಿಡುಗಡೆಗೊಳಿಸಬೇಕಾದ ಅನುದಾನವು, ಅನುದಾನದ ಕೊರತೆಯಿಂದಾಗಿ ಬಿಡುಗಡೆಗೊಳಿಸಲಾಗಲಿಲ್ಲ. ಸದರಿ ರಾಜ್ಯದ ಅನುದಾನವನ್ನು 2009–10ನೇ ಸಾಲಿನಲ್ಲಿ ಬಿಡುಗಡೆಗೊಳಿಸಬೇಕಾಗಿದ್ದು ಸದರಿ ಯೋಜನೆಗೆ ಆಯವ್ಯಯದಲ್ಲಿ ಅನುದಾನವನ್ನು ರಾಜ್ಯದ ಪಾಲಾಗಿ, ಸಾಮಗ್ರಿಗಳ ಬಳಕೆಗಾಗಿ ಶೇಕಡ 10ರಷ್ಟಾಗಿ ಬಿಡುಗಡೆ ಮಾಡಲು ಒದಗಿಸಲಾಗಿರುತ್ತದೆ. ಆದುದರಿಂದ, ಪ್ರಸ್ತುತ ಸಾಲಿನಲ್ಲಿ ಬಿಜಾಪುರ ಜಿಲ್ಲೆಗೆ, ಉದ್ಯೋಗ ಖಾತರಿ ಯೋಜನೆಯಡಿ, ಸಾಮಗ್ರಿಗಳ ಘಟಕದ ಬಳಕೆಗಾಗಿ, ಶೇಕಡಾ 10ರಷ್ಟಾದ ರೂ.13.70 ಲಕ್ಷಗಳನ್ನು ಅನುಬಂಧದಲ್ಲಿ ನಮೂದಿಸಿದಂತೆ, ಬಿಡುಗಡೆ ಮಾಡಲು ನಿರ್ಧರಿಸಿದೆ. ಆದುದರಿಂದ, ಈ ಆದೇಶ.

**ಸರ್ಕಾರದ ಆದೇಶ ಸಂ.ಗ್ರಾಅಪ.34.ಉಖಾಯೋ.09 ಬೆಂಗಳೂರು, ದಿನಾಂಕ: 25ನೇ ಏಪ್ರಿಲ್ 2009**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ– ಕರ್ನಾಟಕ ಇದರಡಿ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ, 2008–09ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ಬಿಡುಗಡೆ ಮಾಡಿರುವ ಅನುದಾನಕ್ಕೆ ಅನುಗುಣವಾಗಿ ರಾಜ್ಯದ ಪಾಲನ್ನು ಎರಡನೇ ಕಂತಿನ ಅನುದಾನವಾದ ರೂ.13.70 ಲಕ್ಷಗಳನ್ನು (ರೂ. ಹದಿಮೂರು ಲಕ್ಷ ಎಪ್ಪತ್ತು ಸಾವಿರ ಮಾತ್ರ) ಅನುಬಂಧದಲ್ಲಿ ನಮೂದಿಸಿದಂತೆ, ಸಾಮಗ್ರಿ ಘಟಕದ ವೆಚ್ಚಕ್ಕೆ ಬಳಸಲು ಬಿಜಾಪುರ ಜಿಲ್ಲೆಗೆ ಬಿಡುಗಡೆ ಮಾಡಿದೆ.

ಆರ್ಥಿಕ ಇಲಾಖೆಯ ಆದೇಶದ ಸಂ:ಎಫ್‌ಡಿ.7ಜೆಡ್ಡಿಎ. 2003 ದಿನಾಂಕ:14–7–2005 ಮತ್ತು ಸರ್ಕಾರದ ಸುತ್ತೋಲೆ ಸಂ.ಆಇ 01 ಜಿಪಲೆ 07 ದಿನಾಂಕ:19–01–2007ರಲ್ಲಿನ ಸೂಚನೆಗಳನ್ವಯ ಈ ಕೆಳಕಂಡ ಲೆಕ್ಕಶೀರ್ಷಿಕೆಯಡಿ ಪೇಯಿಸ್ ರಸೀದಿಯ ಮೇಲೆ ಖಜಾನೆಯಿಂದ ಅನುದಾನ ಪಡೆದು ಕಾರ್ಯಕ್ರಮದ ಅನುಷ್ಠಾನಕ್ಕಾಗಿ ತೆರೆದಿರುವ ಬ್ಯಾಂಕ್ ಖಾತೆಗೆ ಜಮ ಮಾಡಿ ವೆಚ್ಚವನ್ನು ಭರಿಸತಕ್ಕದ್ದು. 2008–09ನೇ ಸಾಲಿನ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಲೆಕ್ಕಶೀರ್ಷಿಕೆ "2505 ಗ್ರಾಮೀಣ ಉದ್ಯೋಗ 02 ಗ್ರಾಮೀಣ ಉದ್ಯೋಗ ಖಾತರಿ ಯೋಜನೆ 101 –ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾರ್ಯಕ್ರಮ 0–01 ಕರ್ನಾಟಕ ಗ್ರಾಮೀಣ ಉದ್ಯೋಗ ಭರವಸೆ ಯೋಜನೆ –059 ಇತರೆ ಖರ್ಚು (ಯೋಜನೆ)" (2505–02–101–0–01–059).

ಈಗ ಬಿಡುಗಡೆ ಮಾಡುವ ಅನುದಾನವನ್ನು ಸಾಮಗ್ರಿ ಘಟಕಕ್ಕೆ ಮಾತ್ರ ಬಳಸಿಕೊಳ್ಳತಕ್ಕದ್ದು. ಪಂಚಾಯತ್ ರಾಜ್ ಸಂಸ್ಥೆಗೆ ಸಂಬಂಧಪಟ್ಟ ಅಧಿಕಾರಿಗಳು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ಸಂಬಂಧಿಸಿದಂತೆ ಅಧಿನಿಯಮದ ಪ್ರಕರಣಗಳು, ಕೇಂದ್ರ ಸರ್ಕಾರದ ನಿರ್ವಹಣೆಯ ಮಾರ್ಗಸೂಚಿಗಳು, ಸುತ್ತೋಲೆಗಳು, ಆದೇಶಗಳು ಹಾಗೂ ರಾಜ್ಯ ಸರ್ಕಾರವು ದಿನಾಂಕ:1–2–2007ರಂದು ಅಧಿಸೂಚಿಸಿರುವ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ– ಕರ್ನಾಟಕ ಇದರ ಮಾರ್ಗಸೂಚಿಗಳ ರೀತ್ಯಾ ಕ್ರಮ ತೆಗೆದುಕೊಳ್ಳತಕ್ಕದ್ದು. ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಸಂಬಂಧಿಸಿದ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು, ಉಸ್ತುವಾರಿ, ಅನುಷ್ಠಾನ ಮತ್ತು ಜಾಗೃತಿ ಇವುಗಳನ್ನು ಚಲಾಯಿಸುವ ಸಂಪೂರ್ಣ ಜವಾಬ್ದಾರಿ ಅವರುಗಳದಾಗಿರುತ್ತದೆ.

ಸರ್ಕಾರದ ಆದೇಶವನ್ನು ಈ ಇಲಾಖೆಯ ಮುಖ್ಯಸ್ಥರು (ಹಣಕಾಸು ಮತ್ತು ಲೆಕ್ಕಪತ್ರ) ರವರು ಸಹಮತಿಸಿದಂತೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ಡಾ:ಪಿ.ಸಿ.ಜಾಫರ್**

ನಿರ್ದೇಶಕರು

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹಾಗೂ ಪದನಿಮಿತ್ತ

ಸರ್ಕಾರದ ಉಪ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ANNEXURE TO G.O.NO:RDP;34:NRE:2009, Bangalore, Dated: 25-4-2009**

Statement showing the releases of IInd installment of state share of funds, due for the year 2008-09, released during the year 2009-10 under NREGA.

(Rs.in lakhs)

| Sl. No. | District | Central share directly to ZP | | State share proposed for releases as per Column No.4 | Funds being released in this Order |
|---|---|---|---|---|---|
| | | Date | Amount | | |
| 1 | 2 | 3 | 4 | 5 | 8 |
| 1 | Bijapur | 06-03-2009 | 137.00 | 13.70 | 13.70 |

**Dr.P.C.JAFFER**
Director,
National Rural Employment Guarantee Scheme & E/o.
Dy. Secretary to Government, Rural Development & Panchayat Raj Department.

P.R. 1264

ವಿಷಯ: ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ –ಕರ್ನಾಟಕ ಇದರಡಿ, 2008–09ನೇ ಸಾಲಿನಲ್ಲಿ ಬಾಕಿ ನೀಡಬೇಕಾದ ರಾಜ್ಯದ ಪಾಲಿನ ಅನುದಾನವನ್ನು ಬೀದರ್ ಜಿಲ್ಲೆಗೆ 2009–10ನೇ ಸಾಲಿನಲ್ಲಿ ಬಿಡುಗಡೆ ಮಾಡುತ್ತಿರುವ ಬಗ್ಗೆ.

ಉಲ್ಲೇಖ: ಕೇಂದ್ರ ಸರ್ಕಾರದ ಪತ್ರದ ಸಂ.ಜೆ–20011/1/2008–ಎನ್.ಆರ್.ಇ.ಜಿ.ಎ–ಎಸ್.ಎಲ್‌ನಂ.1001 ದಿ:31.03.2009.

ಪ್ರಸ್ತಾವನೆ:

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನಕ್ಕಾಗಿ ಉಲ್ಲೇಖಿತ ಪತ್ರದಲ್ಲಿ 2008–09ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ಬೀದರ್ ಜಿಲ್ಲೆಗೆ ರೂ. 510.65 ಲಕ್ಷಗಳನ್ನು ನೇರವಾಗಿ ಬಿಡುಗಡೆ ಮಾಡಿ, ಅದಕ್ಕೆ ಪೂರಕವಾಗಿ ರಾಜ್ಯ ಸರ್ಕಾರವು ತನ್ನ ಪಾಲಿನ ಅನುದಾನವನ್ನು ಹದಿನೈದು ದಿನಗಳೊಳಗಾಗಿ ಬಿಡುಗಡೆ ಮಾಡುವಂತೆ ಆದೇಶಿಸಿರುತ್ತದೆ. 2008–09ನೇ ಸಾಲಿನಲ್ಲಿ ರಾಜ್ಯದಿಂದ ಬಿಡುಗಡೆಗೊಳಿಸಬೇಕಾದ ಅನುದಾನವು, ಅನುದಾನದ ಕೊರತೆಯಿಂದಾಗಿ ಬಿಡುಗಡೆಗೊಳಿಸಲಾಗಲಿಲ್ಲ. ಸದರಿ ರಾಜ್ಯದ ಪಾಲಿನ ಅನುದಾನವನ್ನು 2009–10ನೇ ಸಾಲಿನಲ್ಲಿ ಬಿಡುಗಡೆಗೊಳಿಸಬೇಕಾಗಿದ್ದು ಸದರಿ ಯೋಜನೆಗೆ ಆಯವ್ಯಯದಲ್ಲಿ ಅನುದಾನವನ್ನು ರಾಜ್ಯದ ಪಾಲಾಗಿ, ಸಾಮಗ್ರಿಗಳ ಬಳಕೆಗಾಗಿ ಶೇಕಡ 11.1 ರಷ್ಟಾಗಿ ಬಿಡುಗಡೆ ಮಾಡಲು ಒದಗಿಸಲಾಗಿರುತ್ತದೆ. ಆದುದರಿಂದ, ಪ್ರಸ್ತುತ ಸಾಲಿನಲ್ಲಿ ಬೀದರ್ ಜಿಲ್ಲೆಗೆ, ಉದ್ಯೋಗ ಖಾತರಿ ಯೋಜನೆಯಡಿ, ಸಾಮಗ್ರಿಗಳ ಘಟಕದ ಬಳಕೆಗಾಗಿ, ಶೇಕಡಾ 11.1 ರಷ್ಟಾದ ರೂ. 56.68 ಲಕ್ಷಗಳನ್ನು ಅನುಬಂಧದಲ್ಲಿ ನಮೂದಿಸಿದಂತೆ, ಬಿಡುಗಡೆ ಮಾಡಲು ನಿರ್ಧರಿಸಿದೆ. ಆದುದರಿಂದ, ಈ ಆದೇಶ.

**ಸರ್ಕಾರದ ಆದೇಶ ಸಂ.ಗ್ರಾಅಪ.16.ಉಖಾಯೋ.09–10(3) ಬೆಂಗಳೂರು, ದಿನಾಂಕ: 24ನೇ ಏಪ್ರಿಲ್ 2009**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ– ಕರ್ನಾಟಕ ಇದರಡಿ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ, 2008–09ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ಬಿಡುಗಡೆ ಮಾಡಿರುವ ಅನುದಾನಕ್ಕೆ ಅನುಗುಣವಾಗಿ ರಾಜ್ಯದ ಪಾಲನ್ನು ಮೂರನೇ ಕಂತಿನ ಅನುದಾನವಾದ ರೂ.56.68 ಲಕ್ಷಗಳನ್ನು (ರೂ ಐವತ್ತಾರು ಲಕ್ಷದ ಅರವತ್ತೆಂಟು ಸಾವಿರ ಮಾತ್ರ) ಅನುಬಂಧದಲ್ಲಿ ನಮೂದಿಸಿದಂತೆ, ಸಾಮಗ್ರಿ ಘಟಕದ ವೆಚ್ಚಕ್ಕೆ ಬಳಸಲು ಬೀದರ್ ಜಿಲ್ಲೆಗೆ ಬಿಡುಗಡೆ ಮಾಡಿದೆ.

ಆರ್ಥಿಕ ಇಲಾಖೆಯ ಆದೇಶದ ಸಂ:ಎಫ್‌ಡಿ.7ಜಡ್ಪಿಎ. 2003 ದಿನಾಂಕ:14–7–2005 ಮತ್ತು ಸರ್ಕಾರದ ಸುತ್ತೋಲೆ ಸಂ.ಆಇ 01 ಜಿಪಆ 07 ದಿನಾಂಕ:19–01–2007ರಲ್ಲಿನ ಸೂಚನೆಗಳನ್ವಯ ಈ ಕಳಕಂಡ ಲೆಕ್ಕಶೀರ್ಷಿಕೆಯಡಿ ಪೇಯಿಸ್ ರಶೀದಿಯ ಮೇಲೆ ಖಜಾನೆಯಿಂದ ಅನುದಾನ ಪಡೆದು ಕಾರ್ಯಕ್ರಮದ ಅನುಷ್ಠಾನಕ್ಕಾಗಿ ತೆರೆದಿರುವ ಬ್ಯಾಂಕ್ ಖಾತೆಗೆ ಜಮೆ ಮಾಡಿ ವೆಚ್ಚವನ್ನು ಭರಿಸತಕ್ಕದ್ದು.

2008–09ನೇ ಸಾಲಿನ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಲೆಕ್ಕಶೀರ್ಷಿಕೆ "2505 ಗ್ರಾಮೀಣ ಉದ್ಯೋಗ 02 ಗ್ರಾಮೀಣ ಉದ್ಯೋಗ ಖಾತರಿ ಯೋಜನೆ 101 –ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾರ್ಯಕ್ರಮ 0–01 ಕರ್ನಾಟಕ ಗ್ರಾಮೀಣ ಉದ್ಯೋಗ ಭರವಸೆ ಯೋಜನೆ –059 ಇತರೆ ಖರ್ಚು (ಯೋಜನೆ)" (2505–02–101–0–01–059).

ಈಗ ಬಿಡುಗಡೆ ಮಾಡುವ ಅನುದಾನವನ್ನು ಸಾಮಗ್ರಿ ಘಟಕಕ್ಕೆ ಮಾತ್ರ ಬಳಸಿಕೊಳ್ಳತಕ್ಕದ್ದು. ಪಂಚಾಯತ್ ರಾಜ್ ಸಂಸ್ಥೆಗೆ ಸಂಬಂಧಪಟ್ಟ ಅಧಿಕಾರಿಗಳು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ಸಂಬಂಧಿಸಿದಂತೆ

ಅಧಿನಿಯಮದ ಪ್ರಕರಣಗಳು, ಕೇಂದ್ರ ಸರ್ಕಾರದ ನಿರ್ವಹಣೆಯ ಮಾರ್ಗಸೂಚಿಗಳು, ಸುತ್ತೋಲೆಗಳು, ಆದೇಶಗಳು ಹಾಗೂ ರಾಜ್ಯ ಸರ್ಕಾರವು ದಿನಾಂಕ:1-2-2007ರಂದು ಅಧಿಸೂಚಿಸಿರುವ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ-ಕರ್ನಾಟಕ ಇವರ ಮಾರ್ಗಸೂಚಿಗಳ ರೀತ್ಯಾ ಕ್ರಮ ತೆಗೆದುಕೊಳ್ಳತಕ್ಕದ್ದು. ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಸಂಬಂಧಿಸಿದ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು, ಉಸ್ತುವಾರಿ, ಅನುಷ್ಠಾನ ಮತ್ತು ಜಾಗೃತಿ ಇವುಗಳನ್ನು ಚಲಾಯಿಸುವ ಸಂಪೂರ್ಣ ಜವಾಬ್ದಾರಿ ಅವರುಗಳದಾಗಿರುತ್ತದೆ.

ಸರ್ಕಾರದ ಆದೇಶವನ್ನು ಈ ಇಲಾಖೆಯ ನಿರ್ದೇಶನಾಲಯದ ನಿಯಂತ್ರಕರು (ಹಣಕಾಸು ಮತ್ತು ಲೆಕ್ಕಪತ್ರ ಇವರಲ್ಲಿ ಸಹಮತಿಸಿದಂತೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ಡಾ:ಪಿ.ಸಿ.ಜಾಫರ್**

ನಿರ್ದೇಶಕರು

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹಾಗೂ ಪದನಿಮಿತ್ತ

ಸರ್ಕಾರದ ಉಪ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ANNEXURE TO G.O.NO:RDP;16:NRE:2009, Bangalore, Dated: 24-4-2009**

Statement showing the releases of IIIrd installment of state share of funds, due for the year 2008-09, released during the year 2009-10 under NREGA .

(Rs.in lakhs)

| Sl. No. | District | Central share directly to ZP | | State share proposed for releases as per Column No.4 | Funds being released in this Order |
|---|---|---|---|---|---|
| | | Date | Amount | | |
| 1 | 2 | 3 | 4 | 5 | 8 |
| 1 | Bidar | 31-03-2009 | 510-65 | 56.68 | 56.68 |

**Dr.P.C.JAFFER**

Director,

P.R. 1265 National Rural Employment Guarantee Scheme & E/o.

Dy. Secretary to Government, Rural Development & Panchayat Raj Department.

**ವಿಷಯ:** ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ -ಕರ್ನಾಟಕ ಇದರಡಿ, 2008-09ನೇ ಸಾಲಿನಲ್ಲಿ ಬಾಕಿ ನೀಡಬೇಕಾದ ರಾಜ್ಯದ ಪಾಲಿನ ಅನುದಾನವನ್ನು ಗದಗ್ ಜಿಲ್ಲೆಗೆ 2009-10ನೇ ಸಾಲಿನಲ್ಲಿ ಮೂರನೇ ಕಂತಿನ ರಾಜ್ಯದ ಪಾಲನ್ನು ಬಿಡುಗಡೆ ಮಾಡುತ್ತಿರುವ ಬಗ್ಗೆ

**ಉಲ್ಲೇಖ:** ಕೇಂದ್ರ ಸರ್ಕಾರದ ಪತ್ರದ ಸಂ.ಜೆ-12022/2/3/2008-ಎನ್.ಆರ್.ಇ.ಜಿ.ಎ-ಎಸ್.ಎಲ್ ನಂ.840 ದಿ:03.03.2009.

**ಪ್ರಸ್ತಾವನೆ:**

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನಕ್ಕಾಗಿ ಉಲ್ಲೇಖಿತ ಪತ್ರದಲ್ಲಿ 2008-09ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ಗದಗ ಜಿಲ್ಲೆಗೆ ರೂ. 599.00 ಲಕ್ಷಗಳನ್ನು ಮೂರನೇ ಕಂತಾಗಿ ನೇರವಾಗಿ ಬಿಡುಗಡೆ ಮಾಡಿ, ಅದಕ್ಕೆ ಪೂರಕವಾಗಿ ರಾಜ್ಯ ಸರ್ಕಾರವು ತನ್ನ ಪಾಲಿನ ಅನುದಾನವನ್ನು ಹದಿನೈದು ದಿನಗಳೊಳಗಾಗಿ ಬಿಡುಗಡೆ ಮಾಡುವಂತೆ ಆದೇಶಿಸಿರುತ್ತದೆ. 2008-09ನೇ ಸಾಲಿನಲ್ಲಿ ರಾಜ್ಯದಿಂದ ಬಿಡುಗಡೆಗೊಳಿಸಬೇಕಾದ ಅನುದಾನವು, ಅನುದಾನದ ಕೊರತೆಯಿಂದಾಗಿ ಬಿಡುಗಡೆಗೊಳಿಸಲಾಗಲಿಲ್ಲ. ಸದರಿ ರಾಜ್ಯದ ಅನುದಾನವನ್ನು 2009-10ನೇ ಸಾಲಿನಲ್ಲಿ ಬಿಡುಗಡೆಗೊಳಿಸಬೇಕಾಗಿದ್ದು ಸದರಿ ಯೋಜನೆಗೆ ಆಯವ್ಯಯದಲ್ಲಿ ಅನುದಾನವನ್ನು ರಾಜ್ಯದ ಪಾಲಾಗಿ, ಸಾಮಗ್ರಿಗಳ ಬಳಕೆಗಾಗಿ ಶೇಕಡ 10ರಷ್ಟಾಗಿ ಬಿಡುಗಡೆ ಮಾಡಲು ಒದಗಿಸಲಾಗಿರುತ್ತದೆ. ಆದುದರಿಂದ, ಪ್ರಸ್ತುತ ಸಾಲಿನಲ್ಲಿ ಗದಗ ಜಿಲ್ಲೆಗೆ, ಉದ್ಯೋಗ ಖಾತರಿ ಯೋಜನೆಯಡಿ, ಸಾಮಗ್ರಿಗಳ ಘಟಕದ ಬಳಕೆಗಾಗಿ, ಶೇಕಡಾ 10ರಷ್ಟಾದ ರೂ.59.90 ಲಕ್ಷಗಳನ್ನು ಅನುಬಂಧದಲ್ಲಿ ನಮೂದಿಸಿದಂತೆ, ಬಿಡುಗಡೆ ಮಾಡಲು ನಿರ್ಧರಿಸಿದೆ. ಆದುದರಿಂದ, ಈ ಆದೇಶ.

**ಸರ್ಕಾರದ ಆದೇಶ ಸಂ.ಗ್ರಾಅಪ.155.ಉಖಾಯೋ.08 ಬೆಂಗಳೂರು, ದಿನಾಂಕ: 25ನೇ ಏಪ್ರಿಲ್ 2009.**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ- ಕರ್ನಾಟಕ ಇದರಡಿ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ, 2008-09ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ಬಿಡುಗಡೆ ಮಾಡಿರುವ ಅನುದಾನಕ್ಕೆ ಅನುಗುಣವಾಗಿ ರಾಜ್ಯದ ಪಾಲನ್ನು ಮೂರನೇ ಕಂತಿನ ಅನುದಾನವಾದ ರೂ.59.90 ಲಕ್ಷಗಳನ್ನು (ರೂ. ಐವತ್ತೊಂಭತ್ತು ಲಕ್ಷ ತ್ತೊಂಭತ್ತು ಸಾವಿರ ಮಾತ್ರ) ಅನುಬಂಧದಲ್ಲಿ ನಮೂದಿಸಿದಂತೆ, ಸಾಮಗ್ರಿ ಘಟಕದ ವೆಚ್ಚಕ್ಕೆ ಬಳಸಲು ಗದಗ ಜಿಲ್ಲೆಗೆ ಬಿಡುಗಡೆ ಮಾಡಿದೆ.

ಆರ್ಥಿಕ ಇಲಾಖೆಯ ಆದೇಶದ ಸಂ:ಎಫ್‌ಡಿ.7ಜೆಡ್ಪಿಎ. 2003 ದಿನಾಂಕ:14-7-2005 ಮತ್ತು ಸರ್ಕಾರದ ಸುತ್ತೋಲೆ ಸಂ.ಆಇ 01 ಜಿಪಅ 07 ದಿನಾಂಕ:19-01-2007ರಲ್ಲಿನ ಸೂಚನೆಗಳನ್ವಯ ಈ ಕೆಳಕಂಡ ಲೆಕ್ಕಶೀರ್ಷಿಕೆಯಡಿ ಪೇಯಿಸ್ ರಸೀದಿಯ ಮೇಲೆ ಖಜಾನೆಯಿಂದ ಅನುದಾನ ಪಡೆದು ಕಾರ್ಯಕ್ರಮದ ಅನುಷ್ಠಾನಕ್ಕಾಗಿ ತೆರೆದಿರುವ ಬ್ಯಾಂಕ್ ಖಾತೆಗೆ ಜಮ ಮಾಡಿ ವೆಚ್ಚವನ್ನು ಭರಿಸತಕ್ಕದ್ದು. 2008-09ನೇ ಸಾಲಿನ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಲೆಕ್ಕಶಿರ್ಷಿಕೆ "2505 ಗ್ರಾಮೀಣ ಉದ್ಯೋಗ 02 ಗ್ರಾಮೀಣ ಉದ್ಯೋಗ ಖಾತರಿ ಯೋಜನೆ 101 -ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾರ್ಯಕ್ರಮ 0-01 ಕರ್ನಾಟಕ ಗ್ರಾಮೀಣ ಉದ್ಯೋಗ ಭರವಸೆ ಯೋಜನೆ -059 ಇತರೆ ಖರ್ಚು (ಯೋಜನೆ)" (2505-02-101-0-01-059).

ಈಗ ಬಿಡುಗಡೆ ಮಾಡುವ ಅನುದಾನವನ್ನು ಸಾಮಗ್ರಿ ಘಟಕಕ್ಕೆ ಮಾತ್ರ ಬಳಸಿಕೊಳ್ಳತಕ್ಕದ್ದು. ಪಂಚಾಯತ್ ರಾಜ್ ಸಂಸ್ಥೆಗೆ ಸಂಬಂಧಪಟ್ಟ ಅಧಿಕಾರಿಗಳು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ಸಂಬಂಧಿಸಿದಂತೆ ಅಧಿನಿಯಮದ ಪ್ರಕರಣಗಳು, ಕೇಂದ್ರ ಸರ್ಕಾರದ ನಿರ್ವಹಣೆಯ ಮಾರ್ಗಸೂಚಿಗಳು, ಸುತ್ತೋಲೆಗಳು, ಆದೇಶಗಳು ಹಾಗೂ ರಾಜ್ಯ ಸರ್ಕಾರವು ದಿನಾಂಕ: 1-2-2007ರಂದು ಅಧಿಸೂಚಿಸಿರುವ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ- ಕರ್ನಾಟಕ ಇದರ ಮಾರ್ಗಸೂಚಿಗಳ ರೀತ್ಯಾ ಕ್ರಮ ತೆಗೆದುಕೊಳ್ಳತಕ್ಕದ್ದು. ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಸಂಬಂಧಿಸಿದ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು, ಉಸ್ತುವಾರಿ, ಅನುಷ್ಠಾನ ಮತ್ತು ಜಾಗೃತಿ ಇವುಗಳನ್ನು ಚಲಾಯಿಸುವ ಸಂಪೂರ್ಣ ಜವಾಬ್ದಾರಿ ಅವರುಗಳದಾಗಿರುತ್ತದೆ.

ಸರ್ಕಾರದ ಆದೇಶವನ್ನು ಈ ಇಲಾಖೆಯ ಮುಖ್ಯಸ್ಥರು (ಹಣಕಾಸು ಮತ್ತು ಲೆಕ್ಕಪತ್ರ) ರವರು ಸಹಮತಿಸಿದಂತೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ಡಾ:ಪಿ.ಸಿ.ಜಾಫರ್**

ನಿರ್ದೇಶಕರು

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹಾಗೂ ಪದನಿಮಿತ್ತ

ಸರ್ಕಾರದ ಉಪ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ANNEXURE TO G.O.NO:RDP;155:NRE:2008, Bangalore, Dated: 25-4-2009**

Statement showing the releases of IIIrd installment of state share of funds, due for the year 2008-09 released during the year 2009-10 under NREGA .

(Rs.in lakhs)

| Sl. No. | District | Central share directly to ZP | | State share proposed for releases as per Column No.4 | Funds being released in this Order |
|---|---|---|---|---|---|
| | | Date | Amount | | |
| 1 | 2 | 3 | 4 | 5 | 8 |
| 1 | Gadag | 03-03-2009 | 599.00 | 59.90 | 59.90 |

**Dr.P.C.JAFFER**

Director,

National Rural Employment Guarantee Scheme & E/o.

Dy. Secretary to Government, Rural Development & Panchayat Raj Department.

P.R. 1266

**I -F3 -(0)**

ವಿಷಯ: ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ –ಕರ್ನಾಟಕ ಇದರಡಿ, 2008–09ನೇ ಸಾಲಿನಲ್ಲಿ ಬಾಕಿ ನೀಡಬೇಕಾದ ರಾಜ್ಯದ ಪಾಲಿನ ಅನುದಾನವನ್ನು ಬಳ್ಳಾರಿ ಜಿಲ್ಲೆಗೆ ಮೂರನೇ ಕಂತಿನ ರಾಜ್ಯದ ಅನುದಾನ 2009–10ನೇ ಸಾಲಿನಲ್ಲಿ ಬಿಡುಗಡೆ ಮಾಡುತ್ತಿರುವ ಬಗ್ಗೆ.

ಉಲ್ಲೇಖ: ಕೇಂದ್ರ ಸರ್ಕಾರದ ಪತ್ರದ ಸಂ.ಜೆ–12022/2/4/2008–ಎನ್.ಆರ್.ಇ.ಜಿ.ಎ–ಎಸ್.ಎಲ್ ನಂ.841 ದಿ:03.03.2009

ಪ್ರಸ್ತಾವನೆ:–

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನಕ್ಕಾಗಿ ಉಲ್ಲೇಖಿತ ಪತ್ರದಲ್ಲಿ 2008–09ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ಬಳ್ಳಾರಿ ಜಿಲ್ಲೆಗೆ ರೂ.2092.00 ಲಕ್ಷಗಳನ್ನು ಮೂರನೇ ಕಂತಾಗಿ ನೇರವಾಗಿ ಬಿಡುಗಡೆ ಮಾಡಿ, ಅದಕ್ಕೆ ಪೂರಕವಾಗಿ ರಾಜ್ಯ ಸರ್ಕಾರವು ತನ್ನ ಪಾಲಿನ ಅನುದಾನವನ್ನು ಹದಿನೈದು ದಿನಗಳೊಳಗಾಗಿ ಬಿಡುಗಡೆ ಮಾಡುವಂತೆ ಆದೇಶಿಸಿರುತ್ತದೆ. 2008–09ನೇ ಸಾಲಿನಲ್ಲಿ ರಾಜ್ಯದಿಂದ ಬಿಡುಗಡೆಗೊಳಿಸಬೇಕಾದ ಅನುದಾನವು, ಅನುದಾನದ ಕೊರತೆಯಿಂದಾಗಿ ಬಿಡುಗಡೆಗೊಳಿಸಲಾಗಲಿಲ್ಲ. ಸದರಿ ರಾಜ್ಯದ ಅನುದಾನವನ್ನು 2009–10ನೇ ಸಾಲಿನಲ್ಲಿ ಬಿಡುಗಡೆಗೊಳಿಸಬೇಕಾಗಿದ್ದು ಸದರಿ ಯೋಜನೆಗೆ ಆಯವ್ಯಯದಲ್ಲಿ ಅನುದಾನವನ್ನು ರಾಜ್ಯದ ಪಾಲಾಗಿ, ಸಾಮಗ್ರಿಗಳ ಬಳಕೆಗಾಗಿ ಶೇಕಡ 10ರಷ್ಟಾಗಿ ಬಿಡುಗಡೆ ಮಾಡಲು ಒದಗಿಸಲಾಗಿರುತ್ತದೆ. ಆದುದರಿಂದ, ಪ್ರಸ್ತುತ ಸಾಲಿನಲ್ಲಿ ಬಳ್ಳಾರಿ ಜಿಲ್ಲೆಗೆ, ಉದ್ಯೋಗ ಖಾತರಿ ಯೋಜನೆಯಡಿ, ಸಾಮಗ್ರಿಗಳ ಘಟಕದ ಬಳಕೆಗಾಗಿ, ಶೇಕಡಾ 10ರಷ್ಟಾದ ರೂ.209.20 ಲಕ್ಷಗಳನ್ನು ಅನುಬಂಧದಲ್ಲಿ ನಮೂದಿಸಿದಂತೆ, ಬಿಡುಗಡೆ ಮಾಡಲು ನಿರ್ಧರಿಸಿದೆ. ಆದುದರಿಂದ, ಈ ಆದೇಶ.

**ಸರ್ಕಾರದ ಆದೇಶ ಸಂ.ಗ್ರಾಅಪ.121.ಉಖಾಯೋ.08 ಬೆಂಗಳೂರು, ದಿನಾಂಕ: 25ನೇ ಏಪ್ರಿಲ್ 2009**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ– ಕರ್ನಾಟಕ ಇದರಡಿ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ, 2008–09ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ಬಿಡುಗಡೆ ಮಾಡಿರುವ ಅನುದಾನಕ್ಕೆ ಅನುಗುಣವಾಗಿ ರಾಜ್ಯದ ಪಾಲನ್ನು ಮೂರನೇ ಕಂತಿನ ಅನುದಾನವಾದ ರೂ. 209.20 ಲಕ್ಷಗಳನ್ನು (ರೂ. ಎರಡು ಕೋಟಿ ಒಂಭತ್ತು ಲಕ್ಷ ಇಪ್ಪತ್ತು ಸಾವಿರ ಮಾತ್ರ) ಅನುಬಂಧದಲ್ಲಿ ನಮೂದಿಸಿದಂತೆ, ಸಾಮಗ್ರಿ ಘಟಕದ ವೆಚ್ಚಕ್ಕೆ ಬಳಸಲು ಬಳ್ಳಾರಿ ಜಿಲ್ಲೆಗೆ ಬಿಡುಗಡೆ ಮಾಡಿದೆ.

ಆರ್ಥಿಕ ಇಲಾಖೆಯ ಆದೇಶದ ಸಂ:ಎಫ್‌ಡಿ.7ಜೆಡ್ಪಿಎ. 2003 ದಿನಾಂಕ:14–7–2005 ಮತ್ತು ಸರ್ಕಾರದ ಸುತ್ತೋಲೆ ಸಂ.ಆಇ 01 ಜಿಪಆ 07 ದಿನಾಂಕ:19–01–2007ರಲ್ಲಿನ ಸೂಚನೆಗಳನ್ವಯ ಈ ಕೆಳಕಂಡ ಲೆಕ್ಕಶೀರ್ಷಿಕೆಯಡಿ ಪೇಯಿಸ್ ರಸೀದಿಯ ಮೇಲೆ ಖಜಾನೆಯಿಂದ ಅನುದಾನ ಪಡೆದು ಕಾರ್ಯಕ್ರಮದ ಅನುಷ್ಠಾನಕ್ಕಾಗಿ ತೆರೆದಿರುವ ಬ್ಯಾಂಕ್ ಖಾತೆಗೆ ಜಮೆ ಮಾಡಿ ವೆಚ್ಚವನ್ನು ಭರಿಸತಕ್ಕದ್ದು. 2008–09ನೇ ಸಾಲಿನ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಲೆಕ್ಕಶೀರ್ಷಿಕೆ "2505 ಗ್ರಾಮೀಣ ಉದ್ಯೋಗ 02 ಗ್ರಾಮೀಣ ಉದ್ಯೋಗ ಖಾತರಿ ಯೋಜನೆ 101 –ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾರ್ಯಕ್ರಮ 0–01 ಕರ್ನಾಟಕ ಗ್ರಾಮೀಣ ಉದ್ಯೋಗ ಭರವಸೆ ಯೋಜನೆ –059 ಇತರೆ ಖರ್ಚು (ಯೋಜನೆ)" (2505–02–101–0–01–059).

ಈಗ ಬಿಡುಗಡೆ ಮಾಡುವ ಅನುದಾನವನ್ನು ಸಾಮಗ್ರಿ ಘಟಕಕ್ಕೆ ಮಾತ್ರ ಬಳಸಿಕೊಳ್ಳತಕ್ಕದ್ದು. ಪಂಚಾಯತ್ ರಾಜ್ ಸಂಸ್ಥೆಗೆ ಸಂಬಂಧಪಟ್ಟ ಅಧಿಕಾರಿಗಳು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ಸಂಬಂಧಿಸಿದಂತೆ ಅಧಿನಿಯಮದ ಪ್ರಕರಣಗಳು, ಕೇಂದ್ರ ಸರ್ಕಾರದ ನಿರ್ವಹಣೆಯ ಮಾರ್ಗಸೂಚಿಗಳು, ಸುತ್ತೋಲೆಗಳು, ಆದೇಶಗಳು ಹಾಗೂ ರಾಜ್ಯ ಸರ್ಕಾರವು ದಿನಾಂಕ: 1–2–2007ರಂದು ಅಧಿಸೂಚಿಸಿರುವ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ–ಕರ್ನಾಟಕ ಇದರ ಮಾರ್ಗಸೂಚಿಗಳ ರೀತ್ಯಾ ಕ್ರಮ ತೆಗೆದುಕೊಳ್ಳತಕ್ಕದ್ದು. ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಸಂಬಂಧಿಸಿದ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು, ಉಸ್ತುವಾರಿ, ಅನುಷ್ಠಾನ ಮತ್ತು ಜಾಗೃತಿ ಇವುಗಳನ್ನು ಚಲಾಯಿಸುವ ಸಂಪೂರ್ಣ ಜವಾಬ್ದಾರಿ ಅವರುಗಳದಾಗಿರುತ್ತದೆ.

ಸರ್ಕಾರದ ಆದೇಶವನ್ನು ಈ ಇಲಾಖೆಯ ಆಂತರಿಕ ಆರ್ಥಿಕ ಮುಖ್ಯಸ್ಥರು (ಹಣಕಾಸು ಮತ್ತು ಲೆಕ್ಕಪತ್ರ) ರವರು ಸಹಮತಿಸಿದಂತೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ಡಾ:ಪಿಸಿ.ಜಾಫರ್**

ನಿರ್ದೇಶಕರು

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹಾಗೂ ಪದನಿಮಿತ್ತ

ಸರ್ಕಾರದ ಉಪ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**I -F3 -★**

**ANNEXURE TO G.O.NO:RDP;121:NRE:2008, Bangalore, Dated: 25-4-2009**

Statement showing the releases of IIIrd installment of state share of funds , due for the year 2008-09, released during the year 2009-10 under NREGA.

(Rs.in lakhs)

| Sl. No. | District | Central share directly to ZP | | State share proposed for releases as per Column No.4 | Funds being released in this Order |
|---|---|---|---|---|---|
| | | Date | Amount | | |
| 1 | 2 | 3 | 4 | 5 | 8 |
| 1 | Bellary | 03-03-2009 | 2092.00 | 209.20 | 209.20 |

**Dr.P.C.JAFFER**

Director,

P.R. 1267

National Rural Employment Guarantee Scheme & E/o.

Dy. Secretary to Government, Rural Development & Panchayat Raj Department.

**ವಿಷಯ:** ಎಸ್‌ಜಿಎಸ್‌ವೈ ಯೋಜನೆಯಡಿ 2009–2010ನೇ ಸಾಲಿಗೆ ಆರ್ಥಿಕ ಮತ್ತು ಭೌತಿಕ ಗುರಿ ಹಾಗೂ ಕ್ರಿಯಾ ಯೋಜನೆ ನಿಗದಿಪಡಿಸುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 25 ಎಸ್‌ಜಿವೈ 2008, ಬೆಂಗಳೂರು ದಿನಾಂಕ:18.04.09.
2. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ ಜೆ 20011/03/2009–ಎಸ್‌ಜಿಎಸ್‌ವೈ 1:ದಿನಾಂಕ08.04.09.
3. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ ಜೆ12022/1/2009 ಎಸ್‌ಜಿಎಸ್‌ವೈ1(10) ದಿನಾಂಕ:16.04.09.
4. ಕೇಂದ್ರ ಸರ್ಕಾರದ ಅ.ಸ.ಪತ್ರ ಸಂಖ್ಯೆ: 1/12011/5/2009 ಎಸ್‌ಜಿಎಸ್‌ವೈ (ಸಿ) ದಿನಾಂಕ:23.03.2009 ಮತ್ತು 01.04.2009.

**ಪ್ರಸ್ತಾವನೆ:**

ಉಲ್ಲೇಖ (1) ರ ಆದೇಶದ ಮೇರೆಗೆ ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯನ್ನು 2009–10 ನೇ ಸಾಲಿನಲ್ಲಿ ಮುಂದುವರೆಸಲಾಗಿದೆ. ಕೇಂದ್ರ ಸರ್ಕಾರವು ಈ ಯೋಜನೆಯ ಅನುಷ್ಠಾನಕ್ಕಾಗಿ 2009–10ನೇ ಸಾಲಿಗೆ ರೂ.10961.00 ಲಕ್ಷಗಳನ್ನು ಉಲ್ಲೇಖ (2) ರಂತೆ ಹಂಚಿಕೆ ಮಾಡಿ, ಕೇಂದ್ರದ ಪಾಲಿನ ಅನುದಾನ ರೂ.8221.00 ಲಕ್ಷ ಮತ್ತು ರಾಜ್ಯದ ಪಾಲಿನ ಅನುದಾನ ರೂ.2740.00 ಲಕ್ಷಗಳನ್ನು ನಿಗದಿಪಡಿಸಿದೆ. ಈ ಯೋಜನೆಯನ್ನು ರಾಜ್ಯದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದಕ್ಕೆ ಆರ್ಥಿಕ ಮತ್ತು ಭೌತಿಕ ಗುರಿಯ ಕ್ರಿಯಾ ಯೋಜನೆಯನ್ನು ಜಿಲ್ಲೆಗಳಿಗೆ ನೀಡಬೇಕಾಗಿದೆ. ಯೋಜನೆಯ ಮಾರ್ಗಸೂಚಿಯಂತೆ, ನಿಗದಿತ ಅನುದಾನದ ಶೇ.10 ರಷ್ಟು ತರಬೇತಿಗೆ, ಶೇ.10ರಷ್ಟು ಸುತ್ತುನಿಧಿಗೆ ಮತ್ತು ಶೇ.20 ರಷ್ಟು ಮೂಲಭೂತ ಸೌಕರ್ಯಕ್ಕೆ ನಿಗದಿ ಪಡಿಸಬೇಕಾಗಿದೆ. ಈ ಯೋಜನೆಯ ನೆರವನ್ನು ಮಹಿಳೆಯರಿಗೆ (ಶೇ.40) ಹಾಗೂ ಗ್ರಾಮೀಣ ಭಾಗದ ಎಲ್ಲಾ ವರ್ಗಗಳಿಗೂ ದೊರಕಿಸಿಕೊಡುವ ಉದ್ದೇಶದಿಂದ ಪರಿಶಿಷ್ಟ ಜಾತಿ (ಶೇ.42) ಪರಿಶಿಷ್ಟ ಪಂಗಡ (ಶೇ.8), ಅಲ್ಪಸಂಖ್ಯಾತರು (ಶೇ.15) ಹಾಗೂ ಅಂಗವಿಕಲರುಗಳಿಗೆ (ಶೇ.3) ನಿಗದಿಪಡಿಸಬೇಕಾಗಿದೆ.

ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯಡಿ 2009–10 ನೇ ಸಾಲಿನಲ್ಲಿ ಫಲಾನುಭವಿಗಳಿಗೆ ಅಗತ್ಯ ಸಾಲ ನೀಡಿಕೆಗಾಗಿ ರಾಜ್ಯಕ್ಕೆ ರೂ.18,118.65 ಲಕ್ಷಗಳ ಗುರಿ ನಿಗದಿಪಡಿಸಿ ಕೇಂದ್ರ ಸರ್ಕಾರವು ಉಲ್ಲೇಖ (4) ರ ಮೂಲಕ ತಿಳಿಸಿದೆ. ಇದನ್ನು ಜಿಲ್ಲಾವಾರು ವಿಂಗಡಿಸಿ ರಾಜ್ಯದ ಎಲ್ಲಾ ಜಿಲ್ಲೆಗಳಿಗೆ 2009–10 ನೇ ಸಾಲಿಗೆ ಸಾಲ ನೀಡಿಕೆ ಗುರಿಯಾಗಿ ನಿಗದಿ ಪಡಿಸಬೇಕಾಗಿದೆ.

ಎಸ್‌ಜಿಎಸ್‌ವೈ ಅಡಿ ಕೇಂದ್ರವು ತನ್ನ ಪಾಲಿನ ಅನುದಾನದ ಮೊದಲನೆಯ ಕಂತಿನ ಹಣವನ್ನು ನೇರವಾಗಿ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳಿಗೆ ಉಲ್ಲೇಖ (3) ರಲ್ಲಿ ಬಿಡುಗಡೆ ಮಾಡಿದೆ. ಕೆಲವು ಜಿಲ್ಲಾ ಪಂಚಾಯತಿಗಳಲ್ಲಿ 2009–10 ನೇ ಸಾಲಿಗೆ ಯೋಜನೆಯಡಿ ಆರಂಭಿಕ ಶಿಲ್ಕು ಲಭ್ಯವಿರುತ್ತದೆ. ಈ ಹಿನ್ನೆಲೆಯಲ್ಲಿ ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕಾಗಿರುವುದರಿಂದ 2009–10ನೇ ಸಾಲಿಗೆ ಕ್ರಿಯಾ ಯೋಜನೆಯನ್ನು ತಯಾರಿಸ ಬೇಕಾಗಿರುವುದರಿಂದ, ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 8 ಎಸ್‌ಜಿವೈ 2009, ಬೆಂಗಳೂರು, ದಿನಾಂಕ: 5ನೇ ಮೇ 2009**

ಎಸ್‌ಜಿಎಸ್‌ವೈ ಯಡಿ 2009–10 ನೇ ಸಾಲಿಗೆ ಜಿಲ್ಲಾವಾರು ನಿಗದಿಪಡಿಸಿದ ಆರ್ಥಿಕ ಮತ್ತು ಭೌತಿಕ ಗುರಿಯನ್ನು ಇದಕ್ಕೆ ಲಗತ್ತಿಸಿರುವ ಅನುಬಂಧ 1, 2, 3 ಮತ್ತು 3ಎ ರಲ್ಲಿ ಹಾಗೂ ಅನುಬಂಧ 4 ರಲ್ಲಿ ಕ್ಲಸ್ಟರ್, ಅನುಬಂಧ 5 ರಲ್ಲಿ ಜಿಲ್ಲೆಯಲ್ಲಿ ತೆಗೆದುಕೊಳ್ಳಬಹುದಾದ ವಿವಿಧ ಚಟುವಟಿಕೆಗಳು, ಅನುಬಂಧ–6 ರಲ್ಲಿ ಈ ಯೋಜನೆಯಲ್ಲಿ ತರಬೇತಿ ನೀಡಲು ತರಬೇತಿ ಕೇಂದ್ರಗಳನ್ನು ಗುರುತಿಸಿದೆ. 2009–10 ನೇ ಸಾಲಿಗೆ ಮಾಹೆವಾರು ಮಾಡಬೇಕಾದ ಕ್ಯಾಲೆಂಡರ್ ಆಫ್ ಈವೆಂಟ್ಸ್ (ಪುಟ ಸಂಖ್ಯೆ.16 ರಿಂದ 23ರ ವರೆಗೆ) ಕೂಡಾ ಲಗತ್ತಿಸಿದೆ. ಇದರಂತೆ ಎಲ್ಲಾ ಜಿಲ್ಲಾ ಪಂಚಾಯತಿಗಳು ಕ್ರಮ ವಹಿಸುವುದು.

ಯೋಜನೆಯನ್ನು ಅನುಷ್ಠಾನಗೊಳಿಸುವಾಗ ಈ ಕೆಳಕಂಡ ಅಂಶಗಳಿಗೆ ಹೆಚ್ಚಿನ ಆದ್ಯತೆ ನೀಡುವುದು.

- ಯೋಜನೆಯಡಿ ಆರ್ಥಿಕ, ಭೌತಿಕ, ಸಾಲ ನೀಡಿಕೆ (ಕ್ರೆಡಿಟ್ ಮೊಬಿಲೈಸೇಷನ್) ಮತ್ತು ವರ್ಗಾವಾರು ಗುರಿಯನ್ನು ನಿಗದಿ ಪಡಿಸಿರುವಂತೆ (ಅನುಬಂಧ 1, 2, 3 ಮತ್ತು 3ಎ) ಜಿಲ್ಲೆಗಳು ಪ್ರಗತಿಯನ್ನು ಸಾಧಿಸತಕ್ಕದ್ದು.
- ಸದರಿ ವರ್ಷದಲ್ಲಿ ಸಹಾಯಧನವನ್ನು ಗುಂಪು ಫಲಾನುಭವಿಗಳಿಗೆ ಮಾತ್ರ ನೀಡುವುದು. ಆದರೆ ವೈಯಕ್ತಿಕ ಅಂಗವಿಕಲರಿಗೆ ಸಹಾಯಧನವನ್ನು ನೀಡಬಹುದು.
- ಎಸ್‌ಜಿಎಸ್‌ವೈ ಮಾರ್ಗಸೂಚಿಯಂತೆ, ಪರಿಶಿಷ್ಟ ಜಾತಿಗೆ ಶೇ.42, ಪರಿಶಿಷ್ಟ ಪಂಗಡಕ್ಕೆ ಶೇ.8, ಮಹಿಳೆಯರಿಗೆ ಶೇ.40, ಅಲ್ಪಸಂಖ್ಯಾತರಿಗೆ ಶೇ.15 ಹಾಗೂ ಅಂಗವಿಕಲರಿಗೆ ಶೇ.3 ನೀಡಬೇಕಾದ ಶೇಕಡಾವಾರು ಸೌಲಭ್ಯವನ್ನು ಗಮನದಲ್ಲಿಟ್ಟು ಕೊಂಡು ಕ್ರಿಯಾ ಯೋಜನೆ ತಯಾರಿಸಿ ಸರ್ಕಾರದ ಗಮನಕ್ಕೆ ತಂದು ಅನುಷ್ಟಾನಗೊಳಿಸತಕ್ಕದ್ದು.
- ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಎಸ್‌ಜಿಎಸ್‌ವೈ ಸಭೆಯನ್ನು ಮಾರ್ಗಸೂಚಿಯನ್ವಯ ನಿಯತವಾಗಿ ಮಾಡುವುದು.
- 2009–10 ನೇ ಸಾಲಿನಲ್ಲಿ ಪ್ರೈಮರಿ ಚಟುವಟಿಕೆಗೆ ಶೇ.70 ರಷ್ಟು (ಪ್ರೈಮರಿ ಚಟುವಟಿಕೆಗಳಾದ ಹೈನುಗಾರಿಕೆ ಮತ್ತು ಇತರೆ ಪ್ರಾಣಿಗಳ ಸಾಕಾಣಿಕೆ ಶೇ.60 ರಷ್ಟು ಹಾಗೂ ನೀರಾವರಿ ಮತ್ತು ಭೂಆಧಾರಿತ ಚಟುವಟಿಕೆಗಳಿಗೆ ಶೇ.10 ರಷ್ಟು) ಹಾಗೂ ಸೆಕೆಂಡರಿ ಮತ್ತು ಟರ್‌ಶಿಯರಿ ಚಟುವಟಿಕೆಗಳಿಗೆ ಶೇ.30 ರಷ್ಟನ್ನು ನಿಗದಿಪಡಿಸಲಾಗಿದೆ. ಜಿಲ್ಲೆಗಳು ಕ್ರಿಯಾ ಯೋಜನೆ ತಯಾರಿಸುವಾಗ, ಜಿಲ್ಲೆಯಲ್ಲಿನ ಪ್ರಮುಖ ಸೆಕೆಂಡರಿ ಮತ್ತು ಟರ್‌ಶಿಯರಿ ಚಟುವಟಿಕೆಗಳಿಗೆ ನಿಯಮಾನುಸಾರ ಆದ್ಯತೆ ನೀಡುವುದು.
- ಆಯಾ ಅಂಶಗಳಿಗೆ ನಿಗದಿಪಡಿಸಿದ ಅನುದಾನವನ್ನು ಕಡ್ಡಾಯವಾಗಿ ಆಯಾ ಅಂಶಗಳಿಗೆ ನೀಡಿ ಅನುಷ್ಠಾನಗೊಳಿಸುವುದು.
- ಒಂದು ಜಿಲ್ಲೆಯಿಂದ 4–5 ಕಸ್ಟರ್ ಪದ್ಧತಿಯನ್ನು ಅಭಿವೃದ್ಧಿ ಪಡಿಸಿ ಅನುಷ್ಠಾನಗೊಳಿಸುವುದು.
- ಕೇಂದ್ರ ಸರ್ಕಾರಕ್ಕೆ ಎರಡನೇ ಕಂತಿನ ಹಣ ಬಿಡುಗಡೆಗೆ ಪ್ರಸ್ತಾವನೆ ಕಳುಹಿಸುವ ಮುನ್ನ ಪ್ರಸಕ್ತ ಸಾಲಿನಲ್ಲಿ ಈ ಯೋಜನೆಯಡಿ ಜಿಲ್ಲೆಗಳಲ್ಲಿ ಲಭ್ಯವಿರುವ ಹಣದ ಶೇ 60 ರಷ್ಟು ವೆಚ್ಚ ಮಾಡಿರಬೇಕು.
- 2008–2009 ನೇ ಸಾಲಿನ ಆಡಿಟ್ ವರದಿಯನ್ನು ಜುಲೈ ತಿಂಗಳಲ್ಲಿ ಕಳುಹಿಸುವುದು.
- ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯ ಮಾಸಿಕ ಪ್ರಗತಿಯನ್ನು ನಿಗದಿತ ನಮೂನೆಗಳಲ್ಲಿ ಪ್ರತಿ ಮಾಹೆ 5ನೇ ತಾರೀಖಿನೊಳಗೆ ಕೇಂದ್ರ ಸರ್ಕಾರದ ವೆಬ್‌ಸೈಟ್ ಗೆ ಅಪ್‌ಲೋಡ್ ಮಾಡಿ ಪ್ರತಿಯನ್ನು ಸ್ವಉದ್ಯೋಗ ಕಾರ್ಯಕ್ರಮಗಳ ಶಾಖೆಗೆ ತಲುಪುವಂತೆ ಕಳುಹಿಸಲು ಕೋರಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಪಿ. ರವಿಕುಮಾರ್**

ಸರ್ಕಾರದ ಕಾರ್ಯದರ್ಶಿ,

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

## ಅನುಬಂಧ – 1

### ಸ್ವರ್ಣ ಜಯಂತಿ ಗ್ರಾಮಸ್ವರೋಜ್‌ಗಾರ್ ಯೋಜನೆಯಡಿ 2009-2010 ನೇ ಸಾಲಿಗೆ ನಿಗದಿಗೊಳಿಸಿರುವ ಆರ್ಥಿಕ ಮತ್ತು ಭೌತಿಕ ಗುರಿ

ರೂ. ಲಕ್ಷಗಳಲ್ಲಿ

| ಕ್ರ ಸಂ | ಜಿಲ್ಲಾ ಪಂಚಾಯತಿಯ ಹೆಸರು | 2009-10ನೇ ಸಾಲಿನ ನಿಗದಿತ ಅನುದಾನ | ಮೂಲ ಭೂತ ಸೌಕರ್ಯ ಅಭಿವೃದ್ಧಿ ಗಾಗಿ | ತರಬೇತಿ ಗಾಗಿ | ಸುತ್ತು ನಿಧಿ | ಸಹಾಯಧನ ನೀಡಿಕೆಗಾಗಿ | | | ಸಾಲ ನೀಡಿಕೆ (ಕ್ರೆಡಿಟ್ ಮೊಬಿಲೈಜೇಷನ್) | | | ಸ್ವರೋಜ್‌ಗಾರಿಗಳ ಸಂಖ್ಯೆ | | | |
|---|---|---|---|---|---|---|---|---|---|---|---|---|---|---|---|
ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು–2)

**ಅಧಿಸೂಚನೆ**

**ಸಂಖ್ಯೆ: ಸಿಆಸುಇ 102 ಎಸ್‌ಐಎಸ್ 2009, ಬೆಂಗಳೂರು, ದಿನಾಂಕ: 16ನೇ ಜೂನ್ 2009**

ಶ್ರೀ ಅರವಿಂದ್ ಶ್ರೀವಾಸ್ತವ, ಐ.ಎ.ಎಸ್., ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ಸಂಸ್ಥೆ., ಬೆಂಗಳೂರು ರವರಿಗೆ ದಿನಾಂಕ:15.6.2009 ರಿಂದ 20.6–2009 ರವರೆವಿಗೆ (ಉದಿಸೇ) 06 ದಿನಗಳ ಗಳಿಕೆ ರಜೆಯನ್ನು ಮಂಜೂರು ಮಾಡಲಾಗಿದೆ ಹಾಗೂ ರಜೆಯ ಮೊದಲು ದಿನಾಂಕ:13.6.2009, 14–6–2009 ಮತ್ತು ರಜೆಯ ಕೊನೆಯಲ್ಲಿ ದಿನಾಂಕ:21.9.2009 ರಂದು ಬರುವ ಸಾರ್ವತ್ರಿಕ ರಜೆಗಳನ್ನು ಉಪಯೋಗಿಸಿಕೊಳ್ಳಲು ಸಹ ಅನುಮತಿ ನೀಡಿದೆ.

ಶ್ರೀ ಅರವಿಂದ್ ಶ್ರೀವಾಸ್ತವ, ಐ.ಎ.ಎಸ್., ರವರು ರಜೆಯ ಮೇಲೆ ಹೋಗಿರದಿದ್ದರೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ಸಂಸ್ಥೆ, ಬೆಂಗಳೂರು ಈ ಹುದ್ದೆಯಲ್ಲೇ ಸ್ಥಾನಪನ್ನರಾಗಿರುತ್ತಿದ್ದರೆಂದು ದೃಢೀಕರಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 731

**ಕೆ.ಜಿ. ಅನಂತ**

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು–1)

**PERSONNEL AND ADMINISTRATIVE REFORMS SECRETARIAT**

**NOTIFICATION**

**No. DPAR 213 SFP 2009, Bangalore, Dated: 12th June 2009**

Sri Santhosh Kumar, IFS (KN 94), Deputy Conservator of Forests, Wildlife Division Madikeri is promoited to officiate in the Selection Grade of IFS viz., Rs. 37400-67000+Grade Pay of Rs 8,700/- with immediate effect and on promotion he is continued in the said post until further orders.

Sri N. Rajashekar, IFS (KN-94), Deputy Conservator of Forests, Chikkaballapur Division Chikkaballapur is promoted to officiate in the Selection Grade of IFS viz., Rs. 37400-67000+Grade Pay of Rs .8,700/- with immediate effect and posted as Deputy Conservatore of Forests,m Forest Mobile Squad,

Shimoga for a day in the vacancy caused due to transfer of Sri Santhosh Kumar, IFS and from the next day Sri N. Rajashekar, IFS is re-posted as Deputy Conservator of Forests, Chikkaballapur Division Chikkaballapur.

This order issues with the concurrence of Government of India, Ministry of Environment & Forests, New Delhi under rule 3(2)(ii) of IFS (Pay) Rules communicated vide letter No. 16017/03/2008-IFS –II dated 17.9.2008..

By Order and in the name of the Governor of Karnataka,

**ASHOK P. ATRE**

Under Secretary to Government,

P.R. 732

Department of Personnel and Administrative Reforms

(Services-IV)

**NOTIFICATION**

**No. DPAR 75 SAS 2009(P), Bangalore, Dated: 13th June 2009**

The services of Dr. S. Subramanya, IAS (KN 83), Commissioner, Bruhat Bangalore Mahanagara Palike, Bangalore are withdrawn from Urban Development Department with immediate effect and posted until further orders as Principal Secretary to Government, Agriculture Department, Bangalore, vice Sri Erubothu Venkataiah, IAS transferred.

Dr. H. Bhasker, IAS (KN 83) Commissioner for Sericultural Development and Director of Sericulture Bangalore is transferred with immediate effect and his services are placed at the disposal of Commerce & Industries Department until further orders for being posted as Managing Director, Karnataka Handlooms Development Corporation Limited, Bangalore in the existing vacancy.

Sri Bharat Lal Meena, IAS (KN 85) Secretary to Government, Social Welfare Department Bangalore is transferred with immediate effect and his services are placed at the disposal of Urban Development Department until further orders for being posted as Commissioner, Bruhat Bangalore Mahanagara Palike, Bangalore, vice Dr. S. Subramanya, IAS transferred.

Sri Erubothu Venkataiah, IAS (KN 85), Secretary to Government, Agriculture Department, Bangalore is transferred with immediate effect and posted until further orders as Secretary to Government Social Welfare Department, Bangalore vice Sri Bharat Lal Meena, IAS transferred.

The services of Sri Shambhu Dayal Meena, IAS (KN 88). Managing Director, Krishna Bhagya Jala Nigama Limited Bangalore are withdrawn from Water Resources Department with immediate effect and posted until further orders as Commissioner for Sericultural Development and Director of Sericulture, Bangalore in the revived cadre post vice Dr. H. Bhasker, IAS transferred.

By Order and in the name of the Governor of Karnataka,

**M.T. REJU**

Deputy Secretary to Government,

P.R. 733

Department of Personnel and Administrative Reforms

(Services)

**NOTIFICATION**

**No. DPAR 75 SAS 2009, Bangalore, Dated: 9th June 2009**

Sri S.S. Pattanashetty, IAS Deputy Secretary to Government, Commerce & Industries Department is transferred with immediate effect and his services are placed at the disposal of Housing Department until further orders for being posted as Managing Director, Rajiv Gandhi Rural Housing Corporation Limited, Bangalore vice Dr., H.V. Parshwanath, IAS transferred.

Government declares under Rule 9 of IAS (Pay )Rules, 2007 that the post Managing Director, Rajiv Gandhi Rural Housing Corpuration Limited Bangalore in the Senior Scale of IAS is equivalent in status and responsibilities to the cadre post of Director of Agriculture Marketing included in the Schedule-II to the said Rules.

By Order and in the name of the Governor of Karnataka,

**K.G. ANANTHA**

P.R. 734

Under Secretary to Government,

Department of Personnel and Administrative Reforms

(Services-I)

**NOTIFICATION**

**No. DPAR 141 SFP 2008, Bangalore, Dated: 13th June 2009**

Dr.Ravi Ralph, IFS (KN 80), Chief Conservator of Forests is posted with immediate effect and until further orders as Chief Executive Officer, Karnataka Medicinal Plants Authority (KMPA), Bangalore vice Sri S. Venugopal, IFS transferred.

The orders posting Dr. Ravi Ralph, IFS as Registrar, Gulbarga University, Gulbarga vide Government Notification No DPAR 108 SFP 2008, dated:23-5-2009 stand cancelled.

The services of Sri R. Uday Kumar, IFS (KN 83) Chief Conservator of Forests & Registrar, Kuvempu University, Shimoga are withdrawn from Education Department with immediate effect and his services are placed at the disposal of Commerce & Industries Department for being posted as Executive Director, Mysore Minerals Limited, Bangalore in the existing vacancy.

Dr. G.N. Srikantaiah IFS (KN 86), Conservator of Forests, Research, Madikeri is transferred with immediate effect and posted until further orders as Director, AYUSH, Bangalore vice Dr. Prakash, transferred.

Sri Manjunath R. Chawan, IFS (KN 2002) ,Deputy Conservator of Forests, Gulbarga Division Gulbarga is transferred with immediate effect and posted until further orders as Deputy Conservator of forest Koppa Division, Koppa in the existing vacancy..

By Order and in the name of the Governor of Karnataka,

**M.T. REJU**

P.R. 735

Deputy Secretary to Government,

Department of Personnel and Administrative Reforms

(Services)

**ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ**

**ಅಧಿಸೂಚನೆ**

**ಸಂಖ್ಯೆ: ಸಿಆಸುಇ 20 ಸೇಉಸ್ವಾ 2009, ಬೆಂಗಳೂರು, ದಿನಾಂಕ: 8ನೇ ಜೂನ್ 2009**

ಅಧ್ಯಕ್ಷಾಧಿಕಾರಿ, 3ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದಕ್ಷಿಣ ಕನ್ನಡ ಮಂಗಳೂರು ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ [illegible] ರನ್ವಯ ಅಧ್ಯಕ್ಷಾಧಿಕಾರಿ, ಕಾರ್ಮಿಕ ನ್ಯಾಯಾಲಯ, ಮಂಗಳೂರು ಮತ್ತು ಮಡಕೇರಿ ಈ ಹುದ್ದೆಯಲ್ಲಿ ಸಮವರ್ತಿ ಪ್ರಭಾರದಲ್ಲಿರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 736

ಎಂ.ಎಸ್. ಶಿವರಾಮ್

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು–3)

## ಲೋಕೋಪಯೋಗಿ, ಬಂದರುಗಳು ಮತ್ತು ಒಳನಾಡು ಜಲಸಾರಿಗೆ ಸಚಿವಾಲಯ

### ಅಧಿಸೂಚನೆ

**ಸಂಖ್ಯೆ: ಲೋಇ 26 ಬನೌಸೇ 2007, ಬೆಂಗಳೂರು, ದಿನಾಂಕ: 15ನೇ ಜೂನ್ 2009**

ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಳಕಂಡ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳಿಗೆ ಅವರುಗಳ ಹೆಸರಿನ ಮುಂದೆ ಸೂಚಿಸಿದ ದಿನಾಂಕಗಳಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಹುದ್ದೆಗೆ ರೂ. 14050–350–14400–400–16800–450–19500–525–22650–600–25050 ರ ವೇತನ ಶ್ರೇಣಿಯಲ್ಲಿ ಸ್ಥಾನಪನ್ನ ಮುಂಬಡ್ತಿ ನೀಡಲಾಗಿದೆ.

| ಕ್ರ.ಸಂ | ಅಧಿಕಾರಿಯ ಹೆಸರು ಶ್ರೀಯುತರಾದ | ಮುಂಬಡ್ತಿ ಪೂರ್ವಾನ್ವಯ ದಿನಾಂಕ |
|---|---|---|
| 1 | ಎಲ್. ಶಿವಲಿಂಗಯ್ಯ | ದಿನಾಂಕ:8.8.2005 |
| 2 | ಎನ್.ಎಂ. ಖಾರ್ವಿ | ದಿನಾಂಕ:8.8.2005 |
| 3 | ನಾರಾಯಣಪ್ಪ | ದಿನಾಂಕ:8.8.2005 |
| 4 | ತಾರಾನಾಥ ಎಸ್. ರಾಥೋಡ್ | ದಿನಾಂಕ:14.6.2006 |
| 5 | ರಾಜಕುಮಾರ್ | ದಿನಾಂಕ:8.8.2005 |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಜಿ. ಸಿದ್ಧಗಂಗಯ್ಯ**

ಪಿ.ಆರ್. 738

ಸರ್ಕಾರದ ಅಧೀನ ಕಾರ್ಯದರ್ಶಿ

ಲೋಕೋಪಯೋಗಿ, ಬಂದರುಗಳು ಮತ್ತು ಒಳನಾಡು ಜಲಸಾರಿಗೆ ಇಲಾಖೆ

(ಸೇವೆಗಳು–ಸಿ)

## ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

### ಅಧಿಸೂಚನೆ

**ಸಂಖ್ಯೆ: ಲಾ 35 ಎಲ್‌ಎಜಿ 2009, ಬೆಂಗಳೂರು, ದಿನಾಂಕ: 10ನೇ ಜೂನ್ 2009**

ಕರ್ನಾಟಕ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳ (1977) ನಿಯಮ 26(2)ರಲ್ಲಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಸದರಿ ನಿಯಮಗಳ ಷರತ್ತಿಗಳಿಗೊಳಪಟ್ಟು ಶ್ರೀ ಸತೀಶ್ ಚಂದ್ರ ಜಿ. ಕುಲಕರ್ಣಿ, ಇವರನ್ನು ಹುದ್ದೆಯ ಅಧಿಕಾರ ವಹಿಸಿಕೊಳ್ಳುವ ದಿನಾಂಕದಿಂದ ಮೂರು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಅಪರ ಸರ್ಕಾರಿ ವಕೀಲರ ಹುದ್ದೆಗೆ ನೇಮಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಸಿ.ಎಂ ಹೂಗಾರ್**

ಪಿ.ಆರ್. 739

ಸರ್ಕಾರದ ಉಪ ಕಾರ್ಯದರ್ಶಿ (ಆಡಳಿತ)

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

## ಒಳಾಡಳಿತ ಸಚಿವಾಲಯ

### ಅಧಿಸೂಚನೆ

**ಸಂಖ್ಯೆ: ಒಇ 56 ಪೊಸಿಪ 2009, ಬೆಂಗಳೂರು, ದಿನಾಂಕ: 15ನೇ ಜೂನ್ 2009**

ರಾಜ್ಯ ಪೊಲೀಸ್ ಇಲಾಖೆಯ ಈ ಕೆಳಕಂಡ ರಿಸರ್ವ್ ಪೊಲೀಸ್ ಇನ್ಸ್‌ಪೆಕ್ಟರ್ ರವರುಗಳಿಗೆ ವೇತನ ಶ್ರೇಣಿ ರೂ., 14050–25050 ಯ, ಡೆಪ್ಯೂಟಿ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ (ಸಶಸ್ತ್ರ) ಹುದ್ದೆಗೆ ಮುಂಬಡ್ತಿ ನೀಡಿ ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ, ಅವರ ಹೆಸರುಗಳ ಮುಂದೆ ಸೂಚಿಸಿರುವ ಖಾಲಿ ಸ್ಥಳಗಳಿಗೆ ನಿಯುಕ್ತಿಗೊಳಿಸಲಾಗಿದೆ.

| ಕ್ರ.ಸಂ | ಹೆಸರು ಮತ್ತು ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳ ಶ್ರೀಯುತರು | ಮುಂಬಡ್ತಿ ನಂತರ ಸ್ಥಳ ನಿಯುಕ್ತಿಗೊಳಿಸಬೇಕಾಗಿರುವ ಸ್ಥಳ: |
|---|---|---|
| 1 | ಎಂ. ಯೋಗೇಶ್<br>ಆರ್.ಪಿ.ಐ. ಡಿ.ಎ.ಆರ್. ಬೆಳಗಾವಿ | ಡಿವೈ.ಎಸ್.ಪಿ. (ಸಶಸ್ತ್ರ) ಕೆ.ಎ.ಆರ್.ಪಿ ಮೌಂಟೆಡ್ ಕಂಪನಿ, ಮೈಸೂರು –ಖಾಲಿ ಹುದ್ದೆ |
| 2 | ಸಾಬು ಥಾಮಸ್<br>ಆರ್.ಪಿ.ಐ. ಸಿ.ಎ.ಆರ್. (ದಕ್ಷಿಣ) ಬೆಂಗಳೂರು ನಗರ | ಡಿವೈ.ಎಸ್.ಪಿ. (ಸಶಸ್ತ್ರ) ರಾಜ್ಯ ಆಂತರಿಕ ಭದ್ರತೆ ವಿಭಾಗ–ಖಾಲಿ ಹುದ್ದೆ |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಟಿ.ಎನ್. ರವಿಪ್ರಕಾಶ್**

ಪಿ.ಆರ್. 740 ಸರ್ಕಾರದ ಅಧೀನ ಕಾರ್ಯದರ್ಶಿ

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

## ಆರ್ಥಿಕ ಸಚಿವಾಲಯ

### ಅಧಿಸೂಚನೆ

**ಸಂಖ್ಯೆ: ಆಇ 123 ವಾತೆಸಿ 2009, ಬೆಂಗಳೂರು, ದಿನಾಂಕ: 16ನೇ ಜೂನ್ 2009**

ಶ್ರೀ ಯು.ಎ. ವಸಂತರಾವ್, ವಾಣಿಜ್ಯ ತೆರಿಗೆ ಉಪ ಆಯುಕ್ತರು, ಪ್ರಸ್ತುತ ಆರ್ಥಿಕ ಇಲಾಖೆಯ ಫಿಸ್ಕಲ್ ಪಾಲಿಸಿ ಅನಾಲಿಸಿಸ್ ಸೆಲ್/ಡಿಸೆಂಟ್ರಲೈಸೇಷನ್ ಅನಾಲಿಸಿಸ್ ಸೆಲ್ (ಗ್ರಾಮ್ ಸ್ವರಾಜ್) ಇಲ್ಲಿನ ವಿಶೇಷಾಧಿಕಾರಿ ಹುದ್ದೆಯ ಜೊತೆಗೆ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಉಪ ಆಯುಕ್ತರು (ಸಂಪನ್ಮೂಲ), ಈ ಹುದ್ದೆಯನ್ನು ಏಕಕಾಲದಲ್ಲಿ ಹೊಂದಿರುತ್ತಾರೆ. ಶ್ರೀ ಯು.ಎ. ವಸಂತರಾವ್, ವಾಣಿಜ್ಯ ತೆರಿಗೆ ಉಪ ಆಯುಕ್ತರವರನ್ನು ಬೆಂಗಳೂರು ಮಹಾನಗರ ಪಾಲಿಕೆಯಲ್ಲಿಯೇ ಪೂರ್ಣಾವಧಿ ಹುದ್ದೆಗೆ ನೇಮಿಸಲು ಇವರ ಸೇವೆಯನ್ನು ನಗರಾಭಿವೃದ್ಧಿ ಇಲಾಖೆಯ ವಶಕ್ಕೆ ಮುಂದಿನ ಆದೇಶದವರೆಗೆ ನಿಯೋಜನೆ ಮೇಲೆ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಎಲ್.ಎಸ್. ವಾಸನ್**

ಪಿ.ಆರ್. 741 ಸರ್ಕಾರದ ಅಧೀನ ಕಾರ್ಯದರ್ಶಿ

ಆರ್ಥಿಕ ಇಲಾಖೆ (ವಾ.ತೆ–2)

### ಅಧಿಸೂಚನೆ

**ಸಂಖ್ಯೆ: ಆಇ 150 ವಾತೆಸಿ 2009, ಬೆಂಗಳೂರು, ದಿನಾಂಕ: 10ನೇ ಜೂನ್ 2009**

ಆರ್ಥಿಕ ಇಲಾಖೆಯಲ್ಲಿ ಸ್ಥಳ ನಿರೀಕ್ಷಣೆಯಲ್ಲಿರುವ ಶ್ರೀ ಸುಬೋಧ್ ಯಾದವ್, ಭಾ.ಆ.ಸೇ., ಇವರನ್ನು ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಜಾರಿ), ಬೆಳಗಾಂ ವಿಭಾಗ, ಇಲ್ಲಿ ಶ್ರೀ ಎಂ.ಡಿ. ನಾಯಕ್, ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು, ಇವರ ಹುದ್ದೆಗೆ ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಿದೆ ಹಾಗೂ ಶ್ರೀ ಎಂ.ಡಿ. ನಾಯಕ್, ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಜಾರಿ ಮತ್ತು ವಸೂಲಿ), ಬೆಳಗಾಂ ಇವರನ್ನು ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ), ವ್ಯಾಟ್ ವಿಭಾಗ, ಬೆಳಗಾಂ, ಇಲ್ಲಿನ ಖಾಲಿ ಹುದ್ದೆಗೆ ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ವರ್ಗಾಯಿಸಿ ನೇಮಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಎ.ಎನ್. ಶ್ರೀಧರ್**

ಪಿ.ಆರ್. 742 ಸರ್ಕಾರದ ಸಹ ಕಾರ್ಯದರ್ಶಿ

ಆರ್ಥಿಕ ಇಲಾಖೆ (ಆಡಳಿತ & ಸಮನ್ವಯ)

## ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

### ಅಧಿಸೂಚನೆ

**ಸಂಖ್ಯೆ: ವಾಕೈ 15 ಕೈಸೇವಿ 2009, ಬೆಂಗಳೂರು, ದಿನಾಂಕ: 15ನೇ ಜೂನ್ 2009**

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಈ ಕೆಳಕಂಡ ಅಧಿಕಾರಿಗಳನ್ನು ಮುಂದೆ ಅವರುಗಳ ಜೇಷ್ಠತಾ ಸ್ಥಾನದಲ್ಲಿ ಯಾವುದೇ ಮಾರ್ಪಾಡುಗಳು ಬಂದರೆ, ಪುನರ್ ಪರಿಶೀಲಿಸಬಹುದಾದ ಮತ್ತು ಇದು ಜೇಷ್ಠತಾ ಸ್ಥಾನದಲ್ಲಿ ಪುನರ್

ನಿಗದಿಪಡಿಸುವದಕ್ಕೆ ಯಾವುದೇ ಅಧಿಕ ಹಕ್ಕಾಗಿರುವುದಿಲ್ಲವೆಂಬ ಷರತ್ತಿಗೊಳಪಡಿಸಿ ಸಹಾಯಕ ನಿರ್ದೇಶಕರ ಹುದ್ದೆಗಳಲ್ಲಿ ಸ್ಥಿರೀಕರಿಸಲಾಗಿದೆ.

| | | | |
|---|---|---|---|
| 1 | ವಿ.ಟಿ. ವೆಂಕಟೇಶ್ | 2 | ವಿ.ಎನ್. ವೀರಭದ್ರಸ್ವಾಮಿ |
| 3 | ಟಿ. ದಿನೇಶ್ | 4 | ಎಂ. ರಾಮನಾರಾಯಣಗೌಡ |
| 5 | ದೊಡ್ಡಬಸವರಾಜು | 6 | ಕೆ. ಮಹಮದ್ ಇರ್ಫಾನ್ |
| 7 | ಬಿ. ಕುಮಾರಸ್ವಾಮಿ | 8 | ಚಂದ್ರಶೇಖರ್ ದೊಡ್ಡಮನಿ |
| 9 | ಸಿ.ಟಿ. ಮುದ್ದುಕುಮಾರ್ | 10 | ಬಿ.ಕೆ. ಶಿವಕುಮಾರ್ |
| 11 | ಹೆಚ್.ಆರ್. ರಾಜಪ್ಪ | 12 | ಮಾಣೀಕ್ ವಿ. ರಾಘೋಜಿ |
| 13 | ಸಿದ್ದರಾಜು | 14 | ಎಲ್. ನಾಗರಾಜು |
| 15 | ಎಂ. ಶಿವಪ್ಪ | 16 | ಜಯಕೃಷ್ಣ |
| 17 | ಆರ್. ಗಣೇಶ | 18 | ಟಿ. ಸಿದ್ದಣ್ಣ |
| 19 | ವಿ. ಲೋಕೇಶ್ | 20 | ಬಿ .ಆನಂದ್ |
| 21 | ಬಿ. ಅನಂತ | 22 | ಎ. ಲೋಕೇಶ್ |
| 23 | ನಾರಾಯಣ ಕೆ. ನಾಯಕ್ | 24 | ಪಿ.ಕೆ. ಮಹಂತೇಶ್ |
| 25 | ಜಿ. ಮಂಜುನಾಥಗೌಡ | 26 | ಡಿ.ಕೆ. ಲಿಂಗರಾಜು |
| 27 | ವಿಶ್ವನಾಥ ಸುಬ್ಬರಾಯ ಹೆಗಡೆ | 28 | ಗಂಗಾಧರಯ್ಯ |
| 29 | ಕ್ಯೂಬಾನಾಯಕ್ | 30 | ವರದರಾಜು |
| 31 | ಶಾಂತವೀರಪ್ಪ | 32 | ಎಸ್. ಪುಟ್ಟಸ್ವಾಮಿ |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಬಿ.ಸಿ. ಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸೇವೆಗಳು)

ಪಿ.ಆರ್. 743

## ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

### ಅಧಿಸೂಚನೆ

**ಸಂಖ್ಯೆ: ವಾಕೈ 24 ರೇಉನಿ 2009, ಬೆಂಗಳೂರು, ದಿನಾಂಕ: 15ನೇ ಜೂನ್ 2009**

ಅಧಿಸೂಚನೆ ಸಂಖ್ಯೆ:ಡಿಪಿಎಆರ್ 75 ಎಸ್ ಎಎಸ್ 2009, ದಿನಾಂಕ: 8.6.2009 ರಲ್ಲಿ ಶ್ರೀ ಎಂ. ಕೆ. ಬಲದೇವಕೃಷ್ಣ, ಭಾಆಸೇ., ಇವರನ್ನು ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರನ್ನಾಗಿ ನೇಮಕ ಮಾಡುವುದಕ್ಕಾಗಿ ಇವರ ಸೇವೆಯನ್ನು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ವಶಕ್ಕೆ ನೀಡಲಾಗಿದೆ. ಅದರಂತೆ ಶ್ರೀ ಎಂ.ಕೆ. ಬಲದೇವಕೃಷ್ಣ, ಭಾಆಸೇ., ಇವರನ್ನು ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಗೆ ಮರು ಸ್ಥಳ ನಿಯುಕ್ತಿಗೊಳಿಸಿ ಈ ಕೂಡಲೇ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ನೇಮಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಭಾರತಿ ಆರ್. ನಾಯಕ್**

ಪೀಠಾಧಿಕಾರಿ (ರೇಷ್ಮೆ)

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಪಿ.ಆರ್ 744

## ನಗರಾಭಿವೃದ್ಧಿ ಸಚಿವಾಲಯ

**ಅಧಿಸೂಚನೆ ಸಂಖ್ಯೆ: ನಅಇ 36 ಎಸಿಜಿ 2009, ಬೆಂಗಳೂರು ದಿನಾಂಕ: 11ನೇ ಜೂನ್ 2009**

ಶ್ರೀ ಬಿ.ಸಿ. ಪೂಜಾರಿ ಕೆಎಂಎಸ್ ಆಯುಕ್ತರು ಶ್ರೇಣಿ–1, ಬಿಜಾಪುರ ನಗರಾಭಿವೃದ್ಧಿ ಪ್ರಾಧಿಕಾರ ಇವರನ್ನು ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಅವರ ಸ್ವಂತ ವೇತನ ಶ್ರೇಣಿಯ ಮೇಲೆ

ಡಾ: ಕೆ. ಜಗದೀಶ್., ಭಾ.ಆ.ಸೇ., ಇವರ ವರ್ಗಾವಣೆಯಿಂದ ತೆರವಾಗಿರುವ ಗುಲ್ಬರ್ಗಾ ಮಹಾನಗರ ಪಾಲಿಕೆಯ ಆಯುಕ್ತರ ಹುದ್ದೆಗೆ ವರ್ಗಾಯಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
**ಎಂ.ಆರ್. ಮಹೇಶ್‌ಕುಮಾರ್**
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ

ಪಿ.ಆರ್. 746

## ವಸತಿ ಸಚಿವಾಲಯ

### ಅಧಿಸೂಚನೆ

**ಸಂಖ್ಯೆ: ವಇ 80 ಹೆಚ್‌ಎಎಂ 2009, ಬೆಂಗಳೂರು, ದಿನಾಂಕ: 10ನೇ ಜೂನ್ 2009**

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಅಧಿಸೂಚನೆ ಸಂಖ್ಯೆ ಸಿಆಸುಇ 75 ಎಸೆಎಸ್ 2009 ದಿನಾಂಕ:9-6-09 ರನ್ವಯ ಶ್ರೀ ಎಸ್.ಎಸ್. ಪಟ್ಟಣಶೆಟ್ಟಿ, ಭಾ.ಆ.ಸೇ., ಇವರನ್ನು ಡಾ:ಹೆಚ್.ವಿ. ಪಾರ್ಶ್ವನಾಥ್, ಭಾ.ಆ.ಸೇ., ಇವರ ವರ್ಗಾವಣೆಯಿಂದ ತೆರವುಗೊಂಡ ವ್ಯವಸ್ಥಾಪನ ನಿರ್ದೇಶಕರು, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ಈ ಹುದ್ದೆಯಲ್ಲಿ ತಕ್ಷಣದಿಂದಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನೇಮಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
**ಕೆ.ಆರ್. ವಲ್ಲೂರ**
ಪೀಠಾಧಿಕಾರಿ-2, ವಸತಿ ಇಲಾಖೆ

ಪಿ.ಆರ್. 747

## ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವಾಲಯ

### ಅಧಿಸೂಚನೆ

**ಸಂಖ್ಯೆ: ಗ್ರಾಅಪ 19 ಪರವ 2009, ಬೆಂಗಳೂರು, ದಿನಾಂಕ: 10ನೇ ಜೂನ್ 2009**

ಶ್ರೀ ಕೆ. ಸುಂದರ್ ನಾಯ್ಕ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ಚಿಕ್ಕಮಗಳೂರು, ಇವರಿಗೆ ಆರೋಗ್ಯ ಮತ್ತು ಕೌಟುಂಬಿಕ ಕಾರ್ಯದ ನಿಮಿತ್ತ ದಿನಾಂಕ:11.6.2009 ರಿಂದ 10.7.2009ರ ವರೆಗೆ ಒಟ್ಟು 30 ದಿನಗಳ ಪರಿವರ್ತಿತ ರಜೆಯನ್ನು ಮಂಜೂರು ಮಾಡಿದೆ.

ಈ ರಜಾ ಅವಧಿಯಲ್ಲಿ ಉಪ ಕಾರ್ಯದರ್ಶಿ (ಆಡಳಿತ) ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು, ಇವರನ್ನು ಹೆಚ್ಚುವರಿ ಪ್ರಭಾರದಲ್ಲಿರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
**ಎಸ್.ಯು. ಶಿವಪ್ಪ**
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಪಿ.ಆರ್. 748

## ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

**ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 45 ಭಾನಿವಿ 2008, ಬೆಂಗಳೂರು, ದಿನಾಂಕ: 4ನೇ ಜೂನ್ 2009**

ಭಾಷಾಂತರ ನಿರ್ದೇಶನಾಲಯದ ಈ ಕೆಳಕಂಡ ಭಾಷಾಂತರಕಾರರ ವೃಂದದ ಅಧಿಕಾರಿಗಳಿಗೆ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ವೇತನಶ್ರೇಣಿ ರೂ. 11,400-21,600ರ ಸಂಶೋಧನಾಧಿಕಾರಿ ಹುದ್ದೆಗಳಿಗೆ ಸ್ಥಾನಪನ್ನ ಬಡ್ತಿ ನೀಡಿ ಅವರುಗಳ ಹೆಸರುಗಳ ಮುಂದೆ ನಮೂದಿಸಿರುವ ಹುದ್ದೆಗಳಲ್ಲಿ ಸ್ಥಳನಿಯುಕ್ತಿಗೊಳಿಸಲಾಗಿದೆ.

| ಕ್ರ.ಸಂ | ಅಧಿಕಾರಿ ಹೆಸರು ಮತ್ತು ಪ್ರಸ್ತುತ ಹುದ್ದೆ | ಬಡ್ತಿ ನೀಡಿ ನೇಮಿಸಲಾದ ಹುದ್ದೆ |
|---|---|---|
| 1 | ಶ್ರೀ ಎಂ. ಸುಧಾಕರ್<br>ಭಾಷಾಂತರ ನಿರ್ದೇಶನಾಲಯದ ಭಾಷಾಂತರಕಾರರು, (ಕರ್ನಾಟಕ ವಿಧಾನಪರಿಷತ್ತಿನ ಸಚಿವಾಲಯದಲ್ಲಿ ನಿಯೋಜನೆ ಮೇಲಿರುವ) | ಶ್ರೀಮತಿ ಶೋಭಾಕಟ್ಟಿ, ಸಂಶೋಧನಾಧಿಕಾರಿ ಇವರ ಬಡ್ತಿಯಿಂದ ತೆರವಾದ ಹುದ್ದೆ, ಭಾಷಾಂತರ ನಿರ್ದೇಶನಾಲಯ. |
| 2 | ಶ್ರೀಮತಿ ಕೆ. ಉಮಾಲಕ್ಷ್ಮಿ<br>ಭಾಷಾಂತರ ನಿರ್ದೇಶನಾಲಯದ ಭಾಷಾಂತರಕಾರರು, (ಕರ್ನಾಟಕ ವಿಧಾನಪರಿಷತ್ತಿನ ಸಚಿವಾಲಯದಲ್ಲಿ ನಿಯೋಜನೆ ಮೇಲಿರುವ) | ಶ್ರೀ ವೀರಭದ್ರಸ್ವಾಮಿ ಸಂಶೋಧನಾಧಿಕಾರಿ ಇವರ ಬಡ್ತಿಯಿಂದ ತೆರವಾದ ಹುದ್ದೆ, ಭಾಷಾಂತರ ನಿರ್ದೇಶನಾಲಯ. |

| | | |
|---|---|---|
| 3 | ಶ್ರೀ ಎಂ. ನಾರಾಯಣಸ್ವಾಮಿ, ಭಾಷಾಂತರಕಾರರು, ಭಾಷಾಂತರ ನಿರ್ದೇಶನಾಲಯ. | ಶ್ರೀ ಐ.ಎಂ. ಕಂಬಳಿ, ಸಂಶೋಧನಾಧಿಕಾರಿ ಇವರ ಬಡ್ತಿಯಿಂದ ತೆರವಾದ ಹುದ್ದೆ, ಭಾಷಾಂತರ ನಿರ್ದೇಶನಾಲಯ. |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಜಿ. ಶ್ರೀಧರ್**

ಪಿ.ಆರ್ 749

ಸಹಾಯಕ ಪ್ರಾರೂಪಕಾರ ಮತ್ತು ಪದನಿಮಿತ್ತ

ಸರ್ಕಾರದ ಅಧೀನ ಕಾರ್ಯದರ್ಶಿ

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ

## EDUCATION SECRETARIAT

### NOTIFICATION

**No. ED 71 UMV 2009, Bangalore, Dated: 3rd June 2009**

The services of Sri Ajai Misra, IFS, Conservator of Forests (Research), Dharwad, are placed at the disposal of Education Department (Higher Education) vide, Government Notification No. DPAR 143 SFP 2008, dated 23.5.2009 for posting as Registrar, University of Mysore, Mysore.

Sri Ajai Misra, IFS, Conservator of Forests, is posted with immediate effect and until further orders as Registrar, University of Mysore, Mysore.

By Order and in the name of the Governor of Karnataka,

**U.B. ULAVI**

P.R. 750

Under Secretary to Government,

Education Department (Universities)

### NOTIFICATION

**No. ED 142 UGV 2009, Bangalore, Dated: 4th June 2009**

The services of Dr. Ravi Ralph, IFS, Chief Conservator of Forests (headquarters), Vana Vikas, Bangalore are plated at the disposal of Education Department (higher Education )vide Government notification No. DPAR 143 SFR 2008, dated:23.5.2009 for posting as Registrar, Gulbarga University, Gulbarga.

Dr. Ravi Ralph, IFS, Chief Conservator of Forests, is posted with immediate effect and until further orders as Registrar, Gulbarga University, Gulbarga.

By Order and in the name of the Governor of Karnataka,

**U.B. ULAVI**

P.R. 751

Under Secretary to Government,

Education Department (Universities)

## OFFICE OF THE DISTRICT & SESSIONS JUDGE MANDYA SECRETARIAT

**NOTIFICATION Mis TO. NO. 1564/2009, Mandya, Dated: 6th June 2009**

Sri M.G. Prahlada Rao, Chief, Administrative Officer, Court of the District & Sessions Judge, Mandya, is permitted to surrender 30 days of earned leave from 1.6.2009 to 30.6.2009 (bdi) for the block period 2009-10, for encashment benefit.

He shall be paid pay and allowances admissible for the periosd of leave so surrendered at the rate of $1/30^{th}$ of the monthly pay and allowances for each day of leave surrendered as per the provisions contained in Rule 118 (2) of KCSRs.

**K.S. MUDAGAL**

P.R. 752

Prl. District & Sessions Judge, Mandya

**ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ**

**ಅಧಿಸೂಚನೆ**

**ಸಂಖ್ಯೆ: ಲಾ 81 ಎಲ್‌ಸಿಇ 2009, ಬೆಂಗಳೂರು, ದಿನಾಂಕ: 2ನೇ ಜೂನ್ 2009**

ಕರ್ನಾಟಕ ಕಾನೂನು ಅಧಿಕಾರಿಗಳ ಸೇವೆಗಳ (ನೇಮಕಾತಿ ಮತ್ತು ಸೇವಾ ಷರತ್ತು) ನಿಯಮಗಳ (1977)ರ ನಿಯಮ 5(3) ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತುಮಕೂರಿನ ಒಂದನೇ ತ್ವರಿತಗತಿ ನ್ಯಾಯಾಲಯದ ವಿಶೇಷ ಸರ್ಕಾರಿ ಅಭಿಯೋಜಕರಾದ ಶ್ರೀ ಎಂ.ಎಸ್. ಹರೀಶ್ ಬಾಬು ಇವರನ್ನು ದಿನಾಂಕ:19.4.2009ರಿಂದ ಜಾರಿಗೆ ಬರುವಂತೆ ಮುಂದಿನ ಆದೇಶದವರೆಗೆ ಮೂರನೇ ತ್ವರಿತಗತಿ ನ್ಯಾಯಾಲಯದ ವಿಶೇಷ ಅಭಿಯೋಜಕರಾಗಿ ಅಧಿಕ ಪ್ರಭಾರದಲ್ಲಿ ಕಾರ್ಯನಿರ್ವಹಿಸಲು ಸೂಚಿಸಲಾಗಿದೆ.

ಶ್ರೀ ಆರ್. ರವೀಂದ್ರನಾಯಕ್, ವಿಶೇಷ ಸರ್ಕಾರಿ ಅಭಿಯೋಜಕರು, 3ನೇ ತ್ವರಿತಗತಿ ನ್ಯಾಯಾಲಯ, ಇವರನ್ನು ದಿನಾಂಕ:18.4.2009ರಿಂದ ಜಾರಿಗೆ ಬರುವಂತೆ ಸೇವಾ ವಿಮುಕ್ತಿಗೊಳಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಹೆಚ್.ಆರ್. ಶಕುಂತಲ**

ಪಿ.ಆರ್. 753

ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ–1) (ಪ್ರಭಾರ)

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

**ಅಧಿಸೂಚನೆ**

**ಸಂಖ್ಯೆ: ಲಾ 03 ಎಲ್‌ಎಜಿ 2009, ಬೆಂಗಳೂರು, ದಿನಾಂಕ: 4ನೇ ಜೂನ್ 2009**

ಕರ್ನಾಟಕ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳ (1977)ರ ನಿಯಮ 23ರಲ್ಲಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಸದರಿ ನಿಯಮಗಳ ಷರತ್ತಿಗಳಿಗೊಳಪಟ್ಟು ಶ್ರೀ ಎನ್. ದಿನೇಶ್‌ರಾವ್, ವಕೀಲರು, ಇವರನ್ನು ಹುದ್ದೆಯ ಅಧಿಕಾರ ವಹಿಸಿಕೊಳ್ಳುವ ದಿನಾಂಕದಿಂದ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅಡ್ವೋಕೇಟ್ ಜನರಲ್ ಘಟಕ ಕಛೇರಿ, ಧಾರವಾಡ ಇಲ್ಲಿ ಖಾಲಿ ಇರುವ ಸರ್ಕಾರಿ ವಕೀಲರ ಹುದ್ದೆಗೆ ನೇಮಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಸಿ.ಎಂ. ಹೂಗಾರ್**

ಪಿ.ಆರ್. 754

ಸರ್ಕಾರದ ಉಪ ಕಾರ್ಯದರ್ಶಿ (ಆಡಳಿತ)

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

**ಸಮಾಜ ಕಲ್ಯಾಣ ಸಚಿವಾಲಯ**

**ಅಧಿಸೂಚನೆ**

**ಸಂಖ್ಯೆ: ಸಕಇ 70 ಸ್ವೀಮರ 2009, ಬೆಂಗಳೂರು, ದಿನಾಂಕ: 2ನೇ ಜೂನ್ 2009**

ಶ್ರೀ ಸಿದ್ದಲಿಂಗಯ್ಯ ಸರ್ಕಾರದ ಉಪ ಕಾರ್ಯದರ್ಶಿ–3, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರಿಗೆ ದಿನಾಂಕ:1–6–2009 ರಿಂದ 30–6–2009ರ ವರೆಗೆ 30 ದಿನಗಳ ಗಳಿಕೆ ರಜೆಯನ್ನು ಅಧ್ಯರ್ಪಣೆ ಮಾಡಿ ನಗಧೀಕರಣಗೊಳಿಸುವ ಸೌಲಭ್ಯ ಪಡೆಯಲು ಮಂಜೂರಾತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಎಂ.ಎಂ. ಬಾಟೆ**

ಪಿ.ಆರ್. 755

ಸರ್ಕಾರದ ಅಧೀನ ಕಾರ್ಯದರ್ಶಿ–3

ಸಮಾಜ ಕಲ್ಯಾಣ ಇಲಾಖೆ

**ಒಳಾಡಳಿತ ಸಚಿವಾಲಯ**

**ಅಧಿಸೂಚನೆ ಸಂಖ್ಯೆ: ಒಇ 268 ಪೊಸಿಪ 2009, ಬೆಂಗಳೂರು, ದಿನಾಂಕ: 6ನೇ ಜೂನ್ 2009**

ಶ್ರೀ ಬಿ.ವಿ. ಬೊಮ್ಮನಾಳ್, ಸಹಾಯಕ ಪೊಲೀಸ್ ಆಯುಕ್ತರು, ವಿಕಾಸಸೌಧ ಭದ್ರತೆ ಬೆಂಗಳೂರು ಇವರನ್ನು ಸಾರ್ವಜನಿಕ ಹಿತದೃಷ್ಟಿಯಿಂದ, ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ, ಡಿವೈ.ಎಸ್.ಪಿ. ಚಳ್ಳಕೆರೆ ಉಪ ವಿಭಾಗ, ಚಿತ್ರದುರ್ಗ ಜಿಲ್ಲೆ ಇಲ್ಲಿ ಡಾ. ಅಶ್ವಿನಿ ಎಂ. ಡಿವೈ.ಎಸ್.ಪಿ.ಇವರ ಸ್ಥಾನದಲ್ಲಿ ವರ್ಗಾಯಿಸಿ ನೇಮಿಸಲಾಗಿದೆ.

ಈ ಅಧಿಸೂಚನೆಯನ್ನು ಮಾನ್ಯ ಮುಖ್ಯಮಂತ್ರಿಯವರು ಸಂಖ್ಯೆ:ಸಿಎಂ/ಜೆಎಸ್/ಟಿ–155/09 ದಿನಾಂಕ:5.6.2009 ರನ್ವಯ ಅನುಮೋದಿಸಿದಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಟಿ.ಎನ್. ರವಿಪ್ರಕಾಶ್**

ಪಿ.ಆರ್. 756 ಸರ್ಕಾರದ ಅಧೀನ ಕಾರ್ಯದರ್ಶಿ

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

**ಅಧಿಸೂಚನೆ ಸಂಖ್ಯೆ: ಒಇ 267 ಪೊಸಿಪ 2009, ಬೆಂಗಳೂರು, ದಿನಾಂಕ: 6ನೇ ಜೂನ್ 2009**

ಶ್ರೀ ಹೆಚ್.ವೈ. ತುರಾಯಿ ಡಿವೈ.ಎಸ್.ಪಿ. ರೈಲ್ವೇ ಉಪ ವಿಭಾಗ, ಬೆಂಗಳೂರು ಇವರನ್ನು ಸಾರ್ವಜನಿಕ ಹಿತದೃಷ್ಟಿಯಿಂದ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಡಿವೈ.ಎಸ್.ಪಿ ಕೂಡ್ಲಿಗಿ ಉಪ ವಿಭಾಗ, ಬಳ್ಳಾರಿ ಜಿಲ್ಲೆ ಇಲ್ಲಿ ಶ್ರೀಮತಿ ಮಧುರವೀಣ ಎಂ.ಎಲ್., ಡಿವೈ.ಎಸ್.ಪಿ., ಇವರ ಸ್ಥಾನದಲ್ಲಿ ವರ್ಗಾಯಿಸಿ ನೇಮಿಸಲಾಗಿದೆ.

ಈ ಅಧಿಸೂಚನೆಯನ್ನು ಮಾನ್ಯ ಮುಖ್ಯಮಂತ್ರಿಯವರುಸಂಖ್ಯೆ:ಸಿಎಂ/ಜೆಎಸ್/ಟಿ–156/09 ದಿನಾಂಕ:5.6.2009ರನ್ವಯ ಅನುಮೋದಿಸಿದಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಟಿ.ಎನ್. ರವಿಪ್ರಕಾಶ್**

ಪಿ.ಆರ್. 757 ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

## PERSONNEL AND ADMINISTRATIVE REFORMS SECRETARIAT

**NOTIFICATION No. DPAR 108 SFP 2008, Bangalore, Dated: 27th May 2009**

In partial modification of Para-10 of Government Notification No. DPAR 108 SFP 2008, dated 23-5-2009, Dr. Uday Vir Singh IFS (KN-85), Conservator of Forests, Lake Development Authority, Bangalore on promotion to Chief Conservator of Forests grade is continued until further orders as Chief Conservator of Forests Lake Development Authority, Bangalore in the upgraded post.

In partial modification of Para-10 of Government Notification No. DPAR 143 SFP 2008, dated:23.5.2009, the services of Sri Rajkumar Srivastava, IFS (KN 91), Deputy Conservator of Forests, Bangalore Urban Division, Bangalore on promotion to the Conservator of Forests grade are placed at the disposal of Education Department (Higher Education) until further orders for being posted as Registrar, Tumkur University, Tumkur in the existing vacancy.

By Order and in the name of the Governor of Karnataka,

**ASHOK P. ATRE**

P.R. 701 Under Secretary to Government,

Department of Personnel and Administrative Reforms

(Services-IV)

**NOTIFICATION No. DPAR 266 SPS 2006, Bangalore, Dated: 15th April 2009**

Shri Udayan Mukerji, IPS (KN 80 )on central deputation working as Joint Secretary (Pers), Ministry of External Affairs New Delhi is accorded proforma promotion to the rank of Additional Director General of Police carrying the then Above Supertime Scale of IPS in the then pay scale of Rs .22400-525-24500 (corresponding to present new pay scale of Rs 37400-67000 plus Grade Pay Rs. 12000 )as per Government of India letter No. 11030/17/93-AIS(II )dated 11-4-2001 with reference to his junior Shri Rupak Kumar Dutta, IPS (KN 81) promoted to the grade of Additional Director General of Police in an IPS cadre post vide State Government Notification No. DPAR 138 SPS 2007, dated 29.9.2007.

By Order and in the name of the Governor of Karnataka,

**ASHOK P. ATRE**

P.R. 702 Under Secretary to Government,

Department of Personnel and Administrative Reforms

(Services-IV)

KA / BG-GPO/2515/WPP-47/2009-2011

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೪ | ಬೆಂಗಳೂರು, ಗುರುವಾರ, ಜುಲೈ ೨, ೨೦೦೯ (ಆಷಾಢ ೧೧, ಶಕ ವರ್ಷ ೧೯೩೧) | ಸಂಚಿಕೆ ೨೭

## ಭಾಗ–೩

## ಸರ್ಕಾರದ ಆಯಾ ಇಲಾಖೆಗಳ ಮುಖ್ಯಸ್ಥರ ಮತ್ತು ಸ್ಥಳೀಯ ಪ್ರಾಧಿಕಾರಿಗಳಿಗೆ ಸಂಬಂಧಿಸಿದ ಅಧಿಸೂಚನೆಗಳು

### ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಇವರ ನ್ಯಾಯಾಲಯದಲ್ಲಿ

**ಬಿ3:ಅಮೊ:ವಾಹನ–15/08–09, ದಿನಾಂಕ:7ನೇ ಮಾರ್ಚ್, 2009**

**ಉಪಸ್ಥಿತರು :** ಶ್ರೀ ಮಹೇಶ್ ಬಿ. ಶಿರೂರ್ ಭಾ.ಅ.ಸೇ.,
ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ.

**ಪಿರ್ಯಾದಿದಾರರು :** ವಲಯ ಅರಣ್ಯಾಧಿಕಾರಿ, ಆನಂದಪುರಂ ವಲಯ, ಚೋರಡಿ.
(ಸಹಾಯಕ ಸರ್ಕಾರಿ ಅಭಿಯೋಜಕರು, ಸಾಗರ)

**ಆರೋಪಿಗಳು :** (1) ದಾದಾಪೀರ್ (2) ಸೈಪು

**ಬಾಧ್ಯತೆದಾರರು :** ಯಾರೂ ಹಕ್ಕುಬಾಧ್ಯತೆಯ ಅರ್ಜಿ ಸಲ್ಲಿಸಿಲ್ಲ.

**ಪ್ರಸ್ತಾವನೆ:**

ದಿನಾಂಕ:06–08–2008ರಂದು ಆನಂದಪುರಂ ವಲಯದ ಚೋರಡಿ ಶಾಖೆಯ ವನಪಾಲಕ ಮತ್ತು ಸಿಬ್ಬಂದಿಯವರು ಶಿವಮೊಗ್ಗ ತಾಲ್ಲೂಕು ಕುಂಸಿ ಹೋಬಳಿ ಚೋರಡಿ ಗ್ರಾಮದ ಚೋರಡಿ ಕಿರು ಅರಣ್ಯದ ಸ.ನಂ: 117ರ ಎನ್‌ಹೆಚ್. 206 ರಸ್ತೆಯಲ್ಲಿ ಗಸ್ತು ಮಾಡುತ್ತಾ ಬರುವಾಗ ಒಂದು ಬೈಕಿನಲ್ಲಿ ಸಾಗುವಾನಿ ತುಂಡುಗಳಿಟ್ಟುಕೊಂಡು ಬರುತ್ತಿರುವುದನ್ನು ನಿಲ್ಲಿಸಿದಾಗ ನಾಟಾವನ್ನು ಹಿಡಿದು ಕುಳಿತಿದ್ದ ಅಸಾಮಿ ಓಡಿಹೋದನು. ಓಡಿಹೋದವನು ಸೈಪು ಬಿನ್ ಮುಜೀಬ್, 21 ವರ್ಷ, ಚೋರಡಿ ವಾಸಿ ಎಂದು ಶ್ರೀ ಎ.ವಿ. ಶ್ರೀಧರ, ಅರಣ್ಯ ರಕ್ಷಕರು ಗುರುತಿಸಿದರು. ಬೈಕನ್ನು ಓಡಿಸುತ್ತಿದ್ದ ಅಸಾಮಿ ದಾದಾಪೀರ್ ಬಿನ್ ಹಮೀದ್ ಸಾಬ್, ಅಂದಾಜು 26 ವರ್ಷ, ಚೋರಡಿ ವಾಸಿ ಇವನನ್ನು ವಶಕ್ಕೆ ತೆಗೆದುಕೊಂಡು ವಿಚಾರಿಸಿದಾಗ ಆತನು ಸಾಗುವಾನಿ ಮರ ಕಡಿದು ತುಂಡುಗಳನ್ನಾಗಿ ಪರಿವರ್ತಿಸಿದ್ದು, ಅಕ್ರಮವಾಗಿ ಸಾಗಿಸಿದ್ದು ಒಪ್ಪಿಕೊಂಡಿರುತ್ತಾನೆ. ವಾಹನದಲ್ಲಿ 3 ಸಾಗುವಾನಿ ತುಂಡುಗಳಿದ್ದು, ಅವುಗಳ ತುದಿ, ಬುಡದಲ್ಲಿ ಇಲಾಖೆಯ ಯಾವುದೇ ಛಾಪಾದ ಗುರುತಿರುವುದಿಲ್ಲ. ಇದನ್ನು ಅಕ್ರಮ ಸಾಗಾಣಿಕೆ ಎಂದು ಪರಿಗಣಿಸಿ, ಪ್ರಥಮ ವರ್ತಮಾನ ವರದಿ, ಮಹಜರ್ ವರದಿ, ಜಪ್ತುವರದಿಯೊಂದಿಗೆ ಸಾಗುವಾನಿ ನಾಟಾಕ್ಕೆ ನಂಬರ್ ಕೊಟ್ಟು, ಅಳತೆ ಮಾಡಿ 3=0.139ಎಂ3 ಇದ್ದು, ಅಸಾಮಿಯನ್ನು ಮತ್ತು ವಾಹನ ಸುಜುಕಿ ಬೈಕ್ ಕೆಎ–14–ಇ–8984ನ್ನು (ಇಂಜಿನ್ ನಂಬರ್ 7211-M-359713, ಛಾಸ್ಸಿಸ್ ನಂ: 7211-F-3.44296) ಇಲಾಖಾ ಪರ ವಶಪಡಿಸಿಕೊಂಡು ಕರ್ನಾಟಕ ಅರಣ್ಯ ಕಾಯ್ದೆ 1963 ಸೆಕ್ಷನ್ 33, 62, 71(ಎ) ಮತ್ತು ಕರ್ನಾಟಕ ಅರಣ್ಯ ಕಾನೂನು 1969ರ ಉಪನಿಯಮ 144, 165ರ ಪ್ರಕಾರ ಆನಂದಪುರಂ ವಲಯದ ಅರಣ್ಯ ಮೊಕದ್ದಮೆ ಸಂಖ್ಯೆ: 32/08–09ನ್ನು ದಾಖಲಿಸಿ ನಂತರ ವಾಹನವನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಇವರ ಸಮಕ್ಷಮ ಹಾಜರ್ಪಡಿಸಿರುತ್ತಾರೆ. ನಂತರ ಈ ವಾಹನವನ್ನು ಸರ್ಕಾರಿ ನಾಟಾ ಸಂಗ್ರಹಾಲಯದಲ್ಲಿರುವ

ವಾಹನ ಶೆಡ್ಡಿನಲ್ಲಿ ಸುರಕ್ಷತೆಗಾಗಿ ಇಡಲು ವಲಯ ಅರಣ್ಯಾಧಿಕಾರಿ, ಸರ್ಕಾರಿ ನಾಟಾ ಸಂಗ್ರಹಾಲಯ, ಸಾಗರ ಇವರ ಸುಪರ್ಧಿಗೆ ಕೊಡಲು ದಿ: 22–11–2008ರಂದು ಆದೇಶವಾಗಿದೆ.

ಈ ವಾಹನದ ಬಿ ಪ್ರತಿಯನ್ನು ಈ ನ್ಯಾಯಾಲಯಕ್ಕೆ ಒದಗಿಸುವಂತೆ ಪ್ರಾದೇಶಿಕ ಸಾರಿಗೆ ಅಧಿಕಾರಿ, ಶಿವಮೊಗ್ಗ ಇವರಿಗೆ ಈ ನ್ಯಾಯಾಲಯದ ಪತ್ರ ಸಂಖ್ಯೆ:ಬಿ3:ಅಮೊ:ವಾಹನ–15/08–09 ದಿ:08–09–2008ರಂದು ಪತ್ರ ಬರೆದು ಕೋರಲಾಯಿತು. ದಿ: 30–10–2008ರಂದು ಜ್ಞಾಪನಾ ಪತ್ರದ ಮೂಲಕ ಪುನಃ ವಾಹನದ ಬಿ ಪ್ರತಿಯನ್ನು ಒದಗಿಸಲು ಕೋರಲಾಯಿತು. ಆದರೆ ಅವರಿಂದ ಇಲ್ಲಿಯವರೆವಿಗೂ ಯಾವುದೇ ಮಾಹಿತಿ ಈ ನ್ಯಾಯಾಲಯಕ್ಕೆ ಬಂದಿರುವುದಿಲ್ಲ. ಮುಂದೆ ಸದರಿ ವಾಹನದ ಬಗ್ಗೆ ಆರ್.ಸಿ. ಮಾಲೀಕರು ನ್ಯಾಯಾಲಯಕ್ಕೆ ಮೊರೆಹೋದಲ್ಲಿ ಸಾರಿಗೆ ಅಧಿಕಾರಿ, ಶಿವಮೊಗ್ಗ ಇವರೇ ನೇರ ಹೊಣೆಗಾರರಾಗಿರುತ್ತಾರೆ.

ಈ ನಡುವೆ ಈ ವಾಹನದ ಹೆಚ್ಚಿನ ಪ್ರಚಾರಕ್ಕಾಗಿ 30 ದಿನಗಳ ಕಾಲಾವಕಾಶ ನೀಡಿ ವಾಹನದ ದಾಖಲೆಗಳನ್ನು ಒದಗಿಸುವಂತೆ ಅಧಿಸೂಚನೆ ಸಂಖ್ಯೆ: ಬಿ3:ಅಮೊ:ವಾಹನ–09/08–09 ದಿ: 08–09–2008ರಂದು ಹೊರಡಿಸಿ ಪ್ರತಿಯನ್ನು ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ ಬೆಂಗಳೂರು ಮತ್ತು ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯ ಪತ್ರ ವಿಭಾಗ, ಬೆಂಗಳೂರು ಇವರಿಗೆ ಕಳುಹಿಸಿ ರಾಜ್ಯ ಮಟ್ಟದ ಪ್ರಚಲಿತ ದೈನಿಕ ಪತ್ರಿಕೆ ಮತ್ತು ಗೆಜೆಟ್‌ನಲ್ಲಿ ಪ್ರಕಟಿಸಿ ಪ್ರತಿಯನ್ನು ಕಳುಹಿಸಿಕೊಡಲು ಕೋರಲಾಗಿತ್ತು. ಅದರಂತೆ ಈ ಪ್ರಕಟಣೆಯು ದಿ: 18–09–08ರಂದು ಗೆಜೆಟ್ ಪತ್ರಿಕೆಯಲ್ಲಿ ಮತ್ತು ದಿ: 27–10–2008ರಂದು ಉದಯವಾಣಿ ದಿನಪತ್ರಿಕೆಯಲ್ಲಿ ಪ್ರಕಟಗೊಂಡು 30 ದಿನಗಳಾದರು ವಾಹನ ಮಾಲೀಕರಾಗಲೀ ಅಥವಾ ಅವರ ಪರ ವಕೀಲರಾಗಲೀ ಈ ನ್ಯಾಯಾಲಯಕ್ಕೆ ಹಕ್ಕುಬಾಧ್ಯತೆಯ ಅರ್ಜಿ ಸಲ್ಲಿಸಿರುವುದಿಲ್ಲ.

ಸಹಾಯಕ ಸರ್ಕಾರಿ ಅಭಿಯೋಜಕರು ದಿ: 07–03–2009ರಂದು ವಾದ ಮಂಡಿಸಿ ಈ ವಾಹನದಲ್ಲಿ ಸಾಗುವಾನಿ ನಾಟಾಗಳನ್ನು ಸಾಗಿಸಿದ ಬಗ್ಗೆ ವಲಯ ಅರಣ್ಯಾಧಿಕಾರಿ, ಆನಂದಪುರಂ ವಲಯ, ಚೋರಡಿ ಇವರು ಮಹಜರ್ ಪ್ರತಿ ಮತ್ತು ಪ್ರಥಮ ವರ್ತಮಾನ ವರದಿ, ಜಪ್ತಿ ವರದಿಯನ್ನು ಈ ನ್ಯಾಯಾಲಯಕ್ಕೆ ಹಾಜರ್ಪಡಿಸಿರುವುದರಿಂದ ಈ ವಾಹನದಲ್ಲಿ ಸಾಗುವಾನಿ ನಾಟಾಗಳನ್ನು ಅಕ್ರಮವಾಗಿ ಸಾಗಿಸಿರುವುದು ಸಾಬೀತಾಗಿರುತ್ತದೆ. ಈ ವಾಹನದ ಬಗ್ಗೆ ಗೆಜೆಟ್ ಪತ್ರಿಕೆಯಲ್ಲಿ ಪ್ರಕಟಣೆ ಹೊರಡಿಸಿ 30 ದಿನಗಳಿಗಿಂತಲೂ ಹೆಚ್ಚು ಕಾಲವಾಗಿದ್ದರೂ ವಾಹನ ಮಾಲೀಕರಾಗಲೀ ಅಥವಾ ಅವರ ಪ್ರತಿನಿಧಿಗಳಾಗಲೀ ಯಾರೂ ಈ ನ್ಯಾಯಾಲಯಕ್ಕೆ ಕ್ಲೈಮು ಅರ್ಜಿ ಸಲ್ಲಿಸಿರುವುದಿಲ್ಲ. ಆದ್ದರಿಂದ ವಾಹನ ಮತ್ತು ಅರಣ್ಯ ಉತ್ಪನ್ನಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕೋರಿರುತ್ತಾರೆ.

ಈ ಪ್ರಕರಣದ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ, ಅಭಿಯೋಜಕರ ವಾದವನ್ನು ಕೇಳಿ, ಈ ವಾಹನದ ಬಗ್ಗೆ ಪತ್ರಿಕಾ ಪ್ರಕಟಣೆ ಹೊರಡಿಸಿರುತ್ತದೆ. ಈ ಪ್ರಕಟಣೆಯು ರಾಜ್ಯ ಗೆಜೆಟ್‌ನಲ್ಲಿ ಪ್ರಕಟಗೊಂಡು 30 ದಿನಗಳಾದರೂ ಯಾರೂ ಹಕ್ಕು ಬಾಧ್ಯತೆಯ ಅರ್ಜಿಯನ್ನು ಈ ನ್ಯಾಯಾಲಯಕ್ಕೆ ಸಲ್ಲಿಸದೇ ಇದ್ದುದ್ದರಿಂದ ಈ ಪ್ರಕರಣದ ವಿದ್ಯಾಮಾನಗಳನ್ನು ಅರಿತು ಈ ಕೆಳಗಿನಂತೆ ಆದೇಶ ಹೊರಡಿಸಿದೆ.

**ಆದೇಶ**

ಮೇಲ್ಕಂಡ ಅಂಶಗಳನ್ನು ಗಣನೆಗೆ ತೆಗೆದುಕೊಂಡು, ಶ್ರೀ ಮಹೇಶ್ ಬಿ. ಶಿರೂರ್, ಭಾ.ಅ.ಸೇ., ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಆದ ನಾನು, ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 71(ಎ) ರಿಂದ (ಜಿ) ಪ್ರಕಾರ ಹಾಗೂ ಈವರೆಗಿನ ತಿದ್ದುಪಡಿ ಅನುಸಾರ ವಲಯ ಅರಣ್ಯಾಧಿಕಾರಿ, ಆನಂದಪುರಂ ವಲಯ, ಚೋರಡಿ ಇವರು ಜಪ್ತಿಮಾಡಿದ ವಾಹನ ಸುಜುಕಿ ಬೈಕ್ ಕೆಎ–14–ಇ–8984ನ್ನು (ಇಂಜಿನ್ ನಂಬರ್ 7211-M-359713, ಛಾಸ್ಸಿಸ್ ನಂ:7211-F-3.44296) ಈ ವಾಹನದಲ್ಲಿ ಕರ್ನಾಟಕ ಸರ್ಕಾರದ ಸಂಪತ್ತು ಆದ ಸಾಗುವಾನಿ ನಾಟಾ 03=0.137ಎಂ3 ನ್ನು ಅಕ್ರಮವಾಗಿ ಸಾಗಿಸಲು ಉಪಯೋಗಿಸಿರುತ್ತಾರೆ. ಆದ್ದರಿಂದ ವಾಹನ ಸುಜುಕಿ ಬೈಕ್ ಕೆಎ–14–ಇ–8984ನ್ನು (ಇಂಜಿನ್ ನಂಬರ್ 7211-M-359713, ಛಾಸ್ಸಿಸ್ ನಂ:7211-F-3.44296) ಮತ್ತು ಈ ವಾಹನದಲ್ಲಿದ್ದ ಸಾಗುವಾನಿ ನಾಟಾ 03=0.137ಎಂ3 ನ್ನು ಅಂತಿಮವಾಗಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡಿರುತ್ತೇನೆ. ಮುಟ್ಟುಗೋಲು ಹಾಕಿಕೊಂಡ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಅನುಕೂಲಕರವಾಗಿ ವಿಲೇ ಮಾಡಲು ಆದೇಶಿಸಿದೆ. ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕಯಂತ್ರದಲ್ಲಿ ಮುದ್ರಿಸಿ, ನಂತರ ಸರಿಪಡಿಸಿ ದಿ: 07–03–2009ರಂದು ನನ್ನ ಸಹಿ ಹಾಗೂ ಮೊಹರಿನೊಂದಿಗೆ ತೆರೆದ ನ್ಯಾಯಾಲಯದಲ್ಲಿ ಆದೇಶಿಸಿದ್ದೇನೆ. ಈ ಆದೇಶ ಹೊರಡಿಸಿದ 30 (ಮೂವತ್ತು) ದಿನಗಳೊಳಗಾಗಿ ಯಾರೂ ಈ ನ್ಯಾಯಾಲಯಕ್ಕೆ ಹಕ್ಕುಬಾಧ್ಯತೆಯ ಅರ್ಜಿ ಸಲ್ಲಿಸದೇ ಹೋದಲ್ಲಿ ಇದೇ ಅಂತಿಮ ಆದೇಶವಾಗಿರುತ್ತದೆ.

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ
ಪಿ.ಆರ್.337 ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ

**ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಇವರ ನ್ಯಾಯಾಲಯದಲ್ಲಿ**
**ಬಿ3:ಅಮೊ:ವಾಹನ-07/08-09, ದಿನಾಂಕ:7ನೇ ಮಾರ್ಚ್, 2009**

ಉಪಸ್ಥಿತರು : ಶ್ರೀ ಮಹೇಶ್ ಬಿ. ಶಿರೂರ್ ಭಾ.ಅ.ಸೇ.,
ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ.

ಪಿರ್ಯಾಧಿದಾರರು : ಪೋಲಿಸ್ ಸಬ್ ಇನ್ಸ್‌ಪೆಕ್ಟರ್, ಗ್ರಾಮಾಂತರ ಪೋಲಿಸ್ ಠಾಣೆ, ಸಾಗರ
(ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು, ಸಾಗರ)

ಆರೋಪಿಗಳು : (1) ನಿಸಾರ್ (2) ಸೀತಾರಾಮ್ (3) ಪುರುಷೋತ್ತಮ (4) ಶೇಖರ್ (5) ಕುಮಾರ್
(6) ಉಮೇಶ (7) ರಾಜು

ಬಾಧ್ಯತೆದಾರರು : ಯಾರೂ ಹಕ್ಕುಬಾಧ್ಯತೆಯ ಅರ್ಜಿ ಸಲ್ಲಿಸಿರುವುದಿಲ್ಲ.

**ಪ್ರಸ್ತಾವನೆ:**

ದಿನಾಂಕ:15-05-2005ರಂದು ಸಂಜೆ 6-00 ಗಂಟೆಗೆ ಸರ್ಕಲ್ ಪೋಲಿಸ್ ಇನ್ಸ್‌ಪೆಕ್ಟರ್, ಸಾಗರ ಗ್ರಾಮಾಂತರ ವೃತ್ತ ಇವರಿಗೆ ಬಂದ ಖಚಿತ ವರ್ತಮಾನದ ಮೇರೆಗೆ ಚೆನ್ನಶೆಟ್ಟಿಕೊಪ್ಪದ ರೈಲ್ವೆ ಗೇಟ್ ಹತ್ತಿರ ಕಾಯುತ್ತಿರುವಾಗ ಕೆಎ-17-ಎಂ-6978 ಬಿಳಿ ಟ್ರಾಕ್ಸ್ ವಾಹನವು ಬಂದಿದ್ದು, ಅದನ್ನು ತಡೆದು ನಿಲ್ಲಿಸಿದಾಗ ನಿಸಾರ್ ಅಹಮದ್ ಮತ್ತು ಸೀತಾರಾಮ್ ಎಂಬುವವರನ್ನು ಹಿಡಿದುಕೊಂಡಿದ್ದು, ವಾಹನದಲ್ಲಿದ್ದ ಇತರೆ ಅಸಾಮಿಗಳು ಓಡಿಹೋಗಿದ್ದು, ವಾಹನವನ್ನು ತಪಾಸಣೆ ಮಾಡಿದಾಗ ಅದರಲ್ಲಿ ಯಾವುದೇ ಪರವಾನಿಗೆ ಇಲ್ಲದ ಬೀಟೆ ತುಂಡು ಇದ್ದು, ಇದು ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 24, 62 ಮತ್ತು ಕರ್ನಾಟಕ ಅರಣ್ಯ ಕಾನೂನು ಉಪನಿಯಮ 1969 ಹಾಗೂ ಐಪಿಸಿ ಕಲಂ 379ರ ಪ್ರಕಾರ ಸಾಗರ ಗ್ರಾಮಾಂತರ ಠಾಣೆ ಗುನ್ನೆ ನಂ: 126/05ನ್ನು ದಾಖಲಿಸಿರುತ್ತದೆ. ನಂತರ ತನಿಖೆ ಮಾಡಿದಾಗ ಈ ಕೇಸಿನ ಆರೋಪಿಗಳು ಕೃತ್ಯಕ್ಕೆ ಉಪಯೋಗಿಸಿದ ಒಂದು ಬಿಳಿ ಬಣ್ಣದ ಮಾರುತಿ ವ್ಯಾನ್ ನಂ: ಎಂಹೆಚ್-02-ಜೆ-4259 ಮತ್ತು ಮಾರುತಿ ಎಸ್ಟೀಮ್ ನಂ: ಕೆಎ-21-ಎಂ-5291ನ್ನು ಆರೋಪಿ ತಮ್ಮ ಸ್ವ ಇಚ್ಛಾ ಹೇಳಿಕೆಯ ಮೂಲಕ ದಿ:15-05-2005ರಂದು ಪಂಚರ ಸಮಕ್ಷಮ ವಶಪಡಿಸಿಕೊಂಡು ಪಿಎಫ್ ನಂ: 105/05ರಲ್ಲಿ ನೊಂದಾಯಿಸಿಕೊಂಡು ಠಾಣಾ ಆವರಣದಲ್ಲಿ ಇರಿಸಲಾಗಿದ್ದು, ಈಗ ಸದರಿ ವಾಹನಗಳನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಸಾಗರ ವಲಯರವರಿಗೆ ವರ್ಗಾವಣೆ ಕೊಡುವಂತೆ ಜೆ.ಎಂ.ಎಫ್.ಸಿ., ಸಾಗರ ನ್ಯಾಯಾಲಯವು ದಿ: 16-06-2008ರಂದು ಆದೇಶಿಸಿದಂತೆ ಸಬ್ ಇನ್ಸ್‌ಪೆಕ್ಟರ್ ಆಫ್ ಪೋಲಿಸ್, ಗ್ರಾಮಾಂತರ ಠಾಣೆಯ ಪತ್ರ ಸಂಖ್ಯೆ: ಇ2:ಪಿಎಸ್:ಸಿಸಿ-2008 ದಿ: 20-06-2008ರ ಪತ್ರದಲ್ಲಿ ದಿ: 22-06-2008ರಂದು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ; ಸಾಗರ ವಿಭಾಗ, ಸಾಗರ ಇವರ ಸಮಕ್ಷಮ ಹಾಜರ್ಪಡಿಸಿರುತ್ತಾರೆ. ನಂತರ ಈ ವಾಹನವನ್ನು ಸುರಕ್ಷತೆಗಾಗಿಡಲು ವಲಯ ಅರಣ್ಯಾಧಿಕಾರಿ, ಸರ್ಕಾರಿ ನಾಟಾ ಸಂಗ್ರಹಾಲಯ, ಸಾಗರ ಇವರ ಸುಪರ್ಧಿಗೆ ಕೊಡಲು ದಿ:03-07-2008ರಂದು ಆದೇಶವಾಗಿರುತ್ತದೆ.

ಜಪ್ತಾದ 2 ವಾಹನಗಳಲ್ಲಿ ಎಂಹೆಚ್-02-ಜೆ-4259ರ ಬಿ ಪ್ರತಿಯನ್ನು ಈ ನ್ಯಾಯಾಲಯಕ್ಕೆ ಒದಗಿಸಲು ಈ ನ್ಯಾಯಾಲಯದ ಪತ್ರ ಸಂಖ್ಯೆ: B3:FOC:VEH-07/08-09 ದಿನಾಂಕ:16-10-2008ರಂದು ದಿ ಡೈರೆಕ್ಟರ್ ಆಫ್ ಟ್ರಾನ್ಸ್‌ಪೋರ್ಟ್, ಮುಂಬೈ ಮತ್ತೊಂದು ವಾಹನ ಕೆಎ-21-ಎಂ-5291ರ ಬಿ ಪ್ರತಿಯನ್ನು ಈ ನ್ಯಾಯಾಲಯಕ್ಕೆ ಒದಗಿಸಲು ಬಿ3:ಅಮೊ:ವಾಹನ-07/08-09 ದಿ: 16-10-2008ರಂದು ಪ್ರಾದೇಶಿಕ ಸಾರಿಗೆ ಅಧಿಕಾರಿ, ಪುತ್ತೂರು ರವರಿಗೂ ಪತ್ರ ಬರೆದು ಕೋರಲಾಯಿತು. ದಿ ಡೈರೆಕ್ಟರ್ ಆಫ್ ಟ್ರಾನ್ಸ್‌ಪೋರ್ಟ್, ಮುಂಬೈ ರವರು ಇಲ್ಲಿಯವರೆವಿಗೂ ಈ ವಾಹನದ ಬಿ ಪ್ರತಿಯನ್ನು ಒದಗಿಸಿರುವುದಿಲ್ಲ. ಕೆಎ-21-ಎಂ-5291ರ ಬಿ ಪ್ರತಿಯನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿ, ಪುತ್ತೂರು ರವರು ದಿನಾಂಕ:25-10-2008 ರಂದು ಈ ನ್ಯಾಯಾಲಯಕ್ಕೆ ಒದಗಿಸಿರುತ್ತಾರೆ ಹಾಗೂ ಸದರಿ ವಾಹನದ ಸಿ.ಸಿ.ಯನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿ, ಉಡುಪಿಗೆ ದಿ: 16-09-2004ರಂದು ವರ್ಗಾಯಿಸಿದ ಬಗ್ಗೆ ನಮೂದಿಸಿರುತ್ತಾರೆ. ಅದರಂತೆ ಪ್ರಾದೇಶಿಕ ಸಾರಿಗೆ ಅಧಿಕಾರಿ, ಉಡುಪಿಯವರಿಗೆ ಈ ನ್ಯಾಯಾಲಯದ ಪತ್ರ ಸಂಖ್ಯೆ: ಬಿ3:ಅಮೊ:ವಾಹನ-07/08-09 ದಿ: 04-12-2008ರಂದು ಪತ್ರ ಬರೆದು ಬಿ ಪ್ರತಿ ಒದಗಿಸಲು ಕೋರಿದೆ. ಇಲ್ಲಿಯವರೆವಿಗೂ ಉಡುಪಿ ಪ್ರಾದೇಶಿಕ ಸಾರಿಗೆ ಅಧಿಕಾರಿಯು ಈ ನ್ಯಾಯಾಲಯಕ್ಕೆ ಬಿ ಪ್ರತಿ ಒದಗಿಸಿರುವುದಿಲ್ಲ.

ಈ ನಡುವೆ ಈ ಎರಡು ವಾಹನಗಳ ಮಾಲಿಕತ್ವದ ಬಗ್ಗೆ ಹೆಚ್ಚಿನ ಪ್ರಚಾರಕ್ಕಾಗಿ 30 ದಿನಗಳ ಕಾಲಾವಕಾಶ ನೀಡಿ ವಾಹನದ ದಾಖಲೆಗಳನ್ನು ಒದಗಿಸುವಂತೆ ಅಧಿಸೂಚನೆ ಸಂಖ್ಯೆ: ಬಿ3:ಅಮೊ:ವಾಹನ-08/08-09 ದಿ: 02-07-2008ರಂದು ಹೊರಡಿಸಿ ಪ್ರತಿಯನ್ನು ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ ಬೆಂಗಳೂರು ಮತ್ತು ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯ ಪತ್ರ ವಿಭಾಗ, ಬೆಂಗಳೂರು ಇವರಿಗೆ ಕಳುಹಿಸಿ ರಾಜ್ಯ ಮಟ್ಟದ ಪ್ರಚಲಿತ ದೈನಿಕ ಪತ್ರಿಕೆ ಮತ್ತು ಗೆಜೆಟ್‌ನಲ್ಲಿ ಪ್ರಕಟಿಸಿ ಪ್ರತಿಯನ್ನು ಕಳುಹಿಸಿಕೊಡಲು ಕೋರಲಾಗಿತ್ತು. ಅದರಂತೆ ಈ ಪ್ರಕಟಣೆಯು ದಿ: 31-07-08ರಂದು ಗೆಜೆಟ್ ಪತ್ರಿಕೆಯಲ್ಲಿ ಮತ್ತು ದಿ: 19-07-2008ರಂದು ಮಲೆನಾಡು ಮಿತ್ರ ದಿನಪತ್ರಿಕೆಯಲ್ಲಿ ಪ್ರಕಟಗೊಂಡು 30 ದಿನಗಳಾದರು ವಾಹನ

ಮಾಲೀಕರಾಗಲೀ ಅಥವಾ ಅವರ ಪರ ವಕೀಲರಾಗಲೀ ಈ ನ್ಯಾಯಾಲಯಕ್ಕೆ ಹಕ್ಕುಬಾಧ್ಯತೆಯ ಅರ್ಜಿ ಸಲ್ಲಿಸಿರುವುದಿಲ್ಲ. ಆದ್ದರಿಂದ ಮುಂದಿನ ಕ್ರಮ ಕೈಗೊಳ್ಳಲಾಯಿತು.

ಸಹಾಯಕ ಸರ್ಕಾರಿ ಅಭಿಯೋಜಕರು ದಿ:07-03-2009ರಂದು ವಾದ ಮಂಡಿಸಿ ಈ ಎರಡು ವಾಹನಗಳನ್ನು ಬೀಟೆ ತುಂಡುಗಳನ್ನು ಅಕ್ರಮವಾಗಿ ಸಾಗಾಣಿಕೆ ಮಾಡಲು ಉಪಯೋಗಿಸಿದ್ದರಿಂದ ಪೋಲಿಸ್ ಸಬ್ ಇನ್ಸ್‌ಪೆಕ್ಟರ್, ಗ್ರಾಮಾಂತರ ಪೋಲಿಸ್ ಠಾಣೆ, ಸಾಗರ ಇವರು ಜಪ್ತುಮಾಡಿ, ಮಹಜರ್ ಪ್ರತಿ ಮತ್ತು ಪ್ರಥಮ ವರ್ತಮಾನ ವರದಿ, ಜಪ್ತಿ ವರದಿಯನ್ನು ಈ ನ್ಯಾಯಾಲಯಕ್ಕೆ ಹಾಜರ್ಪಡಿಸಿರುತ್ತಾರೆ. ಪತ್ರಿಕಾ ಪ್ರಕಟಣೆ ಹೊರಡಿಸಿದ್ದು, ಪ್ರಕಟಣೆಯು ಗೆಜೆಟ್‌ನಲ್ಲಿ ಪ್ರಕಟಗೊಂಡು 30 ದಿನಗಳ ಕಾಲವಾದರೂ ಬಾಧ್ಯತೆದಾರರು ಈ ವಾಹನ ಬಿಡಿಸಿಕೊಳ್ಳುವ ಬಗ್ಗೆ ಅರ್ಜಿ ಸಲ್ಲಿಸಿರುವುದಿಲ್ಲ. ಆದ್ದರಿಂದ ಈ ವಾಹನಗಳನ್ನು ಮತ್ತು ಬೀಟೆ ತುಂಡುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕೋರಿರುತ್ತಾರೆ.

ಈ ಪ್ರಕರಣದ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ, ಅಭಿಯೋಜಕರ ವಾದವನ್ನು ಕೇಳಿ, ಈ ವಾಹನದ ಬಗ್ಗೆ ಪತ್ರಿಕಾ ಪ್ರಕಟಣೆ ಹೊರಡಿಸಿರುತ್ತದೆ. ಈ ಪ್ರಕಟಣೆಯು ರಾಜ್ಯ ಗೆಜೆಟ್‌ನಲ್ಲಿ ಮತ್ತು ದಿನಪತ್ರಿಕೆಯಲ್ಲಿ ಪ್ರಕಟಗೊಂಡು 30 ದಿನಗಳಾದರೂ ಯಾರೂ ಹಕ್ಕು ಬಾಧ್ಯತೆಯ ಅರ್ಜಿಯನ್ನು ಈ ನ್ಯಾಯಾಲಯಕ್ಕೆ ಸಲ್ಲಿಸದೇ ಇದ್ದುದ್ದರಿಂದ ಈ ಪ್ರಕರಣದ ವಿದ್ಯಮಾನಗಳನ್ನು ಅರಿತು ಈ ಕೆಳಗಿನಂತೆ ಆದೇಶ ಹೊರಡಿಸಿದೆ.

### ಆದೇಶ

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಶ್ರೀ ಮಹೇಶ್ ಬಿ. ಶಿರೂರ್, ಭಾ.ಅ.ಸೇ., ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಆದ ನಾನು, ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 71(ಎ) ರಿಂದ (ಜಿ)ಪ್ರಕಾರ ಹಾಗೂ ಈವರೆಗಿನ ತಿದ್ದುಪಡಿ ಅನುಸಾರ ಪೋಲಿಸ್ ಸಬ್ ಇನ್ಸ್‌ಪೆಕ್ಟರ್, ಗ್ರಾಮಾಂತರ ಪೋಲಿಸ್ ಠಾಣೆ, ಸಾಗರ ಇವರು ಜಪ್ತು ಮಾಡಿದ ವಾಹನ ಮಾರುತಿ ವ್ಯಾನ್ ಎಂಹೆಚ್-02-ಜೆ-4259 ಮತ್ತು ಮಾರುತಿ ಎಸ್ಟೀಮ್ ಕೆಎ-21-ಎಂ-5291 ನ್ನು ಕರ್ನಾಟಕ ಸರ್ಕಾರದ ಸಂಪತ್ತು ಆದ ಬೀಟೆ ತುಂಡುಗಳನ್ನು ಅಕ್ರಮವಾಗಿ ಸಾಗಿಸಲು ಉಪಯೋಗಿಸಿರುತ್ತಾರೆ. ಆದ್ದರಿಂದ ಮಾರುತಿ ವ್ಯಾನ್ ಎಂಹೆಚ್-02-ಜೆ-4259 ಮತ್ತು ಮಾರುತಿ ಎಸ್ಟೀಮ್ ಕೆಎ-21-ಎಂ-5291ನ್ನು ಅಂತಿಮವಾಗಿ ಮುಟ್ಟುಗೋಲು ಹಾಕಿಕೊಂಡಿರುತ್ತೇನೆ. ಮುಟ್ಟುಗೋಲು ಹಾಕಿಕೊಂಡ ವಾಹನವನ್ನು ಸರ್ಕಾರಕ್ಕೆ ಅನುಕೂಲಕರವಾಗಿ ವಿಲೇ ಮಾಡಲು ಆದೇಶಿಸಿದೆ. ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕಯಂತ್ರದಲ್ಲಿ ಮುದ್ರಿಸಿ, ನಂತರ ಸರಿಪಡಿಸಿ ದಿ:07-03-2009 ರಂದು ನನ್ನ ಸಹಿ ಹಾಗೂ ಮೊಹರಿನೊಂದಿಗೆ ತೆರೆದ ನ್ಯಾಯಾಲಯದಲ್ಲಿ ಆದೇಶಿಸಿದ್ದೇನೆ. ಈ ಆದೇಶ ಹೊರಡಿಸಿದ 30 (ಮೂವತ್ತು) ದಿನಗಳ ಒಳಗಾಗಿ ಯಾರು ಈ ನ್ಯಾಯಾಲಯಕ್ಕೆ ಹಕ್ಕುಭಾಧ್ಯತೆ ಅರ್ಜಿ ಸಲ್ಲಿಸದೇ ಹೋದಲ್ಲಿ ಇದೇ ಅಂತಿಮ ಆದೇಶವಾಗಿರುತ್ತದೆ.

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ
ಪಿ.ಆರ್.338 ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ

**ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಇವರ ನ್ಯಾಯಾಲಯದಲ್ಲಿ**
**ಬಿ3:ಅಮೊ:ವಾಹನ-23/07-08, ದಿನಾಂಕ:7ನೇ ಫೆಬ್ರವರಿ, 2009**

**ಉಪಸ್ಥಿತರು :** ಶ್ರೀ ಮಹೇಶ್ ಬಿ. ಶಿರೂರ್ ಭಾ.ಅ.ಸೇ.,
ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ.

**ಪಿರ್ಯಾಧಿದಾರರು :** ವಲಯ ಅರಣ್ಯಾಧಿಕಾರಿ, ಆನಂದಪುರಂ ವಲಯ, ಚೋರಡಿ.
(ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು, ಸಾಗರ)

**ಆರೋಪಿಗಳು :** ಯಾರೂ ಪತ್ತೆಯಾಗಿರುವುದಿಲ್ಲ.

**ಬಾಧ್ಯತೆದಾರರು :** ಯಾರೂ ಹಕ್ಕು ಬಾಧ್ಯತೆ ಅರ್ಜಿ ಸಲ್ಲಿಸಿರುವುದಿಲ್ಲ.

**ಪ್ರಸ್ತಾವನೆ:**

ದಿನಾಂಕ:19-01-2008ರಂದು ಆನಂದಪುರಂ ವಲಯದ ಗೌತಮಪುರ ಶಾಖೆಯ ವನಪಾಲಕರ ಮೊಬೈಲ್‌ಗೆ ಶಿಕಾರಿಪುರದಿಂದ ಶಿವಮೊಗ್ಗಕ್ಕೆ ಬೀಟೆ ನಾಟಾಗಳನ್ನು ಟೆಂಪೋ ಟ್ರಾವೆಲ್‌ನಲ್ಲಿ ಸಾಗಾಣಕೆ ಮಾಡುತ್ತಾರೆಂದು ಬಂದ ವರ್ತಮಾನದ ಮೇರೆಗೆ ವನಪಾಲಕರು ಮತ್ತು ಸಿಬ್ಬಂದಿಯವರು ಇಲಾಖಾ ಜೀಪು ನಂ.ಕೆಎ-15-ಜಿ-86ರಲ್ಲಿ ಶಿವಮೊಗ್ಗ ತಾಲ್ಲೂಕು ಕುಂಸಿ ಹೋಬಳಿಯ ಶಿಕಾರಿಪುರದಿಂದ ಚೋರಡಿಗೆ ಹೋಗುವ ರಸ್ತೆಯ ದೊಡ್ಡಹಳ್ಳದ ಸೇತುವೆ ಮೇಲೆ ಕಾಯುತ್ತಾ ಶಿಕಾರಿಪುರದಿಂದ ಬರುವ ವಾಹನಗಳನ್ನು ತಪಾಸಣೆ ಮಾಡುತ್ತಿರುವಾಗ ಒಂದು ವಾಹನ ಇಲಾಖೆಯವರಿಂದ ಸ್ವಲ್ಪ ದೂರದಲ್ಲಿ ನಿಲ್ಲಿಸಿ ವಾಹನದಲ್ಲಿದ್ದ 3 ಜನ ಆಸಾಮಿಗಳು ಕೆಳಗಿಳಿದು ಓಡಿಹೋಗಿರುತ್ತಾರೆ. ನಂತರ ವಾಹನವನ್ನು ಪರಿಶೀಲಿಸಲಾಗಿ ವಾಹನದಲ್ಲಿ 3 ಬೀಟೆ ನಾಟಾ ಇದ್ದು, ಈ ತುಂಡುಗಳ ಮೇಲೆ ಇಲಾಖೆಯ ಯಾವುದೇ ಛಾಪಾದ ಗುರುತಿರಲಿಲ್ಲ. ಇದು ಅಕ್ರಮ ಸಾಗಾಣಿಕೆ ಎಂದು ಪರಿಗಣಿಸಿ ವಾಹನ ಹಾಗೂ ನಾಟಾಗಳಿಗೆ ಕೆಂಪು ಬಣ್ಣದಿಂದ ಕ್ರಮಸಂಖ್ಯೆ ಕೊಟ್ಟು, ನಾಟಾಗಳನ್ನು

ಅಳತೆ ಮಾಡಿದಾಗ 3=0.411ಎಂ3 ಇದ್ದು, ನಾಟಾಗಳಿಗೆ KNFD-G-66-EE ಛಾಪಾದ ಗುರುತು ಹೊಡೆದು ವಾಹನ ನಂ.ಕಎ-01-ಎನ್-1687, ಛಾಸ್ಸಿಸ್ ನಂ. TF-804207-H-94 ಇಂಜಿನ್ ನಂ.28036 ಇದ್ದು ವಾಹನ ಮತ್ತು ನಾಟಾವನ್ನು ಪ್ರಥಮ ವರ್ತಮಾನ ವರದಿ, ಮಹಜರ್ ವರದಿ, ಜಪ್ತಿ ವರದಿಯೊಂದಿಗೆ ಇಲಾಖಾ ಪರ ಜಪ್ತು ಮಾಡಿ ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 62, 71(ಎ), 104(ಎ) ಮತ್ತು ಕರ್ನಾಟಕ ಅರಣ್ಯ ಕಾನೂನು 1969 ಉಪನಿಯಮ 144, 165ರ ಪ್ರಕಾರ ಆನಂದಪುರಂ ವಲಯದ ಅ.ಮೊ.ಸಂ. 108/07-08ನ್ನು ದಾಖಲಿಸಿ, ವಾಹನವನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಇವರ ಸಮಕ್ಷಮ ಹಾಜರುಪಡಿಸಿರುತ್ತಾರೆ. ನಂತರ ಈ ವಾಹನವನ್ನು ಸುರಕ್ಷತೆಗಾಗಿಡಲು ವಲಯ ಅರಣ್ಯಾಧಿಕಾರಿ, ಸರ್ಕಾರಿ ನಾಟಾ ಸಂಗ್ರಹಾಲಯ, ಸಾಗರ ಇವರ ಸುಪರ್ಧಿಗೆ ಕೊಡಲು ದಿನಾಂಕ:02-02-2008ರಂದು ಆದೇಶವಾಗಿರುತ್ತದೆ.

ಈ ವಾಹನದ ಬಿ ಪ್ರತಿಯನ್ನು ಈ ನ್ಯಾಯಾಲಯಕ್ಕೆ ಒದಗಿಸಲು ಪ್ರಾದೇಶಿಕ ಸಾರಿಗೆ ಅಧಿಕಾರಿ, ಕೋರಮಂಗಲ (ಕೇಂದ್ರ), ಬೆಂಗಳೂರು ಇವರಿಗೆ ಪತ್ರಸಂಖ್ಯೆ: ಬಿ3:ಅಮೊ:ವಾಹನ-23/07-08 ದಿನಾಂಕ:19-03-2008ರಲ್ಲಿ ಪತ್ರ ಬರೆದು ಕೋರಲಾಗಿತ್ತು. ಅವರಿಂದ ಯಾವುದೇ ಮಾಹಿತಿ 3 ತಿಂಗಳಾದರೂ ಬಾರದೇ ಇದ್ದಾಗ ಪುನಃ ದಿನಾಂಕ:07-06-2008ರಂದು ಜ್ಞಾಪನಾ ಪತ್ರ ಬರೆದಾಗ ಅವರಿಂದ ದಿನಾಂಕ:27-06-2008ರಂದು ಈ ವಾಹನದ ಬಿ ಪ್ರತಿಯನ್ನು ಈ ನ್ಯಾಯಾಲಯಕ್ಕೆ ಒದಗಿಸಿರುತ್ತಾರೆ. ಬಿ ಪ್ರತಿಯಲ್ಲಿ ವಸಂತ ಕೋಕಿಲ ಬಿ.ಬಿ. ಬಿನ್ ರಾಜಶೇಖರ್, ಬಿ.ಎಸ್., ಮನೆ ನಂ.11/01, ಎಸ್.ಪಿ. ರಸ್ತೆ, ವಿ.ವಿ. ಪುರಂ, ಬೆಂಗಳೂರು ಇವರು ಆರ್.ಸಿ. ಮಾಲೀಕರೆಂದು ನಮೂದಿಸಿದ್ದರು. ಅದರಂತೆ ಆರ್.ಸಿ. ಮಾಲೀಕರಿಗೆ ಕರ್ನಾಟಕ ಅರಣ್ಯ ಕಾಯ್ದೆ 1963 ಸೆಕ್ಷನ್ 71(ಬಿ) (1)ರ ಪ್ರಕಾರ ನೋಟೀಸನ್ನು ದಿನಾಂಕ:14-07-2008ರಂದು ಈ ನ್ಯಾಯಾಲಯದಿಂದ 30 ದಿನಗಳ ಕಾಲಾವಕಾಶ ನೀಡಿ ವಾಹನದ ದಾಖಲೆಗಳನ್ನು ಈ ನ್ಯಾಯಾಲಯಕ್ಕೆ ಹಾಜರುಪಡಿಸಲು ತಿಳಿಸಿ ನೋಂದಣಿ ಅಂಚೆ ಮೂಲಕ ಜಾರಿ ಮಾಡಿದ ಲಕೋಟೆ ಮೇಲೆ "Left" ಎಂದು ಅಂಚೆ ಇಲಾಖೆಯವರು ನಮೂದಿಸಿ ಹಿಂದಿರುಗಿಸಿರುತ್ತಾರೆ.

ಈ ನಡುವೆ ಪ್ರಾದೇಶಿಕ ಸಾರಿಗೆ ಅಧಿಕಾರಿಯಿಂದ ಬಿ ಪ್ರತಿಯನ್ನು ಈ ನ್ಯಾಯಾಲಯಕ್ಕೆ ಒದಗಿಸುವುದರಲ್ಲಿ ವಿಳಂಬವಾಗಿದ್ದರಿಂದ ಈ ವಾಹನ ಜಪ್ತಾದ ಬಗ್ಗೆ ಪತ್ರಿಕಾ ಪ್ರಕಟಣೆಯನ್ನು ಬಿ3:ಅಮೊ:ವಾಹನ-01/08-09 ದಿ:10-04-2008 ರಂದು ಹೊರಡಿಸಿ 30 ದಿನಗಳ ಕಾಲಾವಕಾಶ ನೀಡಿ ಈ ವಾಹನದ ದಾಖಲೆಗಳೊಂದಿಗೆ ಸಮಜಾಯಿಷಿಯನ್ನು ಈ ನ್ಯಾಯಾಲಯಕ್ಕೆ ಸಲ್ಲಿಸಲು ಹೊರಡಿಸಿ ಪ್ರತಿಯನ್ನು ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯ ಪತ್ರ ವಿಭಾಗ, ಸರ್ಕಾರಿ ಮುದ್ರಣಾಲಯ, ಬೆಂಗಳೂರು ಮತ್ತು ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ಬೆಂಗಳೂರು ಇವರಿಗೆ ಕಳುಹಿಸಿ ರಾಜ್ಯ ಗೆಜೆಟ್ ಪತ್ರಿಕೆಯಲ್ಲಿ ಮತ್ತು ಪ್ರಚಲಿತ ದಿನಪತ್ರಿಕೆಯಲ್ಲಿ ಪ್ರಕಟಿಸಲು ಕೋರಲಾಯಿತು. ಈ ಪ್ರಕಟಣೆಯು ದಿನಾಂಕ:17-04-2008 ರಂದು ರಾಜ್ಯ ಗೆಜೆಟ್ ಪತ್ರಿಕೆಯಲ್ಲಿ ಪ್ರಕಟಗೊಂಡಿರುತ್ತದೆ. ಇಲ್ಲಿಯವರೆವಿಗೂ ಆರ್.ಸಿ. ಮಾಲೀಕರಾಗಲೀ, ಅವರ ಪರ ವಕೀಲರಾಗಲೀ ಈ ನ್ಯಾಯಾಲಯಕ್ಕೆ ಈ ವಾಹನ ಬಿಡಿಸಿಕೊಳ್ಳಲು ಅರ್ಜಿ ಸಲ್ಲಿಸಿರುವುದಿಲ್ಲ.

ವಲಯ ಅರಣ್ಯಾಧಿಕಾರಿ, ಆನಂದಪುರಂ ವಲಯ, ಚೋರಡಿ ಇವರು ಈ ನ್ಯಾಯಾಲಯಕ್ಕೆ ವಿಚಾರಣಾ ವರದಿ ಸಲ್ಲಿಸಿ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಮತ್ತು ಆರೋಪಿ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಲು ಅನುಮತಿ ಕೋರಿರುತ್ತಾರೆ. ಆರೋಪಿ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಲು ಈ ನ್ಯಾಯಾಲಯದಿಂದ ಅನುಮತಿ ನೀಡಲಾಗಿರುತ್ತದೆ.

ಸಹಾಯಕ ಸರ್ಕಾರಿ ಅಭಿಯೋಜಕರು ದಿನಾಂಕ:31-01-2009ರಂದು ವಾದ ಮಂಡಿಸಿ ಈ ವಾಹನದಲ್ಲಿ ಬೀಟೆ ನಾಟಾಗಳನ್ನು ಸಾಗಿಸಿದ ಬಗ್ಗೆ ವಲಯ ಅರಣ್ಯಾಧಿಕಾರಿ, ಆನಂದಪುರಂ ವಲಯ, ಚೋರಡಿ ಇವರು ಮಹಜರ್ ಪ್ರತಿ ಮತ್ತು ಪ್ರಥಮ ವರ್ತಮಾನ ವರದಿ, ಜಪ್ತಿ ವರದಿಯನ್ನು ಈ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದರಿಂದ ಈ ವಾಹನದಲ್ಲಿ ಬೀಟೆ ನಾಟಾಗಳನ್ನು ಅಕ್ರಮವಾಗಿ ಸಾಗಿಸಿರುವುದು ಸಾಬೀತಾಗಿರುತ್ತದೆ. ಆರ್.ಸಿ. ಮಾಲೀಕರಿಗೆ ನೋಟೀಸ್ ನೀಡಿದ್ದರೂ ಸಹ ವಾಹನ ಮಾಲೀಕರಾಗಲೀ ಅಥವಾ ಅವರ ಪ್ರತಿನಿಧಿಗಳಾಗಲೀ ಈ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿರುವುದಿಲ್ಲ. ಆದ್ದರಿಂದ ವಾಹನ ಮತ್ತು ಬೀಟೆ ನಾಟಾಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕೋರಿರುತ್ತಾರೆ.

ಈ ಪ್ರಕರಣದ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ, ಅಭಿಯೋಜಕರ ವಾದವನ್ನು ಕೇಳಿ ಕರ್ನಾಟಕ ಅರಣ್ಯ ಕಾಯ್ದೆ 1963 ಉಪನಿಯಮ 71(ಬಿ)(1)ರ ಪ್ರಕಾರ ಆರ್.ಸಿ. ಮಾಲೀಕರಿಗೆ ನೋಟೀಸ್ ಜಾರಿ ಮಾಡಿದ್ದು ಹಾಗೂ ಈ ವಾಹನದ ಬಗ್ಗೆ ಪತ್ರಿಕಾ ಪ್ರಕಟಣೆ ಹೊರಡಿಸಿರುತ್ತದೆ. ಈ ಪ್ರಕಟಣೆಯು ರಾಜ್ಯ ಗೆಜೆಟ್‌ನಲ್ಲಿ ಪ್ರಕಟಗೊಂಡು 30 ದಿನಗಳಾದರೂ ಯಾರೂ ಹಕ್ಕು ಬಾಧ್ಯತೆಯ ಅರ್ಜಿಯನ್ನು ಈ ನ್ಯಾಯಾಲಯಕ್ಕೆ ಸಲ್ಲಿಸದೇ ಇದ್ದುದ್ದರಿಂದ ಈ ಪ್ರಕರಣದ ವಿದ್ಯಮಾನಗಳನ್ನು ಅರಿತು ಈ ಕೆಳಗಿನಂತೆ ಆದೇಶ ಹೊರಡಿಸಿದೆ.

ಆದೇಶ

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಶ್ರೀ ಮಹೇಶ್ ಬಿ. ಶಿರೂರ್, ಭಾ.ಅ.ಸೇ., ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಆದ ನಾನು, ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 71(ಎ) ರಿಂದ (ಜಿ)ಪ್ರಕಾರ ಹಾಗೂ ಈವರೆಗಿನ ತಿದ್ದುಪಡಿ ಅನುಸಾರ ವಲಯ ಅರಣ್ಯಾಧಿಕಾರಿ, ಆನಂದಪುರಂ ವಲಯ, ಚೋರಡಿ ಇವರು ಜಪ್ತು ಮಾಡಿದ ವಾಹನ ಟೆಂಪೋಟ್ರಾವೆಲ್ಸ್ ನಂ.ಕೆಎ-01-ಎನ್-1687 (ಛಾಸ್ಸಿಸ್ ನಂ.TF-804207-H-94 ಇಂಜಿನ್ ನಂ.28036) ನ್ನು ಕರ್ನಾಟಕ ಸರ್ಕಾರದ ಸಂಪತ್ತು ಆದ ಬೀಟೆ ನಾಟಾ 3=0.411ಎಂ3ನ್ನು ಅಕ್ರಮವಾಗಿ ಸಾಗಿಸಲು ಉಪಯೋಗಿಸಿರುವುದರಿಂದ ವಾಹನ ಟೆಂಪೋಟ್ರಾವೆಲ್ಸ್ ನಂ.ಕೆಎ-01-ಎನ್-1687 (ಛಾಸ್ಸಿಸ್ ನಂ.TF-804207-H-94 ಇಂಜಿನ್ ನಂ.28036) ಮತ್ತು ವಾಹನದಲ್ಲಿದ್ದ ಬೀಟೆ ನಾಟಾ 3=0.411ಎಂ3ನ್ನು ಅಂತಿಮವಾಗಿ ಮುಟ್ಟುಗೋಲು ಹಾಕಿಕೊಂಡಿರುತ್ತೇನೆ. ಮುಟ್ಟುಗೋಲು ಹಾಕಿಕೊಂಡ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಅನುಕೂಲಕರವಾಗಿ ವಿಲೇ ಮಾಡಲು ಆದೇಶಿಸಿದೆ. ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕಯಂತ್ರದಲ್ಲಿ ಮುದ್ರಿಸಿ, ನಂತರ ಸರಿಪಡಿಸಿ ದಿನಾಂಕ:07-02-2009 ರಂದು ನನ್ನ ಸಹಿ ಹಾಗೂ ಮೊಹರಿನೊಂದಿಗೆ ತೆರೆದ ನ್ಯಾಯಾಲಯದಲ್ಲಿ ಆದೇಶಿಸಿದ್ದೇನೆ. ಈ ಆದೇಶ ಹೊರಡಿಸಿದ 30 (ಮೂವತ್ತು) ದಿನಗಳ ಒಳಗಾಗಿ ಯಾರೂ ಈ ನ್ಯಾಯಾಲಯಕ್ಕೆ ಹಕ್ಕುಬಾಧ್ಯತೆ ಅರ್ಜಿ ಸಲ್ಲಿಸದೇ ಹೋದಲ್ಲಿ ಇದೇ ಅಂತಿಮ ಆದೇಶವಾಗಿರುತ್ತದೆ.

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ
ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ

ಪಿ.ಆರ್.159

**ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಇವರ ನ್ಯಾಯಾಲಯದಲ್ಲಿ**

**ಬಿ3:ಅಮೊ:ವಾಹನ-02/05-06, ದಿನಾಂಕ:31ನೇ ಜನವರಿ, 2009**

**ಉಪಸ್ಥಿತರು :** ಶ್ರೀ ಮಹೇಶ್ ಬಿ. ಶಿರೂರ್ ಭಾ.ಅ.ಸೇ.,
ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ.

**ಪಿರ್ಯಾಧಿದಾರರು :** ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಶಿಕಾರಿಪುರ.
(ಸಹಾಯಕ ಸರ್ಕಾರಿ ಅಭಿಯೋಜಕರು, ಸಾಗರ)

**ಬಾಧ್ಯತೆದಾರರು :** ಶ್ರೀ ಸೈಯದ್ ಮುಜಿಬುಲ್ಲಾ ಬಿನ್ ಸೈಯದ್ ರವೂಬ್ ಸಾಬ್, 26 ವರ್ಷ, ನವಲೆ ಅಂಚೆ, ಶಾಂತಿನಗರ, ಶಿವಮೊಗ್ಗ (ಶ್ರೀ ಟಿ.ಬಿ. ಮಂಜುನಾಥ ಶೆಟ್ಟಿ, ವಕೀಲರು, ಸಾಗರ)

**ಪ್ರಸ್ತಾವನೆ:**

ದಿನಾಂಕ:10-05-2005ರಂದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಶಿಕಾರಿಪುರ ಮತ್ತು ಸಿಬ್ಬಂದಿಯವರು ಶಿಕಾರಿಪುರ ತಾಲ್ಲೂಕು ಅಂಜನಾಪುರ ಹೋಬಳಿ, ಶಿಕಾರಿಪುರ-ಶಿವಮೊಗ್ಗ ರಸ್ತೆಯಲ್ಲಿ ಇಲಾಖಾ ವಾಹನ ಜೀಪು-ಕೆಎ-14-ಜಿ-463ರಲ್ಲಿ ಹಾರೇಗೊಪ್ಪ ಕ್ಯಾಂಪ್ ವಸತಿ ಗೃಹದ ಹತ್ತಿರ ಗಸ್ತುಮಾಡುತ್ತಿರುವಾಗ ಶಿಕಾರಿಪುರ ಕಡೆಯಿಂದ ಒಂದು ವಾಹನ ಬರುತ್ತಿರುವುದನ್ನು ನಿಲ್ಲಿಸಲು ಸೂಚಿಸಿದಾಗ ನಿಲ್ಲಿಸದೆ ವೇಗವಾಗಿ ಓಡಿಸಿಕೊಂಡು ಹೋದ ವಾಹನವನ್ನು ಇಲಾಖಾ ವಾಹನದಿಂದ ಬೆನ್ನಟ್ಟಿ ಮೇಲಿನ ಸ್ಥಳದಲ್ಲಿ ನಿಲ್ಲಿಸಿದಾಗ ವಾಹನದಲ್ಲಿದ್ದ ಆಸಾಮಿಗಳು ತಪ್ಪಿಸಿಕೊಂಡಿರುತ್ತಾರೆ. ನಂತರ ವಾಹನದ ಬಳಿ ಬಂದು ಪಂಚರ ಸಮಕ್ಷಮ ಮಹಜರ್ ಕ್ರಮ ಜರುಗಿಸಲಾಯಿತು. ಬಿಳಿ ಬಣ್ಣದ ಮಾರುತಿ ಓಮ್ನಿ ನಂ.ಕೆಎ-14-ಎಂ-3918 ಆಗಿದ್ದು, ವಾಹನದ ಒಳಗೆ ಸೀಟಿನ ಅಡಿಯಲ್ಲಿ ಬೀಟೆ ಜಾತಿಯ ಟರ್ನಿಂಗ್ ಮಾಡಿದ ಸೋಫಾ, ಕುರ್ಚಿಗಳ ಬಿಡಿ ಭಾಗಗಳಿದ್ದು, ಇವುಗಳಿಗೆ ರಹದಾರಿ ಇಲ್ಲದ ಕಾರಣ ಇದು ಅಕ್ರಮ ಸಾಗಾಣಿಕೆ ಎಂದು ಪರಿಗಣಿಸಿ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಪ್ರಥಮ ವರ್ತಮಾನ ವರದಿ, ಜಪ್ತಿ ವರದಿ, ಮಹಜರ್ ವರದಿಯೊಂದಿಗೆ ಇಲಾಖಾ ಪರ ವಶಪಡಿಸಿಕೊಂಡು, ಈ ಸೈಜುಗಳನ್ನು ಅಳತೆ ಮಾಡಿ ಕ್ರಮಸಂಖ್ಯೆ ಕೊಟ್ಟು ಒಟ್ಟು 54=0.188ಎಂ3 ಇದ್ದು, ಕರ್ನಾಟಕ ಅರಣ್ಯ ಕಾಯ್ದೆ 1963, ಸೆಕ್ಷನ್ 24, 50ಕೆ, 62, 71(ಎ ರಿಂದ ಜಿ), 104 (ಎ) ಮತ್ತು ಕರ್ನಾಟಕ ಅರಣ್ಯ ಕಾನೂನು 1969 ನಿಯಮ 144, 163, 165ರ ಪ್ರಕಾರ ಅರಣ್ಯ ಸಂಚಾರಿ ದಳ, ಶಿಕಾರಿಪುರ ಕಛೇರಿಯ ಅರಣ್ಯ ಮೊಕದ್ದಮೆ ಸಂಖ್ಯೆ: 13/05-06ನ್ನು ದಾಖಲಿಸಿ ನಂತರ ವಾಹನವನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಸಾಗರ ವಿಭಾಗ, ಸಾಗರ ಇವರ ಸಮಕ್ಷಮ ಹಾಜರುಪಡಿಸಿರುತ್ತಾರೆ. ನಂತರ ಈ ವಾಹನವನ್ನು ಸುರಕ್ಷತೆಗಾಗಿಡಲು ವಲಯ ಅರಣ್ಯಾಧಿಕಾರಿ, ಸರ್ಕಾರಿ ನಾಟಾ ಸಂಗ್ರಹಾಲಯ, ಸಾಗರ ಇವರ ಸುಪರ್ದಿಗೆ ಕೊಡಲು ಈ ನ್ಯಾಯಾಲಯದಿಂದ ಆದೇಶವಾಗಿರುತ್ತದೆ.

ನಂತರ ಈ ವಾಹನದ ಬಗ್ಗೆ ಹೆಚ್ಚಿನ ಪ್ರಕಟಣೆಯನ್ನು 30 ದಿನ ಕಾಲಾವಕಾಶ ನೀಡಿ ಪತ್ರ ಸಂಖ್ಯೆ: ಅಮೊ:ಸಿಆರ್-03-/05-06 ದಿನಾಂಕ:23-05-2005ರಂದು ಹೊರಡಿಸಿ ಪ್ರತಿಯನ್ನು ಸಂಕಲನಾಧಿಕಾರಿ, ಕರ್ನಾಟಕ ರಾಜ್ಯ ಪತ್ರ ವಿಭಾಗ, ಬೆಂಗಳೂರು ಮತ್ತು ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ಬೆಂಗಳೂರು ಇವರಿಗೆ ಕಳುಹಿಸಿದೆ. ದಿನಾಂಕ:01-06-2005ರಂದು ಮನೋಭೂಮಿ ಮತ್ತು ದಿನಾಂಕ:03-06-2005ರಂದು ಸಾಗರ ಸಂದೇಶ ದಿನಪತ್ರಿಕೆಯಲ್ಲಿ ದಿನಾಂಕ:09-06-2005ರಂದು ರಾಜ್ಯ ಗೆಜೆಟ್ ಪತ್ರಿಕೆಯಲ್ಲಿ ಪ್ರಕಟಣೆ ಪ್ರಕಟಗೊಂಡಿರುತ್ತದೆ.

ಪ್ರಾದೇಶಿಕ ಸಾರಿಗೆ ಅಧಿಕಾರಿ, ಶಿವಮೊಗ್ಗ ಇವರು ಈ ವಾಹನದ ಬಿ ಪ್ರತಿಯನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಶಿಕಾರಿಪುರ ಇವರ ಮುಖಾಂತರ ಈ ನ್ಯಾಯಾಲಯಕ್ಕೆ ದಿನಾಂಕ:19-12-2006ರಂದು ಒದಗಿಸಿರುತ್ತಾರೆ. ಈ ಬಿ ಪ್ರತಿಯಲ್ಲಿ ನಮೂದಿಸಿದ ಆರ್.ಸಿ. ಮಾಲೀಕರಾದ ಶ್ರೀ ಸೈಯದ್ ಮುಜಿಬುಲ್ಲಾ ಬಿನ್ ಸೈಯದ್ ರವೂಬ್ ಸಾಬ್, ನವಲೆ ಅಂಚೆ, ಶಾಂತಿನಗರ, ಶಿವಮೊಗ್ಗ ಇವರು ಮನವಿಯನ್ನು ತಯಾರಿಸಿ ಶ್ರೀ ಟಿ.ಬಿ. ಮಂಜುನಾಥ ಶೆಟ್ಟಿ, ವಕೀಲರು ಇವರ ಮುಖಾಂತರ ಈ ನ್ಯಾಯಾಲಯಕ್ಕೆ ದಿನಾಂಕ:15-06-2005ರಂದು ಸಲ್ಲಿಸಿರುತ್ತಾರೆ. ಆರ್.ಸಿ. ಮಾಲೀಕರಿಗೆ ದಿನಾಂಕ:25-06-2005ರಂದು ಕರ್ನಾಟಕ ಅರಣ್ಯ ಕಾಯ್ದೆ 1963 ಸೆಕ್ಷನ್ 71(ಬಿ) (1)ರ ಪ್ರಕಾರ ಕಾರಣ ಕೇಳಿ ಪತ್ರವನ್ನು ನೋಂದಣಿ ಅಂಚೆ ಮೂಲಕ ಜಾರಿ ಮಾಡಿರುವುದನ್ನು ಅಂಚೆ ಇಲಾಖೆಯವರು ಈ ಲಕೋಟೆ ಮೇಲೆ "Not Known" ಎಂದು ನಮೂದಿಸಿ ಲಕೋಟೆ ಹಿಂದಿರುಗಿಸಿರುತ್ತಾರೆ.

ಆರ್.ಸಿ. ಮಾಲೀಕರು ಈ ವಾಹನವನ್ನು ಮಧ್ಯಂತರ ಸುಪರ್ದಿಗೆ ಬಿಟ್ಟುಕೊಡಲು ಕೋರಿದ ಅರ್ಜಿಯನ್ನು ದಿನಾಂಕ:01-12-2007ರಂದು ತಿರಸ್ಕರಿಸಿ ಆದೇಶವಾಗಿದೆ.

ಪ್ರಾಸಿಕ್ಯೂಷನ್ ಸಾಕ್ಷಿಯಾದ ಶ್ರೀ ಎಂ.ಆರ್. ಮಂಜುನಾಥ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಅರಸೀಕೆರೆ ಇವರನ್ನು ದಿನಾಂಕ:02-02-2008ರಂದು ಕರೆಸಿ ಸತ್ಯ ಪ್ರತಿಜ್ಞೆ ಭೋದಿಸಲಾಯಿತು. ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದ "ನಾನು ಅಕ್ಟೋಬರ್ 2003 ರಿಂದ ಜೂನ್ 2005ರವರೆಗೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯಾಗಿ ಅರಣ್ಯ ಸಂಚಾರಿ ದಳ, ಶಿಕಾರಿಪುರದಲ್ಲಿ ಕೆಲಸ ನಿರ್ವಹಿಸಿರುತ್ತೇನೆ. 10-05-2005ರಂದು ನಾನು ಸಿಬ್ಬಂದಿಯೊಂದಿಗೆ ನಮ್ಮ ವ್ಯಾಪ್ತಿಯಲ್ಲಿ ಗಸ್ತು ಮಾಡುತ್ತಾ ಹಾರೆಗೊಪ್ಪದ ಬಳಿ ಕಾಯುತ್ತಿದ್ದಾಗ ಸುಮಾರು ಮಧ್ಯಾಹ್ನ 2-00 ಸಮಯದಲ್ಲಿ ಶಿಕಾರಿಪುರದ ಕಡೆಯಿಂದ ಒಂದು ಬಿಳಿಯ ಮಾರುತಿ ಓಮ್ನಿ ವಾಹನ ಬಂದಿತು. ಅನುಮಾನ ಬಂದು ನಿಲ್ಲಿಸಲು ಸೂಚಿಸಿದಾಗ ಸದರಿ ವಾಹನ ಚಾಲಕನು ವಾಹನ ನಿಲ್ಲಿಸದೆ ಶಿವಮೊಗ್ಗದ ಕಡೆ ಹೋದಾಗ ನಾವು ಇಲಾಖಾ ವಾಹನದಲ್ಲಿ ಬೆನ್ನಟ್ಟಿ ಹಾರೇಗೊಪ್ಪದಿಂದ 2 ಕಿ.ಮೀ.ದೂರದಲ್ಲಿ ಕ್ಯಾಂಪ್ ಹತ್ತಿರ ತಡೆದು ನಿಲ್ಲಿಸಿದೆವು. ಅದರಲ್ಲಿದ್ದ 3 ಜನ ವ್ಯಕ್ತಿಗಳು ಓಡಿಹೋಗಿದ್ದು, ಹಿಡಿಯಲು ಪ್ರಯತ್ನಿಸಿದರೂ ಸಿಕ್ಕಿರುವುದಿಲ್ಲ. ವಾಹನ ಸಂಖ್ಯೆ: ಕೆಎ-14-ಎಂ-3918 ಆಗಿದ್ದು, ವಾಹನವನ್ನು ಪರಿಶೀಲಿಸಿದಾಗ ಅದರ ಸೀಟಿನ ಅಡಿಯಲ್ಲಿ ಕೊಯ್ದ 54 ಬೀಟೆ ಸೈಜುಗಳಿರುವುದು ಕಂಡುಬಂದಿತು. ಅವುಗಳ ಮೇಲೆ ಯಾವುದೇ ಇಲಾಖಾ ಛಾಪಾವಿರಲಿಲ್ಲ. ಇದನ್ನು ಪಂಚಾಯ್ತಿದಾರರ ಸಮಕ್ಷಮ ಸದರಿ ತುಂಡುಗಳ ಅಳತೆ ಮಾಡಿ ಕ್ರಮಸಂಖ್ಯೆ ಕೊಟ್ಟು ವಾಹನವನ್ನು ಮತ್ತು ಸದರಿ ತುಂಡುಗಳನ್ನು ಮಹಜರ್ ಅಡಿಯಲ್ಲಿ ಪಂಚರ ಸಮಕ್ಷಮ ಅಮಾನತ್ತು ಪಡಿಸಿಕೊಂಡೆವು. ದೂರವಾಣಿ ಮೂಲಕ ಕಛೇರಿಯನ್ನು ಸಂಪರ್ಕಿಸಿ ಮೊಕದ್ದಮೆ ಸಂಖ್ಯೆಯನ್ನು ಪಡೆಯಲಾಗಿತ್ತು. ನಂತರ ವಾಹನವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿಗೆ ಮತ್ತು ತುಂಡುಗಳ ಶಿಕಾರಿಪುರ ನಾಟಾ ಸಂಗ್ರಹಾಲಯಕ್ಕೆ ಸಾಗಿಸಲಾಯಿತು. ಮುಂದಿನ ತನಿಖೆಯನ್ನು ಕೃಷ್ಣಮೂರ್ತಿ, ವನಪಾಲಕರಿಗೆ ಹಸ್ತಾಂತರಿಸಿದ್ದು, ಅವರ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ಜಪ್ತು ವರದಿಯನ್ನು ತಯಾರಿಸಿರುತ್ತಾರೆ. ಸದರಿ ವಾಹನವನ್ನು ಅಕ್ರಮ ಬೀಟೆ ಸಾಗಿಸಲು ಉಪಯೋಗಿಸಿರುವುದರಿಂದ ವಾಹನವನ್ನು ಮುಟ್ಟುಗೋಲು ಹಾಕಿಕೊಳ್ಳಲು ಕೋರುತ್ತೇನೆ. ಆ ದಿನ ಮಾಡಿದ ಮಹಜರ್ ಈಗ ನೋಡುತ್ತಿದ್ದು ನಿಪಿ-1 ಎಂದು, ನನ್ನ ಸಹಿಯನ್ನು ನಿಪಿ-1ಎ ಎಂದು ಗುರ್ತಿಸಲಾಯಿತು. ಆ ದಿನ ಸಲ್ಲಿಸಿದ ಪ್ರಥಮ ವರ್ತಮಾನ ವರದಿಯನ್ನು ಈಗ ನೋಡುತ್ತಿದ್ದು ನಿಪಿ-2 ಎಂದು, ಜಪ್ತಿವರದಿಯನ್ನು ನಿಪಿ-3 ಎಂದು, ಆ ಬಗ್ಗೆ ವಿಚಾರಣಾ ವರದಿಯನ್ನು ನಾನೇ ತಯಾರಿಸಿದ್ದು, ಅದನ್ನು ನಿಪಿ-4 ಎಂದು, ಅಮಾನತ್ತುಪಡಿಸಿದ ವಾಹನದ ಬಿ ಪ್ರತಿಯನ್ನು ನಿಪಿ-5 ಎಂದು ಗುರ್ತಿಸಲಾಯಿತು.

ಪಾಟೀ ಸವಾಲು: ಟಿ.ಬಿ.ಎಂ. ವಕೀಲರಿಂದ- ನಾನು ಜಪ್ತುಮಾಡಿದ ವಸ್ತುಗಳು ಸೋಫಾ ಮತ್ತು ಕುರ್ಚಿಗಳ ಬಿಡಿಭಾಗಗಳಾಗಿದ್ದು, ಅವುಗಳೆಲ್ಲವೂ ಸಹ ಸಿದ್ಧ ವಸ್ತುಗಳಾಗಿರುತ್ತವೆ. ಎಷ್ಟು ಸೋಫ ಮತ್ತು ಎಷ್ಟು ಕುರ್ಚಿ ಎಂದು ಈಗ ಹೇಳಲು ಬರುವುದಿಲ್ಲ. ಸದರಿ ಕುರ್ಚಿ ಮತ್ತು ಸೋಫಾ ಬಿಡಿಭಾಗಗಳನ್ನು ಯಾವ ಸಾಮಿಲ್‌ನಿಂದ ಖರೀದಿ ಮಾಡಿದ್ದರು ಮತ್ತು ಯಾವ ಟರ್ನಿಂಗ್ ಮೆಷಿನ್‌ನಿಂದ ಟರ್ನಿಂಗ್ ಮಾಡಿದ್ದರೆಂದು ನನಗೆ ಗೊತ್ತಿರುವುದಿಲ್ಲ. ಬೀಟೆ ಮರವನ್ನು ಖಾಸಗಿ ಜಮೀನಿನಲ್ಲೂ ಸಹ ಬೆಳೆಯುವುದು ನಿಜವಿರುತ್ತದೆ. ನಾವು ಜಪ್ತು ಮಾಡಿದ ವಾಹನವು ಯಾವ ಊರಿನಿಂದ ಬಂದಿತ್ತು ಎಂಬುದು ನನಗೆ ತಿಳಿದಿರುವುದಿಲ್ಲ. ಸದರಿ ವಾಹನವನ್ನು ಆನಂದಪುರದ ಮುಜಬುಲ್ಲ ಎಂಬುವವರ ಅಣ್ಣನ ಮನೆಯ ಮುಂದೆ ನಿಲ್ಲಿಸಿದ್ದು, ಕಳುವಾದ ಬಗ್ಗೆ ನನಗೆ ತಿಳಿದಿರುವುದಿಲ್ಲ. ಸದರಿ ವಾಹನದ ಮೇಲೆ ಮದ್ರಾಸ್ ವಿಕ್ರಮ ಫೈನಾನ್ಸ್ ಎಂಬುವವರು 40,000/- ಹಣವನ್ನು ಸಾಲ ಕೊಟ್ಟ ಬಗ್ಗೆ ನನಗೆ ತಿಳಿದಿರುವುದಿಲ್ಲ. ಸದರಿ ವಾಹನದ ಮೇಲಿರುವ ಹಣವನ್ನು ಸಕಾಲದಲ್ಲಿ ಮರುಪಾವತಿ ಮಾಡದೇ ಇರುವುದರಿಂದ ಸಾಲ ಕೊಟ್ಟ ಫೈನಾನ್ಸ್ ಕಂಪನಿಯವರು ಪದೇ ಪದೇ ಸದರಿ ವಾಹನವನ್ನು ತೆಗೆದುಕೊಂಡು ಹೋಗುವುದು ನನಗೆ ತಿಳಿಯದ ವಿಷಯ. ದಿನಾಂಕ:10-05-2005ರ ಬೆಳಿಗ್ಗೆ ಆನಂದಪುರದ ಮನೆಯ ಮುಂದೆ ನಿಲ್ಲಿಸಿದ್ದ ವಾಹನವು ಇಲ್ಲದೇ ಇರುವುದನ್ನು ನೋಡಿ ಸಾಲ ಕೊಟ್ಟ ಹಣಕಾಸು ಸಂಸ್ಥೆಯವರೇ ತೆಗೆದುಕೊಂಡು ಹೋಗಿರಬಹುದೆಂದು ಊಹಿಸಿರುವುದು ಸಹ ನನಗೆ ತಿಳಿದಿರುವುದಿಲ್ಲ. ದಿನಾಂಕ:01-06-2005ರಲ್ಲಿ ಸದರಿ ವಾಹನವು ಜಪ್ತಾದ ಬಗ್ಗೆ ಮನೋಭೂಮಿ ಎಂಬ ಸ್ಥಳೀಯ ಪತ್ರಿಕೆಯಲ್ಲಿ ಪ್ರಥಮ ಬಾರಿಗೆ ಜಾಹಿರಾತು ನೀಡಿದ್ದು ಸರಿಯಿರುತ್ತದೆ. ಪತ್ರಿಕೆಯಲ್ಲಿ ಜಾಹಿರಾತು ನೋಡಿದ ನಂತರ ಸದರಿ ವಾಹನದ ಮಾಲೀಕರಾದ ಶ್ರೀ ಸೈಯದ್

ಮುಜಿಬುಲ್ಲಾರವರು ದಿನಾಂಕ:15-06-2005ರಂದು ಸಾಗರ ಅರಣ್ಯ ಇಲಾಖೆಗೆ ಬಂದು ವಾಹನದ ಬಿಡುಗಡೆ ಬಗ್ಗೆ ಅರ್ಜಿ ಸಲ್ಲಿಸಿರುವುದು ನಿಜವಿರುತ್ತದೆ. ಸೈಯದ್ ಮುಜಿಬುಲ್ಲಾರವರನ್ನು ಇದುವರೆಗೆ ನಾನು ನೋಡಿರುವುದಿಲ್ಲ ಮತ್ತು ಅವರ ಪರಿಚಯವಿರುವುದಿಲ್ಲ. ಸದರಿ ಬೀಟೆ ಪ್ರಕರಣಕ್ಕೂ ಮತ್ತು ವಾಹನ ಮಾಲೀಕರಿಗೂ ಸಂಬಂಧವಿಲ್ಲವೆನ್ನುವುದು ನನಗೆ ತಿಳಿಯದ ವಿಷಯ. ಸದರಿ ವಾಹನವು ಮಾಡಿದ ಅಪರಾಧ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿಲ್ಲವೆನ್ನುವುದು ನನಗೆ ತಿಳಿದಿಲ್ಲ."

ಡಿಫೆನ್ಸ್ ಕಡೆ ಸಾಕ್ಷಿ ಹೇಳಿಕೆ ಪಡೆಯಲು ದಿನಾಂಕ:01-03-2008, 29-03-2008, 18-10-2008ರಂದು ಸಮಯ ನಿಗದಿಪಡಿಸಲಾಗಿತ್ತು. ಆದರೆ ಈ ದಿನಗಳಲ್ಲಿ ಆರ್.ಸಿ. ಮಾಲೀಕರು ಹಾಜರಾಗಿರುವುದಿಲ್ಲ. ಆದ್ದರಿಂದ ಆರ್.ಸಿ. ಮಾಲೀಕರಿಗೆ ಈ ಪ್ರಕರಣದಲ್ಲಿ ತಮ್ಮ ಹೇಳಿಕೆ ಹೇಳಲು ಆಸಕ್ತಿ ಇಲ್ಲವೆಂದು ಪರಿಗಣಿಸಿ ಮುಂದಿನ ಹಂತವಾದ ವಾದಕ್ಕೆ ದಿನಾಂಕವನ್ನು ದಿನಾಂಕ:09-11-2008ರಂದು ನಿಗದಿಪಡಿಸಲಾಯಿತು. ದಿನಾಂಕ:29-11-2008ರಂದು ಆರ್.ಸಿ. ಮಾಲೀಕರಾಗಲೀ, ಅವರ ಪರ ವಕೀಲರಾಗಲೀ ಹಾಜರಾಗಿರುವುದಿಲ್ಲ. ಡಿಫೆನ್ಸ್ ಕಡೆ ವಾದ ಏನೂ ಇಲ್ಲವೆಂದು ಪರಿಗಣಿಸಲಾಯಿತು. ಸಹಾಯಕ ಸರ್ಕಾರಿ ಅಭಿಯೋಜಕರು ವಾದ ಮಂಡಿಸಿ ಅರಣ್ಯ ಉತ್ಪನ್ನ ಕಳ್ಳಸಾಗಾಣಿಕೆ ಮಾಡಿರುವುದು ಪ್ರಾಸಿಕ್ಯೂಷನ್ ಕಡೆಯವರು ಈ ನ್ಯಾಯಾಲಯಕ್ಕೆ ಸಲ್ಲಿಸಿದ ದಾಖಲೆಗಳಿಂದ ಮತ್ತು ಸಾಕ್ಷಿ ಹೇಳಿಕೆಯಿಂದ ಸಾಬೀತಾಗಿದೆ. ಆದ್ದರಿಂದ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕೋರಿರುತ್ತಾರೆ.

ಈ ಪ್ರಕರಣದಲ್ಲಿ ವಾಸ್ತವಾಂಶ ಮತ್ತು ಕಾನೂನಿನ ವಸ್ತುಸ್ಥಿತಿ ಹಾಗೂ ಲಭ್ಯವಿದ್ದ ವಿಷಯ ಸಾಮಗ್ರಿಗಳ ತಳಹದಿಯ ಮೇಲೆ ಗಮನಿಸಿ ಪರಿಗಣಿಸಬೇಕಾದ ಅಂಶಗಳು ಈ ಕೆಳಗಿನಂತಿದೆ.

1) ಆರ್.ಸಿ. ಮಾಲೀಕರು ಹಾಗೂ ಅರ್ಜಿದಾರರು ಮಾರುತಿ ವ್ಯಾನ್ ಕೆಎ-14-ಎಂ-3918ರಲ್ಲಿ ಬೀಟೆ ಸೈಜ್ 54=0.188ಎಂ3 ಅನ್ನು ದಿನಾಂಕ:10-05-2005ರಂದು ಕಾನೂನಿನ ವಿರುದ್ಧವಾಗಿ ಸಾಗಿಸಲು ಉಪಯೋಗಿಸಲಾಗಿತ್ತೆ ಹಾಗೂ ಈ ರೀತಿ ಸಾಗಿಸುವ ಮುಖಾಂತರ ಅರಣ್ಯ ಅಪರಾಧವೆಸಗಿ ಕರ್ನಾಟಕ ಅರಣ್ಯ ಕಾಯಿದೆ ಮತ್ತು ನಿಯಮವನ್ನು ಉಲ್ಲಂಘಿಸಲಾಗಿದೆಯೇ?

2) ಕರ್ನಾಟಕ ಅರಣ್ಯ ವಿಧಿ 71(ಬಿ)(1)ರ ಪ್ರಕಾರ ವಾಹನದ ಮಾಲೀಕರಿಗೆ ಕಾರಣ ಕೇಳಿ ನೋಟೀಸ್ ನೀಡಲಾಗಿದೆಯೇ? ಹಾಗೂ ಮಾಲೀಕರವರಿಗೆ ಅವರ ಅಹವಾಲನ್ನು ಮಂಡಿಸಿ ಸಮರ್ಥಿಸಿಕೊಳ್ಳಲು ಸಾಕಷ್ಟು ಅವಕಾಶವನ್ನು ನೀಡಲಾಗಿದೆಯೇ?

3) ವಾಹನದ ಮಾಲೀಕರು ಅಥವಾ ಅವರ ಕೆಲಸಗಾರರು ಅಥವಾ ಅವರ ಪ್ರತಿನಿಧಿಗಳು ಮಾರುತಿ ವ್ಯಾನಿನಲ್ಲಿ ಅಕ್ರಮವಾಗಿ ಸರ್ಕಾರದ ಸ್ವತ್ತಾದ ಬೀಟೆ ಸೈಜ್‌ಗಳನ್ನು ಸಾಗಿಸಲು ಶಾಮೀಲಾಗಿದ್ದಾರೆಯೇ ಹಾಗೂ ಈ ವಾಹನದ ಮಾಲೀಕರ ಅಥವಾ ಅವರ ಪ್ರತಿನಿಧಿಗಳ ಗಮನಕ್ಕೆ ಬಾರದಂತೆಯೇ ಈ ವಾಹನವನ್ನು ಅರಣ್ಯ ಉತ್ಪನ್ನಗಳ ಕಳ್ಳ ಸಾಗಾಣಿಕೆಗೆ ಉಪಯೋಗಿಸಲಾಗಿದೆಯೇ, ಹಾಗೂ ಈ ವಾಹನವನ್ನು ಇಂತಹ ಅಕ್ರಮ ಕಾನೂನು ಬಾಹಿರ ಅರಣ್ಯ ಉತ್ಪನ್ನ ಸಾಗಾಣಿಕೆಗೆ ಉಪಯೋಗಿಸದಂತೆ ವಾಹನದ ಮಾಲೀಕರು ವಾಹನದ ಚಾಲಕರು ಅಥವಾ ಅವರ ಪ್ರತಿನಿದಿಗಳು ಸಾಕಷ್ಟು ಸೂಕ್ತ ಮುನ್ನೆಚ್ಚರಿಕೆ ತೆಗೆದುಕೊಂಡಿರುತ್ತಾರೆಯೇ?

4) ತೀರ್ಮಾನಕ್ಕೆ ಬರಬಹುದಾಗಿದೆ.

ಈ ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿ ಈ ಕೆಳಗಿನಂತೆ ತೀರ್ಮಾನಕ್ಕೆ ಬರಲಾಗಿದೆ. ಅದಕ್ಕೆ ಕಾರಣಗಳು ಈ ಕೆಳಗಿನಂತೆ ನೀಡಲಾಗಿದೆ.

1) ಒಂದನೇ ಅಂಶಕ್ಕೆ ಹೌದು ಎಂತಲೂ

2) ಎರಡನೇ ಅಂಶಕ್ಕೆ ಹೌದು ಎಂತಲೂ

3) ಮೂರನೇ ಅಂಶದ ಮೊದಲಿನ ಭಾಗದ ಪ್ರಶ್ನೆಗೆ ಹೌದು ಎಂದು, ಎರಡನೇ ಭಾಗದ ಪ್ರಶ್ನೆಗೆ ಇಲ್ಲ ಎಂದಾಗಿರುತ್ತದೆ.

**ಅಂಶ-1:**

ದಿನಾಂಕ:10-05-2005ರಂದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಶಿಕಾರಿಪುರ ಮತ್ತು ಸಿಬ್ಬಂದಿಯವರು ಇಲಾಖಾ ವಾಹನ ಕೆಎ-14-ಜಿ-463ರಲ್ಲಿ ಶಿಕಾರಿಪುರ ತಾಲ್ಲೂಕು ಅಂಜನಾಪುರ ಹೋಬಳಿ ಶಿಕಾರಿಪುರ-ಶಿವಮೊಗ್ಗ ರಸ್ತೆಯ ಹಾರೇಗೊಪ್ಪ ಕ್ಯಾಂಪ್ ಕ್ವಾಟ್ರಸ್ ಹತ್ತಿರ ಗಸ್ತು ಮಾಡುತ್ತಿರುವಾಗ ಶಿಕಾರಿಪುರ ಕಡೆಯಿಂದ ಒಂದು ವಾಹನವು ಸುಮಾರು ಮಧ್ಯಾಹ್ನ 2 ಗಂಟೆ ಸಮಯದಲ್ಲಿ ಬರುತ್ತಿರುವುದನ್ನು ನಿಲ್ಲಿಸಿ ತಪಾಸಣೆ ಮಾಡಿದಾಗ ಬೀಟೆ ಸೈಜ್ 54=0.188ಎಂ3 ಇದ್ದು, ಇವುಗಳನ್ನು ಸಾಗಿಸಲು ರಹದಾರಿ ಇಲ್ಲದೇ ಇರುವುದರಿಂದ ಇದು ಅಕ್ರಮ ಸಾಗಾಣಿಕೆ ಎಂದು ಪರಿಗಣಿಸಿ ಪಂಚರ ಸಮಕ್ಷಮ ಪ್ರಥಮ ವರ್ತಮಾನ ವರದಿ, ಮಹಜರ್ ವರದಿ, ಜಪ್ತಿವರದಿಯೊಂದಿಗೆ ಇಲಾಖಾ ಪರ ವಶಪಡಿಸಿಕೊಂಡು ಕರ್ನಾಟಕ ಅರಣ್ಯ ಕಾಯ್ದೆ 1963 ಸೆಕ್ಷನ್ 24, 50ಕೆ, 62, 71(ಎ ರಿಂದ ಜಿ), 104(ಎ) ಮತ್ತು ಕರ್ನಾಟಕ ಅರಣ್ಯ ಕಾನೂನು 1969 ನಿಯಮ 144, 163, 165ರ ಪ್ರಕಾರ ಅರಣ್ಯ ಮೊಕದ್ದಮೆ ಸಂಖ್ಯೆ: 13/05-06ನ್ನು ದಾಖಲಿಸಿ ಈ ನ್ಯಾಯಾಲಯಕ್ಕೆ ವಾಹನವನ್ನು ಎಲ್ಲಾ ದಾಖಲೆಗಳೊಂದಿಗೆ ಸಲ್ಲಿಸಿರುತ್ತಾರೆ. ದಾಖಲೆಗಳಿಂದ ಮತ್ತು ಪ್ರಾಸಿಕ್ಯೂಷನ್ ಸಾಕ್ಷಿ

ಹೇಳಿಕೆಯಿಂದ ಈ ವಾಹನವನ್ನು ಅರಣ್ಯ ಉತ್ಪನ್ನಗಳ ಕಳ್ಳ ಸಾಗಾಣಿಕೆಗೆ ಬಳಸಿರುವುದು ಸಾಬೀತಾಗಿದೆ. ಸದರಿ ನಾಟಾ ಸಾಗಿಸಲು ರಹದಾರಿ ಇಲ್ಲದೇ ಇರುವುದರಿಂದ ಕರ್ನಾಟಕ ಅರಣ್ಯ ಕಾಯ್ದೆ ಮತ್ತು ಕಾನೂನನ್ನು ಉಲ್ಲಂಘಿಸಿರುತ್ತಾರೆ ಎಂದು ನನ್ನ ಉತ್ತರವಾಗಿದೆ.

**ಅಂಶ-2:**

ಆರ್.ಸಿ. ಮಾಲೀಕರಾದ ಶ್ರೀ ಸೈಯದ್ ಮುಜಿಬುಲ್ಲಾ ಬಿನ್ ಸೈಯದ್ ರವೂಬ್ ಸಾಬ್, ನವಲೆ ಅಂಚೆ, ಶಾಂತಿನಗರ, ಶಿವಮೊಗ್ಗ ಇವರು ದಿನಾಂಕ:15-06-2005ರಂದು ಈ ನ್ಯಾಯಾಲಯಕ್ಕೆ ವಕೀಲರ ಮುಖಾಂತರ ಅರ್ಜಿ ಸಲ್ಲಿಸಿರುತ್ತಾರೆ. ಇವರ ಅರ್ಜಿಯಲ್ಲಿ ಮತ್ತು ಬಿ ಎಕ್ಸ್‌ಟ್ರ್ಯಾಕ್ಟ್‌ನಲ್ಲಿ ನಮೂದಿಸಿದ ವಿಳಾಸದಂತೆ ಆರ್.ಸಿ. ಮಾಲೀಕರಿಗೆ ಕರ್ನಾಟಕ ಅರಣ್ಯ ಕಾಯ್ದೆ 1963 ಸೆಕ್ಷನ್ 71(ಬಿ) (1)ರ ಪ್ರಕಾರ ಕಾರಣ ಕೇಳಿ ಪತ್ರವನ್ನು ದಿನಾಂಕ:25-06-2005ರಂದು ನೊಂದಣಿ ಅಂಚೆ ಮೂಲಕ ಜಾರಿ ಮಾಡಿದೆ. ಈ ಜಾರಿ ಮಾಡಿದ ಲಕೋಟೆಯ ಮೇಲೆ ಅಂಚೆ ಇಲಾಖೆಯವರು "Not Known" ಎಂದು ನಮೂದಿಸಿ ಲಕೋಟೆಯನ್ನು ಈ ನ್ಯಾಯಾಲಯಕ್ಕೆ ಹಿಂದಿರುಗಿಸಿರುತ್ತಾರೆ. ನಂತರ ಆರ್.ಸಿ. ಮಾಲೀಕರು ಈ ವಾಹನವನ್ನು ಮಧ್ಯಂತರ ಸುಪರ್ದಿಗೆ ಬಿಟ್ಟುಕೊಡಲು ಈ ನ್ಯಾಯಾಲಯಕ್ಕೆ ಸಲ್ಲಿಸಿದ ಅರ್ಜಿಯನ್ನು ದಿನಾಂಕ:01-12-2007ರಂದು ತಿರಸ್ಕರಿಸಿ ಆದೇಶವಾಗಿದೆ. ನಂತರ ಪ್ರಾಸಿಕ್ಯೂಷನ್ ಸಾಕ್ಷಿ ಹೇಳಿಕೆ ಪಡೆದಿದೆ. ಡಿಫೆನ್ಸ್ ಸಾಕ್ಷಿ ಹೇಳಿಕೆ ಪಡೆಯಲು ದಿನಾಂಕ:01-03-2008, 29-03-2008, 18-10-2008ರಂದು ಸಮಯ ನಿಗದಿಪಡಿಸಲಾಗಿತ್ತು. ಒಮ್ಮೆಯೂ ಆರ್.ಸಿ. ಮಾಲೀಕರು ಹಾಜರಾಗಿರುವುದಿಲ್ಲ. ಇದರಿಂದ ಆರ್.ಸಿ. ಮಾಲೀಕರಿಗೆ ತಮ್ಮ ಅಹವಾಲನ್ನು ಮಂಡಿಸಲು ಈ ನ್ಯಾಯಾಲಯ ಬಹಳಷ್ಟು ಕಾಲಾವಕಾಶ ನೀಡಿದೆ ಎಂಬುದು ನನ್ನ ಉತ್ತರವಾಗಿದೆ.

**ಅಂಶ-3:**

**ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಉಪವಿಭಾಗ-2, ಬಳ್ಳಾರಿ**
**ಪ್ರಕರಣ ಸಂಖ್ಯೆ:ಕಾನಪ:53:09ಎಫ್, ದಿನಾಂಕ:4ನೇ ಜೂನ್, 2009**

**ಅರ್ಜಿದಾರರು:**

1) ಶ್ರೀಮತಿ ದೇವೀರಮ್ಮ ಗಂಡ: ಲೇಟ್ ಹನುಮೇಶ್, (ಮೃತನ ಹೆಂಡತಿ)
2) ಜ್ಯೋತಿ ತಂ: ಹನುಮೇಶ್ ವಯಸ್ಸು:10 ವರ್ಷ (ಮೃತನ ಮಗಳು)
3) ಶಾಂತಿ ತಂ: ಲೇಟ್ ಹನುಮೇಶ್, ವಯಸ್ಸು:09 ವರ್ಷ (ಮೃತನ ಮಗಳು)
4) ಶ್ರೀಮತಿ ಕಲ್ಲಮ್ಮ ಗಂ: ಲೇಟ್ ಈಶ್ವರಪ್ಪ, ವಯಸ್ಸು:60 ವರ್ಷ.
ಎಲ್ಲರ ವಾಸ: ಕರಜೇಡು ಗ್ರಾಮ, ಬಳ್ಳಾರಿ (ತಾ).

ವಿರುದ್ಧ

**ಪ್ರತಿವಾದಿಗಳು:**

ಶ್ರೀ ವೆಂಕಟನಾಯ್ಡು, ತಂ: ಎಂ. ಶ್ರೀರಾಮುಲು, ವಯಸ್ಸು:44 ವರ್ಷ, ಲಾರಿ ಮಾಲೀಕರು ಸಂಖ್ಯೆ: ಕೆಎ-34:5218, ವಾಸ: ಟ್ಯಾಂಕ್ ರಸ್ತೆ, ಬಳ್ಳಾರಿ.

**ಪ್ರಕಟಣೆ**

ಸದರಿ 1 ರಿಂದ 4ರ ವರೆಗಿನ ಅರ್ಜಿದಾರರು ತಾವು ಮೃತ ಹನುಮೇಶ್ ಇವರ ಹೆಂಡತಿ, ಮಕ್ಕಳು ಹಾಗೂ ಮೃತನ ತಾಯಿಯಾಗಬೇಕೆಂದು ಹಾಗೂ ಮೃತನ ಶಾಸನ ಬದ್ಧ ವಾರಸುದಾರರೆಂದು, ಅವಲಂಬಿತರೆಂದು, ಅವರ ಸಾವಿಗಾಗಿ ನಷ್ಟ ಪರಿಹಾರ ಕೋರಿ ಈ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಮೃತನು ಪ್ರತಿವಾದಿಗಳ ಲಾರಿಯಲ್ಲಿ ದಿನಾಂಕ:05.07.2008ರಂದು ಕರ್ತವ್ಯದ ಮೇಲಿದ್ದಾಗ ಅಪಘಾತವಾಗಿ ಆದ ಗಾಯಗಳಿಂದ ಮರಣಹೊಂದಿರುತ್ತಾನೆಂದು, ಸದರಿ ಅರ್ಜಿದಾರರು ತಿಳಿಸಿರುತ್ತಾರೆ. ಈ ಸಂಬಂಧವಾಗಿ ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ಹಾಗೂ ಸಂಬಂಧಪಟ್ಟವರಿಗೆ ತಿಳಿಸುವುದೇನೆಂದರೆ ಈ ಬಗ್ಗೆ ಏನಾದರೂ ಆಕ್ಷೇಪಣೆಗಳಾಗಲೀ ಅಥವಾ ಬೇರೆ ಯಾರಾದರೂ ಮೃತರ ಶಾಸನ ಬದ್ಧ ವಾರಸುದಾರರು ಎಂದು ಪರಿಗಣಿಸಬೇಕೆಂದು ಪ್ರಾರ್ಥಿಸುವುದಾದರೆ ಅಂತಹವರು ಪ್ರಕಟಣೆಯು ಈ ನ್ಯಾಯಾಲಯದ ನಾಮಫಲಕದಲ್ಲಿ ಪ್ರಕಟಿಸಿದ 30 ದಿನಗಳೊಳಗಾಗಿ ಸಲ್ಲಿಸತಕ್ಕದ್ದು. ಅವಧಿ ಮೀರಿ ಬಂದ ಅರ್ಜಿಯನ್ನು ಮಾನ್ಯ ಮಾಡಲಾಗುವುದಿಲ್ಲ.

**ಜಿ. ಗೋವಿಂದಯ್ಯ**
ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ನಷ್ಟ ಪರಿಹಾರ
ಆಯುಕ್ತರ ನ್ಯಾಯಾಲಯ, ಉಪವಿಭಾಗ-2, ಬಳ್ಳಾರಿ.

**ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಉಪವಿಭಾಗ-2, ಬಳ್ಳಾರಿ**
**ಪ್ರಕರಣ ಸಂಖ್ಯೆ:ಕಾನಪ:54:09ಎಫ್, ದಿನಾಂಕ:4ನೇ ಜೂನ್, 2009**

**ಅರ್ಜಿದಾರರು:**

1) ಶ್ರೀ ಅದಾಮು ತಂ: ಪ್ರಭುದಾಸ್, ವಯಸ್ಸು:45 ವರ್ಷ, ವೃತ್ತಿ.
2) ಶ್ರೀಮತಿ ಬಿ. ಪ್ರಕಾಶಮ್ಮ, ಗಂಡ: ಅದಾಮು, ವಯಸ್ಸು:40 ವರ್ಷ ವೃತ್ತಿ-
ಇಬ್ಬರ ವಾಸ: ಸಂಜೀವ್ ನಗರ (ಪೋ) ಖಾಜಿಪೇಟ್ ಮಂಡಲಂ ಕಡಪ(ಜಿ).

ವಿರುದ್ಧ

**ಪ್ರತಿವಾದಿಗಳು:**

1) ರವಿಶಂಕರ್ ರೆಡ್ಡಿ ತಂ: ಜಿ. ರಾಮಸುಬ್ಬರೆಡ್ಡಿ, ಲಾರಿ ಮಾಲೀಕರು, ವಾಹನ ಸಂ:ಕೆಎ:ಎಪಿ-04-ವಿ-8881, ಆಲಂಖಾನ್‌ಪಲ್ಲಿ (ಪೋ) ಕಡಪ (ಜಿ) (ಎ.ಪಿ.)
2) ಮ್ಯಾನೇಜರ್, ಮೆ: ರಿಲಯನ್ಸ್ ಜನರಲ್ ಇನ್ಸೂರೆನ್ಸ್ ಕಂಪನಿ ಲಿ., ಬಳ್ಳಾರಿ.

**ಪ್ರಕಟಣೆ**

ಸದರಿ ಅರ್ಜಿದಾರರಾದ ಆದಾಮು ಮತ್ತು ಶ್ರೀಮತಿ ಬಿ. ಪ್ರಕಾಶಮ್ಮ ಇವರು ಮೃತ ರವಿಯ ತಂದೆ-ತಾಯಿಗಳೆಂದು ಹಾಗೂ ಶಾಸನಬದ್ಧ ವಾರಸುದಾರರೆಂದು, ಅವಲಂಬಿತರೆಂದು, ಮೃತನ ಸಾವಿಗಾಗಿ ನಷ್ಟ ಪರಿಹಾರ ಕೋರಿ ಈ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಮೃತನು ಪ್ರತಿವಾದಿಯವರ ಲಾರಿಯಲ್ಲಿ ದಿನಾಂಕ:20.09.2008ರಂದು ಕರ್ತವ್ಯದ ಮೇಲಿದ್ದಾಗ ಅಪಘಾತ ಸಂಭವಿಸಿ ಗಾಯಗೊಂಡು ಮೃತ ಪಟ್ಟಿರುತ್ತಾನೆಂದು, ಸದರಿ ಅರ್ಜಿದಾರರು ತಿಳಿಸಿ ನಷ್ಟ ಪರಿಹಾರ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಸಂಬಂಧವಾಗಿ ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ಹಾಗೂ ಸಂಬಂಧಪಟ್ಟವರಿಗೆ ತಿಳಿಸುವುದೇನೆಂದರೆ ಈ ಬಗ್ಗೆ ಏನಾದರೂ ಆಕ್ಷೇಪಣೆಗಳಾಗಲೀ ಅಥವಾ ಬೇರೆ ಯಾರಾದರೂ ಮೃತರ ಶಾಸನ ಬದ್ಧ

ವಾರಸುದಾರರು ಎಂದು ಪರಿಗಣಿಸಬೇಕೆಂದು ಪ್ರಾರ್ಥಿಸುವುದಾದರೆ ಅಂತಹವರು ಪ್ರಕಟಣೆಯು ಕರ್ನಾಟಕ ರಾಜ್ಯಪತ್ರ ಹಾಗೂ ನ್ಯಾಯಾಲಯದ ನಾಮಫಲಕದಲ್ಲಿ ಪ್ರಕಟಿಸಿದ 30 ದಿನಗಳೊಳಗಾಗಿ ಸಲ್ಲಿಸತಕ್ಕದ್ದು. ಅವಧಿಮೀರಿ ಬಂದ ಅರ್ಜಿಯನ್ನು ಮಾನ್ಯ ಮಾಡಲಾಗುವುದಿಲ್ಲ.

ಜಿ. ಗೋವಿಂದಯ್ಯ
ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ನಷ್ಟ ಪರಿಹಾರ
ಆಯುಕ್ತರ ನ್ಯಾಯಾಲಯ, ಉಪವಿಭಾಗ-2, ಬಳ್ಳಾರಿ.

ಪಿ.ಆರ್.501

## GOVERNMENT OF KARNATAKA

## KARNATAKA LOKAYUKTA

## PUBLIC NOTICE

**No.Compt/LOK/BCD/420/2008/ARE-9, Bangalore, Dated:10th June, 2009**

As per G.O.No. ಇಎನ್ 5 ಸ್ವೀಮರ 2008(1), ಬೆಂಗಳೂರು, Dated:05.11.2008, Government of Karnataka has made a reference to the Hon'ble Lokayukta, under Section 7(2-A) of Karnataka Lokayukta Act, 1984, in respect of the matter relating to the allegation of not following the prevailing recruitment Rules and by giving preference in selecting candidates from one and the same region and category, the possible abnormalities and deviation pertaining to appointment of 19 different categories of posts, numbering about 12281 post in total, which include the post of attender II grade and also the post of Lineman, in the Karnataka Power Corporation Limited, and Karnataka Electricity Supply Companies, during the period of 2003-07, and requested for submission of a report to the Government after due enquiry and investigation with specific recommendations. The terms of reference are as follows:

ಅ) ಸದರಿ ನೇಮಕಾತಿಯನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಹಾಗೂ ವಿದ್ಯುತ್ ಸರಬರಾಜು ಕಂಪನಿಗಳ ಅವಶ್ಯಕತೆ ಆಧಾರದ ಮೇಲೆ ಮಾಡಲಾಗಿದೆಯೇ?

ಆ) ಸದರಿ ನೇಮಕಾತಿಗಳಲ್ಲಿ ಸಾಮಾನ್ಯ ನೇಮಕಾತಿ/ ವಿಶೇಷ ನೇಮಕಾತಿ ನಿಯಮಗಳಲ್ಲಿನ ಕಾರ್ಯ ವಿಧಾನವನ್ನು ಅನುಸರಿಸಲಾಗಿದೆಯೇ? ಹಾಗೂ ಪ್ರಸ್ತುತ ಜಾರಿಯಲ್ಲಿರುವ ಮೀಸಲಾತಿ ನಿಯಮಗಳು/ ಆದೇಶಗಳನ್ನು ಪಾಲಿಸಲಾಗಿದೆಯೇ?

ಇ) ಸದರಿ ನೇಮಕಾತಿ ಪ್ರಕ್ರಿಯೆಯನ್ನು ಪಾರದರ್ಶಕವಾಗಿ ನಡೆಸಲಾಗಿದೆಯೇ? ಇಲ್ಲದಿದ್ದಲ್ಲಿ, ಸದರಿ ನೇಮಕಾತಿ ಪ್ರಕ್ರಿಯೆಯಲ್ಲಿ ವೈಪರೀತ್ಯ (abnormality) ಅಥವಾ ಅಕ್ರಮಗಳು ನಡೆದಿವೆಯೇ?

ಈ) ರಚಿಸಲಾಗಿದ್ದ ಆಯ್ಕೆ ಸಮಿತಿಯು ಸದರಿ ನೇಮಕಾತಿಗೆ ಸಂಬಂಧಿಸಿದ ಅಗತ್ಯ ದಾಖಲಾತಿಗಳನ್ನು ಪರಿಶೀಲಿಸಿ ನಡವಳಿಯನ್ನು ನಿರ್ವಹಿಸಿದೆಯೇ?

ಉ) ಸದರಿ ಆಯ್ಕೆ/ ನೇಮಕಾತಿ ಪ್ರಕ್ರಿಯೆಯಲ್ಲಿ ಪ್ರತಿಭಾವಂತ ಅಭ್ಯರ್ಥಿಗಳಿಗೆ ಅನ್ಯಾಯ ಮಾಡಲಾಗಿದೆಯೇ?

ಊ) ಸದರಿ ಆಯ್ಕೆ/ ನೇಮಕಾತಿ ಪ್ರಕ್ರಿಯೆಯಲ್ಲಿ ಯಾವುದಾದರೂ ಒಂದೇ ಭಾಗದ/ ವರ್ಗದ ಅಭ್ಯರ್ಥಿಗಳಿಗೆ ಹೆಚ್ಚಿನ ಅಂಕ ನೀಡಿ ಹೆಚ್ಚಿನ ಪ್ರಮಾಣದಲ್ಲಿ ಆಯ್ಕೆ/ ನೇಮಕಾತಿ ಮಾಡಲಾಗಿದೆಯೇ? ಮತ್ತು

ಋ) ವೈಪರೀತ್ಯ, ಅಕ್ರಮ/ ಅನ್ಯಾಯಗಳು ನಡೆದಿದ್ದರೆ, ಅವುಗಳು ಮರುಕಳಿಸದಂತೆ ತೆಗೆದುಕೊಳ್ಳಬಹುದಾದ ಪರಿಹಾರೋಪಾಯ ಕ್ರಮಗಳ ಬಗ್ಗೆ ಶಿಫಾರಸ್ಸು.

The scope of enquiry is in respe of the matter of reference made by the Government of Karnataka, as mentioned above.

Hon'ble Lokayukta has felt it necessary to invite statements relating to the above matter from the persons acquainted with the subject matter of the investigation, including by the candidates who had applied for the said post and also appeared for endurance test.

Hence, any person acquainted with the above subject matter may furnish statement in writing accompanied by an affidavit in support of the facts set out in the said statement, sworn to by the person furnishing such statement, along with the originals or attested copies of documents, if any.

The statements may be sent either by registered post/ courier to reach the undersigned or may be submitted in person on or before 23.07.2009.

Bangalore

Date:10.06.2009

By the Order of Hon'ble Lokayukta

**MOOSA KUNHI NAYAR MOOLE**

Registrar.

## ಕರ್ನಾಟಕ ಸರ್ಕಾರ
## ಕರ್ನಾಟಕ ಲೋಕಾಯುಕ್ತ
## ಸಾರ್ವಜನಿಕ ತಿಳುವಳಿಕೆ ಪತ್ರ

**ಸಂಖ್ಯೆ: ಕಂಪ್ಲೇಂಟ್/ ಲೋಕ್/ಬಿ.ಸಿ.ಡಿ./420/2008/ಎಆರ್‌ಇ-9, ಬೆಂಗಳೂರು, ದಿನಾಂಕ:10ನೇ ಜೂನ್, 2009**

ಸರ್ಕಾರದ ಆದೇಶ ಸಂಖ್ಯೆ:ಇಎನ್ 5 ಸ್ವೀಮರ 2008(1), ಬೆಂಗಳೂರು, ದಿನಾಂಕ:05.11.2008ರಲ್ಲಿ, ಬೆಂಗಳೂರಿನ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಹಾಗೂ ವಿವಿಧ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ 2003 ರಿಂದ 2007 ರವರೆಗೆ 19 ವಿವಿಧ ವೃಂದಗಳಲ್ಲಿ ಒಟ್ಟು 12281 ಹುದ್ದೆಗಳಿಗೆ ನೇಮಕಾತಿ ಮಾಡಲಾಗಿದ್ದು, 19 ವಿವಿಧ ವರ್ಗಗಳ ಹುದ್ದೆಗಳ ನೇಮಕಾತಿ ಪೈಕಿ 2 ವರ್ಗದ ಹುದ್ದೆಗಳು ಅಂದರೆ, ಅ) ಸ್ಟೇಷನ್ ಪರಿಚಾರಕ ದರ್ಜೆ-2 ಮತ್ತು (ಬಿ) ಸಹಾಯಕ ಮಾರ್ಗದಾಳು ಹುದ್ದೆಗಳಲ್ಲಿ ಮಾಡಿದ ನೇಮಕಾತಿಗಳ ಬಗ್ಗೆ ಸಂಬಂಧಿಸಿ, ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ಸರ್ಕಾರದಲ್ಲಿ ಚಾಲ್ತಿಯಲ್ಲಿರುವ ಸಾಮಾನ್ಯ ನೇಮಕಾತಿಯ ನಿಯಮಗಳನ್ನು ಪಾಲಿಸದೇ ಒಂದೇ ಪ್ರದೇಶದ ಹಾಗೂ ಒಂದೇ ವರ್ಗದ ಅಭ್ಯರ್ಥಿಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ ಎಂಬ ಆಪಾದನೆಗಳ ಬಗ್ಗೆ ವಿಚಾರಣೆ ನಡೆಸಲು ಪ್ರಕರಣವನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 7(2-ಎ) ರನ್ವಯ, ಗೌರವಾನ್ವಿತ ಲೋಕಾಯುಕ್ತರಿಗೆ ವಹಿಸಲಾಗಿದ್ದು, ಈ ಬಗ್ಗೆ ನಿರ್ದಿಷ್ಟ ಶಿಫಾರಸ್ಸುಗಳನ್ನೊಳಗೊಂಡ ವರದಿಯನ್ನು ಸಲ್ಲಿಸಲು ಸಹ ಸರ್ಕಾರವು ಕೋರಿರುತ್ತದೆ. ಮೇಲೆ ನಮೂದಿಸಿರುವ ಆದೇಶದನ್ವಯ ತನಿಖೆಗೆ ವಹಿಸಲಾಗಿರುವ ಪರಿಶೀಲನಾಂಶಗಳು/ ಉಲ್ಲೇಖ ನಿಬಂಧನೆಗಳು ಈ ಕೆಳಗಿನಂತಿವೆ.

ಅ) ಸದರಿ ನೇಮಕಾತಿಯನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಹಾಗೂ ವಿದ್ಯುತ್ ಸರಬರಾಜು ಕಂಪನಿಗಳ ಅವಶ್ಯಕತೆ ಆಧಾರದ ಮೇಲೆ ಮಾಡಲಾಗಿದೆಯೇ?

ಆ) ಸದರಿ ನೇಮಕಾತಿಗಳಲ್ಲಿ ಸಾಮಾನ್ಯ ನೇಮಕಾತಿ/ ವಿಶೇಷ ನೇಮಕಾತಿ ನಿಯಮಗಳಲ್ಲಿನ ಕಾರ್ಯ ವಿಧಾನವನ್ನು ಅನುಸರಿಸಲಾಗಿದೆಯೇ? ಹಾಗೂ ಪ್ರಸ್ತುತ ಜಾರಿಯಲ್ಲಿರುವ ಮೀಸಲಾತಿ ನಿಯಮಗಳು/ ಆದೇಶಗಳನ್ನು ಪಾಲಿಸಲಾಗಿದೆಯೇ?

ಇ) ಸದರಿ ನೇಮಕಾತಿ ಪ್ರಕ್ರಿಯೆಯನ್ನು ಪಾರದರ್ಶಕವಾಗಿ ನಡೆಸಲಾಗಿದೆಯೇ? ಇಲ್ಲದಿದ್ದಲ್ಲಿ, ಸದರಿ ನೇಮಕಾತಿ ಪ್ರಕ್ರಿಯೆಯಲ್ಲಿ ವೈಪರೀತ್ಯ (abnormality) ಅಥವಾ ಅಕ್ರಮಗಳು ನಡೆದಿವೆಯೇ?

ಈ) ರಚಿಸಲಾಗಿದ್ದ ಆಯ್ಕೆ ಸಮಿತಿಯು ಸದರಿ ನೇಮಕಾತಿಗೆ ಸಂಬಂಧಿಸಿದ ಅಗತ್ಯ ದಾಖಲಾತಿಗಳನ್ನು ಪರಿಶೀಲಿಸಿ ನಡವಳಿಯನ್ನು ನಿರ್ವಹಿಸಿದೆಯೇ?

ಉ) ಸದರಿ ಆಯ್ಕೆ/ ನೇಮಕಾತಿ ಪ್ರಕ್ರಿಯೆಯಲ್ಲಿ ಪ್ರತಿಭಾವಂತ ಅಭ್ಯರ್ಥಿಗಳಿಗೆ ಅನ್ಯಾಯ ಮಾಡಲಾಗಿದೆಯೇ?

ಊ) ಸದರಿ ಆಯ್ಕೆ/ ನೇಮಕಾತಿ ಪ್ರಕ್ರಿಯೆಯಲ್ಲಿ ಯಾವುದಾದರೂ ಒಂದೇ ಭಾಗದ/ ವರ್ಗದ ಅಭ್ಯರ್ಥಿಗಳಿಗೆ ಹೆಚ್ಚಿನ ಅಂಕ ನೀಡಿ ಹೆಚ್ಚಿನ ಪ್ರಮಾಣದಲ್ಲಿ ಆಯ್ಕೆ/ ನೇಮಕಾತಿ ಮಾಡಲಾಗಿದೆಯೇ? ಮತ್ತು

ಋ) ವೈಪರೀತ್ಯ, ಅಕ್ರಮ/ ಅನ್ಯಾಯಗಳು ನಡೆದಿದ್ದರೆ, ಅವುಗಳು ಮರುಕಳಿಸದಂತೆ ತೆಗೆದುಕೊಳ್ಳಬಹುದಾದ ಪರಿಹಾರೋಪಾಯ ಕ್ರಮಗಳ ಬಗ್ಗೆ ಶಿಫಾರಸ್ಸು.

ಮೇಲಿನ ತನಿಖೆಯ ವ್ಯಾಪ್ತಿಯು ಮೇಲೆ ಹೇಳಿದ ಸರ್ಕಾರದ ಆದೇಶದ ಪರಿಶೀಲನಾಂಶಗಳು/ ಉಲ್ಲೇಖ ನಿಬಂಧನೆಗಳ ಬಗ್ಗೆ ಇರುತ್ತದೆ.

ಮೇಲ್ಕಂಡ ವಿಷಯದ ತನಿಖೆಗೆ ಸಂಬಂಧಪಟ್ಟಂತೆ, ತಿಳುವಳಿಕೆಯುಳ್ಳ ಯಾವುದೇ ವ್ಯಕ್ತಿ ಅಥವಾ ಸದರಿ ಹುದ್ದೆಯ ನೇಮಕಾತಿ ಪ್ರಕ್ರಿಯೆಯಲ್ಲಿ ಪಾಲ್ಗೊಂಡ ಅಭ್ಯರ್ಥಿಯ ಹೇಳಿಕೆಯನ್ನು ಪಡೆಯುವುದು ಅವಶ್ಯಕವೆಂದು ಮಾನ್ಯ ಲೋಕಾಯುಕ್ತರು ಅಭಿಪ್ರಾಯ ಪಟ್ಟಿರುತ್ತಾರೆ. ಆದುದರಿಂದ, ತನಿಖೆಗೆ ಸಂಬಂಧಪಟ್ಟ ಯಾವುದೇ ವ್ಯಕ್ತಿಯು ತನ್ನ ಹೇಳಿಕೆಯಲ್ಲಿನ ವಿಷಯಗಳ ಬೆಂಬಲವಾಗಿ ಅಂತಹ ಹೇಳಿಕೆಯನ್ನು ಪ್ರಮಾಣೀಕರಿಸುವ ಒಂದು ಶಪಥಪತ್ರವನ್ನು ಸಹ ಕೊಡಬೇಕು ಮತ್ತು ಲಭ್ಯವಿರುವ ಮೂಲ ದಾಖಲಾತಿಗಳನ್ನು ಅಥವಾ ದಾಖಲಾತಿಗಳ ದೃಢೀಕೃತ ಪ್ರತಿಗಳನ್ನು ಒದಗಿಸಬೇಕು.

ಈ ಪ್ರಕಾರದ ಲಿಖಿತ ಮಾಹಿತಿಗಳನ್ನು ಈ ಕೆಳಗೆ ನಮೂದು ಮಾಡಿದ ಅಧಿಕಾರಿಗೆ ನೋಂದಣಿ ಅಂಚೆ/ ಕೋರಿಯರ್ ಸರ್ವಿಸ್ ಮೂಲಕ ಅಥವಾ ಸ್ವತಃ ಹಾಜರಾಗಿ ದಿನಾಂಕ:23.07.2009ರಂದು ಅಥವಾ ಅದಕ್ಕೂ ಪೂರ್ವದಲ್ಲಿ ತಲುಪಿಸಬಹುದಾಗಿದೆ.

ಮಾನ್ಯ ಲೋಕಾಯುಕ್ತರ ಆದೇಶದ ಮೇರೆಗೆ
**ಮೂಸಾ ಕುಞ್ ನಾಯರ್ ಮೂಲೆ**
ನಿಬಂಧಕರು.

ಪಿ.ಆರ್.503

## GOVERNMENT OF KARNATAKA
## KARNATAKA LOKAYUKTA
## PUBLIC NOTICE

**No.Compt/LOK/BCD/424/2008/ARE-9, Bangalore, Dated:10th June, 2009**

As per G.O.No. ಇಎನ್ 5 ಸ್ವೀಮರ 2008(2), ಬೆಂಗಳೂರು, Dated:05.11.2008, Government of Karnataka has made a reference to the Hon'ble Lokayukta, under Section 7(2-A) of Karnataka Lokayukta Act, 1984, in respect of the matter relating to the allegation of not following the prevailing recruitment Rules and by giving preference in selecting candidates from one and the same region and category, the possible abnormalities and deviation pertaining to appointment of 40 different posts like Assistant Technical Officer, Junior Engineer, First and Second grade Assistant, Planning Engineer, Accountant, Field Assistant, Assistant, Stenographers, Typist, Receptionist, Electrician, Data Entry Operator, drivers etc. during the period of 2004-05 to 2006-07 in Karnataka Renewable Energy Development Limited, by Managing Director of said company and requested for submission of a report to the Government with specific recommendations. The terms of reference are as follows:

ಅ) ಸದರಿ ನೇಮಕಾತಿಯನ್ನು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ಅವಶ್ಯಕತೆ ಆಧಾರದ ಮೇಲೆ ಮಾಡಲಾಗಿದೆಯೇ?

ಆ) ಸದರಿ ನೇಮಕಾತಿಗಳಲ್ಲಿ ಸಾಮಾನ್ಯ ನೇಮಕಾತಿ/ ವಿಶೇಷ ನೇಮಕಾತಿ ನಿಯಮಗಳಲ್ಲಿನ ಕಾರ್ಯ ವಿಧಾನವನ್ನು ಅನುಸರಿಸಲಾಗಿದೆಯೇ? ಹಾಗೂ ಪ್ರಸ್ತುತ ಜಾರಿಯಲ್ಲಿರುವ ಮೀಸಲಾತಿ ನಿಯಮಗಳು/ ಆದೇಶಗಳನ್ನು ಪಾಲಿಸಲಾಗಿದೆಯೇ?

ಇ) ಸದರಿ ನೇಮಕಾತಿ ಪ್ರಕ್ರಿಯೆಯನ್ನು ಪಾರದರ್ಶಕವಾಗಿ ನಡೆಸಲಾಗಿದೆಯೇ? ಇಲ್ಲದಿದ್ದಲ್ಲಿ, ಸದರಿ ನೇಮಕಾತಿ ಪ್ರಕ್ರಿಯೆಯಲ್ಲಿ ವೈಪರೀತ್ಯ (abnormality) ಅಥವಾ ಅಕ್ರಮಗಳು ನಡೆದಿವೆಯೇ?

ಈ) ರಚಿಸಲಾಗಿದ್ದ ಆಯ್ಕೆ ಸಮಿತಿಯು ಸದರಿ ನೇಮಕಾತಿಗೆ ಸಂಬಂಧಿಸಿದ ಅಗತ್ಯ ದಾಖಲಾತಿಗಳನ್ನು ಪರಿಶೀಲಿಸಿ ನಡವಳಿಯನ್ನು ನಿರ್ವಹಿಸಿದೆಯೇ?

ಉ) ಸದರಿ ಆಯ್ಕೆ/ ನೇಮಕಾತಿ ಪ್ರಕ್ರಿಯೆಯಲ್ಲಿ ಪ್ರತಿಭಾವಂತ ಅಭ್ಯರ್ಥಿಗಳಿಗೆ ಅನ್ಯಾಯ ಮಾಡಲಾಗಿದೆಯೇ?

ಊ) ಸದರಿ ಆಯ್ಕೆ/ ನೇಮಕಾತಿ ಪ್ರಕ್ರಿಯೆಯಲ್ಲಿ ಯಾವುದಾದರೂ ಒಂದೇ ಭಾಗದ/ ವರ್ಗದ ಅಭ್ಯರ್ಥಿಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಆಯ್ಕೆ/ ನೇಮಕಾತಿ ಮಾಡಲಾಗಿದೆಯೇ? ಮತ್ತು

ಋ) ವೈಪರೀತ್ಯ, ಅಕ್ರಮ/ ಅನ್ಯಾಯಗಳು ನಡೆದಿದ್ದರೆ, ಅವುಗಳು ಮರುಕಳಿಸದಂತೆ ತೆಗೆದುಕೊಳ್ಳಬಹುದಾದ ಪರಿಹಾರೋಪಾಯ ಕ್ರಮಗಳ ಬಗ್ಗೆ ಶಿಫಾರಸ್ಸು.

The scope of enquiry is in respect of the matter of reference made by the Government of Karnataka, as mentioned above.

Hon'ble Lokayukta has felt it necessary to invite statements relating to the above matter from the persons acquainted with the subject matter of the investigation, including by the candidates who had applied for the said post and also appeared for endurance test.

Hence, any person acquainted with the above subject matter may furnish statement in writing accompanied by an affidavit in support of the facts set out in the said statement, sworn to by the person furnishing such statement, along with the originals or attested copies of documents, if any.

The statements may be sent either by registered post/ courier to reach the undersigned or may be submitted in person on or before 23.07.2009.

Bangalore

Date:10.06.2009

By the Order of Hon'ble Lokayukta

**MOOSA KUNHI NAYAR MOOLE**

Registrar.

**ಕರ್ನಾಟಕ ಸರ್ಕಾರ**

**ಕರ್ನಾಟಕ ಲೋಕಾಯುಕ್ತ**

**ಸಾರ್ವಜನಿಕ ತಿಳುವಳಿಕೆ ಪತ್ರ**

**ಸಂಖ್ಯೆ: ಕಂಪ್ಲೇಂಟ್/ ಲೋಕ್/ಬಿ.ಸಿ.ಡಿ./424/2008/ಎಆರ್ಇ-9, ಬೆಂಗಳೂರು, ದಿನಾಂಕ:10ನೇ ಜೂನ್, 2009**

ಸರ್ಕಾರದ ಆದೇಶ ಸಂಖ್ಯೆ:ಇಎನ್ 5 ಸ್ವೀಮರ 2008(2), ಬೆಂಗಳೂರು, ದಿನಾಂಕ:05.11.2008ರಲ್ಲಿ, ಬೆಂಗಳೂರಿನ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದಲ್ಲಿ 2004-05, 2006-07ನೇ ಸಾಲಿನಲ್ಲಿ, ಸಹಾಯಕ ತಾಂತ್ರಿಕ ಅಧಿಕಾರಿ, ಕಿರಿಯ ಅಭಿಯಂತರರು, ಪ್ರಥಮ ದರ್ಜೆ ಸಹಾಯಕರು, ದ್ವಿತೀಯ ದರ್ಜೆ ಸಹಾಯಕರು, ಯೋಜನಾ ಅಭಿಯಂತರರು, ಲೆಕ್ಕ ಸಹಾಯಕರು, ಫೀಲ್ಡ್ ಸಹಾಯಕರು, ಸಹಾಯಕರು, ಶೀಘ್ರಲಿಪಿಗಾರರು, ಬೆರಳಚ್ಚುಗಾರರು, ರಿಸೆಪ್ಷನಿಸ್ಟ್, ಎಲೆಕ್ಟ್ರೀಷಿಯನ್, ಡಾಟಾ ಎಂಟ್ರಿ ಆಪರೇಟರ್, ಚಾಲಕರು ಮುಂತಾದ, ವಿವಿಧ ಹುದ್ದೆಗಳಿಗೆ 40 ಅಭ್ಯರ್ಥಿಗಳ ನೇಮಕಾತಿಗಳ ಬಗ್ಗೆ ಸಂಬಂಧಿಸಿ, ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ಸರ್ಕಾರದಲ್ಲಿ ಚಾಲ್ತಿಯಲ್ಲಿರುವ ಸಾಮಾನ್ಯ ನೇಮಕಾತಿಯ ನಿಯಮಗಳನ್ನು ಪಾಲಿಸದೇ ಒಂದೇ ಪ್ರದೇಶದ ಹಾಗೂ ಒಂದೇ ವರ್ಗದ ಅಭ್ಯರ್ಥಿಗಳಿಗೆ ಹೆಚ್ಚಿನ ಆದ್ಯತೆ ನೀಡಿ, ನೇಮಕಾತಿಗಳನ್ನು ಮಾಡಲಾಗಿದೆ ಎಂಬ ಆಪಾದನೆಗಳ ಬಗ್ಗೆ ವಿಚಾರಣೆ ನಡೆಸಲು ಪ್ರಕರಣವನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 7(2-ಎ) ರನ್ವಯ, ಗೌರವಾನ್ವಿತ ಲೋಕಾಯುಕ್ತರಿಗೆ ವಹಿಸಲಾಗಿದ್ದು, ಈ ಬಗ್ಗೆ ನಿರ್ದಿಷ್ಟ ಶಿಫಾರಸ್ಸುಗಳನ್ನೊಳಗೊಂಡ ವರದಿಯನ್ನು ಸಲ್ಲಿಸಲು ಸಹ ಸರ್ಕಾರವು ಕೋರಿರುತ್ತದೆ. ಮೇಲೆ ನಮೂದಿಸಿರುವ ಆದೇಶದನ್ವಯ ತನಿಖೆಗೆ ವಹಿಸಲಾಗಿರುವ ಪರಿಶೀಲನಾಂಶಗಳು/ ಉಲ್ಲೇಖ ನಿಬಂಧನೆಗಳು ಈ ಕೆಳಗಿನಂತಿವೆ.

ಅ) ಸದರಿ ನೇಮಕಾತಿಯನ್ನು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ಅವಶ್ಯಕತೆ ಆಧಾರದ ಮೇಲೆ ಮಾಡಲಾಗಿದೆಯೇ?

ಆ) ಸದರಿ ನೇಮಕಾತಿಗಳಲ್ಲಿ ಸಾಮಾನ್ಯ ನೇಮಕಾತಿ/ ವಿಶೇಷ ನೇಮಕಾತಿ ನಿಯಮಗಳಲ್ಲಿನ ಕಾರ್ಯ ವಿಧಾನವನ್ನು ಅನುಸರಿಸಲಾಗಿದೆಯೇ? ಹಾಗೂ ಪ್ರಸ್ತುತ ಜಾರಿಯಲ್ಲಿರುವ ಮೀಸಲಾತಿ ನಿಯಮಗಳು/ ಆದೇಶಗಳನ್ನು ಪಾಲಿಸಲಾಗಿದೆಯೇ?

ಇ) ಸದರಿ ನೇಮಕಾತಿ ಪ್ರಕ್ರಿಯೆಯನ್ನು ಪಾರದರ್ಶಕವಾಗಿ ನಡೆಸಲಾಗಿದೆಯೇ? ಇಲ್ಲದಿದ್ದಲ್ಲಿ, ಸದರಿ ನೇಮಕಾತಿ ಪ್ರಕ್ರಿಯೆಯಲ್ಲಿ ವೈಪರೀತ್ಯ (abnormality) ಅಥವಾ ಅಕ್ರಮಗಳು ನಡೆದಿವೆಯೇ?

ಈ) ರಚಿಸಲಾಗಿದ್ದ ಆಯ್ಕೆ ಸಮಿತಿಯು ಸದರಿ ನೇಮಕಾತಿಗೆ ಸಂಬಂಧಿಸಿದ ಅಗತ್ಯ ದಾಖಲಾತಿಗಳನ್ನು ಪರಿಶೀಲಿಸಿ ನಡವಳಿಯನ್ನು ನಿರ್ವಹಿಸಿದೆಯೇ?

ಉ) ಸದರಿ ಆಯ್ಕೆ/ ನೇಮಕಾತಿ ಪ್ರಕ್ರಿಯೆಯಲ್ಲಿ ಪ್ರತಿಭಾವಂತ ಅಭ್ಯರ್ಥಿಗಳಿಗೆ ಅನ್ಯಾಯ ಮಾಡಲಾಗಿದೆಯೇ?

ಊ) ಸದರಿ ಆಯ್ಕೆ/ ನೇಮಕಾತಿ ಪ್ರಕ್ರಿಯೆಯಲ್ಲಿ ಯಾವುದಾದರೂ ಒಂದೇ ಭಾಗದ/ ವರ್ಗದ ಅಭ್ಯರ್ಥಿಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಆಯ್ಕೆ/ ನೇಮಕಾತಿ ಮಾಡಲಾಗಿದೆಯೇ? ಮತ್ತು

ಋ) ವೈಪರೀತ್ಯ, ಅಕ್ರಮ/ ಅನ್ಯಾಯಗಳು ನಡೆದಿದ್ದರೆ, ಅವುಗಳು ಮರುಕಳಿಸದಂತೆ ತೆಗೆದುಕೊಳ್ಳಬಹುದಾದ ಪರಿಹಾರೋಪಾಯ ಕ್ರಮಗಳ ಬಗ್ಗೆ ಶಿಫಾರಸ್ಸು.

ಮೇಲಿನ ತನಿಖೆಯ ವ್ಯಾಪ್ತಿಯು ಮೇಲೆ ಹೇಳಿದ ಸರ್ಕಾರದ ಆದೇಶದ ಪರಿಶೀಲನಾಂಶಗಳು/ ಉಲ್ಲೇಖ ನಿಬಂಧನೆಗಳ ಬಗ್ಗೆ ಇರುತ್ತದೆ.

ಮೇಲ್ಕಂಡ ವಿಷಯದ ತನಿಖೆಗೆ ಸಂಬಂಧಪಟ್ಟಂತೆ, ತಿಳುವಳಿಕೆಯುಳ್ಳ ಯಾವುದೇ ವ್ಯಕ್ತಿ ಅಥವಾ ಸದರಿ ಹುದ್ದೆಯ ನೇಮಕಾತಿ ಪ್ರಕ್ರಿಯೆಯಲ್ಲಿ ಪಾಲ್ಗೊಂಡ ಅಭ್ಯರ್ಥಿಯ ಹೇಳಿಕೆಯನ್ನು ಪಡೆಯುವುದು ಅವಶ್ಯಕವೆಂದು ಮಾನ್ಯ ಲೋಕಾಯುಕ್ತರು ಅಭಿಪ್ರಾಯ ಪಟ್ಟಿರುತ್ತಾರೆ. ಆದುದರಿಂದ, ತನಿಖೆಗೆ ಸಂಬಂಧಪಟ್ಟ ಯಾವುದೇ ವ್ಯಕ್ತಿಯು ತನ್ನ ಹೇಳಿಕೆಯಲ್ಲಿನ ವಿಷಯಗಳ ಬೆಂಬಲವಾಗಿ ಅಂತಹ ಹೇಳಿಕೆಯನ್ನು ಪ್ರಮಾಣೀಕರಿಸುವ ಒಂದು ಶಪಥಪತ್ರವನ್ನು ಸಹ ಕೊಡಬೇಕು ಮತ್ತು ಲಭ್ಯವಿರುವ ಮೂಲ ದಾಖಲಾತಿಗಳನ್ನು ಅಥವಾ ದಾಖಲಾತಿಗಳ ದೃಢೀಕೃತ ಪ್ರತಿಗಳನ್ನು ಒದಗಿಸಬೇಕು.

ಈ ಪ್ರಕಾರದ ಲಿಖಿತ ಮಾಹಿತಿಗಳನ್ನು ಈ ಕೆಳಗೆ ನಮೂದು ಮಾಡಿದ ಅಧಿಕಾರಿಗೆ ನೋಂದಣಿ ಅಂಚೆ/ ಕೋರಿಯರ್ ಸರ್ವಿಸ್ ಮೂಲಕ ಅಥವಾ ಸ್ವತಃ ಹಾಜರಾಗಿ ದಿನಾಂಕ:23.07.2009ರಂದು ಅಥವಾ ಅದಕ್ಕೂ ಪೂರ್ವದಲ್ಲಿ ತಲುಪಿಸಬಹುದಾಗಿದೆ.

ಮಾನ್ಯ ಲೋಕಾಯುಕ್ತರ ಆದೇಶದ ಮೇರೆಗೆ
**ಮೂಸಾ ಕುಞಿ ನಾಯರ್ ಮೂಲೆ**
ನಿಬಂಧಕರು.

ಪಿ.ಆರ್.504

## GOVERNMENT OF KARNATAKA

## KARNATAKA LOKAYUKTA

## PUBLIC NOTICE

**No.Compt/LOK/BCD/414/2008/ARE-9, Bangalore, Dated:10th June, 2009**

As per G.O.No. ಲೋಇ: 172:ಸೇಸಕಿ:2008, ಬೆಂಗಳೂರು, Dated:25.10.2008, Government of Karnataka has made a reference to the Hon'ble Lokayukta, under Section 7(2-A) of Karnataka Lokayukta Act, 1984, in respect of the matter relating to the allegation of not following the prevailing recruitment Rules and by giving preference in selecting candidates from one and the same region and category, the possible abnormalities and deviation pertaining to appointment of 251 post of Assistant Engineers and 452 of Junior Engineers, made by recruitment committee presided over by Chief Engineer Communication and Buildings (South) Bangalore, as per Karnataka Public Works Services (Special Recruitment of Assistant Engineer and Junior Engineer), Rules 2007, in the Public Works Department in pursuance of Gazette Notification Dated:09.03.2007 published inviting application for the said posts and requested for submission of a report to the Government after due enquiry and investigation with specific recommendations. The terms of reference are as follows:

ಅ) ಸದರಿ ನೇಮಕಾತಿಗಳನ್ನು ಇಲಾಖೆಯ ಅವಶ್ಯಕತೆ ಆಧಾರದ ಮೇಲೆ ಮಾಡಲಾಗಿದೆಯೇ?

ಆ) ಸದರಿ ನೇಮಕಾತಿಗಳಲ್ಲಿ ಸಾಮಾನ್ಯ ನೇಮಕಾತಿ/ ವಿಶೇಷ ನೇಮಕಾತಿ ನಿಯಮಗಳಲ್ಲಿನ ಕಾರ್ಯ ವಿಧಾನವನ್ನು ಅನುಸರಿಸಲಾಗಿದೆಯೇ? ಹಾಗೂ ಪ್ರಸ್ತುತ ಜಾರಿಯಲ್ಲಿರುವ ಮೀಸಲಾತಿ ನಿಯಮಗಳು/ ಆದೇಶಗಳನ್ನು ಪಾಲಿಸಲಾಗಿದೆಯೇ?

ಇ) ಸದರಿ ನೇಮಕಾತಿ ಪ್ರಕ್ರಿಯೆಯನ್ನು ಪಾರದರ್ಶಕವಾಗಿ ನಡೆಸಲಾಗಿದೆಯೇ? ಇಲ್ಲದಿದ್ದಲ್ಲಿ, ಸದರಿ ನೇಮಕಾತಿ ಪ್ರಕ್ರಿಯೆಯಲ್ಲಿ ವೈಪರೀತ್ಯ (abnormality) ಅಥವಾ ಅಕ್ರಮಗಳು ನಡೆದಿವೆಯೇ?

ಈ) ವಿಶೇಷ ನೇಮಕಾತಿ ನಿಯಮಗಳ ಮೇರೆಗೆ ರಚಿಸಲಾಗಿದ್ದ ಆಯ್ಕೆ ಸಮಿತಿ ಸದರಿ ನೇಮಕಾತಿಗೆ ಸಂಬಂಧಿಸಿದ ಅಗತ್ಯ ದಾಖಲಾತಿಗಳನ್ನು ಪರಿಶೀಲಿಸಿ ನಡವಳಿಯನ್ನು ನಿರ್ವಹಿಸಿದೆಯೇ?

ಉ) ಸದರಿ ಆಯ್ಕೆ/ ನೇಮಕಾತಿ ಪ್ರಕ್ರಿಯೆಯಲ್ಲಿ ಪ್ರತಿಭಾವಂತ ಅಭ್ಯರ್ಥಿಗಳಿಗೆ ಅನ್ಯಾಯ ಮಾಡಲಾಗಿದೆಯೇ?

ಊ) ಸದರಿ ಆಯ್ಕೆ/ ನೇಮಕಾತಿ ಪ್ರಕ್ರಿಯೆಯಲ್ಲಿ ಯಾವುದಾದರೂ ಒಂದೇ ಭಾಗದ/ ವರ್ಗದ ಅಭ್ಯರ್ಥಿಗಳಿಗೆ ಹೆಚ್ಚಿನ ಅಂಕ ನೀಡಿ ಹೆಚ್ಚಿನ ಪ್ರಮಾಣದಲ್ಲಿ ಆಯ್ಕೆ/ ನೇಮಕಾತಿ ಮಾಡಲಾಗಿದೆಯೇ? ಮತ್ತು

ಋ) ವೈಪರೀತ್ಯ, ಅಕ್ರಮ/ ಅನ್ಯಾಯಗಳು ನಡೆದಿದ್ದರೆ, ಅವುಗಳು ಮರುಕಳಿಸದಂತೆ ತೆಗೆದುಕೊಳ್ಳಬಹುದಾದ ಪರಿಹಾರೋಪಾಯ ಕ್ರಮಗಳ ಬಗ್ಗೆ ಶಿಫಾರಸ್ಸು.

The scope of enquiry is in respect of the matter of reference made by the Government of Karnataka, as mentioned above.

Hon'ble Lokayukta has felt it necessary to invite statements relating to the above matter from the persons acquainted with the subject matter of the investigation, including by the candidates who had applied for the said post.

Hence, any person acquainted with the above subject matter may furnish statement in writing accompanied by an affidavit in support of the facts set out in the said statement, sworn to by the persons furnishing such statement, along with the originals or attested copies of documents, if any.

The statements may be sent either by registered post/ courier to reach the undersigned or may e submitted in person on or before 23.07.2009.

Bangalore
Date:10.06.2009

By the Order of Hon'ble Lokayukta
**MOOSA KUNHI NAYAR MOOLE**
Registrar.

**ಕರ್ನಾಟಕ ಸರ್ಕಾರ**

**ಕರ್ನಾಟಕ ಲೋಕಾಯುಕ್ತ**

**ಸಾರ್ವಜನಿಕ ತಿಳುವಳಿಕೆ ಪತ್ರ**

**ಸಂಖ್ಯೆ: ಕಂಪ್ಲೇಂಟ್/ ಲೋಕ್/ಬಿ.ಸಿ.ಡಿ./414/2008/ಎಆರ್‌ಇ-9, ಬೆಂಗಳೂರು, ದಿನಾಂಕ:10ನೇ ಜೂನ್, 2009**

ಸರ್ಕಾರದ ಆದೇಶ ಸಂಖ್ಯೆ:ಲೋಇ:172: ಸೇಸಕಿ:2008, ಬೆಂಗಳೂರು, ದಿನಾಂಕ:25.10.2008ರಲ್ಲಿ, ನಾಂಕ:09.03.2007ರ ಗೆಜೆಟ್ ನೋಟಿಫಿಕೇಶನ್ ಪ್ರಕಾರ ಸಹಾಯಕ ಇಂಜಿನಿಯರ್ ಮತ್ತು ಕಿರಿಯ ಇಂಜಿನಿಯರ್ ಇವರ ೇಮಕ ಸಂಬಂಧ ಹೊರಡಿಸಿದ ಪ್ರಕಟಣೆಯಂತೆ, Karnataka Public Works Services (Special Recruitment of ssistant Engineers and Junior Engineers), Rules 2007ರ ವಿಶೇಷ ನಿಯಮಾವಳಿಯನ್ವಯ ಲೋಕೋಪಯೋಗಿ ಲಾಖೆಯಲ್ಲಿ ತಾಂತ್ರಿಕ ವೃಂದದಲ್ಲಿ ಖಾಲಿ ಇದ್ದ 251 ಸಹಾಯಕ ಇಂಜಿನಿಯರ್ ಮತ್ತು 452 ಕಿರಿಯ ಇಂಜಿನಿಯರ್ ುದ್ದೆಗಳಿಗೆ ಮಾಡಿದ ನೇಮಕಾತಿಗಳ ಬಗ್ಗೆ ಸಂಬಂಧಿಸಿ, ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ಸರ್ಕಾರದಲ್ಲಿ ಚಾಲ್ತಿಯಲ್ಲಿರುವ ಾಮಾನ್ಯ ನೇಮಕಾತಿಯ ನಿಯಮಗಳನ್ನು ಪಾಲಿಸದೇ ಒಂದೇ ಪ್ರದೇಶದ ಹಾಗೂ ಒಂದೇ ವರ್ಗದ ಅಭ್ಯರ್ಥಿಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ ಎಂಬ ಆಪಾದನೆಗಳ ಬಗ್ಗೆ ವಿಚಾರಣೆ ನಡೆಸಲು ಪ್ರಕರಣವನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಲಂ 7(2-ಎ) ರನ್ವಯ, ಗೌರವಾನ್ವಿತ ಲೋಕಾಯುಕ್ತರಿಗೆ ವಹಿಸಲಾಗಿದ್ದು, ಈ ಬಗ್ಗೆ ನಿರ್ದಿಷ್ಟ ಶಿಫಾರಸ್ಸುಗಳನ್ನೊಳಗೊಂಡ ರದಿಯನ್ನು ಸಲ್ಲಿಸಲು ಸಹ ಸರ್ಕಾರವು ಕೋರಿರುತ್ತದೆ. ಮೇಲೆ ನಮೂದಿಸಿರುವ ಆದೇಶದನ್ವಯ ತನಿಖೆಗೆ ವಹಿಸಲಾಗಿರುವ ರಿಶೀಲನಾಂಶಗಳು/ ಉಲ್ಲೇಖ ನಿಬಂಧನೆಗಳು ಈ ಕೆಳಗಿನಂತಿವೆ.

ಅ) ಸದರಿ ನೇಮಕಾತಿಗಳನ್ನು ಇಲಾಖೆಯ ಅವಶ್ಯಕತೆ ಆಧಾರದ ಮೇಲೆ ಮಾಡಲಾಗಿದೆಯೇ?

ಆ) ಸದರಿ ನೇಮಕಾತಿಗಳಲ್ಲಿ ಸಾಮಾನ್ಯ ನೇಮಕಾತಿ/ ವಿಶೇಷ ನೇಮಕಾತಿ ನಿಯಮಗಳಲ್ಲಿನ ಕಾರ್ಯ ವಿಧಾನವನ್ನು ನುಸರಿಸಲಾಗಿದೆಯೇ? ಹಾಗೂ ಪ್ರಸ್ತುತ ಜಾರಿಯಲ್ಲಿರುವ ಮೀಸಲಾತಿ ನಿಯಮಗಳು/ ಆದೇಶಗಳನ್ನು ಪಾಲಿಸಲಾಗಿದೆಯೇ?

ಇ) ಸದರಿ ನೇಮಕಾತಿ ಪ್ರಕ್ರಿಯೆಯನ್ನು ಪಾರದರ್ಶಕವಾಗಿ ನಡೆಸಲಾಗಿದೆಯೇ? ಇಲ್ಲದಿದ್ದಲ್ಲಿ, ಸದರಿ ನೇಮಕಾತಿ ್ರಕ್ರಿಯೆಯಲ್ಲಿ ವೈಪರೀತ್ಯ (abnormality) ಅಥವಾ ಅಕ್ರಮಗಳು ನಡೆದಿವೆಯೇ?

ಈ) ವಿಶೇಷ ನೇಮಕಾತಿ ನಿಯಮಗಳ ಮೇರೆಗೆ ರಚಿಸಲಾಗಿದ್ದ ಆಯ್ಕೆ ಸಮಿತಿಯ ಸದರಿ ನೇಮಕಾತಿಗೆ ಸಂಬಂಧಿಸಿದ ಗತ್ಯ ದಾಖಲಾತಿಗಳನ್ನು ಪರಿಶೀಲಿಸಿ ನಡವಳಿಯನ್ನು ನಿರ್ವಹಿಸಿದೆಯೇ?

ಉ) ಸದರಿ ಆಯ್ಕೆ/ ನೇಮಕಾತಿ ಪ್ರಕ್ರಿಯೆಯಲ್ಲಿ ಪ್ರತಿಭಾವಂತ ಅಭ್ಯರ್ಥಿಗಳಿಗೆ ಅನ್ಯಾಯ ಮಾಡಲಾಗಿದೆಯೇ?

ಊ) ಸದರಿ ಆಯ್ಕೆ/ ನೇಮಕಾತಿ ಪ್ರಕ್ರಿಯೆಯಲ್ಲಿ ಯಾವುದಾದರೂ ಒಂದೇ ಭಾಗದ/ ವರ್ಗದ ಅಭ್ಯರ್ಥಿಗಳಿಗೆ ಹೆಚ್ಚಿನ ಂಕ ನೀಡಿ ಹೆಚ್ಚಿನ ಪ್ರಮಾಣದಲ್ಲಿ ಆಯ್ಕೆ/ ನೇಮಕಾತಿ ಮಾಡಲಾಗಿದೆಯೇ? ಮತ್ತು

ಋ) ವೈಪರೀತ್ಯ, ಅಕ್ರಮ/ ಅನ್ಯಾಯಗಳು ನಡೆದಿದ್ದರೆ, ಅವುಗಳು ಮರುಕಳಿಸದಂತೆ ತೆಗೆದುಕೊಳ್ಳಬಹುದಾದ ರಿಹಾರೋಪಾಯ ಕ್ರಮಗಳ ಬಗ್ಗೆ ಶಿಫಾರಸ್ಸು.

ಮೇಲಿನ ತನಿಖೆಯ ವ್ಯಾಪ್ತಿಯು ಮೇಲೆ ಹೇಳಿದ ಸರ್ಕಾರದ ಆದೇಶದ ಪರಿಶೀಲನಾಂಶಗಳು/ ಉಲ್ಲೇಖ ಬಂಧನೆಗಳ ಬಗ್ಗೆ ಇರುತ್ತದೆ.

ಮೇಲ್ಕಂಡ ವಿಷಯದ ತನಿಖೆಗೆ ಸಂಬಂಧಪಟ್ಟಂತೆ, ತಿಳುವಳಿಕೆಯುಳ್ಳ ಯಾವುದೇ ವ್ಯಕ್ತಿ ಅಥವಾ ಸದರಿ ಹುದ್ದೆಯ ೇಮಕಾತಿ ಪ್ರಕ್ರಿಯೆಯಲ್ಲಿ ಪಾಲ್ಗೊಂಡ ಅಭ್ಯರ್ಥಿಯ ಹೇಳಿಕೆಯನ್ನು ಪಡೆಯುವುದು ಅವಶ್ಯಕವೆಂದು ಮಾನ್ಯ ಲೋಕಾಯುಕ್ತರು ಭಿಪ್ರಾಯ ಪಟ್ಟಿರುತ್ತಾರೆ. ಆದುದರಿಂದ, ತನಿಖೆಗೆ ಸಂಬಂಧಪಟ್ಟ ಯಾವುದೇ ವ್ಯಕ್ತಿಯು ತನ್ನ ಹೇಳಿಕೆಯಲ್ಲಿನ ವಿಷಯಗಳ ೆಂಬಲವಾಗಿ ಅಂತಹ ಹೇಳಿಕೆಯನ್ನು ಪ್ರಮಾಣೀಕರಿಸುವ ಒಂದು ಶಪಥಪತ್ರವನ್ನು ಸಹ ಕೊಡಬೇಕು ಮತ್ತು ಲಭ್ಯವಿರುವ ೂಲ ದಾಖಲಾತಿಗಳನ್ನು ಅಥವಾ ದಾಖಲಾತಿಗಳ ದೃಢೀಕೃತ ಪ್ರತಿಗಳನ್ನು ಒದಗಿಸಬೇಕು.

ಈ ಪ್ರಕಾರದ ಲಿಖಿತ ಮಾಹಿತಿಗಳನ್ನು ಈ ಕೆಳಗೆ ನಮೂದು ಮಾಡಿದ ಅಧಿಕಾರಿಗೆ ನೋಂದಣಿ ಅಂಚೆ/ ೊರಿಯರ್ ಸರ್ವಿಸ್ ಮೂಲಕ ಅಥವಾ ಸ್ವತಃ ಹಾಜರಾಗಿ ದಿನಾಂಕ:23.07.2009ರಂದು ಅಥವಾ ಅದಕ್ಕೂ ಪೂರ್ವದಲ್ಲಿ ಲುಪಿಸಬಹುದಾಗಿದೆ.

ಮಾನ್ಯ ಲೋಕಾಯುಕ್ತರ ಆದೇಶದ ಮೇರೆಗೆ
ಮೂಸಾ ಕುಞ ನಾಯರ್ ಮೂಲೆ
ನಿಬಂಧಕರು.

ಪಿ.ಆರ್.505

**III -F3-B/B**

## ಅಧಿಕಾರಿಯುತ ಅಧಿಕಾರಿಗಳು ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳವರ ನ್ಯಾಯಾಲಯ, ಭದ್ರಾವತಿ ವಿಭಾಗ, ಭದ್ರಾವತಿ

## ಅಧಿಸೂಚನೆ

**ಸಂಖ್ಯೆ: ಎ3-ಸಿಓಎಸ್-ಸಿಆರ್-4/2009-10, ದಿನಾಂಕ:8ನೇ ಜೂನ್, 2009**

ಭದ್ರಾವತಿ ವಿಭಾಗದ ವ್ಯಾಪ್ತಿಯಲ್ಲಿ ಅರಣ್ಯ ಅಪರಾಧ ಪ್ರಕರಣ ಸಂಬಂಧ ಕೆಳಕಂಡ ವಾಹನಗಳನ್ನು ವಲಯ ಅರಣ್ಯಾಧಿಕಾರಿ, ತರೀಕೆರೆ ವಲಯದ ಸಿಬ್ಬಂದಿ ವರ್ಗದವರು ಸರ್ಕಾರದ ಪರ ಅಮಾನತ್ತುಪಡಿಸಿಕೊಂಡು ಕರ್ನಾಟಕ ಅರಣ್ಯ ಕಾಯಿದೆ 1963ರ ಸೆಕ್ಷನ್-71(ಎ)ರ ಪ್ರಕಾರ ಕ್ರಮ ಜರುಗಿಸುವಂತೆ ಈ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ.

| ಕ್ರ. ಸಂ. | ಮೊಕದ್ದಮೆ ಸಂಖ್ಯೆ | ವಾಹನಗಳ ವಿವರ | ಯಂತ್ರದ ಸಂಖ್ಯೆ | ಛಾಸೀಸ್ ಸಂಖ್ಯೆ |
|---|---|---|---|---|
| 1. | ವಲಯ ಅರಣ್ಯಾಧಿಕಾರಿ, ತರೀಕೆರೆ ಅರಣ್ಯ ಮೊಕದ್ದಮೆ ನಂ.30/2009-10, ದಿನಾಂಕ:30.05.2009 | ಒಂದು ಮಾರುತಿ ಓಮಿನಿ ವ್ಯಾನ್ ಸಂಖ್ಯೆ: ಕೆಎ-04-ಎನ್-2896 ಹಾಗೂ ಬೀಟೆ ಜಾತಿಯ ಸೈಜುಗಳು 5=0.354ಎಂ3 | 776076 | 916619 |

ಈ ಮೇಲ್ಕಂಡ ವಾಹನದ ನಿಜವಾದ ವಾರಸುದಾರರು ಯಾರಾದರೂ ಇದ್ದಲ್ಲಿ ಅವರು ವಾಹನಗಳ ಬಗ್ಗೆ ಅಧಿಕೃತ ಹಕ್ಕು ಬಾದ್ಯತೆಗಳನ್ನು ಈ ಕೆಳಸಹಿ ಮಾಡಿರುವವರ ಸಮ್ಮುಖದಲ್ಲಿ ಈ ಅಧಿಸೂಚನೆಯು ಕರ್ನಾಟಕ ಸರ್ಕಾರದ ಗೆಜೆಟ್‌ನಲ್ಲಿ ಪ್ರಕಟವಾದ ದಿನಾಂಕದಿಂದ ಮೂವತ್ತು (30) ದಿನಗಳ ಒಳಗೆ ಹಾಜರುಪಡಿಸಬೇಕಾಗಿ ಮತ್ತು ವಾಹನದಲ್ಲಿ ಅರಣ್ಯ ಉತ್ಪನ್ನವನ್ನು ಕಳ್ಳ ಸಾಗಾಣಿಕೆ ಮಾಡಲು ಉಪಯೋಗಿಸಿದಕ್ಕಾಗಿ ಏಕೆ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಾರದು ಎಂಬುದರ ಬಗ್ಗೆ ಅವರುಗಳು ಅಧಿಕೃತ ಸಮಜಾಯಿಷಿಯನ್ನು ಬರಹದ ಮೂಲಕ ಇತರೆ ದಾಖಲಾತಿಗಳೊಂದಿಗೆ ಈ ಕೆಳಸಹಿದಾರರ ಸಮ್ಮುಖದಲ್ಲಿ ಹಾಜರುಪಡಿಸಲು ಈ ಮೂಲಕ ಪ್ರಕಟಿಸಲಾಗಿದೆ. ಮೇಲ್ಕಾಣಿಸಿದ ಅವಧಿಯೊಳಗೆ ಲಿಖಿತ ಮೂಲಕ ಯಾವುದೇ ಅರ್ಜಿಯನ್ನು ಈ ಕೆಳಸಹಿದಾರರಿಗೆ ಸಲ್ಲಿಸದೇ ಇದ್ದಲ್ಲಿ ಈ ವಾಹನಗಳನ್ನು ಕರ್ನಾಟಕ ಅರಣ್ಯ ಕಾಯಿದೆ 1963ರ ಸೆಕ್ಷನ್ 71(ಎ) ಎರಡನೇ ತಿದ್ದುಪಡಿ ಪ್ರಕಾರ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

**ಟಿ. ಹೀರಾಲಾಲ್**

ಪಿ.ಆರ್.502 ಉಪ ಅರಣ್ಯ ಸಂರಕ್ಷಣಾಧಿಕಾರಿ, ಭದ್ರಾವತಿ ವಿಭಾಗ, ಭದ್ರಾವತಿ.

## ದಿನಾಂಕ:28.05.2009 ರಂದು ನಗರಸಭೆ, ಶಿವಮೊಗ್ಗದ ಅಧ್ಯಕ್ಷರ ಸ್ಥಾನದ ಚುನಾವಣಾ ಸಭೆಯ ನಡವಳಿಕೆಗಳು

**ಅಧ್ಯಕ್ಷತೆ:** ಶ್ರೀ ಎನ್.ಆರ್. ನಾಗರಾಜು, ಕೆ.ಎ.ಎಸ್. ಉಪವಿಭಾಗಾಧಿಕಾರಿ,

**ಶಿವಮೊಗ್ಗ ಉಪವಿಭಾಗ ಹಾಗೂ ಚುನಾವಣಾಧಿಕಾರಿ, ಶಿವಮೊಗ್ಗ ನಗರಸಭೆ, ಅಧ್ಯಕ್ಷರ ಚುನಾವಣೆ, ಶಿವಮೊಗ್ಗ.**

**ಸಭೆಯಲ್ಲಿ ಹಾಜರಿದ್ದ ಸದಸ್ಯರು**

| ಕ್ರ. ಸಂ. | ಸದಸ್ಯರ ಹೆಸರು | ಸಹಿ |
|---|---|---|
| 1. | ಶ್ರೀ ಕೆ. ವಿಶ್ವನಾಥ್ (ವಿಶ್ವಣ್ಣ) | ಸಹಿ/- |
| 2. | ಶ್ರೀಮತಿ ಲಕ್ಷ್ಮಮ್ಮ ಸಣ್ಣಪ್ಪ | ಸಹಿ/- |
| 3. | ಶ್ರೀ ಯೋಗೇಶ್ ಹೆಚ್.ಸಿ. | ಸಹಿ/- |
| 4. | ಶ್ರೀ ಡಿ. ಮೋಹನರೆಡ್ಡಿ | ಸಹಿ/- |
| 5. | ಶ್ರೀ ಎಂ. ರಾಜಣ್ಣ | ಸಹಿ/- |
| 6. | ಶ್ರೀ ಡಿ. ಸೋಮಸುಂದರಂ (ಸೋಮಣ್ಣ) | ಸಹಿ/- |
| 7. | ಶ್ರೀಮತಿ ರೇಣುಕಾನಾಗರಾಜ್ (ಕೆ.ಸಿ.ಎನ್.) | ಸಹಿ/- |
| 8. | ಶ್ರೀ ಎಂ. ಶಂಕರ್ | ಸಹಿ/- |
| 9. | ಶ್ರೀಮತಿ ವಿಜಯಲಕ್ಷ್ಮಿ ಸಿ.ಪಾಟೀಲ್ | ಸಹಿ/- |
| 10. | ಶ್ರೀಮತಿ ಹೆಚ್. ಧನಲಕ್ಷ್ಮಿ | ಸಹಿ/- |
| 11. | ಶ್ರೀಮತಿ ನುಸರತ್‌ಬಾನು | ಸಹಿ/- |
| 12. | ಶ್ರೀ ಎಸ್.ಎನ್. ಚನ್ನಬಸಪ್ಪ (ಚೆನ್ನಿ) | ಸಹಿ/- |
| 13. | ಶ್ರೀಮತಿ ಎಸ್.ರೂಪ | ಸಹಿ/- |
| 14. | ಶ್ರೀ ಎಸ್. ರಾಜಶೇಖರ್ | ಸಹಿ/- |

| ಕ್ರ. ಸಂ. | ಸದಸ್ಯರ ಹೆಸರು | ಸಹಿ |
|---|---|---|
| 15. | ಶ್ರೀ ಆರ್.ಸಿ. ನಾಯ್ಡು | ಸಹಿ/– |
| 16. | ಶ್ರೀಮತಿ ಎಸ್. ಆಶಾ | ಸಹಿ/– |
| 17. | ಶ್ರೀ ಎಸ್.ಕೆ. ಮರಿಯಪ್ಪ | ಸಹಿ/– |
| 18. | ಶ್ರೀ ಆರ್. ಲಕ್ಷ್ಮಣ | ಸಹಿ/– |
| 19. | ಶ್ರೀ ಬಿ. ಸತ್ಯನಾರಾಯಣ | ಸಹಿ/– |
| 20. | ಶ್ರೀ ಎಂ. ಮಲ್ಲೇಶ್ | ಸಹಿ/– |
| 21. | ಶ್ರೀ ಕೆ.ಎಸ್. ಗಂಗಾಧರಪ್ಪ | ಸಹಿ/– |
| 22. | ಶ್ರೀ ಎಸ್. ರಮೇಶ್ (ರಾಮು) | ಸಹಿ/– |
| 23. | ಶ್ರೀಮತಿ ಶಂಷಾದ್ | ಸಹಿ/– |
| 24. | ಶ್ರೀ ಎನ್. ಪರಂಧಾಮರೆಡ್ಡಿ | ಸಹಿ/– |
| 25. | ಶ್ರೀ ಕೆ.ಬಿ. ಪ್ರಸನ್ನಕುಮಾರ್ | ಗೈರು ಹಾಜರಿ |
| 26. | ಶ್ರೀ ಎನ್.ಜೆ. ರಾಜಶೇಖರ್ (ಸುಭಾಷ್) | ಸಹಿ/– |
| 27. | ಶ್ರೀ ಎ. ಮುನಿಸ್ವಾಮಿ | ಸಹಿ/– |
| 28. | ಶ್ರೀಮತಿ ಬಿ. ಶಮೀನಾಬಾನು | ಸಹಿ/– |
| 29. | ಶ್ರೀಮತಿ ಸುನೀತಾ ಕೆ.ವಿ. ಅಣ್ಣಪ್ಪ | ಸಹಿ/– |
| 30. | ಶ್ರೀಮತಿ ಶಾರದಾಭಾಸ್ಕರ್ ಭಟ್ | ಸಹಿ/– |
| 31. | ಶ್ರೀಮತಿ ಎಸ್. ಲಕ್ಷ್ಮೀ | ಸಹಿ/– |
| 32. | ಶ್ರೀ ಕೆ. ಶಂಕರ | ಸಹಿ/– |
| 33. | ಶ್ರೀ ಸಿ. ಹೊನ್ನಪ್ಪ | ಸಹಿ/– |
| 34. | ಶ್ರೀ ಪಿ.ವಿ. ವಿಶ್ವನಾಥ (ಕಾಶಿ) | ಸಹಿ/– |
| 35. | ಶ್ರೀ ಅಬ್ದುಲ್ ರೆಹಮಾನ್ | ಸಹಿ/– |
| 36. | ಶ್ರೀ ಕೆ.ಎಸ್. ಈಶ್ವರಪ್ಪ, ಇಂಧನ ಸಚಿವರು ಹಾಗೂ ಶಾಸಕರು, ಶಿವಮೊಗ್ಗ. | ಸಹಿ/– |
| 37. | ಶ್ರೀ ಕೆ.ಜಿ. ಕುಮಾರಸ್ವಾಮಿ, ಶಾಸಕರು, ಶಿವಮೊಗ್ಗ (ಗ್ರಾ) | ಸಹಿ/– |
| 38. | ಶ್ರೀ ಡಿ.ಹೆಚ್. ಶಂಕರಮೂರ್ತಿ, ವಿಧಾನಪರಿಷತ್ ಸದಸ್ಯರು | ಸಹಿ/– |
| 39. | ಶ್ರೀ ಬಿ.ವೈ. ರಾಘವೇಂದ್ರ, ಲೋಕಸಭಾ ಸದಸ್ಯರು, ಶಿವಮೊಗ್ಗ | ಸಹಿ/– |
| 40. | ಶ್ರೀ ಮೀರ್ ಅಜೀಜ್ ಅಹಮದ್, ವಿಧಾನಪರಿಷತ್ ಸದಸ್ಯರು, ಶಿವಮೊಗ್ಗ. | ಸಹಿ/– |

ಚುನಾವಣಾಧಿಕಾರಿ ಹಾಗೂ ಉಪವಿಭಾಗಾಧಿಕಾರಿ,
ಶಿವಮೊಗ್ಗ, ಉಪವಿಭಾಗ, ಶಿವಮೊಗ್ಗ.

ಕರ್ನಾಟಕ ಪುರಸಭೆ ಅಧಿನಿಯಮ 1964ರ ಸೆಕ್ಷನ್ 11ರಂತೆ ಹಾಜರಿದ್ದ ಸದಸ್ಯರ ಹಾಜರಾತಿಯನ್ನು ದಾಖಲಿಸಿಕೊಳ್ಳಲಾಯಿತು.

ಶಿವಮೊಗ್ಗ ನಗರಸಭೆಯ 5ನೇ ಅವಧಿಯ ಅಧ್ಯಕ್ಷರ ಸ್ಥಾನವು ರಾಜೀನಾಮೆಯಿಂದ ತೆರವಾಗಿದ್ದು, ಸದರಿ ತೆರವಾದ ಅಧ್ಯಕ್ಷರ ಸ್ಥಾನಕ್ಕೆ ಚುನಾವಣೆ ನಡೆಸುವಂತೆ ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆರವರ ಪತ್ರ ನಂ.ಜಿನಕೋ.(3)ಸಿಆರ್.10/2009–10 ದಿನಾಂಕ:14.05.2009ರನ್ವಯ ಉಪವಿಭಾಗಾಧಿಕಾರಿಗಳು, ಶಿವಮೊಗ್ಗ ಉಪವಿಭಾಗ, ಶಿವಮೊಗ್ಗರವರಿಗೆ ಚುನಾವಣಾಧಿಕಾರಿಗಳಾಗಿ ಕಾರ್ಯ ನಿರ್ವಹಿಸಲು ಹಾಗೂ ಅಧಿಸೂಚನೆ ದಿನಾಂಕ:24.01.2008ರನ್ವಯ ಶಿವಮೊಗ್ಗ ನಗರಸಭೆಯ ಅಧ್ಯಕ್ಷರ ಸ್ಥಾನವನ್ನು "ಸಾಮಾನ್ಯ ವರ್ಗಕ್ಕೆ" ಎಂದು ಸರ್ಕಾರ ಮೀಸಲಾತಿ ನಿಗದಿಪಡಿಸಿರುತ್ತಾರೆಂದು ಸಭೆಯಲ್ಲಿ ಓದಿ ತಿಳಿಸಲಾಯಿತು.

ಶಿವಮೊಗ್ಗ ನಗರಸಭೆಗೆ ಐದನೇ ಅವಧಿಯ ಉಳಿಕೆ ಅವಧಿಗೆ ನಿಯಮಗಳು 1965 ಹಾಗೂ ತಿದ್ದುಪಡಿ ನಿಯಮಗಳು 1995 (4)ರಂತೆ ದಿನಾಂಕ:28.05.2009ರಂದು ಬೆಳಿಗ್ಗೆ 11–00 ಗಂಟೆಯವರೆಗೆ ಈ ಕೆಳಕಂಡವರು ನಾಮಪತ್ರಗಳನ್ನು ಸಲ್ಲಿಸಿರುತ್ತಾರೆಂದು ಸಭೆಗೆ ತಿಳಿಸಲಾಯಿತು.

ಅಧ್ಯಕ್ಷರ ಸ್ಥಾನಕ್ಕೆ ಸಲ್ಲಿಸಿದ ನಾಮಪತ್ರಗಳ ವಿವರ

| ಕ್ರ. ಸಂ. | ನಾಮಪತ್ರ ಸಲ್ಲಿಸಿದ ಸದಸ್ಯರ ಹೆಸರು | ಸೂಚಕರ ಹೆಸರು |
|---|---|---|
| 1. | ಶ್ರೀ ಎನ್.ಜೆ. ರಾಜಶೇಖರ್ (ಸುಭಾಷ್) | ಶ್ರೀ ಎಂ. ಶಂಕರ್ |
| 2. | ಶ್ರೀ ಎನ್.ಜೆ. ರಾಜಶೇಖರ್ (ಸುಭಾಷ್) | ಶ್ರೀ ಎನ್. ಪರಂಧಾಮರೆಡ್ಡಿ |
| 3. | ಶ್ರೀ ಎನ್.ಜೆ. ರಾಜಶೇಖರ್ (ಸುಭಾಷ್) | ಶ್ರೀ ಕೆ.ಎಸ್. ಗಂಗಾಧರಪ್ಪ |
| 4. | ಶ್ರೀ ಎಸ್.ಕೆ. ಮರಿಯಪ್ಪ | ಶ್ರೀಮತಿ ಶಮೀನಾಬಾನು |

ಚುನಾವಣಾಧಿಕಾರಿ ಹಾಗೂ ಉಪವಿಭಾಗಾಧಿಕಾರಿ

ಶಿವಮೊಗ್ಗ, ಉಪವಿಭಾಗ, ಶಿವಮೊಗ್ಗ.

**ನಾಮಪತ್ರಗಳ ಪರಿಶೀಲನೆ:**

ಮೇಲ್ಕಂಡಂತೆ ಅಧ್ಯಕ್ಷರ ಸ್ಥಾನಕ್ಕೆ ಸಲ್ಲಿಸಲಾದ ನಾಮಪತ್ರಗಳನ್ನು ಕ್ರಮವಾಗಿ ಪರಿಶೀಲನೆಗೆ ತೆಗೆದುಕೊಳ್ಳಲಾಯಿತು. ನಾಮಪತ್ರಗಳನ್ನು ಸಲ್ಲಿಸಿದ ಸದಸ್ಯರ ಹಾಗೂ ಸೂಚಕರ ಹೆಸರುಗಳನ್ನು ಸಭೆಗೆ ಓದಿ ತಿಳಿಸಲಾಯಿತು. ನಾಮಪತ್ರಗಳು ಕ್ರಮಬದ್ಧವಾಗಿರುವುದರಿಂದ ಅಂಗೀಕರಿಸಲಾಯಿತು.

**1. ಅಧ್ಯಕ್ಷರ ಸ್ಥಾನಕ್ಕೆ ಚುನಾವಣೆಗೆ ಅಂಗೀಕರಿಸಿದ ನಾಮಪತ್ರಗಳು**

| | |
|---|---|
| 1. | ಶ್ರೀ ಎನ್.ಜೆ. ರಾಜಶೇಖರ್ (ಸುಭಾಷ್) |
| 2. | ಶ್ರೀ ಎಸ್.ಕೆ. ಮರಿಯಪ್ಪ |

**ತಿರಸ್ಕರಿಸಿರುವ ನಾಮಪತ್ರಗಳು**

-ಯಾವುದೂ ಇರುವುದಿಲ್ಲ-

ಚುನಾವಣಾಧಿಕಾರಿ ಹಾಗೂ ಉಪವಿಭಾಗಾಧಿಕಾರಿ

ಶಿವಮೊಗ್ಗ, ಉಪವಿಭಾಗ, ಶಿವಮೊಗ್ಗ.

ಈ ಮೇಲ್ಕಂಡಂತೆ ಕ್ರಮಬದ್ಧವಾಗಿ ಅಂಗೀಕರಿಸಲಾದ ನಾಮಪತ್ರಗಳನ್ನು ಕರ್ನಾಟಕ ಪೌರಸಭೆಗಳ (ಅಧ್ಯಕ್ಷ ಚುನಾವಣೆ ನಡೆಸುವಿಕೆ ತಿದ್ದುಪಡಿ ನಿಯಮಗಳು 1995ರ ನಿಯಮ 7ರ ಮೇರೆಗೆ ನಾಮಪತ್ರಗಳನ್ನು ಹಿಂತೆಗೆದುಕೊಳ್ಳ ಅವಕಾಶವಿದ್ದು, ಚುನಾವಣಾ ವೇಳಾಪಟ್ಟಿಯಂತೆ ಮಧ್ಯಾಹ್ನ 1-20 ರಿಂದ 1-40ರವರೆಗೆ ಅವಕಾಶ ನೀಡಲಾಯಿತು.

ಯಾರು ನಾಮಪತ್ರಗಳನ್ನು ಹಿಂತೆಗೆದುಕೊಂಡಿರುವುದಿಲ್ಲ.

ನಾಮಪತ್ರವನ್ನು ಹಿಂತೆಗೆದುಕೊಳ್ಳುವ ಪ್ರಕ್ರಿಯೆ ನಂತರದಲ್ಲಿ ಈ ಕೆಳಕಂಡವರು ಅಧ್ಯಕ್ಷರ ಚುನಾವಣೆಯ ಕಣದ ಉಳಿದಿರುವುದನ್ನು ಸಭೆಗೆ ಓದಿ ತಿಳಿಸಲಾಯಿತು.

| | |
|---|---|
| 1. | ಶ್ರೀ ಎನ್.ಜೆ. ರಾಜಶೇಖರ್ (ಸುಭಾಷ್) |
| 2. | ಶ್ರೀ ಎಸ್.ಕೆ. ಮರಿಯಪ್ಪ |

**ಅಧ್ಯಕ್ಷರ ಹುದ್ದೆಗೆ ಚುನಾವಣೆ**

ಅಧ್ಯಕ್ಷರ ಹುದ್ದೆಯ ಚುನಾವಣೆಯನ್ನು ಕರ್ನಾಟಕ ಪುರಸಭೆಗಳ (ಅಧ್ಯಕ್ಷರ) ಚುನಾವಣೆ ನಡೆಸುವಿಕೆ ನಿಯಮಗಳು 1995ರ ನಿಯಮ 8ರ ಮೇರೆಗೆ ನಡೆಸಬೇಕಾದ ವಿಧಾನವನ್ನು ಸಭೆಗೆ ತಿಳಿಸಲಾಯಿತು.

ಈ ಕೆಳಕಂಡವರು ಶ್ರೀ ಎನ್.ಜೆ. ರಾಜಶೇಖರ್ (ಸುಭಾಷ್) ರವರ ಪರವಾಗಿ ಅಧ್ಯಕ್ಷರ ಸ್ಥಾನಕ್ಕೆ ಅಭ್ಯರ್ಥಿ ಪರವಾ ಕೈ ಎತ್ತುವ ಮೂಲಕ ತಮ್ಮ ಮತ ಚಲಾಯಿಸಿರುವುದನ್ನು ದಾಖಲಿಸಿಕೊಳ್ಳಲಾಯಿತು.

| ಕ್ರ. ಸಂ. | ಶ್ರೀ/ಶ್ರೀಮತಿ | ಸಹಿ |
|---|---|---|
| 1. | ಕೆ.ಜಿ. ಕುಮಾರಸ್ವಾಮಿ | ಸಹಿ/- |
| 2. | ಬಿ.ವೈ. ರಾಘವೇಂದ್ರ | ಸಹಿ/- |
| 3. | ಡಿ.ಹೆಚ್. ಶಂಕರಮೂರ್ತಿ | ಸಹಿ/- |
| 4. | ಕೆ.ಎಸ್. ಈಶ್ವರಪ್ಪ | ಸಹಿ/- |

| ಕ್ರ. ಸಂ. | ಶ್ರೀ/ಶ್ರೀಮತಿ | ಸಹಿ |
|---|---|---|
| 5. | ಎನ್.ಜೆ. ರಾಜಶೇಖರ್ (ಸುಭಾಷ್) | ಸಹಿ/- |
| 6. | ಎನ್. ಪರಂಧಾಮರೆಡ್ಡಿ | ಸಹಿ/- |
| 7. | ಎಂ. ರಾಜಣ್ಣ | ಸಹಿ/- |
| 8. | ಕೆ. ಶಂಕರ | ಸಹಿ/- |
| 9. | ಎಂ. ಶಂಕರ | ಸಹಿ/- |
| 10. | ಬಿ. ಸತ್ಯನಾರಾಯಣ | ಸಹಿ/- |
| 11. | ಕೆ. ವಿಶ್ವನಾಥ್ (ವಿಶ್ವಣ್ಣ) | ಸಹಿ/- |
| 12. | ಡಿ. ಸೋಮಸುಂದರಂ (ಸೋಮಣ್ಣ) | ಸಹಿ/- |
| 13. | ಅಬ್ದುಲ್ ರೆಹಮಾನ್ | ಸಹಿ/- |
| 14. | ಶಂಷಾದ್ | ಸಹಿ/- |
| 15. | ಲಕ್ಷ್ಮಮ್ಮ ಸಣ್ಣಪ್ಪ | ಸಹಿ/- |
| 16. | ಡಿ. ಮೋಹನರೆಡ್ಡಿ | ಸಹಿ/- |
| 17. | ಎಸ್. ರಮೇಶ (ರಾಮು) | ಸಹಿ/- |
| 18. | ಸಿ. ಹೊನ್ನಪ್ಪ | ಸಹಿ/- |
| 19. | ಕೆ.ಎಸ್. ಗಂಗಾಧರಪ್ಪ | ಸಹಿ/- |
| 20. | ಆರ್. ಲಕ್ಷ್ಮಣ್ | ಸಹಿ/- |
| 21. | ಎಸ್.ಎನ್.ಚನ್ನಬಸಪ್ಪ (ಚೆನ್ನಿ) | ಸಹಿ/- |
| 22. | ಎಸ್. ಲಕ್ಷ್ಮೀ | ಸಹಿ/- |
| 23. | ಹೆಚ್.ಧನಲಕ್ಷ್ಮಿ | ಸಹಿ/- |
| 24. | ಸುನೀತಾ ಕೆ.ವಿ. ಅಣ್ಣಪ್ಪ | ಸಹಿ/- |
| 25. | ರೇಣುಕಾನಾಗರಾಜ್ | ಸಹಿ/- |
| 26. | ಎಸ್.ರೂಪ | ಸಹಿ/- |
| 27. | ಎಸ್. ಆಶಾ | ಸಹಿ/- |
| 28. | ಶಾರದಾಭಾಸ್ಕರ್‌ಭಟ್ | ಸಹಿ/- |

ಚುನಾವಣಾಧಿಕಾರಿ ಹಾಗೂ ಉಪವಿಭಾಗಾಧಿಕಾರಿ,
ಶಿವಮೊಗ್ಗ, ಉಪವಿಭಾಗ, ಶಿವಮೊಗ್ಗ.

ಈ ಕೆಳಕಂಡವರು ಶ್ರೀ ಎನ್.ಜೆ. ರಾಜಶೇಖರ್ (ಸುಭಾಷ್) ರವರ ವಿರುದ್ಧ ಅಧ್ಯಕ್ಷರ ಸ್ಥಾನಕ್ಕೆ ಕೈ ಎತ್ತುವ ಮೂಲಕ ಮತ ಚಲಾಯಿಸಿರುವುದನ್ನು ದಾಖಲಿಸಿಕೊಳ್ಳಲಾಯಿತು.

| ಕ್ರ. ಸಂ. | ಶ್ರೀ/ಶ್ರೀಮತಿ | ಸಹಿ |
|---|---|---|
| 1. | ಎಸ್.ಕೆ. ಮರಿಯಪ್ಪ | ಸಹಿ/- |
| 2 | ಪಿ.ವಿ. ವಿಶ್ವನಾಥ (ಕಾಶಿ) | ಸಹಿ/- |
| 3. | ಆರ್.ಸಿ. ನಾಯ್ಕ | ಸಹಿ/- |
| 4. | ಬಿ. ಶಮೀನಾಬಾನು | ಸಹಿ/- |
| 5. | ನುಸರತ್‌ಬಾನು | ಸಹಿ/- |
| 6. | ವಿಜಯಲಕ್ಷ್ಮಿ ಸಿ. ಪಾಟೀಲ್ | ಸಹಿ/- |
| 7. | ಹೆಚ್.ಸಿ. ಯೋಗೇಶ್ | ಸಹಿ/- |
| 8. | ಎಸ್. ರಾಜಶೇಖರ್ | ಸಹಿ/- |
| 9. | ಎ. ಮುನಿಸ್ವಾಮಿ | ಸಹಿ/- |
| 10. | ಎಂ. ಮಲ್ಲೇಶ್ | ಸಹಿ/- |

ಶ್ರೀ ಮೀರ್‌ಅಜೀಜ್ ಅಹಮದ್, ವಿಧಾನ ಪರಿಷತ್ ಸದಸ್ಯರು, ಶಿವಮೊಗ್ಗ ಇವರು ಕೈ ಎತ್ತುವ ಮೂಲಕ ಮತ ಚಲಾಯಿಸುವ ಸಮಯದಲ್ಲಿ ಸಭೆಯಿಂದ ಹೊರನಡೆದಿರುತ್ತಾರೆ.

ಚುನಾವಣಾಧಿಕಾರಿ ಹಾಗೂ ಉಪವಿಭಾಗಾಧಿಕಾರಿ,
ಶಿವಮೊಗ್ಗ, ಉಪವಿಭಾಗ, ಶಿವಮೊಗ್ಗ.

ಈ ಕೆಳಕಂಡವರು ಶ್ರೀ ಎಸ್.ಕೆ. ಮರಿಯಪ್ಪರವರ ಪರವಾಗಿ ಅಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿ ಪರವಾಗಿ ಕೈ ಎತ್ತುವ ಮೂಲಕ ತಮ್ಮ ಮತ ಚಲಾಯಿಸಿರುವುದನ್ನು ದಾಖಲಿಸಿಕೊಳ್ಳಲಾಯಿತು.

| ಕ್ರ. ಸಂ. | ಶ್ರೀ/ಶ್ರೀಮತಿ | ಸಹಿ |
|---|---|---|
| 1. | ಎಸ್.ಕೆ. ಮರಿಯಪ್ಪ | ಸಹಿ/- |
| 2 | ಪಿ.ವಿ. ವಿಶ್ವನಾಥ (ಕಾಶಿ) | ಸಹಿ/- |
| 3. | ಆರ್.ಸಿ. ನಾಯ್ಕ | ಸಹಿ/- |
| 4. | ಬಿ. ಶಮೀನಾಬಾನು | ಸಹಿ/- |
| 5. | ನುಸರತ್‌ಬಾನು | ಸಹಿ/- |
| 6. | ವಿಜಯಲಕ್ಷ್ಮಿ ಸಿ. ಪಾಟೀಲ್ | ಸಹಿ/- |
| 7. | ಹೆಚ್.ಸಿ. ಯೋಗೇಶ್ | ಸಹಿ/- |
| 8. | ಎಸ್. ರಾಜಶೇಖರ್ | ಸಹಿ/- |
| 9. | ಎ. ಮುನಿಸ್ವಾಮಿ | ಸಹಿ/- |
| 10. | ಎಂ. ಮಲ್ಲೇಶ್ | ಸಹಿ/- |

ಚುನಾವಣಾಧಿಕಾರಿ ಹಾಗೂ ಉಪವಿಭಾಗಾಧಿಕಾರಿ,
ಶಿವಮೊಗ್ಗ, ಉಪವಿಭಾಗ, ಶಿವಮೊಗ್ಗ.

ಈ ಕೆಳಕಂಡವರು ಶ್ರೀ ಎಸ್.ಕೆ. ಮರಿಯಪ್ಪ ರವರ ವಿರುದ್ಧ ಅಧ್ಯಕ್ಷರ ಸ್ಥಾನಕ್ಕೆ ಕೈ ಎತ್ತುವ ಮೂಲಕ ಮತ ಚಲಾಯಿಸಿರುವುದನ್ನು ದಾಖಲಿಸಿಕೊಳ್ಳಲಾಯಿತು.

| ಕ್ರ. ಸಂ. | ಶ್ರೀ/ಶ್ರೀಮತಿ | ಸಹಿ |
|---|---|---|
| 1. | ಕೆ.ಎಸ್. ಈಶ್ವರಪ್ಪ | ಸಹಿ/- |
| 2. | ಡಿ.ಹೆಚ್. ಶಂಕರಮೂರ್ತಿ | ಸಹಿ/- |
| 3. | ಬಿ.ವೈ. ರಾಘವೇಂದ್ರ | ಸಹಿ/- |
| 4. | ಕೆ.ಜಿ. ಕುಮಾರಸ್ವಾಮಿ | ಸಹಿ/- |
| 5. | ಎನ್.ಜೆ. ರಾಜಶೇಖರ್ (ಸುಭಾಷ್) | ಸಹಿ/- |
| 6. | ಎನ್. ಪರಂಧಾಮರೆಡ್ಡಿ | ಸಹಿ/- |
| 7. | ಎಂ. ರಾಜಣ್ಣ | ಸಹಿ/- |
| 8. | ಕೆ. ಶಂಕರ | ಸಹಿ/- |
| 9. | ಎಂ. ಶಂಕರ | ಸಹಿ/- |
| 10. | ಡಿ. ಸೋಮಸುಂದರಂ (ಸೋಮಣ್ಣ) | ಸಹಿ/- |
| 11. | ಕೆ. ವಿಶ್ವನಾಥ್ (ವಿಶ್ವಣ್ಣ) | ಸಹಿ/- |
| 12. | ಬಿ. ಸತ್ಯನಾರಾಯಣ | ಸಹಿ/- |
| 13. | ಅಬ್ದುಲ್ ರೆಹಮಾನ್ | ಸಹಿ/- |
| 14. | ಶಂಷಾದ್ | ಸಹಿ/- |
| 15. | ಲಕ್ಷ್ಮಮ್ಮ ಸಣ್ಣಪ್ಪ | ಸಹಿ/- |
| 16. | ಡಿ. ಮೋಹನರೆಡ್ಡಿ | ಸಹಿ/- |
| 17. | ಎಸ್. ರಮೇಶ್ (ರಾಮು) | ಸಹಿ/- |
| 18. | ಸಿ. ಹೊನ್ನಪ್ಪ | ಸಹಿ/- |

| ಕ್ರ. ಸಂ. | ಶ್ರೀ/ಶ್ರೀಮತಿ | ಸಹಿ |
|---|---|---|
| 19. | ಕೆ.ಎಸ್. ಗಂಗಾಧರಪ್ಪ | ಸಹಿ/- |
| 20. | ಆರ್. ಲಕ್ಷ್ಮಣ್ | ಸಹಿ/- |
| 21. | ಎಸ್.ಎನ್. ಚನ್ನಬಸಪ್ಪ (ಚೆನ್ನಿ) | ಸಹಿ/- |
| 22. | ಎಸ್. ಲಕ್ಷ್ಮೀ | ಸಹಿ/- |
| 23. | ಹೆಚ್. ಧನಲಕ್ಷ್ಮಿ | ಸಹಿ/- |
| 24. | ಸುನೀತಾ ಕೆ.ವಿ. ಅಣ್ಣಪ್ಪ | ಸಹಿ/- |
| 25. | ರೇಣುಕಾನಾಗರಾಜ್ | ಸಹಿ/- |
| 26. | ಎಸ್. ರೂಪ | ಸಹಿ/- |
| 27. | ಎಸ್. ಆಶಾ | ಸಹಿ/- |
| 28. | ಶಾರದಾಭಾಸ್ಕರ್‌ಭಟ್ | ಸಹಿ/- |

ಶ್ರೀ ಮೀರ್‌ಅಜೀಜ್ ಅಹಮದ್, ವಿಧಾನ ಪರಿಷತ್ ಸದಸ್ಯರು, ಶಿವಮೊಗ್ಗ ಇವರು ಕೈಎತ್ತುವ ಮೂಲಕ ಮತ ಚಲಾಯಿಸುವ ಸಮಯದಲ್ಲಿ ಸಭೆಯಿಂದ ಹೊರನಡೆದಿರುತ್ತಾರೆ.

ಮೇಲ್ಕಂಡಂತೆ ಚುನಾವಣೆಯಲ್ಲಿ ಅಧ್ಯಕ್ಷರ ಹುದ್ದೆಗೆ ಸ್ಪರ್ಧಿಸಿದ್ದ ಶ್ರೀ ಎನ್.ಜೆ. ರಾಜಶೇಖರ್ (ಸುಭಾಷ್) ರವರು 28 ಮತಗಳನ್ನು ಹಾಗೂ ಶ್ರೀ ಎಸ್.ಕೆ. ಮರಿಯಪ್ಪನವರು 10 ಮತಗಳನ್ನು ಗಳಿಸಿದ್ದು, ಶಿವಮೊಗ್ಗ ನಗರಸಭೆಯ 5ನೇ ಅವಧಿಗೆ 18 ಮತಗಳನ್ನು ಹೆಚ್ಚಾಗಿ ಪಡೆಯುವುದರ ಮೂಲಕ ಶ್ರೀ ಎನ್.ಜೆ. ರಾಜಶೇಖರ್ (ಸುಭಾಷ್) ರವರು ಅಧ್ಯಕ್ಷರಾಗಿ ಆಯ್ಕೆಯಾಗಿರುತ್ತಾರೆಂದು ಘೋಷಿಸಿ ದಾಖಲಿಸಲಾಗಿದೆ.

ಚುನಾವಣಾಧಿಕಾರಿ ಹಾಗೂ ಉಪವಿಭಾಗಾಧಿಕಾರಿ,

ಪೌರಾಯುಕ್ತರು, ನಗರಸಭೆ, ಶಿವಮೊಗ್ಗ ಶಿವಮೊಗ್ಗ, ಉಪವಿಭಾಗ, ಶಿವಮೊಗ್ಗ.

"ಯಥಾ ನಕಲು"

ಪಿ.ಆರ್.497 ಉಪವಿಭಾಗಾಧಿಕಾರಿ, ಶಿವಮೊಗ್ಗ ಉಪವಿಭಾಗ, ಶಿವಮೊಗ್ಗ.

**ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ**

**ಪ್ರಕಟಣೆ**

**ಸಂಖ್ಯೆ: ಜಿಸಕಅ/ಬೆಂಗ್ರಾ/ಕಾಪದ/ಸಿಆರ್1/09-10, ದಿನಾಂಕ:4ನೇ ಜೂನ್, 2009**

**ವಿಷಯ:** 2009-10ನೇ ಸಾಲಿಗೆ ಆಡಳಿತ ನ್ಯಾಯಾಧೀಕರಣ ಯೋಜನೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಕಾನೂನು ಪದವೀಧರರಿಗೆ ತರಬೇತಿ ನೀಡುವ ಬಗ್ಗೆ.

2009-10ನೇ ಸಾಲಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ತಾಲ್ಲೂಕು ವ್ಯಾಪ್ತಿಯಲ್ಲಿ ಸಮಾಜ ಕಲ್ಯಾಣ ಇಲಾಖಾ ವತಿಯಿಂದ ಆಡಳಿತ ನ್ಯಾಯಾಧೀಕರಣ ಯೋಜನೆಯಡಿ ತರಬೇತಿ ನೀಡಲು ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗದ ಕಾನೂನು ಪದವೀಧರರಿಂದ ಅರ್ಜಿಗಳನ್ನು ಆಹ್ವಾನಿಸಿ ಪ್ರಕಟಣೆ ಹೊರಡಿಸಲಾಗಿದೆ. ಈ ಕೆಳಗೆ ನಮೂದಿಸಿರುವ ಷರತ್ತುಗಳ ಪ್ರಕಾರ ಅರ್ಹ ಅಭ್ಯರ್ಥಿಗಳು ಮಾತ್ರ ಈ ಕೆಳಕಂಡ ಕಛೇರಿಯಲ್ಲಿ ಅರ್ಜಿಗಳನ್ನು ಪಡೆಯಬಹುದು. ಅರ್ಜಿ ಸಲ್ಲಿಸಲು ಕಡೆಯ ದಿನಾಂಕ:31.07.2009. ತಡವಾಗಿ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

**ಷರತ್ತುಗಳು:**

1) ಅಭ್ಯರ್ಥಿಗಳು 35 ವರ್ಷ ವಯೋಮಿತಿಯೊಳಗಿರಬೇಕು.

2) ಬೆಂಗಳೂರು ಗ್ರಾಮಾಂತರ ಜಿಲ್ಲಾ ವ್ಯಾಪ್ತಿಗೆ ಬರುವ 4 ತಾಲ್ಲೂಕುಗಳ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸತಕ್ಕದ್ದು.

3) ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕಕ್ಕೆ ಎರಡು ವರ್ಷದ ಒಳಗೆ ಕಾನೂನು ಪದವಿಯನ್ನು ಪಡೆದಿರಬೇಕು.

4) ತರಬೇತಿ ಅವಧಿ 4 ವರ್ಷಗಳಾಗಿದ್ದು, ಮಾಸಿಕ ರೂ.1000-00ಗಳ ಶಿಷ್ಯವೇತನ ನೀಡಲಾಗುವುದು.

5) ಆಯ್ಕೆಯಾದ ಅಭ್ಯರ್ಥಿಗಳನ್ನು ಜಿಲ್ಲಾ ಪಬ್ಲಿಕ್ ಪ್ರಾಸಿಕ್ಯೂಟರ್ ಅಥವಾ 20 ವರ್ಷಕ್ಕಿಂತ ಹೆಚ್ಚಿನ ಅನುಭವ ಹೊಂದಿರುವ ಹಿರಿಯ ವಕೀಲರಲ್ಲಿ ತರಬೇತಿಗೆ ನಿಯೋಜಿಸಲಾಗುವುದು.

6) ಆಯ್ಕೆಯಾದ ಅಭ್ಯರ್ಥಿಗಳು ಯಾವುದೇ ಕಾರಣಕ್ಕೂ ತರಬೇತಿಯನ್ನು ಪೂರ್ಣಗೊಳಿಸದೇ ಮಧ್ಯಂತರದಲ್ಲಿ ಬಿಟ್ಟು ಹೋಗಬಾರದು. ಬಿಟ್ಟು ಹೋದ ಪಕ್ಷದಲ್ಲಿ ತರಬೇತಿಯ ಅವಧಿಯಲ್ಲಿ ನೀಡಿದ ಶಿಷ್ಯವೇತನವನ್ನು ಶೇ.10ರಷ್ಟು ಬಡ್ಡಿಯೊಂದಿಗೆ ವಸೂಲಿ ಮಾಡಲಾಗುವುದು. ಈ ನಿಯಮ ಕೇಂದ್ರ ಮತ್ತು ರಾಜ್ಯ ಸರ್ಕಾರಿ ಉದ್ದಿಮೆಯಲ್ಲಿ ನೇಮಕ ಹೊಂದಿದವರಿಗೆ ಅನ್ವಯಿಸುವುದಿಲ್ಲ.

7) ಸುಳ್ಳು ದಾಖಲೆ, ಮಾಹಿತಿಯನ್ನು ಒದಗಿಸಿ, ಆಯ್ಕೆಯಾದ ಅಭ್ಯರ್ಥಿಗಳನ್ನು ಕಾನೂನಿನನ್ವಯ ಶಿಕ್ಷೆಗೆ ಗುರಿಪಡಿಸಲಾಗುವುದು.

8) ಅರ್ಜಿಯಲ್ಲಿನ ಮಾಹಿತಿಯು ಅಪೂರ್ಣವಾಗಿದ್ದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

9) ಆಯ್ಕೆ ಸಮಿತಿಯ ತೀರ್ಮಾನವೇ ಅಂತಿಮ ತೀರ್ಮಾನವಾಗಿರುತ್ತದೆ.

10) ಅರ್ಜಿಗಳನ್ನು ಪಡೆಯಬೇಕಾದ ಮತ್ತು ಸಲ್ಲಿಸಬೇಕಾದ ವಿಳಾಸ ಈ ಕೆಳಕಂಡಂತಿದೆ.

**ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ, 4ನೇ ಮುಖ್ಯ ರಸ್ತೆ, 16ನೇ ಅಡ್ಡರಸ್ತೆ (ಪೊಲೀಸ್ ಠಾಣೆ ಎದುರು), ಸಂಪಂಗಿರಾಮನಗರ, ಬೆಂಗಳೂರು-560027.**

ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಪಿ.ಆರ್.509

**OFFICE OF THE ASSISTANT COMMISSIONER OF COMMERCIAL TAXES, LOCAL VAT OFFICE-015, BANGALORE**

**NOTIFICATION**

**(Notified Authority Under Rule 6(i) of the CST (Karnataka) Rules 1957)**

**No.29410301408/2009-10, Dated:16th June, 2009**

By virtue of the provisions of Rule 12(2) of the CST (Registration & Turnover) Rules 1957 and Rule 6(e) and 6(i) of the CST (Karnataka) Rules 1957, it is hereby notified for general information that the declarations in Form-C described below are declared to be obsolete and invalid.

| Sl. No. | Name of the declaration form declared obsolete and invalid No. | Name and Address of the dealer to whom forms were issued by the Department | To whom the forms were issued by the dealer | Date from which declared obsolete & reasons | Name of the Circle issuing the Form | Reasons |
|---|---|---|---|---|---|---|
| 1. | Form-C bearing No. TCK-R4315396 to 4315399 filled total 4 leaves in original duplicate | M/s Lakshmi Prasad Enterprises 88/A, Koramangala Indl. Layout, Bangalore-560095. | Stated to have been issued to M/s Deshmukh Rubber Pvt. Ltd., Jagat Satugru Indl. Area, Bombay-400063 Maharastra State. | 27.04.09 | LVO-015 Bangalore | Lost & intimated accordingly. |

**M.B. HARISHABABU**
Assistant Commissioner of Commercial Taxes, LVO-015, VTK-2, Koramangala, Bangalore-47.

PR-510

## ಉಪವಿಭಾಗಾಧಿಕಾರಿ, ಶಿವಮೊಗ್ಗ ಉಪವಿಭಾಗ, ಶಿವಮೊಗ್ಗ

### ತಾಲ್ಲೂಕು ಪಂಚಾಯಿತಿಯಲ್ಲಿ ಆಯ್ಕೆಯಾದ ಅಧ್ಯಕ್ಷರ/ ಉಪಾಧ್ಯಕ್ಷರ ಮಾಹಿತಿ ವಿವರ

| ಕ್ರ. ಸಂ. | ತಾಲ್ಲೂಕು ಪಂಚಾಯಿತಿ ಹೆಸರು | ಚುನಾವಣೆ ನಡೆದ ದಿನಾಂಕ | ಅಧ್ಯಕ್ಷರ ಹೆಸರು/ ವಿಳಾಸ | ವಿದ್ಯಾಭ್ಯಾಸ | ಮೀಸಲಾತಿ | ಉಪಾಧ್ಯಕ್ಷರ ವಿದ್ಯಾಭ್ಯಾಸ ಹೆಸರು/ವಿಳಾಸ | ಮೀಸಲಾತಿ |
|---|---|---|---|---|---|---|---|
| 1. | ತೀರ್ಥಹಳ್ಳಿ | 21.05.2009 | ಶ್ರೀ ಸಾಲೆಕೊಪ್ಪ ರಾಮಚಂದ್ರ, ಸಾಲೆಕೊಪ್ಪ, ಬಾವಿ ಕೈಸರು ಅಂಚೆ, ತೀರ್ಥಹಳ್ಳಿ ತಾಲ್ಲೂಕು | (B.A.) | ಸಾಮಾನ್ಯ | ವನಿತಾ ಮೋಹನ್ ಟಿ. SSLC ಕಟ್ಟೆದಕ್ಕಲು ಅಂಚೆ, ಸಾಲ್ಗಡಿ ಅಂಚೆ, ತೀರ್ಥಹಳ್ಳಿ ತಾಲ್ಲೂಕು | ಅನುಸೂಚಿತ ಪಂಗಡ ಮಹಿಳೆ |
| 2. | ಭದ್ರಾವತಿ | 23.05.2009 | ಎಂ. ಶಾಂತಮ್ಮ ಕಂಬವಾಳು ಹೊಸೂರು ಕ್ಯಾಂಪ್, ಭದ್ರಾವತಿ ತಾಲ್ಲೂಕು. | 9ನೇ ತರಗತಿ | ಹಿಂದುಳಿದ ವರ್ಗ (ಅ) | ಜಿ.ಎಂ. ಬೇಬಿ P.U.C. ಅಂತರಗಂಗೆ ಭದ್ರಾವತಿ ತಾಲ್ಲೂಕು | ಸಾಮಾನ್ಯ ಮಹಿಳೆ |
| 3. | ಶಿವಮೊಗ್ಗ | 25.05.2009 | ಎನ್.ಜಿ.ಸುಧಾ ನಿದಿಗೆ, ಶಿವಮೊಗ್ಗ ತಾಲ್ಲೂಕು | PUC | ಸಾಮಾನ್ಯ ಮಹಿಳೆ | ಹೆಚ್.ಎಸ್. ಷಣ್ಮುಖಪ್ಪ SSLC ಸೋಮಿನಕೊಪ್ಪ, ಹರಮಘಟ್ಟ ಅಂಚೆ, ಶಿವಮೊಗ್ಗ ತಾಲ್ಲೂಕು. | ಸಾಮಾನ್ಯ |

ಉಪವಿಭಾಗಾಧಿಕಾರಿ, ಶಿವಮೊಗ್ಗ
ಉಪವಿಭಾಗ, ಶಿವಮೊಗ್ಗ.

**ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕು ಪಂಚಾಯ್ತಿಗೆ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ 1993ರ ಸೆಕ್ಷನ್ 140(3)ರಂತೆ 3ನೇ ಅವಧಿಯ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಹುದ್ದೆಗಳಿಗೆ ದಿನಾಂಕ:21.05.2009ರಂದು ಅಪರಾಹ್ನ 1-00 ಗಂಟೆಗೆ ತಾಲ್ಲೂಕು ಪಂಚಾಯತ್ ಸಭಾಂಗಣದಲ್ಲಿ ಶಿವಮೊಗ್ಗ ಉಪವಿಭಾಗಾಧಿಕಾರಿಗಳು, ಶಿವಮೊಗ್ಗ ಉಪವಿಭಾಗ, ಶಿವಮೊಗ್ಗರವರ ಅಧ್ಯಕ್ಷತೆಯಲ್ಲಿ ನಡೆಸಿದ ಸಭಾ ನಡವಳಿ**

**ಅಧ್ಯಕ್ಷತೆ:** ಡಾ: ಎನ್.ಆರ್. ನಾಗರಾಜು, ಕೆ.ಎ.ಎಸ್.
ಉಪ ವಿಭಾಗಾಧಿಕಾರಿ, ಶಿವಮೊಗ್ಗ ಉಪವಿಭಾಗ, ಶಿವಮೊಗ್ಗ.

1) ತಾಲ್ಲೂಕು ಪಂಚಾಯತ್‌ನ ಒಟ್ಟು ಸದಸ್ಯರ ಸಂಖ್ಯೆ: 13
2) ಸಭೆಗೆ ಹಾಜರಿದ್ದ ಸದಸ್ಯರ ಸಂಖ್ಯೆ: 13
3) ಸಭೆಗೆ ಗೈರು ಹಾಜರಾದ ಸದಸ್ಯರ ಸಂಖ್ಯೆ:

ಸಭೆಯಲ್ಲಿ ಹಾಜರಿದ್ದ ಸದಸ್ಯರು:

1) ಕುಸುಮಾ ಮಂಜುನಾಥ್, ಸಹಿ:-
2) ರೇವತಿ ಅನಂತಮೂರ್ತಿ ಸಹಿ:-
3) ಲಕ್ಷ್ಮಿ ಉಮೇಶ್ ಸಹಿ:-
4) ವನಿತಾ ಮೋಹನ್ ಟಿ. ಸಹಿ:-
5) ಹರಿಣಾಕ್ಷಿ ಈಶ್ವರ ಸಹಿ:-
6) ಬಿದರಮನೆ ಅಶೋಕ್ ಸಹಿ:-
7) ಗೀತಾ ವೆಂಕಟೇಶ್ ಸಹಿ:-
8) ಸಾಲೇಕೊಪ್ಪ ರಾಮಚಂದ್ರ ಸಹಿ:-
9) ಹೆಚ್.ಎಸ್. ಉಮೇಶ ಸಹಿ:-
10) ಹೆಚ್.ಬಿ. ಪದ್ಮನಾಭ ಸಹಿ:-

11) ಕೆಸ್ತೂರು ಮಂಜುನಾಥ ಸಹಿ:-
12) ಬಾಳೇಹಳ್ಳಿ ಪ್ರಭಾಕರ್ ಸಹಿ:-
13) ಸುಲೋಚನ ರಾಮು ಸಹಿ:-

| ವಿಷಯ: | ತೀರ್ಮಾನ |
|---|---|
| ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಬೆಂಗಳೂರು ರವರ ಅಧಿಸೂಚನೆ ಸಂಖ್ಯೆ: ಗ್ರಾಅಪ 83 ಜಿಪಸ 2009 ದಿನಾಂಕ:13.05.2009ರಂತೆ<br>ತೀರ್ಥಹಳ್ಳಿ ತಾಲ್ಲೂಕು ಪಂಚಾಯ್ತಿಗೆ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಸೆಕ್ಷನ್ 140(3)ರಂತೆ 3ನೇ ಅವಧಿಯ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಹುದ್ದೆಗಳಿಗೆ ಮೀಸಲಾತಿ ನಿಗದಿಪಡಿಸಲಾಗಿರುವಂತೆ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಸ್ಥಾನಗಳಿಗೆ ಚುನಾವಣೆ ನಡೆಸುವ ಕುರಿತು. | ತೀರ್ಥಹಳ್ಳಿ ತಾಲ್ಲೂಕು ಪಂಚಾಯತ್‌ನ 3ನೇ ಅವಧಿಯ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಹುದ್ದೆಗಳಿಗೆ ಚುನಾವಣೆ ನಡೆಸುವಂತೆ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಬೆಂಗಳೂರು ರವರ ಅಧಿಸೂಚನೆ ಸಂಖ್ಯೆ: ಗ್ರಾಅಪ 83 ಜಿಪಸ 2009 ದಿನಾಂಕ:13.05.2009ರಲ್ಲಿ ತಿಳಿಸಿರುತ್ತಾರೆ. 3ನೇ ಅವಧಿಯ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಚುನಾವಣೆ ನಡೆಸಲು ದಿನಾಂಕ:21.05.2009ರಂದು ನಿಗದಿಪಡಿಸಿ ಸಭೆಯನ್ನು ಕರೆಯಲು ಚುನಾವಣಾ ವೇಳಾಪಟ್ಟಿಯನ್ನು ತೀರ್ಥಹಳ್ಳಿ ತಾಲ್ಲೂಕು ಪಂಚಾಯತ್‌ನ ಎಲ್ಲಾ ಸದಸ್ಯರಿಗೆ ತಿಳುವಳಿಕೆಯನ್ನು ಏಳು ದಿನಗಳಿಗೆ ಕಡಿಮೆ ಇಲ್ಲದಂತೆ ಮುದ್ದಾಂ ಹಾಗೂ ನೋಂದಾಯಿತ ಅಂಚೆ ಮೂಲಕ ಜಾರಿ ಮಾಡಿ ಇಂದು ಸಭೆಯನ್ನು ನಡೆಸಲಾಯಿತು. ತೀರ್ಥಹಳ್ಳಿ ತಾಲ್ಲೂಕು ಪಂಚಾಯ್ತಿಯಲ್ಲಿ ಒಟ್ಟು 13 ಜನ ಚುನಾಯಿತ ಸದಸ್ಯರಿರುತ್ತಾರೆ. ಸರ್ಕಾರದ ಅಧಿಸೂಚನೆಯಂತೆ ತೀರ್ಥಹಳ್ಳಿ ತಾಲ್ಲೂಕು ಪಂಚಾಯತ್‌ನ ಅಧ್ಯಕ್ಷರ ಸ್ಥಾನ ಸಾಮಾನ್ಯ ವರ್ಗಕ್ಕೆ ಹಾಗೂ ಉಪಾಧ್ಯಕ್ಷರ ಸ್ಥಾನವು ಅನುಸೂಚಿತ ಪಂಗಡ ಮಹಿಳೆ ಇವರಿಗೆ ಮೀಸಲಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು.<br>ಅಧ್ಯಕ್ಷರ ಸ್ಥಾನಕ್ಕೆ ನಾಮಪತ್ರವನ್ನು ಪಂಚಾಯತ್‌ರಾಜ್ ಅಧಿನಿಯಮ 1993ರ ನಿಯಮ "ಎ" ರನ್ವಯ ನಿಗದಿತ ಅವಧಿಯೊಳಗೆ ಈ ಕೆಳಕಂಡ ಸದಸ್ಯರು ನಾಮಪತ್ರ ಸಲ್ಲಿಸಿರುತ್ತಾರೆ.<br>**ನಾಮಪತ್ರ ಸಲ್ಲಿಸಿದ ಅಭ್ಯರ್ಥಿಯ ಹೆಸರು:** **ಸೂಚಕರ ಹೆಸರು:**<br>1) ಹೆಚ್.ಬಿ. ಪದ್ಮನಾಭ 1) ಕೆಸ್ತೂರು ಮಂಜುನಾಥ್<br>2) ಸಾಲೇಕೊಪ್ಪ ರಾಮಚಂದ್ರ 2) ಕುಸುಮಾ ಮಂಜುನಾಥ್<br>3) ಸಾಲೇಕೊಪ್ಪ ರಾಮಚಂದ್ರ 3) ಬಿದರಮನೆ ಅಶೋಕ್<br>ಉಪಾಧ್ಯಕ್ಷರ ಸ್ಥಾನಕ್ಕೆ ನಾಮಪತ್ರವನ್ನು ಪಂಚಾಯತ್‌ರಾಜ್ ಅಧಿನಿಯಮ 1993ರ ನಿಯಮ "ಎ" ರನ್ವಯ ನಿಗದಿತ ಅವಧಿಯೊಳಗೆ ಈ ಕೆಳಕಂಡ ಸದಸ್ಯರು ನಾಮಪತ್ರ ಸಲ್ಲಿಸಿರುತ್ತಾರೆ.<br>**ನಾಮಪತ್ರ ಸಲ್ಲಿಸಿದ ಅಭ್ಯರ್ಥಿಯ ಹೆರು:** **ಸೂಚಕರ ಹೆಸರು:**<br>1) ವನಿತಾ ಮೋಹನ್ ಟಿ. 1) ರೇವತಿ ಅನಂತಮೂರ್ತಿ<br>2) ವನಿತಾ ಮೋಹನ್ ಟಿ. 2) ಹೆಚ್.ಎಸ್. ಉಮೇಶ್<br>ಮೇಲ್ಕಂಡಂತೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಸ್ಥಾನಗಳಿಗೆ ನಾಮಪತ್ರವನ್ನು ಸಲ್ಲಿಸಿರುತ್ತಾರೆ. ಸಭೆಯಲ್ಲಿ ಹಾಜರಿದ್ದ ಸದಸ್ಯರಿಗೆ ನಿಯಮ 3(ಸಿ) ಯಂತೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಗಳಿಗೆ ನಾಮನಿರ್ದೇಶನ ಮಾಡಿದವರ ಹೆಸರು ಹಾಗೂ ಸೂಚಕರ ಹೆಸರನ್ನು ಸಭೆಯಲ್ಲಿ ಹೇಳಲಾಯಿತು. ಹಾಗೂ ನಾಮ ಪತ್ರ ಪರಿಶೀಲಿಸಲಾಗಿ ಕ್ರಮಬದ್ಧವಾಗಿರುವುದರಿಂದ ನಾಮಪತ್ರ ಅಂಗೀಕರಿಸಲಾಯಿತು.<br>ನಿಯಮ 3ಡಿ ರ ಅಡಿಯಲ್ಲಿ ನಾಮಪತ್ರ ವಾಪಸ್ಸು ಪಡೆಯಲು ಕಾಲಾವಕಾಶ ನೀಡಲಾಯಿತು. ಯಾರು ನಾಮ ಪತ್ರ ಹಿಂದಕ್ಕೆ ಪಡೆದಿಲ್ಲ.<br>ಅಪರಾಹ್ನ ಒಂದು ಗಂಟೆಗೆ ಚುನಾವಣಾಧಿಕಾರಿಗಳು ಸಭೆ ಪ್ರಾರಂಭ ಮಾಡಿದಾಗ ಶ್ರೀ ಹೆಚ್.ಬಿ. ಪದ್ಮನಾಭರವರು ತಮಗೆ ಚುನಾವಣಾ ನೋಟೀಸು 7 ದಿನಗಳಿಗೆ ಮುಂಚಿತವಾಗಿ ತಲುಪಬೇಕಿತ್ತು ಎಂದು ಆಕ್ಷೇಪಿಸಿರುತ್ತಾರೆ. ಇದಕ್ಕೆ ಉತ್ತರವಾಗಿ ಚುನಾವಣಾಧಿಕಾರಿಗಳು ಚುನಾವಣೆ ನೋಟೀಸನ್ನು 13.05.2009ರಂದು ಸಹಿ ಮಾಡಿ ಎಲ್ಲಾ ಸದಸ್ಯರಿಗೂ ಮುದ್ದಾಂ ಹಾಗೂ ನೋಂದಾಯಿತ ಅಂಚೆ ಮೂಲಕ ರವಾನಿಸಿರುತ್ತಾರೆ. ಮತ್ತು ಸದಸ್ಯರುಗಳು |

| ವಿಷಯ: | ತೀರ್ಮಾನ |
|---|---|
| | ಚುನಾವಣೆ ನೋಟೀಸನ್ನು 14.05.2009ರಂದು 10 ಜನ ಸ್ವೀಕರಿಸಿರುತ್ತಾರೆ. ದಿನಾಂಕ:15.05.2009ರಂದು ಶ್ರೀಮತಿ ಗೀತಾ ವೆಂಕಟೇಶ್ ರವರು ಸ್ವೀಕರಿಸಿರುತ್ತಾರೆ. ಹಾಗೂ ಇನ್ನುಳಿದ ಸದಸ್ಯರಾದ ರೇವತಿ ಅನಂತಮೂರ್ತಿ ಮತ್ತು ಬಾಳೇಹಳ್ಳಿ ಪ್ರಭಾಕರ್ ದಿನಾಂಕ ನಮೂದಿಸದೇ ಇರುವುದರಿಂದ ಅವರು ಸಹ 14.05.2009ರಂದು ಸ್ವೀಕರಿಸಿದ್ದಾರೆ ಎಂದು ಭಾವಿಸಲಾಗಿದೆ. ಈ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿಯಾದ ನಾನು ಚುನಾವಣಾ ದಿನಾಂಕದಿಂದ ಅಂದರೆ 21.05.2009ಕ್ಕಿಂತ 7 ದಿನ ಮುಂಚಿತವಾಗಿ ಅಂದರೆ 13.03.2009 ರಂದು ಸಹಿ ಮಾಡಿದ ನೋಟೀಸುಗಳನ್ನು ಸದಸ್ಯರುಗಳಿಗೆ ತಲುಪಿಸಿರುತ್ತೇನೆ. ಆದ್ದರಿಂದ ಚುನಾವಣಾ ಪ್ರಕ್ರಿಯೆ ಮುಂದುವರೆದಿದೆ. |
| | ಅಧ್ಯಕ್ಷರ ಸ್ಥಾನಕ್ಕೆ ಮೊದಲು ನಾಮ ಪತ್ರ ಸಲ್ಲಿಸಿದ್ದು ಶ್ರೀ ಹೆಚ್.ಬಿ. ಪದ್ಮನಾಭರವರ ಪರವಾಗಿ ಈ ಕೆಳಕಂಡ ಸದಸ್ಯರು ಅವರ ಕೈ ಎತ್ತುವ ಮೂಲಕ ಮತ ಚಲಾಯಿಸಿರುತ್ತಾರೆ.<br>1) ಹೆಚ್.ಬಿ. ಪದ್ಮನಾಭ ಸಹಿ:–<br>2) ಬಾಳೇಹಳ್ಳಿ ಪ್ರಭಾಕರ ಸಹಿ:–<br>3) ಕೆಸ್ತೂರು ಮಂಜುನಾಥ ಸಹಿ:–<br>4) ಸುಲೋಚನ ರಾಮು ಸಹಿ:–<br>**ವಿರುದ್ಧವಾಗಿ ಮತ ಚಲಾಯಿಸಿದವರು**<br>1) ಹೆಚ್.ಎಸ್. ಉಮೇಶ ಸಹಿ:–<br>2) ಸಾಲೇಕೊಪ್ಪ ರಾಮಚಂದ್ರ ಸಹಿ:–<br>3) ಗೀತಾ ವೆಂಕಟೇಶ್ ಸಹಿ:–<br>4) ರೇವತಿ ಅನಂತಮೂರ್ತಿ ಸಹಿ:–<br>5) ಬಿದರಮನೆ ಅಶೋಕ್ ಸಹಿ:–<br>6) ಲಕ್ಷ್ಮಿ ಉಮೇಶ್ ಸಹಿ:–<br>7) ಕುಸುಮಾ ಮಂಜುನಾಥ್ ಸಹಿ:–<br>8) ವನಿತಾ ಮೋಹನ್ ಟಿ. ಸಹಿ:–<br>9) ಹರಿಣಾಕ್ಷಿ ಈಶ್ವರ ಸಹಿ:–<br>**ಅಧ್ಯಕ್ಷರ ಸ್ಥಾನಕ್ಕೆ ಎರಡನೆಯದಾಗಿ ನಾಮ ಪತ್ರ ಸಲ್ಲಿಸಿದ್ದು ಶ್ರೀ ಸಾಲೇಕೊಪ್ಪ ರಾಮಚಂದ್ರ ರವರ ಪರವಾಗಿ ಈ ಕೆಳಕಂಡ ಸದಸ್ಯರು ಅವರ ಕೈ ಎತ್ತುವ ಮೂಲಕ ಮತ ಚಲಾಯಿಸಿರುತ್ತಾರೆ.**<br>1) ಹೆಚ್.ಎಸ್. ಉಮೇಶ ಸಹಿ:–<br>2) ಸಾಲೇಕೊಪ್ಪ ರಾಮಚಂದ್ರ ಸಹಿ:–<br>3) ಗೀತಾ ವೆಂಕಟೇಶ್ ಸಹಿ:–<br>4) ಬಿದರಮನೆ ಅಶೋಕ್ ಸಹಿ:–<br>5) ಲಕ್ಷ್ಮಿ ಉಮೇಶ್ ಸಹಿ:–<br>6) ಕುಸುಮಾ ಮಂಜುನಾಥ್ ಸಹಿ:–<br>7) ವನಿತಾ ಮೋಹನ್ ಟಿ. ಸಹಿ:–<br>8) ರೇವತಿ ಅನಂತಮೂರ್ತಿ ಸಹಿ:–<br>9) ಹರಿಣಾಕ್ಷಿ ಈಶ್ವರ ಸಹಿ:–<br>ವಿರುದ್ಧವಾಗಿ ಈ ಕೆಳಕಂಡ ಸದಸ್ಯರು ಮತ ಚಲಾಯಿಸಿರುತ್ತಾರೆ.<br>1) ಹೆಚ್.ಬಿ. ಪದ್ಮನಾಭ ಸಹಿ:–<br>2) ಕೆಸ್ತೂರು ಮಂಜುನಾಥ ಸಹಿ:–<br>3) ಬಾಳೇಹಳ್ಳಿ ಪ್ರಭಾಕರ ಸಹಿ:–<br>4) ಸುಲೋಚನ ರಾಮು ಸಹಿ:– |

| ವಿಷಯ: | ತೀರ್ಮಾನ |
|---|---|
| | ಶ್ರೀ ಹೆಚ್.ಬಿ. ಪದ್ಮನಾಭ ರವರ ಪರವಾಗಿ ನಾಲ್ಕು ಮತಗಳು (4)<br>ಶ್ರೀ ಸಾಲೇಕೊಪ್ಪ ರಾಮಚಂದ್ರರವರ ಪರವಾಗಿ ಒಂಭತ್ತು ಮತಗಳು (9) ಬಂದಿದ್ದು ಶ್ರೀ ಸಾಲೇಕೊಪ್ಪ ರಾಮಚಂದ್ರರವರು ಶ್ರೀ ಹೆಚ್.ಬಿ. ಪದ್ಮನಾಭ ರವರಿಗಿಂತ 5 ಮತಗಳು (ಐದು) ಹೆಚ್ಚಿಗೆ ಪಡೆದಿರುವುದರಿಂದ ತೀರ್ಥಹಳ್ಳಿ ತಾಲ್ಲೂಕು ಪಂಚಾಯತ್‌ನ 3ನೇ ಅವಧಿಯ ಅಧ್ಯಕ್ಷರ ಸ್ಥಾನಕ್ಕೆ ಶ್ರೀ ಸಾಲೇಕೊಪ್ಪ ರಾಮಚಂದ್ರರವರು ಚುನಾಯಿಸಲ್ಪಟ್ಟಿದ್ದಾರೆಂದು ಚುನಾವಣಾಧಿಕಾರಿಯಾದ ಡಾ: ಎನ್.ಆರ್. ನಾಗರಾಜು, ಉಪವಿಭಾಗಾಧಿಕಾರಿ, ಶಿವಮೊಗ್ಗ ಆದ ನಾನು ಘೋಷಿಸುತ್ತೇನೆ.<br>ಹಾಗೂ 3ನೇ ಅವಧಿಯ ಉಪಾಧ್ಯಕ್ಷರ ಸ್ಥಾನಕ್ಕೆ ಒಬ್ಬರೆ ನಾಮ ಪತ್ರ ಸಲ್ಲಿಸಿದ್ದು, ನಾಮ ಪತ್ರ ಕ್ರಮಬದ್ಧವಾಗಿರುವುದರಿಂದ ಶ್ರೀಮತಿ ವನಿತಾ ಮೋಹನ್ ಟಿ. ರವರನ್ನು 3ನೇ ಅವಧಿಯ ತಾಲ್ಲೂಕು ಪಂಚಾಯ್ತಿ ಉಪಾಧ್ಯಕ್ಷರ ಸ್ಥಾನಕ್ಕೆ ಚುನಾಯಿಸಲ್ಪಟ್ಟಿದ್ದಾರೆಂದು ಚುನಾವಣಾಧಿಕಾರಿಯಾದ ಡಾ: ಎನ್.ಆರ್. ನಾಗರಾಜು, ಉಪವಿಭಾಗಾಧಿಕಾರಿ, ಶಿವಮೊಗ್ಗ ಆದ ನಾನು ಘೋಷಿಸುತ್ತೇನೆ.<br>ಸಹಿ:– ಸಹಿ:–<br>ಕಾರ್ಯನಿರ್ವಾಹಕ ಅಧಿಕಾರಿ ಉಪವಿಭಾಗಾಧಿಕಾರಿ,<br>ತಾಲ್ಲೂಕು ಪಂಚಾಯತ್. ಶಿವಮೊಗ್ಗ ಉಪವಿಭಾಗ, ಶಿವಮೊಗ್ಗ. |

ಉಪವಿಭಾಗಾಧಿಕಾರಿ,
ಶಿವಮೊಗ್ಗ ಉಪವಿಭಾಗ, ಶಿವಮೊಗ್ಗ.

ಶಿವಮೊಗ್ಗ ಜಿಲ್ಲೆ, ಭದ್ರಾವತಿ ತಾಲ್ಲೂಕು ಪಂಚಾಯಿತಿಗೆ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಸೆಕ್ಷನ್ 140(3) ರಂತೆ 3ನೇ ಅವಧಿಯ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಹುದ್ದೆಗಳಿಗೆ ದಿನಾಂಕ 23.05.2009ರಂದು ಅಪರಾಹ್ನ 1.00 ಗಂಟೆಗೆ ತಾಲ್ಲೂಕು ಪಂಚಾಯತ್ ಸಭಾಂಗಣದಲ್ಲಿ ಉಪವಿಭಾಗಾಧಿಕಾರಿಗಳು, ಶಿವಮೊಗ್ಗ ಉಪವಿಭಾಗ, ಶಿವಮೊಗ್ಗ ರವರ ಅಧ್ಯಕ್ಷತೆಯಲ್ಲಿ ನಡೆಸಿದ ಸಭಾ ನಡಾವಳಿಕೆ.

ಅಧ್ಯಕ್ಷತೆ: ಡಾ: ಎನ್.ಆರ್. ನಾಗರಾಜು, ಕೆ.ಎ.ಎಸ್.
ಉಪವಿಭಾಗಾಧಿಕಾರಿ, ಶಿವಮೊಗ್ಗ ಉಪವಿಭಾಗ, ಶಿವಮೊಗ್ಗ.

1) ತಾಲ್ಲೂಕು ಪಂಚಾಯತ್‌ನ ಒಟ್ಟು ಸದಸ್ಯರ ಸಂಖ್ಯೆ: 18
2) ಸಭೆಗೆ ಹಾಜರಿದ್ದ ಸದಸ್ಯರ ಸಂಖ್ಯೆ 9
3) ಸಭೆಗೆ ಗೈರು ಹಾಜರಾದ ಸದಸ್ಯರ ಸಂಖ್ಯೆ 9

| ಹೆಸರು | ಸಭೆಯಲ್ಲಿ ಹಾಜರಿದ್ದ ಸದಸ್ಯರ ಸಹಿ |
|---|---|
| 1) ಬಿ.ಟಿ. ಹನುಮಂತಪ್ಪ | ಸಹಿ |
| 2) ಬಿ. ಲಕ್ಷ್ಮಿ ಕೋಂ ಹೆಚ್. ಬಸಪ್ಪ | |
| 3) ಜಿ. ಸದಾಶಿವಪ್ಪಗೌಡ | |
| 4) ಜಯಮ್ಮ | ಸಹಿ |
| 5) ಹೆಚ್.ಆರ್. ಬಷೀರ್ ಖಾನ್ | ಸಹಿ |
| 6) ಜಿ.ಆರ್. ಜಯಕುಮಾರ್ | ಸಹಿ |
| 7) ಜಿ. ಮಧುಸೂಧನ್ | ಸಹಿ |
| 8) ಎಂ. ಪರಮೇಶ್ವರಪ್ಪ | |
| 9) ದಶರಥಗಿರಿ | ಸಹಿ |
| 10) ಹುಚ್ಚಪ್ಪ | |
| 11) ಜಿ.ಎಂ. ಬೇಬಿ | ಸಹಿ |
| 12) ಎಂ.ಎಸ್. ಕುಮಾರ್ | ಸಹಿ |
| 13) ರಘುನಾಥರಾವ್‌ಗಿಡ್ಡೆ | |
| 14) ಎನ್.ಆರ್. ಲಲಿತ | |

15) ಲಕ್ಷ್ಮಿ ಕೋಂ ಆರ್ಮುಗಂ
16) ಅಪರೋಜ್‌ಬಾನು
17) ಮೀನಾಕ್ಷಿಬಾಯಿ
18) ಶಾಂತಮ್ಮ

ಸಹಿ

| ವಿಷಯ: | ತೀರ್ಮಾನ |
|---|---|
| ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಬೆಂಗಳೂರು ರವರ ಅಧಿಸೂಚನೆ ಸಂಖ್ಯೆ: ಗ್ರಾಅಪ 83 ಜಿಪಸ 2009 ದಿನಾಂಕ:13.05.2009 ಹಾಗೂ ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆರವರ ಪತ್ರ ನಂ.ಚು(4) ಸಿಆರ್ 1/09-10 ದಿನಾಂಕ:14.05.2009 ರಂತೆ ಭದ್ರಾವತಿ ತಾಲ್ಲೂಕು ಪಂಚಾಯಿತಿಗೆ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ 1993 ರ ಸೆಕ್ಷನ್ 140(3) ರಂತೆ 3ನೇ ಅವಧಿಯ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಹುದ್ದೆಗಳಿಗೆ ಮೀಸಲಾತಿ ನಿಗದಿಪಡಿಸಲಾಗಿರುವಂತೆ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಸ್ಥಾನಗಳಿಗೆ ಚುನಾವಣೆ ನಡೆಸುವ ಕುರಿತು. | ಭದ್ರಾವತಿ ತಾಲ್ಲೂಕು ಪಂಚಾಯಿತಿಯ 3ನೇ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಹುದ್ದೆಗಳಿಗೆ ಚುನಾವಣೆ ನಡೆಸುವಂತೆ ಕಾರ್ಯದರ್ಶಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಬೆಂಗಳೂರು ರವರ ಅಧಿಸೂಚನೆ ನಂ.ಗ್ರಾ.ಅ.ದ 83 ಜಿ.ಪ.ಸ. 2009 ದಿನಾಂಕ:13.05.2000 ಹಾಗೂ ಜಿಲ್ಲಾಧಿಕಾರಿಗಳು ಶಿವಮೊಗ್ಗ ಜಿಲ್ಲೆ ರವರ ಪತ್ರ ನಂ. ಚು(4) ಸಿಆರ್ 1/09-10 ದಿನಾಂಕ:14.05.2009ರಲ್ಲಿ ತಿಳಿಸಿರುತ್ತಾರೆ. 3ನೇ ಅವಧಿಯ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಸ್ಥಾನಕ್ಕೆ ಚುನಾವಣೆ ನಡೆಸಲು ದಿನಾಂಕ:23.05.2009 ರಂದು ನಿಗದಿಪಡಿಸಿ ಸಭೆಯನ್ನು ಕರೆಯಲು ಚುನಾವಣಾ ವೇಳಾ ಪಟ್ಟಿಯನ್ನು ಭದ್ರಾವತಿ ತಾಲ್ಲೂಕು ಪಂಚಾಯತ್‌ನ ಎಲ್ಲಾ ಸದಸ್ಯರಿಗೆ ತಿಳುವಳಿಕೆಯನ್ನು ಏಳು (7) ದಿನಗಳಿಗೆ ಕಡಿಮೆ ಇಲ್ಲದಂತೆ ಮುದ್ದಾಂ ಹಾಗೂ ನೊಂದಾಯಿತ ಅಂಚೆ ಮೂಲಕ ಜಾರಿ ಮಾಡಿ ಇಂದು ಸಭೆಯನ್ನು ನಡೆಸಲಾಯಿತು. ಭದ್ರಾವತಿ ತಾಲ್ಲೂಕು ಪಂಚಾಯಿತಿಯಲ್ಲಿ ಒಟ್ಟು 18 ಜನ ಚುನಾಯಿತ ಸದಸ್ಯರಿರುತ್ತಾರೆ. ಸರ್ಕಾರದ ಅಧಿಸೂಚನೆಯಂತೆ ಭದ್ರಾವತಿ ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷರ ಸ್ಥಾನ ಹಿಂದುಳಿದ ವರ್ಗ "ಎ" ಗೆ ಹಾಗೂ ಉಪಾಧ್ಯಕ್ಷರ ಸ್ಥಾನ ಸಾಮಾನ್ಯ ಮಹಿಳೆ ಇವರಿಗೆ ಮೀಸಲಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು.<br>ಅಧ್ಯಕ್ಷರ ಸ್ಥಾನಕ್ಕೆ ನಾಮ ಪತ್ರವನ್ನು ಪಂಚಾಯತ್ ರಾಜ್ ಅಧಿನಿಯಮ 1993ರ ನಿಯಮ "ಎ' ರನ್ವಯ ನಿಗದಿತ ಅವಧಿಯೊಳಗೆ ಈ ಕೆಳಕಂಡ ಸದಸ್ಯರು ನಾಮ ಪತ್ರ ಸಲ್ಲಿಸಿರುತ್ತಾರೆ.<br>**ನಾಮಪತ್ರ ಸಲ್ಲಿಸಿದ ಅಭ್ಯರ್ಥಿಯ ಹೆಸರು** — **ಸೂಚಕರ ಹೆಸರು**<br>1) ಎಂ. ಶಾಂತಮ್ಮ — 1) ದಶರಥಗಿರಿ<br>2) ಎಂ. ಶಾಂತಮ್ಮ — 2) ಹೆಚ್.ಆರ್. ಬಷೀರ್‌ಖಾನ್<br>ಉಪಾಧ್ಯಕ್ಷರ ಸ್ಥಾನಕ್ಕೆ ನಾಮಪತ್ರವನ್ನು ಪಂಚಾಯಿತಿ ರಾಜ್ ಅಧಿನಿಯಮ 1993ರ ನಿಯಮ "ಎ" ರನ್ವಯ ನಿಗದಿತ ಅವಧಿಯೊಳಗೆ ಈ ಕೆಳಕಂಡ ಸದಸ್ಯರು ನಾಮ ಪತ್ರ ಸಲ್ಲಿಸಿರುತ್ತಾರೆ.<br>**ಅಭ್ಯರ್ಥಿಯ ಹೆಸರು** — **ಸೂಚಕರ ಹೆಸರು**<br>1) ಜಿ.ಎಂ. ಬೇಬಿ — ಜಯಮ್ಮ<br>2) ಜಿ.ಎಂ. ಬೇಬಿ — ಜಿ. ಮಧುಸೂಧನ<br>ಸಭೆಯಲ್ಲಿ ಹಾಜರಿದ್ದ ಸದಸ್ಯರಿಗೆ ನಿಯಮಾನುಸಾರದಂತೆ "ಅಧ್ಯಕ್ಷರ" ಹಾಗೂ "ಉಪಾಧ್ಯಕ್ಷರ" ಸ್ಥಾನಗಳಿಗೆ ನಾಮ ನಿರ್ದೇಶನ ಮಾಡಿರುವವರ ಹೆಸರು ಹಾಗೂ ಸೂಚಕರ ಹೆಸರನ್ನು ಸಭೆಯಲ್ಲಿ ಹೇಳಲಾಯಿತು. ಹಾಗೂ ನಾಮ ಪತ್ರ ಪರಿಶೀಲಿಸಲಾಗಿ ಕ್ರಮಬದ್ಧವಾಗಿರುವುದರಿಂದ ನಾಮಪತ್ರ ಅಂಗೀಕರಿಸಲಾಯಿತು.<br>ನಿಯಮ 3 "ಡಿ"ರ ಅಡಿಯಲ್ಲಿ ನಾಮ ಪತ್ರ ವಾಪಸ್ಸು ಪಡೆಯಲು ಕಾಲಾವಕಾಶ ನೀಡಲಾಯಿತು. ಯಾರೂ ನಾಮಪತ್ರ ಹಿಂದಕ್ಕೆ ಪಡೆದಿಲ್ಲ.<br>ಭದ್ರಾವತಿ ತಾಲ್ಲೂಕು ಪಂಚಾಯಿತಿಯ 3ನೇ ಅವಧಿಯ ಅಧ್ಯಕ್ಷರ ಸ್ಥಾನಕ್ಕೆ ಶ್ರೀಮತಿ ಎಂ. ಶಾಂತಮ್ಮ ರವರು ಒಬ್ಬರೇ ನಾಮಪತ್ರವನ್ನು ಸಲ್ಲಿಸಿರುವುದರಿಂದ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ನಿಯಮ 3(2)(1)ರನ್ವಯ ಶ್ರೀಮತಿ ಎಂ. ಶಾಂತಮ್ಮ ರವರನ್ನು 3ನೇ ಅವಧಿಯ ಅಧ್ಯಕ್ಷರ ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆಂದು ಘೋಷಿಸಿರುತ್ತೇನೆ. ಹಾಗೂ ಭದ್ರಾವತಿ ತಾಲ್ಲೂಕು ಪಂಚಾಯಿತಿಯ 3ನೇ ಅವಧಿಯ ಉಪಾಧ್ಯಕ್ಷರ ಸ್ಥಾನಕ್ಕೆ |

| ವಿಷಯ: | ತೀರ್ಮಾನ |
|---|---|
| | ಶ್ರೀಮತಿ ಜಿ.ಎಂ. ಬೇಬಿ ರವರು ಒಬ್ಬರೇ ನಾಮ ಪತ್ರವನ್ನು ಸಲ್ಲಿಸಿರುವುದರಿಂದ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ 1993ರ ನಿಯಮ (3)(1)ರನ್ವಯ ಶ್ರೀಮತಿ ಜಿ.ಎಂ. ಬೇಬಿ ರವರು 3ನೇ ಅವಧಿಯ ಉಪಾಧ್ಯಕ್ಷರ ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆ ಆಗಿರುತ್ತಾರೆಂದು ಘೋಷಿಸಿರುತ್ತೇನೆ. |

ಸಹಿ
ಹೆಚ್. ಚಂದ್ರಶೇಖರಪ್ಪ
ಕಾರ್ಯನಿರ್ವಾಹಕ ಅಧಿಕಾರಿ,
ತಾಲ್ಲೂಕು ಪಂಚಾಯಿತಿ, ಭದ್ರಾವತಿ.

ಸಹಿ
ನಾಗರಾಜು ಎನ್.ಆರ್.
ಉಪವಿಭಾಗಾಧಿಕಾರಿ,
ಶಿವಮೊಗ್ಗ ಉಪವಿಭಾಗ, ಶಿವಮೊಗ್ಗ.

:ನಕಲು:

ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಭದ್ರಾವತಿ.

ಶಿವಮೊಗ್ಗ ಜಿಲ್ಲೆ ರವರ ಪತ್ರ ನಂ.ಚು (4) ಸಿಆರ್1/09-10 ದಿನಾಂಕ:14.05.2009 ರಂತೆ ಶಿವಮೊಗ್ಗ ತಾಲ್ಲೂಕು ಪಂಚಾಯಿತಿಗೆ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಸೆಕ್ಷನ್ 140(3) ರಂತೆ, 3ನೇ ಅವಧಿಯ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಹುದ್ದೆಗಳಿಗೆ ಮೀಸಲಾತಿ ನಿಗದಿಪಡಿಸಲಾಗಿರುವಂತೆ, ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಸ್ಥಾನಗಳಿಗೆ ಚುನಾವಣೆ ನಡೆಸುವ ಕುರಿತು.

**ತೀರ್ಮಾನ:**

ಶಿವಮೊಗ್ಗ ತಾಲ್ಲೂಕು ಪಂಚಾಯತ್‌ನ 3ನೇ ಅವಧಿಯ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಹುದ್ದೆಗಳಿಗೆ ಚುನಾವಣೆ ನಡೆಸುವಂತೆ, ಕಾರ್ಯದರ್ಶಿ ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಇಲಾಖೆ ಬೆಂಗಳೂರು ಅವರ ಅಧಿಸೂಚನೆ ಸಂಖ್ಯೆ: ಗ್ರಾ.ಅ.ಪ.83 ಜಿಪಸ: 2009 ದಿನಾಂಕ:13.05.2009 ಹಾಗೂ ಜಿಲ್ಲಾಧಿಕಾರಿಗಳು ಶಿವಮೊಗ್ಗ ಜಿಲ್ಲೆ ರವರ ಪತ್ರ ನಂ.ಚು(4) ಸಿಆರ್1/09-10 ದಿನಾಂಕ:14.05.2009 ರಲ್ಲಿ ತಿಳಿಸಿರುವಂತೆ, 3ನೇ ಅವಧಿಯ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಚುನಾವಣೆ ನಡೆಸಲು ದಿನಾಂಕ:25.05.2009ರಂದು ನಿಗದಿಪಡಿಸಿ ಸಭೆಯನ್ನು ಕರೆದು ಚುನಾವಣಾ ವೇಳಾಪಟ್ಟಿಯನ್ನು ಶಿವಮೊಗ್ಗ ತಾಲ್ಲೂಕು ಪಂಚಾಯತ್‌ನ (18) ಎಲ್ಲಾ ಸದಸ್ಯರಿಗೂ ತಿಳಿವಳಿಕೆಯನ್ನು 7 ದಿನಗಳಿಗೆ ಕಡಿಮೆ ಇಲ್ಲದಂತೆ ಮುದ್ದಾಂ ನೊಂದಣಿ ಅಂಚೆ ಮೂಲಕ ಜಾರಿ ಮಾಡಿ ಇಂದು ಸಭೆಯನ್ನು ನಡೆಸಲಾಯಿತು. ಶಿವಮೊಗ್ಗ ತಾಲ್ಲೂಕು ಪಂಚಾಯತ್‌ನಲ್ಲಿ ಒಟ್ಟು 18 ಜನ ಚುನಾಯಿತ ಸದಸ್ಯರಿರುತ್ತಾರೆ. ಅಧ್ಯಕ್ಷರ ಸ್ಥಾನವು ಸಾಮಾನ್ಯ ವರ್ಗ ಮಹಿಳೆ ಹಾಗೂ ಉಪಾಧ್ಯಕ್ಷರ ಸ್ಥಾನವು ಸಾಮಾನ್ಯ ಇವರಿಗೆ ಮೀಸಲಿರುವುದನ್ನು ಸಭೆಯು ಗಮನಕ್ಕೆ ತರಲಾಯಿತು.

ಅಧ್ಯಕ್ಷರ ಸ್ಥಾನಕ್ಕೆ ನಾಮಪತ್ರವನ್ನು ಪಂಚಾಯತ್‌ರಾಜ್ ಅಧಿನಿಯಮ 1993ರ ನಿಯಮ 3ಎ ರ ಅನ್ವಯ ನಿಗದಿತ ಅವಧಿಯೊಳಗೆ ಈ ಕೆಳಕಂಡ ಸದಸ್ಯರು ನಾಮಪತ್ರ ಸಲ್ಲಿಸಿರುತ್ತಾರೆ.

| **ನಾಮಪತ್ರ ಸಲ್ಲಿಸಿರುವ ಅಭ್ಯರ್ಥಿಯ ಹೆಸರು** | **ಸೂಚಕರ ಹೆಸರು** |
|---|---|
| 1) ಶ್ರೀಮತಿ ಎನ್.ಜಿ. ಸುಧಾ | ಜಯಮ್ಮ |
| 2) ಶ್ರೀಮತಿ ಎನ್.ಜಿ. ಸುಧಾ | ಭೋಜನಾಯ್ಕ್ |

ಉಪಾಧ್ಯಕ್ಷರ ಸ್ಥಾನಕ್ಕೆ ನಾಮಪತ್ರವನ್ನು ಪಂಚಾಯತ್ ರಾಜ್ ಅಧಿನಿಯಮ 1933ರ ನಿಯಮ 3ಎ ರ ಅನ್ವಯ ನಿಗದಿತ ಅವಧಿಯೊಳಗೆ ಈ ಕೆಳಕಂಡ ಸದಸ್ಯರು ನಾಮಪತ್ರ ಸಲ್ಲಿಸಿರುತ್ತಾರೆ.

| **ನಾಮಪತ್ರ ಸಲ್ಲಿಸಿರುವ ಅಭ್ಯರ್ಥಿಯ ಹೆಸರು** | **ಸೂಚಕರ ಹೆಸರು** |
|---|---|
| 1) ಶ್ರೀ ಎಸ್.ಹೆಚ್. ಷಣ್ಮುಖಪ್ಪ | ವಿ. ನಾಗೇಂದ್ರ |
| 2) ಶ್ರೀ ಎಸ್.ಹೆಚ್. ಷಣ್ಮುಖಪ್ಪ | ಭೋಜನಾಯ್ಕ್ |
| 3) ಶ್ರೀ ಎಲ್. ಮುನಿಸ್ವಾಮಿ | ಮೆಹಬೂಬ್ ಆಲಿಖಾನ್ |

ಮೇಲ್ಕಂಡಂತೆ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಸ್ಥಾನಗಳಿಗೆ ನಾಮಪತ್ರವನ್ನು ಸಲ್ಲಿಸಿರುತ್ತಾರೆ. ಸಭೆಯಲ್ಲಿ ಹಾಜರಿದ್ದ ಸದಸ್ಯರಿಗೆ ನಿಯಮ 3(ಸಿ) ಯಂತೆ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಸ್ಥಾನಗಳಿಗೆ ನಾಮ ನಿರ್ದೇಶನ ಮಾಡಿರುವವರ ಹಾಗೂ ಸೂಚಕರ ಹೆಸರನ್ನು ಸಭೆಯಲ್ಲಿ ಹೇಳಲಾಯಿತು. ನಾಮ ಪತ್ರ ಪರಿಶೀಲಿಸಲಾಗಿ ಶ್ರೀ ಭೋಜನಾಯ್ಕರವರು ಎರಡು ನಾಮಪತ್ರಗಳಿಗೆ ಸೂಚಕರಾಗಿರುವುದರಿಂದ ಮೊದಲು ಶ್ರೀ ಎಸ್.ಹೆಚ್. ಷಣ್ಮುಖಪ್ಪ ಉಪಾಧ್ಯಕ್ಷರ ಸ್ಥಾನಕ್ಕೆ ನೀಡಿದ ನಾಮಪತ್ರವನ್ನು ಅಂಗೀಕರಿಸಲಾಯಿತು. ಎರಡನೇ ಬಾರಿ ಶ್ರೀಮತಿ ಎನ್.ಜಿ. ಸುಧಾ ಅಧ್ಯಕ್ಷರ ಸ್ಥಾನಕ್ಕೆ ನಾಮಪತ್ರಕ್ಕೂ ಭೋಜನಾಯ್ಕ್ ಸೂಚಕರಾಗಿರುವುದರಿಂದ, ಸದರಿ ನಾಮ ಪತ್ರ ತಿರಸ್ಕರಿಸಲಾಯಿತು. ಇನ್ನುಳಿದ ನಾಮಪತ್ರಗಳು ಕ್ರಮಬದ್ಧವಾಗಿರುವುದರಿಂದ ನಾಮಪತ್ರಗಳನ್ನು ಅಂಗೀಕರಿಸಲಾಯಿತು.

ಶಿವಮೊಗ್ಗ ತಾಲ್ಲೂಕು ಪಂಚಾಯಿತ್ತಿಗೆ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಸೆಕ್ಷನ್ 140(3)ರಂತೆ, 3ನೇ ಅವಧಿಯ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಹುದ್ದೆಗಳಿಗೆ ದಿನಾಂಕ:25.05.2009ರಂದು ಅಪರಾಹ್ನ 1.00 ಗಂಟೆಗೆ ತಾಲ್ಲೂಕು ಪಂಚಾಯತ್ ಸಭಾಂಗಣದಲ್ಲಿ ಎಸಿ ವಿಭಾಗಾಧಿಕಾರಿಗಳು ಶಿವಮೊಗ್ಗ ಉಪವಿಭಾಗ, ಶಿವಮೊಗ್ಗ ರವರ ಅಧ್ಯಕ್ಷತೆಯಲ್ಲಿ ನಡೆಸಿದ ಸಭಾ ನಡವಳಿಕೆ.

ಅಧ್ಯಕ್ಷತೆ: ಡಾ॥ ಎನ್.ಆರ್. ನಾಗರಾಜು, ಕೆ.ಎ.ಎಸ್.

ಉಪವಿಭಾಗಾಧಿಕಾರಿ, ಶಿವಮೊಗ್ಗ ಉಪವಿಭಾಗ, ಶಿವಮೊಗ್ಗ.

1) ತಾಲ್ಲೂಕು ಪಂಚಾಯತ್‌ನ ಒಟ್ಟು ಸದಸ್ಯರುಗಳ ಸಂಖ್ಯೆ:18

2) ಸಭೆಗೆ ಹಾಜರಾದ ಸದಸ್ಯರುಗಳ ಸಂಖ್ಯೆ: 16

3) ಸಭೆಗೆ ಗೈರು ಹಾಜರಾದ ಸದಸ್ಯರುಗಳ ಸಂಖ್ಯೆ: 02

| ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳು | ಸಹಿ |
|---|---|
| 1) ಶ್ರೀ ಪಿ. ಜಯಪ್ಪ | |
| 2) ಶ್ರೀ ಷಣ್ಮುಖಪ್ಪ | |
| 3) ಶ್ರೀ ವಿ. ನಾಗೇಂದ್ರ | |
| 4) ಶ್ರೀ ರಾಜಪ್ಪ | |
| 5) ಶ್ರೀ ಕೃಷ್ಣಮೂರ್ತಿ | |
| 6) ಶ್ರೀ ಮೆಹಬೂಬ್ ಆಲಿಖಾನ್ | |
| 7) ಶ್ರೀ ಭೋಜನಾಯ್ಕ | |
| 8) ಶ್ರೀ ರಾಜರಾವ್ ಹಮ್ಮುರಾವ್ | |
| 9) ಶ್ರೀ ಬಿ. ಗಂಗಾಧರ್ | |
| 10) ಶ್ರೀ ಒಡ್ಡಪ್ಪ (ರುದ್ರಪ್ಪ) | |
| 11) ಶ್ರೀ ಮುನಿಸ್ವಾಮಿ | |
| 12) ಶ್ರೀಮತಿ ಗೌರಮ್ಮ | |
| 13) ಶ್ರೀಮತಿ ಸುಧಾ | |
| 14) ಶ್ರೀಮತಿ ಜಯಮ್ಮ ನರಸಿಂಹಮೂರ್ತಿ | |
| 15) ಶ್ರೀಮತಿ ಮೀನಾಕುಮಾರಿ | |
| 16) ಶ್ರೀಮತಿ ಅನ್ನಪೂರ್ಣಮ್ಮ | |
| 17) ಶ್ರೀಮತಿ ಏಕಾಶಿ | |
| 18) ಗಂಗಮ್ಮ | |

**ವಿಷಯ**

ಕಾರ್ಯದರ್ಶಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು ರವರ ಅಧಿಸೂಚನೆ ನಂ.ಗ್ರಾ.ಅ.ಪ:83:ಜಿಪಿಸಿ 2009 ದಿನಾಂಕ:13.05.2009 ಹಾಗೂ ಜಿಲ್ಲಾಧಿಕಾರಿಗಳು ನಿಯಮ 3(ಡಿ)ರ ಅಡಿಯಲ್ಲಿ ನಾಮ ಪತ್ರ ಪಡೆಯಲು ಕಾಲಾವಕಾಶ ನೀಡಲಾಯಿತು. ತಾಲ್ಲೂಕು ಪಂಚಾಯಿತಿಯ 3ನೇ ಅವಧಿಯ ಅಧ್ಯಕ್ಷರ ಸ್ಥಾನಕ್ಕೆ ಶ್ರೀಮತಿ ಎನ್.ಜಿ. ಸುಧಾ ರವರು ಒಬ್ಬರೇ ನಾಮ ಪತ್ರ ಸಲ್ಲಿಸಿರುವುದರಿಂದ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ 1933ರ ನಿಯಮ 141 (3)(3)(1) ರನ್ವಯ ಶ್ರೀಮತಿ ಎನ್.ಜಿ. ಸುಧಾರವರು ತಾಲ್ಲೂಕು ಪಂಚಾಯಿತಿಯ 3ನೇ ಅವಧಿಗೆ ಅಧ್ಯಕ್ಷರ ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆಂದು ಘೋಷಿಸಿರುತ್ತೇನೆ.

ಉಪಾಧ್ಯಕ್ಷರ ಸ್ಥಾನಕ್ಕೆ ಶ್ರೀ ಎಲ್. ಮುನಿಸ್ವಾಮಿ ಸಲ್ಲಿಸಿರುವ ನಾಮಪತ್ರವನ್ನು ನಿಗದಿತ ಅವಧಿಯೊಳಗೆ ಹಿಂದಕ್ಕೆ ಪಡೆದಿರುತ್ತಾರೆ. ತಾಲ್ಲೂಕು ಪಂಚಾಯತ್ 3ನೇ ಅಧಿನಿಯಮ ಉಪಾಧ್ಯಕ್ಷರ ಸ್ಥಾನಕ್ಕೆ ಶ್ರೀ ಷಣ್ಮುಖಪ್ಪ ರವರು ಒಬ್ಬರೇ ನಾಮಪತ್ರ ಸಲ್ಲಿಸಿರುವುದರಿಂದ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ 1933ರ ನಿಯಮ 141(3)(3)(1)ರನ್ವಯ ಶ್ರೀ ಎಸ್.ಹೆಚ್. ಷಣ್ಮುಖಪ್ಪನವರು ತಾಲ್ಲೂಕು ಪಂಚಾಯಿತಿಯ 3ನೇ ಅವಧಿಗೆ ಉಪಾಧ್ಯಕ್ಷರ ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆಂದು ಘೋಷಿಸಿರುತ್ತೇನೆ.

ಉಪವಿಭಾಗಾಧಿಕಾರಿ.

ಪಿ.ಆರ್.498 ಶಿವಮೊಗ್ಗ ಉಪವಿಭಾಗ, ಶಿವಮೊಗ್ಗ.

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು

**ಪ್ರಕಟಣೆ**

**ಸಂಖ್ಯೆ: ಎ2.ಸಿಬ್ಬಂದಿ:ವಿವ:39:2005-06, ದಿನಾಂಕ:13ನೇ ಮಾರ್ಚ್, 2009**

**ವಿಷಯ:** ಶ್ರೀ ಬಿ. ಸುರೇಶ್, ಅರಣ್ಯ ರಕ್ಷಕ, ತಳವಾರ ಗಸ್ತು, ಆಲ್ದೂರು ವಲಯ ಇವರು ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾಗಿರುವ ಮೂಲಕ ಕರ್ತವ್ಯ ಲೋಪ ಎಸಗಿರುವ ಬಗ್ಗೆ.

**ಉಲ್ಲೇಖ:** 1) ಈ ಕಛೇರಿ ಆದೇಶ ಸಂಖ್ಯೆ: 38/2007-08, ದಿನಾಂಕ:18.09.2007.

2) ಈ ಕಛೇರಿ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ: ಎ2.ಸಿಬ್ಬಂದಿ:ವಿವ:39: 2005-06, ದಿನಾಂಕ:27.12.2007.

3) ಹಿರಿಯ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಮೂಡಿಗೆರೆ ಉಪವಿಭಾಗ, ಮೂಡಿಗೆರೆ ಇವರ ಪತ್ರ ಸಂಖ್ಯೆ: 1116/2008-09, ದಿನಾಂಕ:18.02.2009.

4) ಕೆ.ಸಿ.ಎಸ್.ಆರ್. 1958, ನಿಯಮ 108.

5) ಕೆ.ಸಿ.ಎಸ್. (ಸಿ.ಸಿ.ಎ.) 1957, ನಿಯಮ 20.

6) ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ:18:ಸೇಇವಿ:2001, ಬೆಂಗಳೂರು, ದಿನಾಂಕ:14.09.2001.

ಈ ವಿಭಾಗದ ಆಲ್ದೂರು ವಲಯದ ತಳವಾರ ಗಸ್ತಿನಲ್ಲಿ ಅರಣ್ಯ ರಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ ಬಿ. ಸುರೇಶ್ ಇವರು ದಿನಾಂಕ:09.08.2006 ರಿಂದ ದಿನಾಂಕ:17.09.2007ರ ವರೆಗೆ ಸರ್ಕಾರಿ ಕೆಲಸಕ್ಕೆ ಅನಧಿಕೃತವಾಗಿ ಗೈರು ಹಾಜರಾದ ಬಗ್ಗೆ ಉಲ್ಲೇಖ (1)ರಲ್ಲಿ ಸದರಿ ನೌಕರರನ್ನು ಸರ್ಕಾರಿ ಕೆಲಸ ಕಾರ್ಯಗಳಿಂದ ಅಮಾನತ್ತುಪಡಿಸಿದ್ದು, ಹಾಗೆ ಉಲ್ಲೇಖ (2)ರಲ್ಲಿ ನೌಕರರ ವಿರುದ್ಧ ಇಲಾಖಾ ವಿಚಾರಣೆ ಕೈಗೊಳ್ಳಲು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಮೂಡಿಗೆರೆ ಉಪವಿಭಾಗ, ಮೂಡಿಗೆರೆ ಇವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ವಲಯ ಅರಣ್ಯಾಧಿಕಾರಿ, ಖಾಸಗಿ ನಾಟಾಗಳ ಛಾಪಾ ಘಟಕ, ಚಿಕ್ಕಮಗಳೂರು ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಕ ಮಾಡಲಾಗಿರುತ್ತದೆ. ಆರೋಪಿತ ನೌಕರರಿಗೆ ವಿಚಾರಣಾಧಿಕಾರಿ ಹಾಗೂ ಅರಣ್ಯ ಸಂರಕ್ಷಣಾಧಿಕಾರಿ, ಮೂಡಿಗೆರೆ ಉಪವಿಭಾಗ, ಮೂಡಿಗೆರೆ ಇವರು ಕ್ರಮವಾಗಿ ದಿನಾಂಕ:26.02.2008 ಹಾಗೂ 13.03.2008ರಂದು 2 ಬಾರಿ ವಿಚಾರಣೆಗೆ ಹಾಜರಾಗುವಂತೆ ನೊಂದಾಯಿತ ಅಂಚೆ ಮುಖಾಂತರ ನೋಟೀಸ್ ಜಾರಿ ಮಾಡಲಾಗಿ, "Party Not Found" ಎಂಬ ಷರಾದೊಂದಿಗೆ ವಾಪಾಸು ಬಂದಿರುತ್ತದೆ. ನಂತರದಲ್ಲಿ ಆರೋಪಿತ ನೌಕರರಿಗೆ 3ನೇ ನೋಟೀಸ್‌ನ್ನು ವನಪಾಲಕ, ಸಾರಗೋಡು ಶಾಖೆ, ಸಾರಗೋಡು ಇವರ ಮುಖಾಂತರ ಜಾರಿಗೊಳಿಸಲು ನಿರ್ದೇಶನ ನೀಡಿದ್ದು, ಅದರಂತೆ ವನಪಾಲಕರು ನೋಟೀಸ್‌ನ್ನು ಆರೋಪಿತ ನೌಕರರಿಗೆ ದಿನಾಂಕ:21.04.2008ರಂದು ಜಾರಿ ಮಾಡಿದ್ದು, ನೋಟೀಸ್ ಪಡೆದರೂ ಸಹಾ, ಆರೋಪಿತ ನೌಕರರು ವಿಚಾರಣೆಗೆ ಹಾಜರಾಗಿರುವುದಿಲ್ಲ. ನಂತರ 4ನೇ ನೋಟೀಸ್‌ನ್ನು ಜಾರಿಗೊಳಿಸುವ ಸಲುವಾಗಿ ನೌಕರರ ಸ್ವಗ್ರಾಮವಾದ ಸಕ್ರೆಬೈಲ್, ಶಿವಮೊಗ್ಗ ತಾಲ್ಲೂಕು ಹಾಗೂ ಜಿಲ್ಲೆ ಇಲ್ಲಿಗೆ ವನಪಾಲಕರು ತೆರಳಿ ವಿಚಾರಿಸಲಾಗಿ ಅವರ ತಾಯಿ ಹಾಗೂ ಅವರ ತಮ್ಮ ಸದರಿಯವರು ಈಗ ಇಲ್ಲಿ ವಾಸವಾಗಿರುವುದಿಲ್ಲ. ಮೈಸೂರಿನಲ್ಲಿ ವಾಸವಾಗಿರುತ್ತಾರೆ ಎಂಬುದಾಗಿ ತಿಳಿಸಿರುತ್ತಾರೆ. ದಿನಾಂಕ:14.08.2008ರಂದು ಇಲಾಖಾ ವಿಚಾರಣೆ ಇದ್ದು, ವಿಚಾರಣೆಗೆ ಹಾಜರಾಗಲು ತಿಳಿಸುವಂತೆ ಅವರ ತಾಯಿಗೆ ತಿಳಿಸಿ, ನೋಟೀಸ್‌ನ್ನು ಅವರ ತಾಯಿಗೆ ನೀಡಿ ಸ್ವೀಕೃತಿ ಪಡೆಯಲಾಗಿರುತ್ತದೆ. ನಂತರ ದಿನಾಂಕ:28.08.2008ರಂದು ಸದರಿ ವನಪಾಲಕರು ಆರೋಪಿತ ನೌಕರರ ಪತ್ತೆಗಾಗಿ ಸ್ವಗ್ರಾಮಕ್ಕೆ ತೆರಳಿ, ವಿಚಾರಿಸಲಾಗಿ, ಅಲ್ಲಿ ನೌಕರರು ಇರಲಿಲ್ಲ. ಮನೆಯಲ್ಲಿ ಅವರ ತಾಯಿ ಹಾಗೂ ಅವರ ತಮ್ಮ ಮಾತ್ರ ಇದ್ದು, ಅವರನ್ನು ವಿಚಾರಿಸಲಾಗಿ, ಆರೋಪಿತ ನೌಕರರು ಈಗ ಇಲ್ಲಿ ವಾಸವಾಗಿರುವುದಿಲ್ಲ. ಮೈಸೂರಿನಲ್ಲಿ ಇರುತ್ತಾರೆ ಎಂದು ತಿಳಿಸಿರುತ್ತಾರೆ. ದಿನಾಂಕ:10.09.2008ರಂದು ಇಲಾಖಾ ವಿಚಾರಣೆ ಇದ್ದು, ವಿಚಾರಣೆಗೆ ಹಾಜರಾಗಲು ತಿಳಿಸುವಂತೆ ಅವರ ತಾಯಿಗೆ ತಿಳಿಸಿ, ನೋಟೀಸನ್ನು ಅವರ ತಾಯಿಗೆ ನೀಡಿ ಸ್ವೀಕೃತಿ ಪಡೆಯಲಾಗಿರುತ್ತದೆ.

ನಂತರದಲ್ಲಿ ದಿನಾಂಕ:01.12.2008ರಂದು ವನಪಾಲಕರು, ಸಾರಗೋಡು ಶಾಖೆ ಇವರು ಆರೋಪಿತ ನೌಕರರ ಸ್ವಗ್ರಾಮಕ್ಕೆ ಅಂತಿಮವಾಗಿ ತೆರಳಿ, ಅವರ ವಾಸದ ಮನೆ ಆವರಣದಲ್ಲಿ ಕಾರ್ಯದರ್ಶಿ, ಗ್ರಾಮ ಪಂಚಾಯಿತಿ, ಗಾಜನೂರು ಇವರ ಹಾಗೂ ಗ್ರಾಮದ ಮುಖ್ಯಸ್ಥರ ಸಮಕ್ಷಮ ಸ್ಥಳ ಮಹಜರ್ ಜರುಗಿಸಿದ್ದು, ಅದರಲ್ಲಿ ಆರೋಪಿತ ನೌಕರರ ತಮ್ಮ ಶ್ರೀ ಶಿವಣ್ಣ ಇವರು ಹಾಜರಿದ್ದು, ನನ್ನ ಅಣ್ಣನಾದ ಶ್ರೀ ಬಿ. ಸುರೇಶ್ ಇವರು ಇಲ್ಲಿ ವಾಸವಾಗಿರುವುದಿಲ್ಲ. ಅವರ ಹೆಂಡತಿ, ಮಕ್ಕಳೊಂದಿಗೆ ಕೊಡಗು ಜಿಲ್ಲೆಯ ಗೋಣಿಕೊಪ್ಪದಲ್ಲಿ ಇರುತ್ತಾರೆ. ಕಳೆದ 8 ತಿಂಗಳಿಂದ ಸ್ವಗ್ರಾಮಕ್ಕೆ ಬಂದಿಲ್ಲವೆಂದು ತಿಳಿಸಿರುತ್ತಾರೆ. ಅಲ್ಲದೆ ಸದರಿ ನೌಕರರ ಸರಿಯಾದ ವಿಳಾಸವಾಗಲಿ, ದೂರವಾಣಿ ಸಂಖ್ಯೆಯಾಗಲಿ ತನಗೆ ತಿಳಿದಿಲ್ಲ ಎಂಬುದಾಗಿ ತಿಳಿಸಿರುತ್ತಾರೆ.

ಮುಂದುವರೆದು ವಿಚಾರಣಾಧಿಕಾರಿಯವರು ಆರೋಪಿತ ನೌಕರರ ಪತ್ತೆಗಾಗಿ ಆರಕ್ಷಕ ನಿರೀಕ್ಷಕರು, ತುಂಗಾನಗರ ಪೊಲೀಸ್ ಠಾಣೆ, ಶಿವಮೊಗ್ಗ ಇವರಿಗೆ ದೂರು ದಾಖಲಿಸಲು ಹೋದ ಸಮಯದಲ್ಲಿ, ಸದರಿಯವರು ಪ್ರಾರಂಭಿಕ ದೂರನ್ನು

ಆಲ್ದೂರು ಪೊಲೀಸ್ ಠಾಣೆಯಲ್ಲಿ ದಾಖಲಿಸಬೇಕೆಂಬುದಾಗಿ ಸಲಹೆ ನೀಡಿದ ಮೇರೆಗೆ, ಆಲ್ದೂರು ಪೊಲೀಸ್ ಠಾಣೆಯಲ್ಲಿ ಆರೋಪಿತ ನೌಕರರ ಪತ್ತೆಗಾಗಿ ದೂರು ದಾಖಲಾಗಿಸಲಾಗಿದ್ದು, ಈವರೆಗೂ ನೌಕರರ ಸುಳಿವು ಸಿಕ್ಕಿರುವುದಿಲ್ಲ ಎಂಬುದಾಗಿ ಉಲ್ಲೇಖ (3)ರಲ್ಲಿ ವಿಚಾರಣಾಧಿಕಾರಿಗಳು ಹಾಗೂ ಹಿರಿಯ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಮೂಡಿಗೆರೆ ಉಪವಿಭಾಗ, ಮೂಡಿಗೆರೆ ಇವರು ವರದಿ ಸಲ್ಲಿಸಿರುತ್ತಾರೆ ಅಲ್ಲದೆ ಆರೋಪಿತ ನೌಕರರ ವಿರುದ್ಧ ಶಿಸ್ತು ಕ್ರಮ ಜರುಗಿಸಬಹುದಾಗಿ ಶಿಫಾರಸ್ಸು ಮಾಡಿರುತ್ತಾರೆ.

ಆದ್ದರಿಂದ ಈ ಪ್ರಕರಣದಲ್ಲಿ ಆರೋಪಿತ ನೌಕರರಾದ ಶ್ರೀ ಬಿ.ಸುರೇಶ್ ಇವರು ದಿನಾಂಕ:09.08.2006 ರಿಂದ ಈ ದಿನಾಂಕದವರೆಗೂ ಸರ್ಕಾರಿ ಕೆಲಸಕ್ಕೆ ಅನಧಿಕೃತ ಗೈರು ಹಾಜರಾಗಿದ್ದು, ಇದರಿಂದ ಸದರಿಯವರಿಗೆ ವಹಿಸಲಾದ ತಳವಾರ ಗಸ್ತಿನ ವ್ಯಾಪ್ತಿಯಲ್ಲಿ ಬರುವ ಅರಣ್ಯ / ಮೀಸಲು ಅರಣ್ಯದ ರಕ್ಷಣೆ, ಮರಗಳ ಅಕ್ರಮ ಕಡಿತಲೆ, ಒತ್ತುವರಿ ನಿಯಂತ್ರಣ ಹಾಗೂ ಇನ್ನಿತರೆ ಅರಣ್ಯೇತರ ಚಟುವಟಿಕೆಗಳನ್ನು ನಿಯಂತ್ರಿಸುವಲ್ಲಿ ಕಿಂಚಿತ್ತು ಆಸಕ್ತಿ ಹಾಗೂ ಜವಾಬ್ದಾರಿಯನ್ನು ವಹಿಸಿಕೊಳ್ಳದೆ, ಇಲಾಖೆಯಿಂದ ನೀಡಲಾದ ಯಾವುದೇ ನೋಟೀಸ್‌ಗಳಿಗೆ ಲಿಖಿತವಾಗಿ ಉತ್ತರಿಸದೆ, ಕರ್ತವ್ಯಲೋಪ ಎಸಗಿರುತ್ತಾರೆ.

ಮೇಲ್ಕಂಡ ಎಲ್ಲಾ ಕಾರಣಗಳಿಂದಾಗಿ ಶ್ರೀ ಬಿ. ಸುರೇಶ್, ಅರಣ್ಯ ರಕ್ಷಕ, ತಳವಾರ ಗಸ್ತು, ಆಲ್ದೂರು ವಲಯ ಇವರು ದಿನಾಂಕ:09.08.2006 ರಿಂದ ಈ ದಿನಾಂಕದವರೆಗೂ ಗೈರು ಹಾಜರಾಗಿರುತ್ತಾರೆ. ಸದರಿಯವರ ಸರಿಯಾದ ವಿಳಾಸವು ಈವರೆಗೂ ಪತ್ತೆಯಾಗಿರುವುದಿಲ್ಲ. ಅಲ್ಲದೆ ಸದರಿಯವರ ಗೈರು ಹಾಜರಿಯಿಂದ, ತಳವಾರ ಗಸ್ತಿನ ನಿರ್ವಹಣೆ ಕಷ್ಟಸಾಧ್ಯವಾಗಿದ್ದು, ಆದ್ದರಿಂದ ಈ ಪ್ರಕಟಣೆಯು ಪ್ರಕಟವಾದ 30 (ಮೂವತ್ತು) ದಿನದೊಳಗೆ, ಆರೋಪಿತ ನೌಕರರು ಗೈರು ಹಾಜರಾತಿ ಬಗ್ಗೆ ಸಮಂಜಸವಾದ ಕಾರಣದೊಂದಿಗೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು ಇವರ ಸಮಕ್ಷಮ ಹಾಜರಾಗುವುದು. ತಪ್ಪಿದಲ್ಲಿ ಉಲ್ಲೇಖ (4), (5) & (6)ರ ರನ್ವಯ ಆರೋಪಿತ ನೌಕರರನ್ನು ಸರ್ಕಾರಿ ಕೆಲಸದಿಂದ ವಜಾಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

**ಎಸ್.ಎಸ್. ಲಿಂಗರಾಜ**

ಪಿ.ಆರ್.279

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು.

## ಅಧಿಕಾರಿಯುತ ಅಧಿಕಾರಿಗಳು ಹಾಗೂ ಉಪಅರಣ್ಯ ಸಂರಕ್ಷಣಾಧಿಕಾರಿಗಳವರ ನ್ಯಾಯಾಲಯ, ಭದ್ರಾವತಿ ವಿಭಾಗ, ಭದ್ರಾವತಿ

## ಅಧಿಸೂಚನೆ

### ಸಂಖ್ಯೆ: ಎ3-ಸಿಓಎನ್-ಸಿಆರ್-13/2008-09, ದಿನಾಂಕ:12ನೇ ಮಾರ್ಚ್, 2009

ಭದ್ರಾವತಿ ವಿಭಾಗದ ವ್ಯಾಪ್ತಿಯಲ್ಲಿ ಅರಣ್ಯ ಉತ್ಪನ್ನಗಳ ಕಳ್ಳಸಾಗಾಣಿಕೆಯಲ್ಲಿ ತೊಡಗಿದ್ದ ಕೆಳಕಂಡ ವಾಹನವನ್ನು ವಲಯ ಅರಣ್ಯಾಧಿಕಾರಿ, ತರೀಕೆರೆ ವಲಯದ ಸಿಬ್ಬಂದಿ ವರ್ಗದವರು ಸರ್ಕಾರದ ಪರ ಅಮಾನತ್ತುಪಡಿಸಿಕೊಂಡು ಕರ್ನಾಟಕ ಅರಣ್ಯ ಕಾಯಿದೆ 1963ರ ಸೆಕ್ಷನ್-71(ಎ)ರ ಪ್ರಕಾರ ಕ್ರಮ ಜರುಗಿಸುವಂತೆ ಈ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ.

| ಕ್ರ. ಸಂ. | ಮೊಕದ್ದಮೆ ಸಂಖ್ಯೆ | ವಾಹನಗಳ ವಿವರ | ಯಂತ್ರದ ಸಂಖ್ಯೆ | ಛಾಸೀಸ್ ಸಂಖ್ಯೆ |
|---|---|---|---|---|
| 1. | ವಲಯ ಅರಣ್ಯಾಧಿಕಾರಿ, ತರೀಕೆರೆ ಅರಣ್ಯ ಮೊಕದ್ದಮೆ ನಂ.143/2008-09, ದಿನಾಂಕ:04.03.2009 | ಸುಜುಕಿ ಮ್ಯಾಕ್ಸ್ ಸಂ:ಕೆಎ-14-ಹೆಚ್-9107 | 1601M631697 | 1601F587600 |

ಈ ಮೇಲ್ಕಂಡ ವಾಹನದ ನಿಜವಾದ ವಾರಸುದಾರರು ಯಾರದರೂ ಇದ್ದಲ್ಲಿ ಅವರು ವಾಹನಗಳ ಬಗ್ಗೆ ಅಧಿಕೃತ ಹಕ್ಕು ಬಾದ್ಯತೆಗಳನ್ನು ಈ ಕೆಳಸಹಿ ಮಾಡಿರುವವರ ಸಮ್ಮುಖದಲ್ಲಿ ಈ ಅಧಿಸೂಚನೆಯು ಕರ್ನಾಟಕ ಸರ್ಕಾರದ ಗೆಜೆಟ್‌ನಲ್ಲಿ ಪ್ರಕಟವಾದ ದಿನಾಂಕದಿಂದ ಮೂವತ್ತು (3) ದಿನಗಳ ಒಳಗೆ ಹಾಜರುಪಡಿಸಬೇಕಾಗಿ ಮತ್ತು ವಾಹನದಲ್ಲಿ ಅರಣ್ಯ ಉತ್ಪನ್ನವನ್ನು ಕಳ್ಳ ಸಾಗಾಣಿಕೆ ಮಾಡಲು ಉಪಯೋಗಿಸಿದಕ್ಕಾಗಿ ಏಕೆ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಾರದು ಎಂಬುದರ ಬಗ್ಗೆ ಅವರುಗಳು ಅಧಿಕೃತ ಸಮಜಾಯಿಷಿಯನ್ನು ಬರಹದ ಮೂಲಕ ಇತರೆ ದಾಖಲಾತಿಗಳೊಂದಿಗೆ ಈ ಕೆಳಸಹಿದಾರರ ಸಮ್ಮುಖದಲ್ಲಿ ಹಾಜರುಪಡಿಸಲು ಈ ಮೂಲಕ ಪ್ರಕಟಿಸಲಾಗಿದೆ. ಮೇಲ್ಕಾಣಿಸಿದ ಅವಧಿಯೊಳಗೆ ಲಿಖಿತ ಮೂಲಕ ಯಾವುದೇ ಅರ್ಜಿಯನ್ನು ಈ ಕೆಳಸಹಿದಾರರಿಗೆ ಸಲ್ಲಿಸದೇ ಇದ್ದಲ್ಲಿ ಈ ವಾಹನಗಳನ್ನು ಕರ್ನಾಟಕ ಅರಣ್ಯ ಕಾಯಿದೆ 1963ರ ಸೆಕ್ಷನ್ 71(ಎ) ಎರಡನೇ ತಿದ್ದುಪಡಿ ಪ್ರಕಾರ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

**ಟಿ. ಹೀರಾಲಾಲ್**

ಪಿ.ಆರ್.276

ಉಪ ಅರಣ್ಯ ಸಂರಕ್ಷಣಾಧಿಕಾರಿ, ಭದ್ರಾವತಿ ವಿಭಾಗ, ಭದ್ರಾವತಿ.

## COMMERCIAL TAXES DEPARTMENT

## PROCEEDINGS OF THE COMMISSIONER OF COMMERCIAL TAXES, (KARNATAKA), BANGALORE-CLARIFICATION UNDER SECTION 59(4) OF THE KARNATAKA VALUE ADDED TAX ACT, 2003

**Sub:** KVAT Act, 2003-Clarification under Section 59(4) regarding the rate of tax applicable on 'cuff-links'.

**Ref:** Application Dated:27.02.2009 of M/s Arvind Brands, (A Division of Arvind Limited), Du Parc, Trinity, 8th floor, 17, M.G. Road, Bangalore-560 001.

In its application cited above, M/s Arvind Brands, (A Division of Arvind Limited), Du Parc, Trinity, 8th floor, 17, M.G. Road, Bangalore-560 001, has sought clarification regarding the rate of tax applicable on 'cuff-links'.

2. Section 59(4) of the Karnataka Value Added Tax Act, 2003 empowers the Commissioner of Commercial Taxes to clarify the rate of tax payable under the Act, if he considers it necessary or expedient so to do, for the purpose of maintaining uniformity in the work of assessments and collection of revenue. It is examined and found that the clarification requested by the petitioner is within the scope of the aforesaid provision and it is necessary that the clarification be issued for the purpose of maintaining uniformity in the work of assessments and collection of revenue.

3. Hence the following clarification is issued.

**Clarification No. CLR.CR.276/08-09, Dated:21st March, 2009**

It is hereby clarified that 'cuff-links' are taxable at 12.5% under Section 4 (1)(b) of the Karnataka Value Added Tax Act, 2003.

**B.A. HARISH GOWDA**

PR-322

Commissioner of Commercial Taxes,
(Karnataka), Bangalore.

## COMMERCIAL TAXES DEPARTMENT

**Office of the Commissioner of Commercial taxes, Karnataka, Vanijya Therige Karyalaya, Ist Main Road, Gandhinagar, Bangalore**

## NOTIFICATION

**No.KSA.CR248/08-09, Bangalore, Dated:21st March, 2009**

In exercise of the powers under sub-rule (aaaaa) of Rule 6 of the Central Sales Tax (Karnataka) Rules, 1957, it is hereby notified that with effect from 25th day of April, 2009 every dealer registered under the provisions of the Central Sales Tax Act, 1956 and who has been issued with a user name and password for the purpose of electronic filing of details of his purchase and sales or for obtaining delivery notes electronically under the Karnataka Value Added Tax Act, 2003, shall make requisition for declaration in Form C and shall be issued the declarations sought in the following manner:

(i) Every such dealer shall log on to the website http://vat.kar.nic.in/.

(ii) Using the user name and password communicated to him by this office, every such dealer shall proceed to file his request for issue of C Form declarations required towards inter-State purchases made by him, following the instructions contained in the website. Any dealer who is in the list of the dealers required to obtain C Form declarations electronically as displayed in the departmental website http://ctax.kar.nic.in/ shall obtain his user name and password, if it is not communicated to him by 25.04.2009.

(iii) Every such dealer shall enter the details of utilisation of C Form declarations obtained previously if not submitted earlier, electronically on to the website: http//vat.kar.nic.in/.

(iv) The C Form declarations sought by the dealer would be printed by the concerned Local VAT Officer or VAT Sub-officer (LVO ro VSO) and dispatched to the dealer within three working days from the day of his successful request. Any dealer wishing to collect the C Form declarations personally should indicate his preference for such mode of delivery at the time of making his request for their issue and can collect them from the jurisdictional LVO/VSO on the fourth working day.

(v) All such dealers shall surrender on or before 25.04.2009 the stock of any unused declaration in Form C held with them along with an account of declarations in Form C used by them. Any issue or use of C Form declarations obtained earlier from the department, by these dealers on or after 25.04.2009 would be in contravention of the provisions of the Central Sales Tax Act, 1956 and the Rules made thereunder and would attract penal action as provided under law.

**B.A. HARISH GOWDA**

PR-323

Commissioner of Commercial Taxes,
(Karnataka), Bangalore.

**COMMERCIAL TAXES DEPARTMENT**

**PROCEEDINGS OF THE COMMISSIONER OF COMMERCIAL TAXES, (KARNATAKA), BANGALORE-CLARIFICATION UNDER SECTION 59(4) OF THE KARNATAKA VALUE ADDED TAX ACT, 2003**

**Sub:** KVAT Act, 2003-Clarification under Section 59(4) regarding the rate of tax applicable on expanded polystyrene products meant for conveyance or packing of goods.

**Ref:** Application Dated:03.01.2009 of M/s K.K. Nag Limited, No.26-A, Veerasandra Industrial Area, Hosur Road, Bangalore-561229.

In its application cited above, M/s K.K. Nag Limited, No.26-A, Veerasandra Industrial Area, Hosur Road, Bangalore-561229, has sought clarification regarding the rate of tax applicable on 'expanded polystyrene products meant for conveyance or packing of goods.

2. Section 59(4) of the Karnataka Value Added Tax Act, 2003 empowers the Commissioner of Commercial Taxes to clarify the rate of tax payable under the Act, if he considers it necessary or expedient so to do, for the purpose of maintaining uniformity in the work of assessments and collection of revenue. It is examined and found that the clarification requested by the petitioner is within the scope of the aforesaid provision and it is necessary that the clarification be issued for the purpose of maintaining uniformity in the work of assessments and collection of revenue.

3. Hence the following clarification is issued.

**Clarification No. CLR.CR.256/08-09, Dated:28th March, 2009**

It is hereby clarified that the rates of tax applicable on the following goods are as indicated under:

| Sl. No. | Commodity | Rate of tax/ Section |
|---|---|---|
| 1. | Expanded polystyrene boxes, crates and cases for conveyance or packing of goods. | 4% under entry No.63 of III Schedule to the KVAT Act, 2003. |
| 2. | Expanded polystyrene products (other than boxes, crates and cases) for conveyance or packing of goods | 12.5% under section 4(1) (b) of the KVAT Act, 2003. |

**B.A. HARISH GOWDA**

PR-329

Commissioner of Commercial Taxes,
(Karnataka), Bangalore

**ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ**

**ಪ್ರಕಟಣೆ**

**ಸಂಖ್ಯೆ: ಕಾನಿಇಂ/ಸಕಾನಿಇಂ/ಟಿ-187/592-94, ದಿನಾಂಕ:9ನೇ ಜೂನ್, 2009**

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ವಿದ್ಯುತ್ ಪೂರೈಕೆ ಕಾಯ್ದೆ 2003, ಸೆಕ್ಷನ್ 67ರ ಅಡಿಯಲ್ಲಿ ಒಂದು ಯೋಜನೆಯನ್ನು ರೂಪಿಸಿದೆ ಮತ್ತು ಇದೇ ಕಾಯ್ದೆ ಸೆಕ್ಷನ್ 67(2) (ಸಿ)ರ ಅನ್ವಯ ಸಾರ್ವಜನಿಕರಿಗೆ ಯೋಜನೆಗಳ ಮಾಹಿತಿ ನೀಡುವ ದೃಷ್ಟಿಯಿಂದ ಈ ಯೋಜನೆಯನ್ನು ಇಲ್ಲಿ ಪ್ರಕಟಿಸಲಾಗಿದೆ. ಈ ಪ್ರಕಟಣೆಯನ್ನು ಲೈಸೆನ್ಸ್ ಹೊಂದಿರುವವರು ಮತ್ತು ಇನ್ನಿತರೆ ಯಾವುದೇ ಸಂಬಂಧಿಸಿದ ವ್ಯಕ್ತಿಗಳ ಮಾಹಿತಿಗಾಗಿ ನೀಡಲಾಗಿದೆ. ಯೋಜನೆಯ ವಿವರಗಳು ಈ ಕೆಳಕಂಡಂತಿವೆ:

**ಕೆಲಸದ ಹೆಸರು:** ಹಾಲಿ ಇರುವ 66 ಕೆ.ವಿ. ಐ ಪಿ ಸಿ ಎಲ್-ಸಕಲೇಶಪುರ ದ್ವಿವಿದ್ಯುತ್ ಮಾರ್ಗದಿಂದ 66 ಕೆ.ವಿ. ಏಕ ವಿದ್ಯುತ್ ಮಾರ್ಗವನ್ನು ಮೆ: ಮೈಸೂರು ಮೆರ್ಕ್ಯಂಟೈಲ್ ಕಂಪನಿ ಲಿಮಿಟೆಡ್‌ರವರು ಯೆತ್ತಿನಹೋಳೆಯಲ್ಲಿ ಹೊಸದಾಗಿ ನಿರ್ಮಿಸುತ್ತಿರುವ ವಿದ್ಯುತ್ ಉಪಕೇಂದ್ರಕ್ಕೆ ನಿರ್ಮಿಸಿರುವ 3.53 ಕಿ.ಮೀ. ಉದ್ದದ 66 ಕೆ.ವಿ. ಏಕ ವಿದ್ಯುತ್ ಮಾರ್ಗ.

**ಉದ್ದೇಶ:** ಮೆ: ಮೈಸೂರು ಮೆರ್ಕ್ಯಂಟೈಲ್ ಕಂಪನಿ ಲಿಮಿಟೆಡ್‌ರವರು ಯೆತ್ತಿನಹೋಳೆಯಲ್ಲಿ ಹೊಸದಾಗಿ ನಿರ್ಮಿಸುತ್ತಿರುವ ವಿದ್ಯುತ್ ಉಪ ಕೇಂದ್ರಕ್ಕೆ ವಿದ್ಯುತ್ ಸರಬರಾಜು ಮಾಡುವ ಸಲುವಾಗಿ.

**ಹಾದು ಹೋಗುವ ಪ್ರದೇಶ:** ಮರ್ಡಳ್ಳಿ, ಕ್ಯಾನಹಳ್ಳಿ, ಯತ್ತಿನಹಳ್ಳಿ.

**ಅಂದಾಜು ವೆಚ್ಚ:** ರೂ.107.43 ಲಕ್ಷಗಳು.

ಮೇಲಿನ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಭಾರತೀಯ ಅಧಿನಿಯಮ 1885(13)ರಲ್ಲಿ ಉಪಲಭ್ಯವಾಗಿರುವ ಎಲ್ಲಾ ಅಧಿಕಾರವನ್ನು ಕವಿಪ್ರನಿನಿ ಹೊಂದಿರುವುದು, ಮತ್ತು ಅಧಿಕಾರವನ್ನು ಕವಿಪ್ರನಿನಿ ಚಲಾಯಿಸುವುದು. ಈ ಯೋಜನೆಯ ಬಗೆಗೆ ಏನಾದರು ಆಕ್ಷೇಪಣೆಗಳು ಇದ್ದಲ್ಲಿ ಅದನ್ನು ಈ ಪ್ರಕಟಣೆಯ ದಿನಾಂಕದಿಂದ ಎರಡು ತಿಂಗಳೊಳಗಾಗಿ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಬೃಹತ್ ಕಾಮಗಾರಿ ವಿಭಾಗ, ಕವಿಪ್ರನಿನಿ, ಹಾಸನ ಇವರಿಗೆ ಸಲ್ಲಿಸಬೇಕಾಗಿ ವಿನಂತಿ.

ಕಾರ್ಯನಿರ್ವಾಹಕ ಇಂಜಿನಿಯರ್ (ವಿ),

ಪಿ.ಡಿ.33 ಬೃಕಾವಿ/ ಕವಿಪ್ರನಿನಿ/ ಹಾಸನ.

**KARNATAKA POWER TRANSMISSION CORPORATION LTD.,**

**NOTIFICATION**

**No.EEE/BMWSD/ AEE(O)/ Date:**

The Karnataka power Transmission Corporation Ltd., have formulated a scheme under section-67 (2)(c) of the Electricity Supply Act 2003 and the same is here with published in pursuance of section 67(ii) of the said Act. For information of the general public particulars of the scheme are as follows.

**Name of the Project:**

- Suryanagar 66 KV Line: Construction of 66KV LILO line from tap point near 78KV corridor of one circuit of Yerrandanahalli Anekal line to the proposed 66KV station at Suryanagar project of KHB by drake conductor with narrow base Leela venture type tower along the 78KV corridor running in the premises of Suryanagar project of KHB, Anekal Taluk, in Bangalore Urban District for a distance of 2.10 Kms.

**Salient Features:** To improve reliability of power supply in and around Suryanagar.

**Line passes through these villages:**

- Hinnakki Limits, Farm Mechanization Institute limits, Ramakrishnapura, Iggalur, Banahalli & Suryanagar Areas of Anekal Taluk.

**Total estimated Cost (as per DPR):** Rs.729.69 Lakhs.

The KPTCL shall have and shall reserve all power & rights to execute the above projects under Indian Telegraphic rule 1885 (13) Part-3 Clause-II. If there is any objections from the General Public may be brought to the Notice of the Executive Engineer Elect. Major Works South Division, KPTCL, A.R. Circle, Bangalore-09, within 15 days from the date of publication for consideration by Corporation.

**M. MALLIKARJUNA REDDY**

PD-34

Executive Engineer Elec. MWSD,

KPTCL, A.R. Circle, Bangalore-9.

## ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ, ತುಮಕೂರು ಇವರ ನಡವಳಿಗಳು

**ವಿಷಯ:** ತುಮಕೂರು ತಾಲ್ಲೂಕು, ಶಿರಾ ಟೌನಿನ ಭವಾನಿ ನಗರ-02 ಕೊಳಚೆ ಪ್ರದೇಶ ಬಡಾವಣೆಯನ್ನು ಅಧಿನಿಯಮ (3)ರಡಿಯಲ್ಲಿ ಕೊಳಚೆ ಪ್ರದೇಶ ಎಂದು ಘೋಷಿಸುವ ಬಗ್ಗೆ.

**ಉಲ್ಲೇಖ:**1) ಆಯುಕ್ತರು, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ, ಬೆಂಗಳೂರು ಇವರ ಪತ್ರ ಸಂಖ್ಯೆ: ಕ.ಕೊ.ನಿ.ಮ:ರೆ:ಸಿ:ಘೋ/01-02/1333 ದಿನಾಂಕ:06.01.2009.

2) ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ, ನಂ.3 ಉಪವಿಭಾಗ, ತುಮಕೂರು ರವರ ಪತ್ರ:ಕಕೊನಿಮತುಉವಿ/ಶಿರಾ/ಭವಾನಿನಗರ/2009-10/15 ದಿನಾಂಕ:19.05.2009.

**ಪ್ರಸ್ತಾವನೆ:**

ತುಮಕೂರು ಜಿಲ್ಲೆ ಶಿರಾ ನಗರದ ಭವಾನಿ ನಗರ-02 ಬಡಾವಣೆಯಲ್ಲಿ ವಾಸದ ಮನೆಗಳು, ಗುಡಿಸಲುಗಳು ಒತ್ತೊತ್ತಾಗಿದ್ದು, ಜನರು ಸಾಮಾನ್ಯ ಸ್ಥಿತಿಯಲ್ಲಿ ವಾಸಿಸಲು ಅನಾನುಕೂಲತೆಯುಂಟಾಗಿದ್ದು ಹಾಲಿ ಇರುವ ಗುಡಿಸಲುಗಳು, ಮನೆಗಳು, ದುರಸ್ತಿಯಲ್ಲದೇ ಕುಡಿಯುವ ನೀರು, ರಸ್ತೆಗಳು, ರಸ್ತೆಬದಿ, ದೀಪಗಳು, ಚರಂಡಿಗಳು ಮತ್ತು ಸಾರ್ವಜನಿಕ ಶೌಚಾಲಯ ಮುಂತಾದ ಮೂಲಭೂತವಾದ ಸೌಕರ್ಯಗಳು ಇಲ್ಲದ ಪ್ರಯುಕ್ತ ಈ ಪ್ರದೇಶದಲ್ಲಿ ಅನಾರೋಗ್ಯಕರ ವಾತಾವರಣ ಉಂಟಾಗಿರುವುದಾಗಿಯೂ, ಈ ಪ್ರದೇಶವನ್ನು ಕೊಳಚೆ ನಿರ್ಮೂಲನಾ ಮಂಡಳಿಯ ವತಿಯಿಂದ ಅಭಿವೃದ್ಧಿಗೊಳಿಸುವ ಒಂದು ಸಾರ್ವಜನಿಕ ಉದ್ದೇಶ ಹೊಂದಿ ಈ ಪ್ರದೇಶವನ್ನು ಕೊಳಚೆ ಪ್ರದೇಶ ಎಂದು ಘೋಷಣೆ ಮಾಡಲು ಉದ್ದೇಶಿಸಿ ಉಲ್ಲೇಖ (1)ರ ಪತ್ರದನ್ವಯ ಆಯುಕ್ತರು, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ, ಬೆಂಗಳೂರು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸಹಾಯಕ ಕಾರ್ಯಪಾಲಕ ಅಭಿಯಂತರರು ತುಮಕೂರು ಇವರು ಸ್ಥಳ ಪರಿಶೀಲಿಸಿ, ಸದರಿ ಪ್ರದೇಶದ ನಕ್ಷೆ ಮತ್ತು ಚಕ್ಕುಬಂದಿಗಳನ್ನು ಪರಿಶೀಲಿಸಿ ಈ ಬಗ್ಗೆ ಶಿರಾ ನಗರಸಭೆ ಪೌರಾಯುಕ್ತರು ಇವರಿಂದ ನಿರಾಕ್ಷೇಪಣಾ ಪತ್ರವನ್ನು ಪಡೆದುಕೊಂಡು ಈ ಪ್ರದೇಶವು ಶಿರಾ ನಗರಸಭೆ ವ್ಯಾಪ್ತಿಯಲ್ಲಿರುವುದನ್ನು ಖಚಿತಪಡಿಸಿಕೊಂಡು ಈ ಪ್ರದೇಶವನ್ನು ಕೊಳಚೆ ಪ್ರದೇಶ ಎಂದು ಅಧಿಸೂಚನೆ ಹೊರಡಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ. ಈ ಬಗ್ಗೆ ದಿನಾಂಕ:08.12.2008 ರಂದು ಸ್ಥಳ ತನಿಖೆ ನಡೆಸಿ ಇದರ ಪ್ರಸ್ತಾವನೆಯನ್ನು ಪರಿಶೀಲಿಸಿ, ಯುಕ್ತವೆಂದು ಪರಿಗಣಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಆದೇಶ ಕ್ರಮಾಂಕ ಡಿ.ಯು.ಡಿ.ಸಿ ಇತರೆ/ವಿವ/12/09-10, ತುಮಕೂ[illegible]ಸ್, 2009**

ತುಮಕೂರು ಜಿಲ್ಲೆಯ ಶಿರಾ ನಗರ ವ್ಯಾಪ್ತಿಯಲ್ಲಿ ಬರುವ ಭವಾನಿ ನಗರ-02 ಬಡಾವಣೆ ಪ್ರದೇಶವು ಕೊಳಚೆ ಪ್ರದೇಶ ಎಂದು ಕಂಡು ಬಂದಿರುವುದರಿಂದ ಈ ಪ್ರದೇಶವನ್ನು ಕೊಳಚೆ ನಿರ್ಮೂಲನಾ ಮಂಡಳಿಯು ಅಭಿವೃದ್ಧಿ ಪಡಿಸುವ ಒಂದು ಸಾರ್ವಜನಿಕ ಉದ್ದೇಶಕ್ಕಾಗಿ ಈ ಪ್ರದೇಶಗಳನ್ನು ಕೊಳಚೆ ಪ್ರದೇಶ ಎಂದು ಕರ್ನಾಟಕ ಕೊಳಚೆ ನಿರ್ಮೂಲನ (ಅಭಿವೃದ್ಧಿ ಮತ್ತು ನಿರ್ಮೂಲನಾ) ಕಾಯಿದೆ 1979ರ ಕಲಂ (3)ರ ಪ್ರಕಾರ ದತ್ತವಾದ ಅಧಿಕಾರವನ್ನು ಚಲಾಯಿಸಿ ಶಿರಾ ನಗರಸಭೆ ವ್ಯಾಪ್ತಿಯ ಭವಾನಿ ನಗರ-02 ಕೊಳಚೆ ಪ್ರದೇಶವನ್ನು ಕೊಳಚೆ ಪ್ರದೇಶ ಎಂದು ಘೋಷಿಸಿ ಪ್ರಾರಂಭಿಕ ಅಧಿಸೂಚನೆಯನ್ನು ಹೊರಡಿಸಲಾಗಿದೆ ಈ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ 15 ದಿನಗಳೊಳಗಾಗಿ ಈ ಕಛೇರಿಗೆ ಸಲ್ಲಿಸಬಹುದಾಗಿದೆ.

ಜಿಲ್ಲಾಧಿಕಾರಿಗಳು,
ತುಮಕೂರು ಜಿಲ್ಲೆ, ತುಮಕೂರು.

## OFFICE OF THE DEPUTY COMMISSIONER, TUMKUR DISTRICT, TUMKUR

**Preliminary Notification DUDC/MISC/CR/12/09-10, Dated:3rd June, 2009**

Whereas the Deputy Commissioner. Tumkur is satisfied.

I. That the area situation, S. Nos. P.T.S. Nos. Extent and boundaries and other details of which are specified in schedule below situated within the limits of City Municipal Council, Sira, Tumkur District, are a source of danger to the health, safety and convenience of the public of the area and of its neighborhood by reason of the said area being insanitary, squalid and over crowded.

II. The buildings in the said area used or intended to be used for human habitation area over crowded and unfit for human habitation for want of repair, stability, freedom from damp: natural light and air, water supply, drainage and sanitary convenience:

It is hereby notified for the information of all persons interested in the said area that in exercise of the powers delegated in Government notification No.HUD 49 MCS 85 Dated.17th April 1986 to exercise powers under section3 of the Karnataka Slum areas (Improvement and clearance) Act, 1973. Karnataka Act 33 of 1974 to declare the said area to be a slum area.

Any representation against the proposed action may be made to the Deputy Commissioner, Tumkur District, Tumkur within 15 days from the date of publication of this notification.

**Schedule**

| Sl. No. | Name of the location of the slum | Name of the owner | Survey No. | Segment | Extent | Boundaries | |
|---|---|---|---|---|---|---|---|
| 1. | Bhavaninagar-02 Sira | C.M.C. Sira. | 56/1 | 1 | A G 2.00 | East | Agricultural Land |
| | | | | | | West | Maszid |
| | | | | | | North | Agricultural Land |
| | | | | | | South | Agricultural Land |
| | | | | 2 | A G 0. 25 | East | Vacant land |
| | | | | | | West | Road |
| | | | | | | North | Maszid |
| | | | | | | South | Agricultural Land |

Deputy Commissioner,
Tumkur District, Tumkur.

PR-506

**COMMERCIAL TAXES DEPARTMENT**

**PROCEEDINGS OF THE COMMISSIONER OF COMMERCIAL TAXES, (KARNATAKA), BANGALORE-CLARIFICATION UNDER SECTION 59(4) OF THE KARNATAKA VALUE ADDED TAX ACT, 2003**

**Sub:** KVAT Act, 2003-Clarification under Section 59(4) regarding the rate of tax applicable on 'Isopropy1 alcohol'.

**Ref:** 1) Application Dated:10.02.2008 of M/s G.A.G. Trading Company, No.320, Avenue Road, Bangalore-560002.

2) Proceedings of CCT (K), Bangalore vide No.CLR.CR.06/07-08, Dated:04.06.2008.

In its application Dated:10.02.2008 cited (1) above, M/s G.A.G. Trading Company, No.320, Avenue Road, Bangalore-560002 had sought clarification regarding the rate of tax applicable on 'Isopropyl alcohol'. Pursuant to the same, it was clarified in the proceedings cited at ref. (2) above that 'Isopropy1 alcohol' was taxable at 12.5% under Section 4(1)(b) of the Karnataka Value Added Tax Act, 2003.

2. On a re-examination, it is seen that 'isopropyl alcohol' has been specified in Serial No.167 of the table of the notification No.FD 197 CSL 2005 (6), Dated:30.04.2005 in which industrial inputs liable to tax at 4% under entry 51 of the III schedule to the Karnataka Value Added Tax Act, 2003,have been notified.

3. Hence the following revised clarification is issued.

**Clarification No. CLR.CR.06/08-09, Dated:6th June, 2009**

In modification of the clarification issued in No.CLR.CR.06/07-08, Dated:04.06.2008, it is hereby clarified that 'Isopropyl alcohol' is taxable at 4% in terms of the notification No.FD 197 CSL 2005(6), Dated:30.04.2005 read with entry 51 of the III Schedule to the Karnataka Value Added Tax Act, 2003.

**B.A. HARISH GOWDA**
Commissioner of Commercial Taxes,
(Karnataka), Bangalore.

PR-512

**ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು**

**ಸಂಖ್ಯೆ: ಆಸಾನಿ:271:ಆಡಳಿತ(2) 2009/ 10448-87, ಬೆಂಗಳೂರು, ದಿನಾಂಕ:11ನೇ ಜೂನ್, 2009**

**ವಿಷಯ:** ಶ್ರೀ ಆರ್.ಬಿ. ಜತನ್, ಸಾಂಖ್ಯಿಕ ನಿರೀಕ್ಷಕರು, ತಾಲ್ಲೂಕು ಕಛೇರಿ, ಹುಬ್ಬಳ್ಳಿ (ಧಾರವಾಡ ಜಿಲ್ಲೆ) ಇವರ ವಿರುದ್ಧ ಶಿಸ್ತಿನ ಕ್ರಮ ಜರುಗಿಸುವ ಕುರಿತು.

**ಉಲ್ಲೇಖ:** ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಧಾರವಾಡ ಇವರ ಅರೆ ಸರ್ಕಾರಿ ಪತ್ರದ ಸಂಖ್ಯೆ: ಜಿಸಂಧಾ:4/ಆಡಳಿತ-1/ವರ್ಗಾವಣೆ:09-10/807, ದಿನಾಂಕ:03.05.2009/05.06.2009 ರೊಂದಿಗೆ ಲಗತ್ತಿಸಲಾದ ತಹಸೀಲ್ದಾರ, ಹುಬ್ಬಳ್ಳಿ ತಾಲ್ಲೂಕು, ಹುಬ್ಬಳ್ಳಿ ಇವರ ಅರೆ ಸರ್ಕಾರಿ ಪತ್ರದ ಸಂಖ್ಯೆ: ಸಿಬ್ಬಂದಿ/ವಹಿ/7/09-10, ದಿನಾಂಕ:28.05.2009.

**ಪ್ರಸ್ತಾವನೆ:**

ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಧಾರವಾಡ ಇವರಿಗೆ ವಿಳಾಸಿಸಲಾದ ತಹಸೀಲ್ದಾರರು, ಹುಬ್ಬಳ್ಳಿ ತಾಲ್ಲೂಕು, ಹುಬ್ಬಳ್ಳಿ ಇವರ ಅರೆ ಸರ್ಕಾರಿ ಪತ್ರದ ಸಂಖ್ಯೆ: ಸಿಬ್ಬಂದಿ/ವಹಿ/7/09-10, ದಿನಾಂಕ:28.05.2009ರಲ್ಲಿ ಈ ನಿರ್ದೇಶನಾಲಯದ ಸಾಂಖ್ಯಿಕ ನಿರೀಕ್ಷಕರು ವೃಂದದ ಶ್ರೀ ಆರ್.ಬಿ. ಜತನ್, ಸಾಂಖ್ಯಿಕ ನಿರೀಕ್ಷಕರು, ತಾಲ್ಲೂಕು ಕಛೇರಿ, ಹುಬ್ಬಳ್ಳಿ ಇವರು "ದಿನಾಂಕ:01.03.2000 ರಿಂದ ತಾಲ್ಲೂಕು ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅವರಿಗೆ ವಹಿಸಲಾದ ಕರ್ತವ್ಯಗಳನ್ನು ಸರಿಯಾಗಿ ನಿರ್ವಹಿಸುತ್ತಿಲ್ಲವೆಂದೂ, ಸದರಿ ಸಾಂಖ್ಯಿಕ ನಿರೀಕ್ಷಕರಿಗೆ ಮೌಖಿಕವಾಗಿ ಸೂಚಿಸಲಾಗುತ್ತಿದ್ದರೂ ಕೂಡ ಕರ್ತವ್ಯ ನಿರ್ವಹಣೆಯಲ್ಲಿ ಸುಧಾರಣೆಯಾಗಿರುವುದಿಲ್ಲವೆಂದು ವರದಿ ಮಾಡಿರುತ್ತಾರೆ. ಅವರ ಕರ್ತವ್ಯ ನಿರ್ವಹಣೆಯಲ್ಲಿ ಸುಧಾರಣೆಯಾಗುವಂತೆ, ಸದರಿಯವರಿಗೆ ದಿನಾಂಕ:06.10.2008ರಂದು ಒಂದು ಜ್ಞಾಪನ ನೀಡಲಾಗಿದ್ದರೂ, ಆ ಜ್ಞಾಪನಕ್ಕೆ ಅವರು ಯಾವುದೇ ಪ್ರತಿಕ್ರಿಯೆ ನೀಡಿರುವುದಿಲ್ಲ ಹಾಗೂ ದಿನಾಂಕ:17.04.2009ರಂದು ಅವರು ನಿರ್ವಹಿಸುತ್ತಿರುವ ಸಂಕಲನಗಳ (ಕಡತಗಳು, ಪತ್ರ ವ್ಯವಹಾರಗಳು, ಇತ್ಯಾದಿ) ತಪಾಸಣೆ ಕೈಗೊಂಡು, ತಪಾಸಣಾ ಸಮಯದಲ್ಲಿ ಕಂಡು ಬಂದಿದ್ದ ಆಕ್ಷೇಪಣೆ/ಲೋಪದೋಷಗಳನ್ನೊಳಗೊಂಡ ವರದಿಗೆ ಸಂಬಂಧಿಸಿದಂತೆ, ಅವರ ಅನುಪಾಲನಾ ವರದಿಯನ್ನು 3 ದಿನಗಳಲ್ಲಿ ಸಲ್ಲಿಸುವಂತೆ ತಿಳಿಸಲಾಗಿದ್ದರೂ, ಸದರಿ ಸಾಂಖ್ಯಿಕ ನಿರೀಕ್ಷಕರು ಅವರ ವರದಿಯನ್ನು ಸಲ್ಲಿಸದೇ ಇದ್ದುದರಿಂದ, ಅವರಿಗೆ ಪುನಃ ದಿನಾಂಕ:04.05.2009ರಂದು ನೀಡಿದ್ದ ನೆನಪೋಲೆಗೆ ಕೂಡ ಯಾವುದೇ ವಿವರಣೆ ನೀಡಿಲ್ಲವಾದ್ದರಿಂದ ಸದರಿ ಸಾಂಖ್ಯಿಕ ನಿರೀಕ್ಷಕರು ಮೇಲಾಧಿಕಾರಿಗಳ ಆದೇಶವನ್ನು ಪಾಲಿಸದೇ ಇರುವುದು ಸ್ಪಷ್ಟವಾಗಿರುತ್ತದೆ" ಎಂದು ತಹಶೀಲ್ದಾರರು, ಹುಬ್ಬಳ್ಳಿ ತಾಲ್ಲೂಕು ಇವರು ಅವರ ಅದೇ ಪತ್ರದಲ್ಲಿ ವರದಿ ನೀಡಿರುತ್ತಾರೆ.

ತಹಸೀಲ್ದಾರರು ಹುಬ್ಬಳ್ಳಿ ತಾಲ್ಲೂಕು, ಹುಬ್ಬಳ್ಳಿ ಇವರ ವರದಿಯನ್ನು ಪರಿಶೀಲಿಸಲಾಗಿ, ಈ ನಿರ್ದೇಶನಾಲಯದ ಸಾಂಖ್ಯಿಕ ನಿರೀಕ್ಷಕರ ವೃಂದದ ಸಮೂಹ 'ಸಿ' ನೌಕರರಾದ ಶ್ರೀ ಆರ್.ಬಿ. ಜತನ್, ಇವರು ಅವರ ಕರ್ತವ್ಯ ನಿರ್ವಹಣೆಯಲ್ಲಿ ಬೇಜವಾಬ್ದಾರಿತನ ಮತ್ತು ಕರ್ತವ್ಯ ಲೋಪವೆಸಗಿ, ಸಮೂಹ "ಸಿ" ಸರ್ಕಾರಿ ನೌಕರರೊಬ್ಬರಿಗೆ ಸಲ್ಲದ ರೀತಿಯ ವರ್ತನೆ ಎಂದು ಪರಿಗಣಿಸಿ, ಅವರ ವಿರುದ್ಧ ಇಲಾಖಾ ವಿಚಾರಣೆ ಕಾಯ್ದಿರಿಸಿ, ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಕಛೇರಿ ಆದೇಶದ ಸಂಖ್ಯೆ: 99: ಆಡಳಿತ:2009-10**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳನ್ನು ಪರಿಗಣಿಸಿ, ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಮತ್ತು ಶಿಸ್ತು ಪ್ರಾಧಿಕಾರವಾದ ನಾನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ:10(1-ಎ) ರಲ್ಲಿನ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಆರ್.ಬಿ. ಜತನ್, ಸಾಂಖ್ಯಿಕ ನಿರೀಕ್ಷಕರು, ತಾಲ್ಲೂಕು ಕಛೇರಿ, ಹುಬ್ಬಳ್ಳಿ, (ಧಾರವಾಡ ಜಿಲ್ಲೆ) ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಅವರ ವಿರುದ್ಧ ಇಲಾಖಾ ವಿಚಾರಣೆಯನ್ನು ಏರ್ಪಡಿಸುವುದನ್ನು ಕಾಯ್ದಿರಿಸಿ ಸರ್ಕಾರದ ಸೇವೆಯಿಂದ ಅಮಾನತ್ತುಗೊಳಿಸಲಾಗಿದೆ.

ಕರ್ನಾಟಕ ನಾಗರೀಕ ಸೇವಾ ನಿಯಮಗಳು, 1957ರ ನಿಯಮ:98(1), 98(2) ಮತ್ತು ನಿಯಮ:104(2)ರಲ್ಲಿನ ಷರತ್ತುಗಳನ್ನು ಪೂರೈಸಿದಲ್ಲಿ, ಸದರಿ ಅಮಾನತ್ತುಗೊಂಡ ಸಾಂಖ್ಯಿಕ ನಿರೀಕ್ಷಕರಿಗೆ ಅಮಾನತ್ತು ಅವಧಿಯಲ್ಲಿ ಜೀವನ ನಿರ್ವಹಣಾ ಭತ್ಯೆಯನ್ನು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಧಾರವಾಡ ಇವರ ಕಛೇರಿಯಿಂದ ನೀಡಬಹುದಾಗಿದೆ.

**ಹೆಚ್.ಇ. ರಾಜಶೇಖರಪ್ಪ**

ಪಿ.ಆರ್.508

ನಿರ್ದೇಶಕರು ಮತ್ತು ಶಿಸ್ತು ಪ್ರಾಧಿಕಾರ,
ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ.

**ಕರ್ನಾಟಕ ಲೋಕಸೇವಾ ಆಯೋಗ**

**ವಿಷಯ:** 2008ನೇ ದ್ವಿತೀಯ ಅಧಿವೇಶನದ ಇಲಾಖಾ ಪರೀಕ್ಷೆಯಲ್ಲಿ ಚಿತ್ರದುರ್ಗ ಕೇಂದ್ರದಲ್ಲಿ ಎಸಗಿರುವ ದುರಾಚಾರ ಪ್ರಕರಣಕ್ಕೆ ದಂಡನೆ ವಿಧಿಸುವ ಕುರಿತು.

**ಓದಲಾಗಿದೆ:** 1) ಇಪ(1) 1629/2008-09/ಪಿಎಸ್‌ಸಿ, ದಿನಾಂಕ:02.03.2009.

2) ಇಪ (1)850/2009-10/ಪಿಎಸ್‌ಸಿ, ದಿನಾಂಕ:30.04.2009.

3) ದಿನಾಂಕ:11.05.2009ರ ಆರೋಪಿ ಅಭ್ಯರ್ಥಿಯ ಸಮಜಾಯಿಷಿ.

4) ಆಯೋಗದ ನಡವಳಿ ದಿನಾಂಕ:25.05.2009.

**ಪ್ರಸ್ತಾವನೆ:**

ಆಯೋಗವು ದಿನಾಂಕ:02.02.2009ರಂದು ಚಿತ್ರದುರ್ಗ ಕೇಂದ್ರದಲ್ಲಿ ನಡೆಸಿದ 2008ನೇ ದ್ವಿತೀಯ ಅಧಿವೇಶನದ ಇಲಾಖಾ ಪರೀಕ್ಷೆಯ ಜನರಲ್ ಲಾ ಭಾಗ-2ರ ವಿಷಯದ ಅಭ್ಯರ್ಥಿಯಾದ ಶ್ರೀ ಬಿ. ರವಿಕುಮಾರ್, ದ್ವಿತೀಯ ದರ್ಜೆ ಸಹಾಯಕರು, ಸರ್ಕಾರಿ ಪದವಿ ಪೂರ್ವ ಕಾಲೇಜ್, ಪರಶುರಾಮಪುರ, ಚಳ್ಳಕೆರೆ (ತಾ), ಚಿತ್ರದುರ್ಗ ಜಿಲ್ಲೆ, (ನೋ.ಸಂ:42239) ಇವರು ಪರೀಕ್ಷೆಗೆ ಮದ್ಯಪಾನ ಮಾಡಿ ಬಂದು, ಗಲಾಟೆ ಮಾಡಿ ಅಕ್ಕಪಕ್ಕದ ಅಭ್ಯರ್ಥಿಗಳನ್ನು ನಿಂದಿಸಿ ಪರೀಕ್ಷಾ ಕಾರ್ಯಗಳಿಗೆ ಭಂಗ ಉಂಟು ಮಾಡಿರುವ ಬಗ್ಗೆ ಪರೀಕ್ಷಾ ಮೇಲ್ವಿಚಾರಕರು ದೂರನ್ನು ಸಲ್ಲಿಸಿದ್ದು, ಈ ಸಂಬಂಧ ಆರೋಪಿತರಿಗೆ ಕ್ರಮಸಂಖ್ಯೆ (1)ರಲ್ಲಿ ಮೇಲೆ ಓದಲಾದ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಲಾಗಿದ್ದು, ಕ್ರಮಸಂಖ್ಯೆ (2)ರಲ್ಲಿ ಆರೋಪಿ ಅಭ್ಯರ್ಥಿಯು ತನ್ನ ಆರೋಪವನ್ನು ಒಪ್ಪಿಕೊಂಡಿದ್ದು, ಆ ಪ್ರಯುಕ್ತ ಕ್ರಮಸಂಖ್ಯೆ (4)ರಲ್ಲಿ ಓದಲಾದ ಆಯೋಗದ ನಡವಳಿ ದಿನಾಂಕ:25.05.2009ರ ಅನ್ವಯ ಈ ಕೆಳಕಂಡ ಆದೇಶವನ್ನು ಹೊರಡಿಸಿದೆ:

**ಆದೇಶ ಸಂಖ್ಯೆ: ಇಪ (1) 909/ 09-10/ಪಿಎಸ್‌ಸಿ, ಬೆಂಗಳೂರು, ದಿನಾಂಕ:9ನೇ ಜೂನ್, 2009**

1965ರ ಕರ್ನಾಟಕ ಲೋಕಸೇವಾ ಆಯೋಗ (ಸೇವಾ ಪರೀಕ್ಷೆಗಳ ನಿರ್ವಹಣೆ) ನಿಯಮಾವಳಿ ನಿಯಮ 14 ಹಾಗೂ ತತ್ಸಂಬಂಧದಲ್ಲಿ ಹೊರಡಿಸಲಾಗಿರುವ ಆಯೋಗದ ಅಧಿಕೃತ ಜ್ಞಾಪನ ಪತ್ರಸಂಖ್ಯೆ: ಆಡಳಿತ 398/93-94/ಪಿಎಸ್‌ಸಿ ದಿನಾಂಕ:14.07.1993 ಅಧಿಸೂಚನೆಯಂತೆ, ಸದರಿ ಇಲಾಖಾ ಪರೀಕ್ಷೆಯ ಅಭ್ಯರ್ಥಿಯಾದ ಶ್ರೀ ಬಿ. ರವಿಕುಮಾರ್, ದ್ವಿತೀಯ ದರ್ಜೆ ಸಹಾಯಕ. ಸರ್ಕಾರಿ ಪದವಿ ಪೂರ್ವ ಕಾಲೇಜ್, ಪರಶುರಾಮಪುರ, ಚಿತ್ರದುರ್ಗ ಜಿಲ್ಲೆ ಇವರ ಮೇಲಿನ ಆರೋಪ ಸಾಬೀತಾಗಿರುವುದರಿಂದ 2008ನೇ ದ್ವಿತೀಯ ಅಧಿವೇಶನದ ಅಭ್ಯರ್ಥಿತನವನ್ನು ರದ್ದುಪಡಿಸಿದೆ. ಇನ್ನು ಮುಂದೆ ಈ ಅಭ್ಯರ್ಥಿಯು ಆಯೋಗದಿಂದ ನಡೆಸಲಾಗುವ ಇಲಾಖಾ ಪರೀಕ್ಷೆಗಳಿಗೆ ಖಾಯಂ ಹಾಜರಾಗದಂತೆ ದಂಡನೆಯನ್ನು ವಿಧಿಸಿ, ಆದೇಶ ಹೊರಡಿಸಿದೆ.

ಆಯೋಗದ ಆದೇಶದ ಮೇರೆಗೆ,

**ವಿ.ಬಿ. ಪಾಟೀಲ್**

ಪಿ.ಆರ್.513

ಕಾರ್ಯದರ್ಶಿ ಹಾಗೂ ನಿಯಂತ್ರಕರು, ಇಲಾಖಾ ಪರೀಕ್ಷೆಗಳು,
ಕರ್ನಾಟಕ ಲೋಕಸೇವಾ ಆಯೋಗ.

## COMMERCIAL TAXES DEPARTMENT

## PROCEEDINGS OF THE COMMISSIONER OF COMMERCIAL TAXES, (KARNATAKA), BANGALORE-CLARIFICATION UNDER SECTION 59(4) OF THE KARNATAKA VALUE ADDED TAX ACT, 2003

**Sub:** KVAT Act, 2003-Clarification under Section 59(4) regarding applicability of VAT on customized software.

**Ref:** Application Dated:28.04.2009 of M/s Tejas Networks Ltd., # 58, 1st Main Road, J.P. Nagar, 3rd Phase, Bangalore-560078.

In its application cited above, M/s Tejas Networks Ltd., # 58, 1st Main Road, J.P. Nagar, 3rd Phase, Bangalore-560078, has sought clarification regarding applicability of VAT on customized software.

2. Section 59(4) of the Karnataka Value Added Tax Act, 2003 empowers the Commissioner of Commercial Taxes to clarify the rate of tax payable under the Act, if he considers it necessary or expedient so to do, for the purpose of maintaining uniformity in the work of assessments and collection of revenue. It is examined and found that the clarification requested by the petitioner is within the scope of the aforesaid provision and it is necessary that the clarification be issued for the purpose of maintaining uniformity in the work of assessments and collection of revenue.

3. Hence the following clarification is issued.

**Clarification No. CLR.CR.14/09-10, Dated:8th June, 2009**

It is hereby clarified that sale of customized software is taxable at 4% VAT in terms of Notification No.FD 116 CSL 2006 (9), Dated:31.03.2006.

**B.A. HARISH GOWDA**

PR-519

Commissioner of Commercial Taxes,
(Karnataka), Bangalore.

## COMMERCIAL TAXES DEPARTMENT

## PROCEEDINGS OF THE COMMISSIONER OF COMMERCIAL TAXES, (KARNATAKA), BANGALORE-CLARIFICATION UNDER SECTION 59(4) OF THE KARNATAKA VALUE ADDED TAX ACT, 2003

**Sub:** KVAT Act, 2003-Clarification under Section 59(4) regarding the rate of tax applicable on 'fly ash bricks, concrete window, door frames, curb stones and pavers.

**Ref:** Application Dated:23.03.2009 of Sri Muniyappa, Proprietor, M/s Laxmi Venkateshwara Cement Bricks, C.B. Pura Road, Vijayapura-562135, Bangalore Rural District.

In its application cited above, Sri Muniyappa, Proprietor, M/s Laxmi Venkateshwara Cement Bricks, C.B. Pura Road, Vijayapura-562135, Bangalore Rural District, has sought clarification regarding the rate of tax applicable on 'fly ash bricks, concrete window, door frames, curb stones and pavers'.

2. Section 59(4) of the Karnataka Value Added Tax Act, 2003 empowers the Commissioner of Commercial Taxes to clarify the rate of tax payable under the Act, if he considers it necessary or expedient so to do, for the purpose of maintaining uniformity in the work of assessments and collection of revenue. It is examined and found that the clarification requested by the petitioner is within the scope of the aforesaid provision and it is necessary that the clarification be issued for the purpose of maintaining uniformity in the work of assessments and collection of revenue.

3. Hence the following clarification is issued.

**Clarification No. CLR.CR.285/08-09, Dated:7th May, 2009**

It is hereby clarified that the rates of tax applicable on the following goods is as under.

| Sl. No. | Commodity | Rate of tax/ Section |
|---|---|---|
| 1. | Fly ash bricks | 4% under entry Sl.No.2 of III Schedule to the KVAT Act, 2003. |
| 2. | Concrete window, door frames, curb stones and pavers. | 12.5% under Section 4 (1)(b) of the KVAT Act, 2003. |

**B.A. HARISH GOWDA**

PR-462

Commissioner of Commercial Taxes,
(Karnataka), Bangalore.

## COMMERCIAL TAXES DEPARTMENT

## PROCEEDINGS OF THE COMMISSIONER OF COMMERCIAL TAXES, (KARNATAKA), BANGALORE-CLARIFICATION UNDER SECTION 59(4) OF THE KARNATAKA VALUE ADDED TAX ACT, 2003

**Sub:** KVAT Act, 2003-Clarification under Section 59(4) regarding the rate of tax applicable on 'supply of plastic alphabets and puzzles in Kannada and English to Government schools and rubber alphabets for blind students'.

**Ref:** Application Dated:25.03.2009 of Sri G. Nataraj, Partner M/s Bhagyam Binding Works, # 25/1, 1st Main Road, 1st Cross, New Timber Yard Layout, Mysore Road, Bangalore-560026.

In his application cited above, Sri G. Nataraj, Partner M/s Bhagyam Binding Works, # 25/1, 1st Main Road, 1st Cross, New Timber Yard Layout, Mysore Road, Bangalore-560026, has sought clarification regarding the rate of tax applicable on "supply of plastic alphabets and puzzles in Kannada and English to Government schools and rubber alphabets for blind students'.

2. Section 59(4) of the Karnataka Value Added Tax Act, 2003 empowers the Commissioner of Commercial Taxes to clarify the rate of tax payable under the Act, if he considers it necessary or

expedient so to do, for the purpose of maintaining uniformity in the work of assessments and collection of revenue. It is examined and found that the clarification requested by the petitioner is within the scope of the aforesaid provision and it is necessary that the clarification be issued for the purpose of maintaining uniformity in the work of assessments and collection of revenue.

3. Hence the following clarification is issued.

**Clarification No. CLR.CR.290/08-09, Dated:7th May, 2009**

It is hereby clarified that 'plastic alphabets and puzzles in Kannada and English and rubber alphabets' are taxable at 12.5% under Section 4(1)(b) of the Karnataka Value Added Tax Act, 2003.

**B.A. HARISH GOWDA**

PR-463

Commissioner of Commercial Taxes,
(Karnataka), Bangalore.

**COMMERCIAL TAXES DEPARTMENT**

**OFFICE OF THE ASSISTANT COMMISSIONER OF COMMERCIAL TAXES, LOCAL VAT OFFICE-380, BELGAUM**

**NOTIFICATION**

**No. LVO-380/BGM/CST/2008-09/B-, Dated:9th June, 2009**

**ASSISTANT COMMISSIONER OF COMMERCIAL TAXES, LOCAL VAT OFFICE-130, BANGALORE, Dated:8th June, 2009**

**(Notified Authority Under the Rule 6(i) of the CST (Karnataka) Rules 1957)**

By virtue of the provision of Rule 12(2) of the CST (Registration & Turnover) Rules 1957 and Rule 6(e) and 6(i) of the CST (Karnataka) Rules 1957, it is hereby notified for general information that the declarations in Form-C described below declared to be obsolete and invalid.

| Series & Serial Number of Declaration Forms lost/ destroyed or Stolen | Name & Address of the dealer to whom declaration forms are issued by the department with date of issue | Registration Certificate No. of the dealer under CST Act, 1956 | The Address of the dealer to whom the declaration was/were sent | Date of issue of Forms by the dealer | Whether lost/destroyed or stolen | Remarks |
|---|---|---|---|---|---|---|
| 0885616 | Shri Mohd Ayub Athani prop, Aasha Traders khade Bazar, Belgaum | TIN 29400704400 | Not issued | Not issued | Destroyed | Destroyed due to fire broke out in the shop. |

PR-516

Assistant Commissioner of Commercial Taxes, LVO-380, Belgaum.

**COMMERCIAL TAXES DEPARTMENT**

**OFFICE OF THE ASSISTANT COMMISSIONER OF COMMERCIAL TAXES, LOCAL VAT OFFICE-380, BELGAUM**

**NOTIFICATION**

**No. LVO-380/BGM/CST/2008-09/B-, Dated:4th April, 2008**

**ASSISTANT COMMISSIONER OF COMMERCIAL TAXES, LOCAL VAT OFFICE-130, BANGALORE, Dated:8th June, 2009**

**(Notified Authority Under Rule 6(i) of the CST (Karnataka) Rules 1957)**

By virtue of the provisions of Rule 12(2) of the CST (Registration & Turnover) Rules 1957 and Rule 6(e) and 6(i) of the CST (Karnataka) Rules 1957, it is hereby notified for general information that the declarations in Form-C described below declared to be obsolete and invalid.

| Series & Serial Number of Declaration Forms lost/ destroyed or Stolen | Name & Address of the dealer to whom declaration forms are issued by the department with date of issue | Registration Certificate No. of the dealer under CST Act, 1956 | The Address of the dealer to whom the declaration was/were sent | Date of issue of Forms by the dealer | Whether lost/ destroyed or stolen | Remarks |
|---|---|---|---|---|---|---|
| KA-C/01 0579293 | Shri Sanjay Raibagkar, Prop, M/s Amarcon Creations, No.289 4, Khade Bazar Belgaum, Date of issue 04.12.2008 | TIN:297900 08938 CST No.5015754 | Lajja, Mumbai | 03.01.2009 | Lost in transit | - |
| KA-C/01 0579294 | -do- | -do- | Sarang Creations Mumbai | 03.01.2009 | Lost in transit | - |

Assistant Commissioner of Commercial
PR-517 Taxes, LVO-380, Belgaum.

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು ಇವರ ನಡವಳಿಗಳು**

**ವಿಷಯ:** ಶ್ರೀಮತಿ ಬಿ. ಅಂಬುಜಾ, ಕಿರಿಯ ಮಹಿಳಾ ಆರೋಗ್ಯ ಸಹಾಯಕಿ ಇವರ ಅನಧಿಕೃತ ಗೈರುಹಾಜರಿ ಬಗ್ಗೆ ಅಂತಿಮ ಆದೇಶ.

**ಓದಲಾಗಿದೆ:** 1) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಇವರ ತಿಳುವಳಿಕೆ ಪತ್ರ ಸಂಖ್ಯೆ:ಜಿಅದಾ.ಇವಿವಿ.420.2004–05, ದಿನಾಂಕ:08.04.2005.

2) ವಿಚಾರಣಾಧಿಕಾರಿಗಳ ನೇಮಕಾತಿ ಆದೇಶ ಸಂಖ್ಯೆ: ಜಿಅದಾ.ಎಂವಿವಿ.ಸಿಶಾ(2) 128:2007–08, ದಿನಾಂಕ:12.09.2007.

3) ವಿಚಾರಣಾಧಿಕಾರಿಗಳು ಸಲ್ಲಿಸಿರುವ ವರದಿ ದಿನಾಂಕ:10.12.2007.

4) ವಿಚಾರಣಾ ವರದಿ ನೌಕರರಿಗೆ ಜಾರಿ ಮಾಡಿರುವ ಪತ್ರ ಸಂಖ್ಯೆ: ಜಿಅದಾ:ಸಿಶಾ(2):253:2008–09, ದಿನಾಂಕ:17.11.2008.

5) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ದಾವಣಗೆರೆ ಇವರ ಪತ್ರ ಸಂಖ್ಯೆ: ಜಿಅದಾ.ಸಿಶಾ(2):253:2008–09, ದಿನಾಂಕ:17.12.2008.

**ಪ್ರಸ್ತಾವನೆ:**

ಶ್ರೀಮತಿ ಬಿ. ಅಂಬುಜಾ, ಕಿರಿಯ ಮಹಿಳಾ ಆರೋಗ್ಯ ಸಹಾಯಕಿ, ಇವರು ಪ್ರಾಥಮಿಕ ಆರೋಗ್ಯ ಕೇಂದ್ರ ಹಲುವಾಗಲು ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ದಿನಾಂಕ:14.09.1996 ರಿಂದ ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಿಯಾಗಿದ್ದು ಮೇಲೆ ಓದಲಾದ (1) ರಲ್ಲಿನ ಪತ್ರದಲ್ಲಿ ತಿಳುವಳಿಕೆ ಹಾಗೂ ದೋಷಾರೋಪಣಾ ಪಟ್ಟಿಯನ್ನು ಜಾರಿಗೊಳಿಸಿದ್ದು ನೌಕರರು ಹಿಮಾಲನ್ನು ಸಲ್ಲಿಸಿರುವುದಿಲ್ಲ. ಮೇಲೆ ಓದಲಾದ (2)ರಲ್ಲಿ ಪ್ರಕರಣದ ಸತ್ಯಾಸತ್ಯತೆಯನ್ನು ಕಂಡುಕೊಳ್ಳಲು ಜಿಲ್ಲಾ ಮಲೇರಿಯಾಧಿಕಾರಿಗಳು, ದಾವಣಗೆರೆ ಇವರನ್ನು ವಿಚಾರಣಾಧಿಕಾರಿಗಳಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ನೇಮಿಸಿದ್ದು ಮೇಲೆ ಓದಲಾದ (3)ರಲ್ಲಿ ವಿಚಾರಣಾ ಅಧಿಕಾರಿಗಳು ವಿಚಾರಣಾ ವರದಿ ಸಲ್ಲಿಸಿದ್ದು ಆರೋಪ ಸಾಬೀತಾಗಿದೆಯೆಂದು ತಿಳಿಸಿರುತ್ತಾರೆ. ಮೇಲೆ ಓದಲಾದ (4) ರಲ್ಲಿ ವಿಚಾರಣಾ ವರದಿಯ ಪ್ರತಿಯನ್ನು ನೌಕರರಿಗೆ ಜಾರಿಗೊಳಿಸಿದ್ದು ನೌಕರರು ಸಮಜಾಯಿಷಿ ಸಲ್ಲಿಸಿರುವುದಿಲ್ಲ. ಆದುದರಿಂದ ಈ ಬಗ್ಗೆ ಕಠಿಣ ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ದಾವಣಗೆರೆ ಇವರು ಮೇಲೆ ಓದಲಾದ (5)ರಲ್ಲಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಪ್ರಸ್ತಾವನೆ ಹಾಗೂ ವಿಚಾರಣಾ ವರದಿ ಪರಿಶೀಲಿಸಿದ್ದು ಸಾಕಷ್ಟು ಕಾಲಾವಕಾಶ ನೀಡಿದ್ದರೂ ನೌಕರರು ಪ್ರತಿಕ್ರಿಯೆ ನೀಡದಿರುವುದರಿಂದ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಆದೇಶ ಸಂಖ್ಯೆ: ಡಿಪಿಎಸ್(23) ಸಿಆರ್:17:2003–04, ಬೆಂಗಳೂರು, ದಿನಾಂಕ:28ನೇ ಫೆಬ್ರವರಿ, 2009**

ಮೇಲೆ ವಿವರಿಸಿರುವ ಕಾರಣಗಳಿಂದ 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಡಾ: ಉಷಾ ವಾಸುನಾಕರ್, ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಆದ ನಾನು ಶ್ರೀಮತಿ ಬಿ. ಅಂಬುಜಾ, ಕಿರಿಯ ಮಹಿಳಾ

ಆರೋಗ್ಯ ಸಹಾಯಕಿ, ಪ್ರಾಥಮಿಕ ಆರೋಗ್ಯ ಕೇಂದ್ರ ಹಲುವಾಗಲು, ಹರಪನಹಳ್ಳಿ ತಾಲ್ಲೂಕು ದಾವಣಗೆರೆ ಜಿಲ್ಲೆ ಇವರ ಅನಧಿಕೃತ ಗೈರು ಹಾಜರಿಗೆ ದಂಡನೆಯಾಗಿ ಸದರಿ ನಿಯಮ 8(viii)ರ ಪ್ರಕಾರ ಮುಂದೆ ಸರ್ಕಾರಿ ಸೇವೆಗೆ ಅನರ್ಹರಾಗುವ ರೀತಿ ಜಾರಿಗೆ ಬರುವಂತೆ ವಜಾಗೊಳಿಸಿ ಆದೇಶಿಸಿರುತ್ತೇನೆ.

**ಡಾ: ಉಷಾ ವಾಸುನ್‌ಕರ್**
ನಿರ್ದೇಶಕರು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು.

ಪಿ.ಆರ್.209

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು ಇವರ ನಡವಳಿಗಳು**

**ವಿಷಯ:** ಶ್ರೀ ಯಶವಂತರಾಜು, ದ್ವಿತೀಯ ದರ್ಜೆ ಸಹಾಯಕ ಇವರ ಅನಧಿಕೃತ ಗೈರುಹಾಜರಿ ಬಗ್ಗೆ ಅಂತಿಮ ಆದೇಶ.

**ಓದಲಾಗಿದೆ:** 1) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ದಾವಣಗೆರೆ ಇವರ ದೋಷಾರೋಪಣೆ ಹಾಗೂ ತಿಳುವಳಿಕೆ ಪತ್ರ ಸಂಖ್ಯೆ:ಜಿಅದಾ.ಸಿಶಾ(2): ವಿಚಾರಣೆ:129:07-08, ದಿನಾಂಕ:12.09.2007.

2) ವಿಚಾರಣಾಧಿಕಾರಿಗಳು ನೇಮಕಾತಿ ಆದೇಶ ಸಂಖ್ಯೆ:ಜಿಅದಾ.ಸಿಶಾ(2)26 :2008-09, ದಿನಾಂಕ:12.05.2008.

3) ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿ ಸಂಖ್ಯೆ:ಜಿಕುಕ:ದಾ:88:08-09, ದಿನಾಂಕ:16.08.2008.

4) ವಿಚಾರಣಾ ವರದಿ ನೌಕರರಿಗೆ ಜಾರಿ ಮಾಡಿರುವ ಪತ್ರ ಸಂಖ್ಯೆ:ಜಿಅದಾ:ಸಿಶಾ:(2):23:2008-09, ದಿನಾಂಕ:26.08.2008.

5) ದಾವಣಗೆರೆ, ಟೈಮ್ಸ್ ಕನ್ನಡ ದಿನ ಪತ್ರಿಕೆಯಲ್ಲಿ ಪ್ರಕಟಿಸಿರುವ ಪ್ರಕಟಣಾ ದಿನಾಂಕ:26.09.2008 ಮತ್ತು ಉದಯವಾಣಿಯಲ್ಲಿ ಪ್ರಕಟಿಸಿರುವ ಪ್ರಕಟಣಾ ದಿನಾಂಕ:29.09.2008.

6) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ದಾವಣಗೆರೆ ಇವರ ಪತ್ರ ಸಂಖ್ಯೆ: ಜಿಅದಾ.ಸಿಶಾ(2):181:2008-09, ದಿನಾಂಕ:17.12.2008.

**ಪ್ರಸ್ತಾವನೆ:**

ಶ್ರೀ ಯಶವಂತರಾಜು, ದ್ವಿತೀಯ ದರ್ಜೆ ಸಹಾಯಕ ಇವರು ಪ್ರಾಥಮಿಕ ಆರೋಗ್ಯ ಕೇಂದ್ರ ಕೊಡಗನೂರು ದಾವಣಗೆರೆ ತಾಲ್ಲೂಕು ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ದಿನಾಂಕ:14.10.2005 ರಿಂದ 30.05.2006ರ ವರೆಗೆ ಹಾಗೂ ದಿನಾಂಕ:07.04.2007 ರಿಂದ ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಿಯಾಗಿದ್ದು ಇವರ ಬಗ್ಗೆ ಮೇಲೆ ಓದಲಾದ (1)ರಲ್ಲಿನ ಪತ್ರದಲ್ಲಿ ತಿಳುವಳಿಕೆ ಹಾಗೂ ದೋಷಾರೋಪಣಾ ಪಟ್ಟಿಯನ್ನು ಜಾರಿಗೊಳಿಸಿದ್ದು ನೌಕರರು ಅಹವಾಲನ್ನು ಸಲ್ಲಿಸಿರುವುದಿಲ್ಲ. ಮೇಲೆ ಓದಲಾದ (2)ರಲ್ಲಿ ಪ್ರಕರಣದ ಸತ್ಯಾ ಸತ್ಯತೆಯನ್ನು ಕಂಡುಕೊಳ್ಳಲು ಜಿಲ್ಲಾ ಕುಷ್ಠರೋಗ ನಿಯಂತ್ರಣಾಧಿಕಾರಿಗಳು, ದಾವಣಗೆರೆ ಇವರನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ವಿಚಾರಣಾಧಿಕಾರಿಯನ್ನಾಗಿ ನೇಮಿಸಿದ್ದು, ಮೇಲೆ ಓದಲಾದ (3)ರಲ್ಲಿ ವಿಚಾರಣಾಧಿಕಾರಿಗಳು ವಿಚಾರಣಾ ವರದಿ ಸಲ್ಲಿಸಿದ್ದು ಆರೋಪ ರುಜುವಾತಾಗಿದೆ ಎಂದು ತಿಳಿಸಿರುತ್ತಾರೆ. ಮೇಲ ಓದಲಾದ (4)ರಲ್ಲಿ ವಿಚಾರಣಾ ವರದಿಯ ಪ್ರತಿಯನ್ನು ನೌಕರರಿಗೆ ಜಾರಿಗೊಳಿಸಿದ್ದು ಲಕೋಟೆ ವಾಪಸ್ಸು ಬಂದಿರುತ್ತದೆ. ಮೇಲೆ ಓದಲಾದ (5)ರಲ್ಲಿ ಪತ್ರಿಕಾ ಪ್ರಕಟಣೆ ನೀಡಿದ್ದರೂ ನೌಕರರಿಂದ ಯಾವುದೇ ಪ್ರತಿಕ್ರಿಯೆ ಬಂದಿರುವುದಿಲ್ಲ. ಆದುದರಿಂದ ಇವರ ಬಗ್ಗೆ ಕಠಿಣ ಕ್ರಮ ಕೈಗೊಳ್ಳಬೇಕಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ದಾವಣಗೆರೆ ಇವರು ಮೇಲೆ ಓದಲಾದ (6)ರಲ್ಲಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆ ಪರಿಶೀಲಿಸಿದ್ದು, ನೌಕರರಿಗೆ ಸಾಕಷ್ಟು ಕಾಲಾವಕಾಶ ನೀಡಿದ್ದರೂ ಪ್ರತಿಕ್ರಿಯೆ ಇಲ್ಲದೇ ಇರುವುದರಿಂದ ವಿಚಾರಣಾ ವರದಿ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ದಾವಣಗೆರೆ ಇವರ ಶಿಫಾರಸ್ಸನ್ನು ಪರಿಶೀಲಿಸಿದ ತರುವಾಯ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಆದೇಶ ಸಂಖ್ಯೆ: ಡಿಪಿಎಸ್(23) ಸಿಆರ್:30:2008-09, ಬೆಂಗಳೂರು, ದಿನಾಂಕ:28ನೇ ಫೆಬ್ರವರಿ, 2009**

ಮೇಲೆ ವಿವರಿಸಿರುವ ಕಾರಣಗಳಿಂದ 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಡಾ: ಉಷಾ ವಾಸುನ್‌ಕರ್, ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಆದ ನಾನು ಶ್ರೀ ಯಶವಂತರಾಜು, ದ್ವಿತೀಯ ದರ್ಜೆ ಸಹಾಯಕ, ಪ್ರಾಥಮಿಕ ಆರೋಗ್ಯ ಕೇಂದ್ರ ಕೊಡಗನೂರು, ದಾವಣಗೆರೆ ತಾಲ್ಲೂಕು ಜಿಲ್ಲೆ, ಇವರ ಅನಧಿಕೃತ ಗೈರು ಹಾಜರಿಗೆ ದಂಡನೆಯಾಗಿ ಸದರಿ ನಿಯಮ 8(viii)ರ ಪ್ರಕಾರ ಮುಂದೆ ಸರ್ಕಾರಿ ಸೇವೆಗೆ ಅನರ್ಹರಾಗುವ ರೀತಿ ತಕ್ಷಣದಿಂದ ಜಾರಿಗೆ ಬರುವಂತೆ ವಜಾಗೊಳಿಸಿ ಆದೇಶಿಸಿರುತ್ತೇನೆ.

**ಡಾ: ಉಷಾ ವಾಸುನ್‌ಕರ್**
ನಿರ್ದೇಶಕರು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು.

ಪಿ.ಆರ್.210

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯದ, ನಡವಳಿಗಳು, ಬೆಂಗಳೂರು**

**ವಿಷಯ:** ಶ್ರೀ ಸಿ. ಆನಂದಬಾಬು, ದ್ವಿತೀಯ ದರ್ಜೆ ಸಹಾಯಕ ಇವರ ಅನಧಿಕೃತ ಗೈರುಹಾಜರಿ ಬಗ್ಗೆ ಅಂತಿಮ ಆದೇಶ.

**ಓದಲಾಗಿದೆ:** 1) ನಿರ್ದೇಶನಾಲಯದ ದೋಷಾರೋಪಣೆ ಹಾಗೂ ತಿಳುವಳಿಕೆ ಪತ್ರ ಸಂಖ್ಯೆ:ಡಿಪಿಎನ್(5)ಸಿಆರ್-23: 02-03, ದಿನಾಂಕ:04.12.2006.

2) ನೌಕರರು ಸಲ್ಲಿಸಿರುವ ಸಮಜಾಯಿಷಿ ದಿನಾಂಕ:12.01.2007.

3) ವಿಚಾರಣಾಧಿಕಾರಿಗಳ ನೇಮಕಾತಿ ಆದೇಶ ಸಂಖ್ಯೆ:ಡಿಪಿಎನ್(5)ಸಿಆರ್:23: 02-03 ದಿನಾಂಕ:27.07.2007.

4) ವಿಚಾರಣಾ ವರದಿ ಸಂಖ್ಯೆ: ಮುಜಾಅ:ಜಾಕೋ:03:2007-08, ದಿನಾಂಕ:11.08.2008.

5) ವಿಚಾರಣಾ ವರದಿ ನೌಕರರಿಗೆ ಜಾರಿ ಮಾಡಿರುವ ಸೂಚನಾ ಪತ್ರ ಸಂಖ್ಯೆ: ಡಿಪಿಎನ್(5) ಸಿಆರ್:23:02-03, ದಿನಾಂಕ:01.09.2008.

**ಪ್ರಸ್ತಾವನೆ:**

ಶ್ರೀ ಸಿ. ಆನಂದಬಾಬು, ದ್ವಿತೀಯ ದರ್ಜೆ ಸಹಾಯಕ, ಇವರು ಈ ಹಿಂದೆ ಪ್ರಾಥಮಿಕ ಆರೋಗ್ಯ ಕೇಂದ್ರ, ಕಿತ್ತೂರು, ಪಿರಿಯಾಪಟ್ಟಣ ತಾ: ಮೈಸೂರು ಜಿಲ್ಲೆ, ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ದಿನಾಂಕ:07.07.2005 ರಿಂದ 01.03.2006 ರವರೆಗೆ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾಗಿದ್ದು ಮೇಲೆ ಓದಲಾದ (1)ರಲ್ಲಿ ದೋಷಾರೋಪಣೆ ಹಾಗೂ ತಿಳುವಳಿಕೆ ಜಾರಿಗೊಳಿಸಿದ್ದು ಮೇಲೆ ಓದಲಾದ (2)ರಲ್ಲಿ ನೌಕರರು ಸಮಜಾಯಿಷಿ ಸಲ್ಲಿಸಿರುತ್ತಾರೆ. ಪ್ರಕರಣದ ಸತ್ಯಾಸತ್ಯತೆಯನ್ನು ಕಂಡುಕೊಳ್ಳಲು ಮೇಲೆ ಓದಲಾದ (3)ರಲ್ಲಿ ಮುಖ್ಯ ಜಾಗೃತಾಧಿಕಾರಿಗಳು, ಜಾಗೃತಕೋಶ ಇವರನ್ನು ವಿಚಾರಣಾಧಿಕಾರಿಗಳಾಗಿ ನೇಮಿಸಲಾಗಿತ್ತು. ಮೇಲೆ ಓದಲಾದ (4)ರಲ್ಲಿ ವಿಚಾರಣಾಧಿಕಾರಿಗಳು ಇಲಾಖಾ ವಿಚಾರಣಾ ವರದಿ ಸಲ್ಲಿಸಿ ಆರೋಪ ಸಾಬೀತಾಗಿದೆಯೆಂದು ತಿಳಿಸಿರುತ್ತಾರೆ. ಮೇಲೆ ಓದಲಾದ (5)ರಲ್ಲಿ ವಿಚಾರಣಾ ವರದಿ ನೌಕರರಿಗೆ ಜಾರಿ ಮಾಡಿದ್ದು ನೌಕರರು ದಿನಾಂಕ:22.09.2008 ರಂದು ವಿಚಾರಣಾ ವರದಿ ಸ್ವೀಕರಿಸಿದ್ದು ಅಹವಾಲು ಸಲ್ಲಿಸಿರುವುದಿಲ್ಲ. ನೌಕರರಿಗೆ ಸಾಕಷ್ಟು ಕಾಲಾವಕಾಶ ನೀಡಿದ್ದರೂ ಅಹವಾಲು ಸಲ್ಲಿಸದೇ ಇರುವುದರಿಂದ ವಿಚಾರಣಾ ವರದಿ ಪರಿಶೀಲಿಸಿದ ತರುವಾಯ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಆದೇಶ ಸಂಖ್ಯೆ: ಡಿಪಿಎನ್(5) ಸಿಆರ್:23:2002-03, ಬೆಂಗಳೂರು, ದಿನಾಂಕ:28ನೇ ಫೆಬ್ರವರಿ, 2009**

ಮೇಲೆ ವಿವರಿಸಿರುವ ಕಾರಣಗಳಿಂದ 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಡಾ: ಉಷಾ ವಾಸುನ್‌ಕರ್, ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಆದ ನಾನು ಶ್ರೀ ಸಿ.ಆನಂದಬಾಬು, ದ್ವಿತೀಯ ದರ್ಜೆ ಸಹಾಯಕರು, ಪ್ರಾಥಮಿಕ ಆರೋಗ್ಯ ಕೇಂದ್ರ, ರಾವಂದೂರು, ಪಿರಿಯಾಪಟ್ಟಣ ತಾಲ್ಲೂಕು, ಮೈಸೂರು ಜಿಲ್ಲೆ, ಇವರ ಅನಧಿಕೃತ ಗೈರು ಹಾಜರಿಗೆ ದಂಡನೆಯಾಗಿ ಸದರಿ ನಿಯಮ 8(8)ರ ಪ್ರಕಾರ ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ವಜಾಗೊಳಿಸಿ ಆದೇಶಿಸಿರುತ್ತೇನೆ.

**ಡಾ: ಉಷಾ ವಾಸುನ್‌ಕರ್**

ಪಿ.ಆರ್.211 ನಿರ್ದೇಶಕರು,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು.

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯದ, ನಡವಳಿಗಳು, ಬೆಂಗಳೂರು**

**ವಿಷಯ:** ಶ್ರೀ ಕೆ. ಪ್ರಶಾಂತಕುಮಾರ್, ಫಾರ್ಮಾಸಿಸ್ಟ್, ಪ್ರಾ.ಆ.ಕೇಂದ್ರ, ಕನಸವಾಡಿ, ದೊಡ್ಡಬಳ್ಳಾಪುರ ತಾ: ಬೆಂಗಳೂರು ಗ್ರಾಮಾಂತರ ಜಿಲ್ಲೆ, ಇವರನ್ನು ಸರ್ಕಾರಿ ಸೇವೆಯಿಂದ ಬಿಡುಗಡೆಗೊಳಿಸುವ ಬಗ್ಗೆ.

**ಓದಲಾಗಿದೆ:** 1) ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿಗಳು ಮೈಸೂರು ಜಿಲ್ಲೆ, ಇವರ ಪತ್ರ ಸಿಡಿ(2)572:06-07, ದಿನಾಂಕ:28.09.2006.

2)ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಇವರ ಪತ್ರ ಸಂಖ್ಯೆ: ಸಿ(3) 119:04-05, ದಿನಾಂಕ:04.12.2008.

**ಪ್ರಸ್ತಾವನೆ:**

ಶ್ರೀ ಕೆ. ಪ್ರಶಾಂತಕುಮಾರ್, ಫಾರ್ಮಾಸಿಸ್ಟ್, ಪ್ರಾ.ಆ.ಕೇಂದ್ರ, ಕನಸವಾಡಿ, ಇವರು ಈ ನಿರ್ದೇಶನಾಲಯದ ಆದೇಶ ಸಂಖ್ಯೆ: ಡಿಆರ್‌ಸಿ(2):3:02-03, ದಿನಾಂಕ:19.05.2003ರಲ್ಲಿ ಇಲಾಖಾ ಆಯ್ಕೆ ಸಮಿತಿಯಿಂದ ಹಿಂಬಾಕಿ ಹುದ್ದೆಯಲ್ಲಿ ಫಾರ್ಮಾಸಿಸ್ಟ್ ಆಗಿ ನೇಮಕಗೊಂಡು ದಿನಾಂಕ:04.06.2003 ರಂದು ಪೂರ್ವಾಹ್ನ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. ಸದರಿ ನೌಕರರು ದಿನಾಂಕ:04.06.2003 ರಿಂದ 24.11.2003 ರವರೆಗೆ ಕರ್ತವ್ಯ ನಿರ್ವಹಿಸಿ, ದಿನಾಂಕ:25.11.2003 ರಿಂದ

ಕರ್ತವ್ಯಕ್ಕೆ ಅನಧಿಕೃತವಾಗಿ ಗೈರುಹಾಜರಾಗಿರುತ್ತಾರೆ. ಸದರಿ ನೌಕರರಿಗೆ ನಿರ್ದೇಶನಾಲಯದ ಪತ್ರ ಸಂಖ್ಯೆ: ಡಿಪಿಎನ್ (1) ಸಿಆರ್40:04–05, ದಿನಾಂಕ:15.03.2005ರಲ್ಲಿ ಅನಧಿಕೃತ ಗೈರುಹಾಜರಿ ಬಗ್ಗೆ ಇಲಾಖಾ ವಿಚಾರಣೆ ಬಾಕಿ ಇರಿಸಿ, ಪುನಃ ಕರ್ತವ್ಯಕ್ಕೆ ಹಾಜರಾಗಲು ಅನುಮತಿಸಿ, ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿಗಳು, ಮೈಸೂರು ಇವರ ಅಧೀನಕ್ಕೆ ನೇಮಿಸಲಾಗಿದ್ದು, ನೌಕರರು ನೇಮಿಸಿದ ಜಾಗದಲ್ಲಿ ಕರ್ತವ್ಯಕ್ಕೆ ಹಾಜರಾಗಿಲ್ಲವೆಂದು ಉಲ್ಲೇಖ 1 ರ ಪತ್ರದಲ್ಲಿ ತಿಳಿಯಲಾಗಿದೆ. ಇದರಿಂದ ನೌಕರರಿಗೆ ಸರ್ಕಾರಿ ಸೇವೆಯಲ್ಲಿ ಮುಂದುವರೆಯಲು ಆಸಕ್ತಿ ಇಲ್ಲವೆಂದು ಕಂಡುಬರುವ ಕಾರಣ ಹಾಗೂ ಸದರಿ ನೌಕರರು ಖಾಯಂಪೂರ್ವ ಸೇವಾವಧಿಯಲ್ಲಿಯೇ ಅನಧಿಕೃತ ಗೈರುಹಾಜರಿ ಆಗಿದ್ದು, ಸರ್ಕಾರಿ ಸೇವೆಯಿಂದ ಬಿಡುಗಡೆಗೊಳಿಸಲು ತೀರ್ಮಾನಿಸಿದ್ದು ಈ ಆದೇಶ.

**ಆದೇಶ ಸಂಖ್ಯೆ: ಡಿಪಿಎನ್(1) ಸಿಆರ್:40:04–05, ಬೆಂಗಳೂರು, ದಿನಾಂಕ:11ನೇ ಮಾರ್ಚ್, 2009**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ಶ್ರೀ ಕೆ. ಪ್ರಶಾಂತ್‌ಕುಮಾರ್, ಫಾರ್ಮಾಸಿಸ್ಟ್, ಪ್ರಾ.ಆ.ಕೇಂದ್ರ, ಕನಸವಾಡಿ, ದೊಡ್ಡಬಳ್ಳಾಪುರ ತಾ: ಬೆಂಗಳೂರು ಗ್ರಾಮಾಂತರ ಜಿಲ್ಲೆ, ಇವರನ್ನು 1977ರ ಕರ್ನಾಟಕ ನಾಗರೀಕ ಸೇವಾ (ಪರೀಕ್ಷಾರ್ಥ) ನಿಯಮಗಳ ನಿಯಮ 5(1)(ಬಿ) ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ನೇಮಕ ಮಾಡಿದ ಹುದ್ದೆಗೆ ಯೋಗ್ಯರಲ್ಲ ಎಂದು ನಿರ್ಣಯಿಸಿ, ಸರ್ಕಾರ ಸೇವೆಯಿಂದ ತಕ್ಷಣದಿಂದ ಜಾರಿಗೆ ಬರುವಂತೆ ಬಿಡುಗಡೆಗೊಳಿಸಿ ಆದೇಶಿಸಿರುತ್ತೇನೆ.

**ಡಾ: ಉಷಾ ವಾಸುನ್‌ಕರ್**
ನಿರ್ದೇಶಕರು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು.

ಪಿ.ಆರ್.291

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ ಬೆಂಗಳೂರು, ಇವರ ನಡವಳಿಗಳು**

**ವಿಷಯ:** ಶ್ರೀಮತಿ ಎ.ಎಂ. ಕೈಸರಜಾನ್, ಕಿರಿಯ ಪ್ರಯೋಗ ಶಾಲಾ ತಂತ್ರಜ್ಞರು ಸಾರ್ವಜನಿಕ ಆರೋಗ್ಯ ಸಂಸ್ಥೆ ಬೆಂಗಳೂರು ಇವರ ಅನಧಿಕೃತ ಗೈರುಹಾಜರಿ ಆರೋಪ ಇಲಾಖಾ ವಿಚಾರಣೆ ಅಂತಿಮ ಆದೇಶ.

**ಓದಲಾಗಿದೆ:** 1) ನಿರ್ದೇಶನಾಲಯದ ದೋಷಾರೋಪಣೆ ಹಾಗೂ ತಿಳುವಳಿಕೆಯ ಪತ್ರದ ಸಂಖ್ಯೆ:ಡಿಪಿಎನ್(1)ಸಿಆರ್:67: 01–02, ದಿನಾಂಕ:22.11.2001.
2) ನೌಕರರು ಲಿಖಿತ ಅಹವಾಲು ಪತ್ರ ದಿನಾಂಕ ಇಲ್ಲ.
3) ವಿಚಾರಣಾಧಿಕಾರಿಗಳ ನೇಮಕಾತಿ ಆದೇಶ ಸಂಖ್ಯೆ:ಡಿಪಿಎನ್(1)ಸಿಆರ್:67:01–02 ದಿನಾಂಕ: 31.05.2002.
4) ವಿಚಾರಣಾ ವರದಿ ಸಂಖ್ಯೆ: ವಿಅ:ವಿಚಾರಣೆ:ಎನ್‌ಜಿ:ಮುಚಿಕ:ಜಾಕೋ: ಎನ್.ಜಿ:60: 02–03 ದಿನಾಂಕ: 04.02.2004.
5) ವಿಚಾರಣಾ ವರದಿ ನೌಕರರಿಗೆ ಜಾರಿ ಮಾಡಿದ ಸೂಚನಾ ಪತ್ರದ ಸಂಖ್ಯೆ: ಡಿಪಿಎನ್(1) ಸಿಆರ್:67:01–02, ದಿನಾಂಕ:21.05.2004.
6) ಪತ್ರಿಕಾ ಪ್ರಕಟಣೆ ದಿನಾಂಕ:03.12.2008.

**ಪ್ರಸ್ತಾವನೆ:**

ಶ್ರೀಮತಿ ಎ.ಎಂ. ಕೈಸರಜಾನ್, ಕಿರಿಯ ಪ್ರಯೋಗ ಶಾಲಾ ತಂತ್ರಜ್ಞರು ಸಾರ್ವಜನಿಕ ಆರೋಗ್ಯ ಸಂಸ್ಥೆ ಬೆಂಗಳೂರು ಇವರು ಈ ಹಿಂದೆ ಸಾರ್ವಜನಿಕ ಆರೋಗ್ಯ ಸಂಸ್ಥೆ ಬೆಂಗಳೂರು ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು ದಿನಾಂಕ:11.02.1997 ರಿಂದ ಇಲ್ಲಿಯವರೆಗೂ ಅನಧಿಕೃತ ಗೈರುಹಾಜರಿಯಾದ ಬಗ್ಗೆ ಮೇಲೆ ಓದಲಾದ (1)ರಲ್ಲಿನ ಪತ್ರದಲ್ಲಿ ತಿಳುವಳಿಕೆ ಹಾಗೂ ದೋಷಾರೋಪಣಾ ಪಟ್ಟಿಯನ್ನು ಜಾರಿಗೊಳಿಸಿದ್ದು, ಇದಕ್ಕೆ ಅನುಗುಣವಾಗಿ ನೌಕರರು ಮೇಲೆ ಓದಲಾದ (2)ರಲ್ಲಿನ ಪತ್ರದಲ್ಲಿ ತನ್ನ ಲಿಖಿತ ಅಹವಾಲನ್ನು ಸಲ್ಲಿಸಿದಂತೆ ಪರಿಶೀಲಿಸಿ, ಅದು ಸಮರ್ಪಕವಾಗಿರದ ಕಾರಣ ಸತ್ಯಾಸತ್ಯತೆಯನ್ನು ಕಂಡುಕೊಳ್ಳುವುದು ಸೂಕ್ತವೆಂದು ನಿರ್ಣಯಿಸಿ ಮೇಲೆ ಓದಲಾದ (3)ರಲ್ಲಿನ ಆದೇಶದಲ್ಲಿ ಮುಖ್ಯ ಜಾಗೃತ ಅಧಿಕಾರಿ (ಜಾಗೃತ ಕೋಶ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿದ್ದಂತೆ ರೀತ್ಯಾ ಮೇಲೆ ಓದಲಾದ (4)ರಲ್ಲಿನ ಆದೇಶದಂತೆ ವಿಚಾರಣೆ ನಡೆಸಿ ವರದಿಯನ್ನು ಸಲ್ಲಿಸಿದ್ದಂತೆ ಮೇಲೆ ಓದಲಾದ (5)ರಲ್ಲಿನ ಸೂಚನಾಪತ್ರದಲ್ಲಿ ವಿಚಾರಣೆ ವರದಿಯ ಪ್ರತಿಯನ್ನು ಜಾರಿಗೊಳಿಸಿದ್ದಕ್ಕೆ ಅನುಗುಣವಾಗಿ ನೌಕರರು ತನ್ನ ಲಿಖಿತ ಅಹವಾಲನ್ನು ಸಲ್ಲಿಸದೇ ಇರುವುದರಿಂದ ದಿನಾಂಕ:03.12.2008ರಲ್ಲಿ ಪತ್ರಿಕಾ ಪ್ರಕಟಣೆ ನೀಡಲಾಯಿತು.

ನೌಕರರು ಸಲ್ಲಿಸಿರುವ ಲಿಖಿತ ಅಹವಾಲು ಹಾಗೂ ವಿಚಾರಣಾಧಿಕಾರಿಗಳು ನೀಡಿರುವ ವಿಚಾರಣಾ ವರದಿಯಲ್ಲಿ ನಿರ್ಣಯದ ವರದಿಯನ್ನು ಪರಿಶೀಲಿಸಿದ ತರುವಾಯ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಆದೇಶ ಸಂಖ್ಯೆ: ಡಿಪಿಎಸ್(1) ಪಿಆರ್:67:01–02, ಬೆಂಗಳೂರು, ದಿನಾಂಕ:11ನೇ ಮಾರ್ಚ್, 2009**

1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಡಾ: ಉಷಾ ವಾಸುನ್‌ಕರ್, ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಆದ ನಾನು ಶ್ರೀಮತಿ ಎ.ಎಂ. ಕೈಸರ್‌ಜಾನ್, ಕಿರಿಯ ಪ್ರಯೋಗ ಶಾಲಾ ತಂತ್ರಜ್ಞರು, ಸಾರ್ವಜನಿಕ ಆರೋಗ್ಯ ಸಂಸ್ಥೆ, ಬೆಂಗಳೂರು ಇವರನ್ನು ದಂಡನೆಯಾಗಿ ಸದರಿ ನಿಯಮ 8(viii)ರ ಪ್ರಕಾರ ಕೂಡಲೇ ಜಾರಿಗೆ ಬರುವಂತೆ ಸೇವೆಯಿಂದ ವಜಾಗೊಳಿಸುವ ದಂಡನೆಯನ್ನು ವಿಧಿಸಿದ್ದೇನೆ.

**ಡಾ: ಉಷಾ ವಾಸುನ್‌ಕರ್**
ನಿರ್ದೇಶಕರು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು.

ಪಿ.ಆರ್.292

## ಜಿಲ್ಲಾ ಪಂಚಾಯತ್, ತುಮಕೂರು

## ಸಾರ್ವಜನಿಕ ಶಿಕ್ಷಣ ಇಲಾಖೆ, ಉಪನಿರ್ದೇಶಕರ ಕಛೇರಿ, ತುಮಕೂರು (ದ) ಜಿಲ್ಲೆ

## ಜ್ಞಾಪನಾ

**ಸಂಖ್ಯೆ: ಇ5/ಅ.ಗೈ.ಹಾ–34/03–04/6862, ದಿನಾಂಕ:9ನೇ ಜನವರಿ, 2009**

**ವಿಷಯ:** ಶ್ರೀ ಮಾಯರಂಗಯ್ಯ ಸಹಶಿಕ್ಷಕರು ಸರ್ಕಾರಿ ಉರ್ದು ಹಿ.ಪ್ರಾ.ಶಾಲೆ ಕಗ್ಗೆರೆ ಕುಣಿಗಲ್ ತಾಲ್ಲೂಕು, (ಪ್ರಸ್ತುತ ಸರ್ಕಾರಿ ಹಿ.ಪ್ರಾ.ಶಾಲೆ ಮರೆನಡುಪಾಳ್ಯ ಚಿ.ನಾ.ಹಳ್ಳಿ ತಾಲ್ಲೂಕು ಇಲ್ಲಿಗೆ ಸ್ಥಳನಿಯುಕ್ತಿಗೊಳಿಸಿದ್ದು ಕರ್ತವ್ಯಕ್ಕೆ ಹಾಜರಾಗಿಲ್ಲ) ಇವರ ಅನಧಿಕೃತ ಗೈರುಹಾಜರಿಯ ಬಗ್ಗೆ.

**ಉಲ್ಲೇಖ:**
1) ಕ್ಷೇತ್ರ ಶಿಕ್ಷಣಾಧಿಕಾರಿಗಳು ಕುಣಿಗಲ್ ಇವರ ಪತ್ರದ ಸಂಖ್ಯೆ:ಸಿ1(ಸಿ5) ಶಾ.ಕ.ಹಾ–32/2000–01, ದಿನಾಂಕ:01.08.2003 ಮತ್ತು ದಿನಾಂಕ:02.12.2003.
2) ಕ್ಷೇತ್ರ ಶಿಕ್ಷಣಾಧಿಕಾರಿಗಳು ಕುಣಿಗಲ್ ತಾಲ್ಲೂಕು ಇವರ ಪತ್ರದ ದಿನಾಂಕ:24.03.2004ರಲ್ಲಿ ಆರೋಪಪಟ್ಟಿ ಜಾರಿ ಮಾಡಿರುವುದು.
3) ಕ್ಷೇತ್ರ ಶಿಕ್ಷಣಾಧಿಕಾರಿಗಳು ಕುಣಿಗಲ್ ಇವರ ಪತ್ರದ ದಿನಾಂಕ:27.05.2004.
4) ವಿಚಾರಣಾಧಿಕಾರಿಗಳ ವರದಿ ದಿನಾಂಕ;07.07.2005.
5) ಕ್ಷೇತ್ರ ಶಿಕ್ಷಣಾಧಿಕಾರಿಗಳು ಕುಣಿಗಲ್ ಇವರ ಪತ್ರದ ಸಂಖ್ಯೆ: ಸಿ2(ಸಿ1) ಅ.ಗೈ.ಹಾ1/04–05, ದಿನಾಂಕ:03.10.2007ರಲ್ಲಿ ಆರೋಪಪಟ್ಟಿ ಜಾರಿ ಮಾಡಿರುವುದು.
6) ಕ್ಷೇತ್ರ ಶಿಕ್ಷಣಾಧಿಕಾರಿಗಳು ಕುಣಿಗಲ್ ಇವರ ಪತ್ರದ ಸಂಖ್ಯೆ: ಸಿ2(ಸಿ1) ಅ.ಗೈ.ಹಾ1/04–05, ದಿನಾಂಕ:24.11.2007.
7) ಈ ಕಛೇರಿಯ ಸಮಸಂಖ್ಯೆಯ ಪತ್ರದ ದಿನಾಂಕ:01.07.2008.
8) ಈ ಕಛೇರಿಯಿಂದ ನೀಡಿರುವ 2ನೇ ಕಾರಣ ಕೇಳುವ ನೋಟೀಸ್ ದಿನಾಂಕ:04.10.2008.
9) ಬಿ.ಇ.ಓ. ಚಿ.ನಾ.ಹಳ್ಳಿ ಇವರ ಪತ್ರದ ದಿನಾಂಕ:17.09.2008.

**ಪ್ರಸ್ತಾವನೆ:**

ಶ್ರೀ ಮಾಯರಂಗಯ್ಯ ಸಹಶಿಕ್ಷಕರು ಸರ್ಕಾರಿ ಹಿ.ಪ್ರಾ.ಶಾಲೆ ಮರೆನಡುಪಾಳ್ಯ ಚಿ.ನಾ.ಹಳ್ಳಿ ತಾಲ್ಲೂಕು (ಪ್ರಸ್ತುತ ಸ್ಥಳ ನಿಯುಕ್ತಿಗೊಳಿಸಿದ್ದು ಕರ್ತವ್ಯಕ್ಕೆ ಹಾಜರಾಗಿಲ್ಲ) ಇವರು ಈ ಹಿಂದೆ ಶಾಲಾ ಕೆಲಸಕ್ಕೆ ಆಗ್ಗಿಂದ್ದಾಗ್ಗೆ ಗೈರುಹಾಜರಿ ಆಗಿರುತ್ತಾರೆ.

ಕ್ಷೇತ್ರ ಶಿಕ್ಷಣಾಧಿಕಾರಿಗಳು ಕುಣಿಗಲ್ ಇವರು ಉಲ್ಲೇಖ (1)ರ ಪತ್ರದ ದಿನಾಂಕ:01.08.2003ರಲ್ಲಿ ಶಿಕ್ಷಕರ ಗೈರುಹಾಜರಿಯಾಗಿ ಮಕ್ಕಳ ಶೈಕ್ಷಣಿಕ ಪ್ರಗತಿಗೆ ತೊಂದರೆ ಉಂಟುಮಾಡಿರುವುದನ್ನು ಪರಿಗಣಿಸಿ ಅಮಾನತ್ತಿನಲ್ಲಿಟ್ಟು ನಂತರ ಗೈರು ಹಾಜರಿಯ ಬಗ್ಗೆ ಇಲಾಖೆ ವಿಚಾರಣೆ ಕಾಯ್ದಿರಿಸಿ ಸರ್ಕಾರಿ ಹಿ.ಪ್ರಾ.ಶಾಲೆ ತರಿಕೆರೆ ಕುಣಿಗಲ್ ತಾಲ್ಲೂಕು ಇಲ್ಲಿಗೆ ಸೇವೆಯಲ್ಲಿ ಪುನರ್ ಸ್ಥಾಪಿಸಿರುತ್ತಾರೆ.

ಈ ಶಿಕ್ಷಕರ ಗೈರುಹಾಜರಿಯ ಬಗ್ಗೆ ಕೆ.ಸಿ.ಎಸ್. (ಸಿಸಿಎ) ನಿಯಮಾವಳಿ 1957ರ ನಿಯಮ 11ರಂತೆ ಶಿಸ್ತು ಕ್ರಮಜರುಗಿಸಲು ಉದ್ದೇಶಿಸಿ ದೋಷಾರೋಪ ಪಟ್ಟಿಯನ್ನು ಜಾರಿಗೊಳಿಸಿದ್ದು ಆರೋಪಿ ನೌಕರರು ರಕ್ಷಣಾ ಹೇಳಿಕೆಯನ್ನು ಸಲ್ಲಿಸದೆ ಇರುವುದರಿಂದ ಸತ್ಯಾಸತ್ಯತೆಯನ್ನು ತಿಳಿಯಲು ಶ್ರೀಮತಿ ಕುಮಾರಿ ಶೈಲಜ ಮುಖ್ಯ ಶಿಕ್ಷಕರು ಸರ್ಕಾರಿ ಪ್ರೌಢಶಾಲೆ ಸಿಂಗೋನಹಳ್ಳಿ, ಕುಣಿಗಲ್ ತಾಲ್ಲೂಕು ಇವರನ್ನು ವಿಚಾರಣಾಧಿಕಾರಿಯನ್ನಾಗಿ ಶ್ರೀ ಹನುಮಂತರಾಯಪ್ಪ ಶಿಕ್ಷಣ ಸಂಯೋಜಕರು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಕುಣಿಗಲ್ ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಕ ಮಾಡಿ ಈ ಪ್ರಕರಣದ ವಿಚಾರಣೆ ನಡೆಸಿ ವರದಿಯನ್ನು ನೀಡುವಂತೆ ಉಲ್ಲೇಖ (3)ರಲ್ಲಿ ತಿಳಿಸಲಾಗಿದೆ.

**ಆರೋಪ:1:** ಶ್ರೀ ಮಾಯರಂಗಯ್ಯ ಕನ್ನಡ ಸಹಶಿಕ್ಷಕರು ಆದ ಇವರು ಸರ್ಕಾರಿ ಉರ್ದು ಹಿ.ಪ್ರಾ.ಶಾಲೆ ಕಗ್ಗೆರೆ ಕುಣಿಗಲ್ ತಾಲ್ಲೂಕು, ಇಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ದಿನಾಂಕ:01.06.1998 ರಿಂದ ದಿನಾಂಕ:13.09.2002

ರವರೆಗೆ ಒಟ್ಟು 938 ದಿನಗಳು ಶಾಲಾ ಕೆಲಸಕ್ಕೆ ಅನಧಿಕೃತ ಗೈರುಹಾಜರಾಗಿ ಶಾಲಾ ಶೈಕ್ಷಣಿಕ ಪ್ರಗತಿಗೆ ದಕ್ಕೆ ಉಂಟು ಮಾಡಿರುವುದು.

ವಿಚಾರಣಾಧಿಕಾರಿಗಳು ಈ ಪ್ರಕರಣದ ಸಮಗ್ರ ವಿಚಾರಣೆ ನಡೆಸಿ ಉಲ್ಲೇಖ (4) ರಲ್ಲಿ ವರದಿ ನೀಡುತ್ತಾ ಆಪಾದಿತ ಶಿಕ್ಷಕರು ದಿನಾಂಕ:01.06.1998 ರಿಂದ ದಿನಾಂಕ:13.09.2002 ರವರೆಗಿನ ಅವಧಿಯಲ್ಲಿ ಒಟ್ಟು 938 ದಿನಗಳು ಗೈರುಹಾಜರಾಗಿರುವ ಆಪಾದನೆಗಳನ್ನು ವಿಚಾರಣಾಧಿಕಾರಿಗಳ ಮುಂದೆ ಆಪಾದಿತ ಶಿಕ್ಷಕರು ಹಾಜರಾಗಿ ತಮ್ಮ ಮೇಲೆ ಮಾಡಿರುವ ಆರೋಪವನ್ನು ಒಪ್ಪಿಕೊಂಡು ಸ್ವಯಂ ಲಿಖಿತ ಹೇಳಿಕೆಯನ್ನು ನೀಡಿರುವುದರಿಂದ ಆಪಾದಿತ ಶಿಕ್ಷಕರ ಮೇಲೆ ಮಾಡಿರುವ ಆರೋಪಗಳು ಸಾಬೀತಾಗಿದ್ದು ದೃಢಪಟ್ಟಿರುತ್ತದೆ ಎಂದು ವರದಿ ನೀಡಿರುವುದನ್ನು ಒಪ್ಪಲಾಗಿದೆ.

ಸದರಿ ವಿಚಾರಣಾ ವರದಿಯನ್ನು ಆಧರಿಸಿ ವಿಚಾರಣೆ ವರದಿಯ ಬಗ್ಗೆ ಆಪಾದಿತ ನೌಕರರಿಗೆ ಉಲ್ಲೇಖ (8) ರಲ್ಲಿ 2ನೇ ಕಾರಣ ಕೇಳುವ ನೋಟೀಸ್ ಜಾರಿ ಮಾಡಿ ಲಿಖಿತ ವಿವರಣೆ ನೀಡಲು ತಿಳಿಸಲಾಗಿತ್ತು. ಆರೋಪಿ ಶಿಕ್ಷಕರು ವಿವರಣೆ ನೀಡಿರುವುದಿಲ್ಲ.

ಮುಂದುವರಿದು ಈ ಶಿಕ್ಷಕರು ಸರ್ಕಾರಿ ಹಿ.ಪ್ರಾ.ಶಾಲೆ ತರಿಕೆರೆ ಕುಣಿಗಲ್ ತಾಲ್ಲೂಕು, ಈ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯನ್ನು ದಿನಾಂಕ:07.06.2007 ರಿಂದ ಸೇವೆಗೆ ಅನಧಿಕೃತ ಗೈರುಹಾಜರಿ ಆಗಿ ಶೈಕ್ಷಣಿಕ ಪ್ರಗತಿಗೆ ದಕ್ಕೆ ಉಂಟುಮಾಡಿರುವುದರಿಂದ ಉಲ್ಲೇಖ (6)ರಲ್ಲಿ ಸೇವೆಯಿಂದ ಅಮಾನತ್ತಿನಲ್ಲಿರಿಸಿ ನಂತರ ಉಲ್ಲೇಖ (7)ರಲ್ಲಿ ಅಮಾನತ್ತು ತೆರವು ಮಾಡಿ ಸೇವೆಯಲ್ಲಿ ಪುನರ್ ಸ್ಥಾಪಿಸಿ ಸರ್ಕಾರಿ ಹಿ.ಪ್ರಾ.ಶಾಲೆ ಮಲೆನಡುಪಾಳ್ಯ ಚಿ.ನಾ.ಹಳ್ಳಿ ತಾಲ್ಲೂಕು ಇಲ್ಲಿಗೆ ಸ್ಥಳನಿಯುಕ್ತಿಗೊಳಿಸಿದ್ದು ಈ ಶಾಲೆಯಲ್ಲಿಯೂ ಸಹ ಕರ್ತವ್ಯಕ್ಕೆ ಹಾಜರಾಗದೇ ಸ್ಥಳ ಮಾರ್ಪಾಡಿಗಾಗಿ ಪ್ರಯತ್ನಿಸುತ್ತಾ ಕಾಲಹರಣ ಮಾಡಿ ಕರ್ತವ್ಯಲೋಪ ಎಸಗಿರುತ್ತಾರೆ.

ಈ ಶಿಕ್ಷಕರು ಸರ್ಕಾರಿ ಹಿ.ಪ್ರಾ.ಶಾಲೆ ತರಿಕೆರೆ ಕುಣಿಗಲ್ ತಾಲ್ಲೂಕು ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಶಾಲಾ ಕೆಲಸಕ್ಕೆ ಅನಧಿಕೃತ ಗೈರುಹಾಜರಿ ಆಗಿ ಶೈಕ್ಷಣಿಕ ಪ್ರಗತಿಗೆ ದಕ್ಕೆ ಉಂಟುಮಾಡಿರುವ ವಿಚಾರದಲ್ಲಿ ಉಲ್ಲೇಖ (5)ರಲ್ಲಿ ಆರೋಪ ಪಟ್ಟಿಯನ್ನು ಜಾರಿ ಮಾಡಿದ್ದು, ಆಪಾದಿತ ಶಿಕ್ಷಕರು ಲಿಖಿತ ರಕ್ಷಣಾ ಹೇಳಿಕೆ ಸಲ್ಲಿಸದೆ ಇರುವುದರಿಂದ ಆರೋಪಗಳನ್ನು ಒಪ್ಪಿರುತ್ತಾರೆ ಎಂದು ಭಾವಿಸಿದ್ದು ಈ ಶಿಕ್ಷಕರು ಇವರ ಸೇವಾ ಅವಧಿಯಲ್ಲಿ ಪದೇ ಪದೇ ದೀರ್ಘಕಾಲದ ಗೈರುಹಾಜರಿ ಆಗಿದ್ದು ಕರ್ತವ್ಯಕ್ಕೆ ಹಾಜರಾಗಲು ತಿಳಿಸಿದರೂ ಹಾಜರಾಗದೆ ಮಕ್ಕಳ ಶೈಕ್ಷಣಿಕ ಪ್ರಗತಿಗೆ ದಕ್ಕೆ ಉಂಟು ಮಾಡಿರುವುದು ವಿಚಾರಣೆಯಲ್ಲಿ ಗೈರು ಹಾಜರಿ ಆಪಾದನೆ ಸಾಬೀತಾಗಿರುವುದರಿಂದ ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ**

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಿಂದಾಗಿ ಶ್ರೀ ಮಾಯರಂಗಯ್ಯ ಸಹಶಿಕ್ಷಕರು ಸರ್ಕಾರಿ ಹಿ.ಪ್ರಾ. ಶಾಲೆ ಮರೆನಡುಪಾಳ್ಯ ಚಿ.ನಾ.ಹಳ್ಳಿ ತಾಲ್ಲೂಕು (ಪ್ರಸ್ತುತ ಸ್ಥಳ ನಿಯುಕ್ತಿಗೊಳಿಸಿದ್ದು ಕರ್ತವ್ಯಕ್ಕೆ ಹಾಜರಾಗಿಲ್ಲ) ಇವರು ಈ ಹಿಂದೆ ಸರ್ಕಾರಿ ಉರ್ದು ಕಿ.ಪ್ರಾ.ಶಾಲೆ ಕಗ್ಗೆರೆ ಕುಣಿಗಲ್ ತಾ: ಮತ್ತು ಸರ್ಕಾರಿ ಹಿ.ಪ್ರಾ.ಶಾಲೆ ತರಿಕೆರೆ ಕುಣಿಗಲ್ ತಾ: ಇಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ಶಾಲಾ ಕೆಲಸಕ್ಕೆ ಅನಧಿಕೃತ ಗೈರುಹಾಜರಾಗಿರುವ ಆಪಾದನೆಗಳು ದೃಢಪಟ್ಟಿರುವುದರಿಂದ ಶ್ರೀ ಬಿ.ಎ. ರಾಜಶೇಖರ ಉಪನಿರ್ದೇಶಕರು ಹಾಗೂ ಶಿಸ್ತು ಪ್ರಾಧಿಕಾರಿಗಳು ಸಾ.ಶಿ. ಇಲಾಖೆ, ತುಮಕೂರು (ದ) ಆದ ನಾನು ಕರ್ನಾಟಕ ಸರ್ಕಾರಿ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮ 1957ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ತಕ್ಷಣದಿಂದ ಜಾರಿಗೆ ಬರುವಂತೆ ಕೆ.ಸಿ.ಎಸ್. (ಸಿ.ಸಿ.ಎ.) ನಿಯಮ 8(viii)ರ ಪ್ರಕಾರ ಶ್ರೀ ಮಾಯರಂಗಯ್ಯ ಇವರನ್ನು ಸೇವೆಯಿಂದ ವಜಾಮಾಡಿ ಆದೇಶಿಸಿರುತ್ತೇನೆ.

ಕ್ಷೇತ್ರ ಶಿಕ್ಷಣಾಧಿಕಾರಿಗಳು ಕುಣಿಗಲ್ ಇವರು ಈ ಆದೇಶವನ್ನು ನೌಕರರ ಸೇವಾವಹಿಯಲ್ಲಿ ನಮೂದಿಸಿ ಮೇಲಿನ ಆದೇಶದಂತೆ ನಿಯಮಾನುಸಾರ ಅಗತ್ಯ ಕ್ರಮಕೈಗೊಳ್ಳಲು ತಿಳಿಸಿದೆ.

ಬಿ.ಎ. ರಾಜಶೇಖರ
ಪಿ.ಆರ್.112 ಉಪನಿರ್ದೇಶಕರು ಹಾಗೂ ಶಿಸ್ತುಪ್ರಾಧಿಕಾರಿಗಳು,
ಸಾರ್ವಜನಿಕ ಶಿಕ್ಷಣ ಇಲಾಖೆ, ತುಮಕೂರು (ದ).

**ಜಿಲ್ಲಾ ಪಂಚಾಯತ್, ತುಮಕೂರು**

**ಸಾರ್ವಜನಿಕ ಶಿಕ್ಷಣ ಇಲಾಖೆ, ಉಪನಿರ್ದೇಶಕರ ಕಛೇರಿ, ತುಮಕೂರು (ದ) ಜಿಲ್ಲೆ**

**ಜ್ಞಾಪನಾ**

**ಸಂಖ್ಯೆ: ಇ5/ದೂರು-56/06-07/6841, ದಿನಾಂಕ:17ನೇ ಜನವರಿ, 2009**

ವಿಷಯ: ಶ್ರೀ ಡಿ. ಗಂಗಾಧರಯ್ಯ ಸಹಶಿಕ್ಷಕರು ಸರ್ಕಾರಿ ಹಿ.ಪ್ರಾ.ಶಾಲೆ ಹರಿದಾಸನಹಳ್ಳಿ ತುರುವೇಕೆರೆ ತಾಲ್ಲೂಕು. ಇವರು ಈ ಹಿಂದೆ ಸರ್ಕಾರಿ ಹಿ.ಪ್ರಾ.ಶಾಲೆ. ತಗ್ಗೀಹಳ್ಳಿ ಗುಬ್ಬಿ ತಾಲ್ಲೂಕು ಇಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ಎಸಗಿರುವ ಆರೋಪಗಳ ಬಗ್ಗೆ ಶಿಸ್ತುಕ್ರಮ ಜರುಗಿಸುವ ಬಗ್ಗೆ.

ಉಲ್ಲೇಖ: 1) ಕ್ಷೇತ್ರ ಶಿಕ್ಷಣಾಧಿಕಾರಿಗಳು ಗುಬ್ಬಿ ತಾಲ್ಲೂಕು ಇವರ ಜ್ಞಾಪನ ಸಂ:ಆ5/ಪ್ರಾ.ಶಾ.ಶಿ.ದೂರು 02/06-07 ದಿನಾಂಕ:12.01.2007.

2) ಈ ಕಛೇರಿಯ ಸಮಸಂಖ್ಯೆಯ ಪತ್ರದ ದಿನಾಂಕ:12.06.2007.

3) ಈ ಕಛೇರಿಯ ಸಮಸಂಖ್ಯೆಯ ಪತ್ರದ ದಿನಾಂಕ:14.06.2007ರಲ್ಲಿ ಆರೋಪಪಟ್ಟಿ ಜಾರಿಮಾಡಿದೆ.

4) ಈ ಕಛೇರಿಯ ಸಮಸಂಖ್ಯೆಯ ಪತ್ರದ ದಿನಾಂಕ:20.09.2007.

5) ವಿಚಾರಣಾಧಿಕಾರಿಗಳ ವರದಿ ದಿನಾಂಕ:29.11.2008.

6) ಈ ಕಛೇರಿಯ 2ನೇ ಕಾರಣಕೇಳುವ ನೋಟಿಸ್ ದಿನಾಂಕ:29.11.2008.

**ಪ್ರಸ್ತಾವನೆ:**

ಶ್ರೀ ಡಿ. ಗಂಗಾಧರಯ್ಯ ಸಹಶಿಕ್ಷಕರು ಸರ್ಕಾರಿ ಹಿ.ಪ್ರಾ.ಶಾಲೆ ಹರಿದಾಸನಹಳ್ಳಿ ತುರುವೇಕೆರೆ ತಾಲ್ಲೂಕು ಇವರು ಈ ಹಿಂದೆ ಸರ್ಕಾರಿ ಹಿ.ಪ್ರಾ.ಶಾಲೆ ತಗ್ಗೀಹಳ್ಳಿ ಗುಬ್ಬಿ ತಾಲ್ಲೂಕು ಈ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ಎಸಗಿರುವ ಕರ್ತವ್ಯಲೋಪಗಳ ಹಿನ್ನೆಲೆಯಲ್ಲಿ ಉಲ್ಲೇಖ (1)ರಲ್ಲಿ ಸೇವೆಯಿಂದ ಅಮಾನತ್ತಿನಲ್ಲಿಟ್ಟು ನಂತರ ಇಲಾಖೆ ವಿಚಾರಣೆ ಕಾಯ್ದಿರಿಸಿ ಉಲ್ಲೇಖ (2)ರಲ್ಲಿ ಸೇವೆಯಲ್ಲಿ ಪುನರ್‌ಸ್ಥಾಪಿಸಲಾಗಿತ್ತು. ಇವರ ಮೇಲೆ ಇರುವ ಆರೋಪಗಳ ಬಗ್ಗೆ ಸಿಸಿಎ ನಿಯಮದಡಿ ವಿಚಾರಣೆ ಮಾಡಲು ಆರೋಪಪಟ್ಟಿಯನ್ನುಉಲ್ಲೇಖ (3)ಗಲ್ಲಿ ಶಿಕ್ಷಕರಿಗೆ ಜಾರಿ ಮಾಡಿ ಲಿಖಿತ ರಕ್ಷಣಾ ಹೇಳಿಕೆಯನ್ನು ಸಲ್ಲಿಸುವಂತೆ ತಿಳಿಸಲಾಗಿತ್ತು. ಆರೋಪಿ ಶಿಕ್ಷಕರು ರಕ್ಷಣಾ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲಾ ಪ್ರಕರಣದ ಸತ್ಯಾಸತ್ಯತೆಯನ್ನು ತಿಳಿಯಲು ಉಲ್ಲೇಖ (4)ರಲ್ಲಿ ಶ್ರೀ ರಂಗಧಾಮಯ್ಯ ಕ್ಷೇತ್ರಶಿಕ್ಷಣಾಧಿಕಾರಿಗಳು ತಿಪಟೂರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಕ ಮಾಡಿ ಸಿಸಿಎ ನಿಯಮ 11ರಡಿಯಲ್ಲಿ ವಿಚಾರಣೆ ನಡೆಸಿ ವರದಿಯನ್ನು ನೀಡುವಂತೆ ತಿಳಿಸಲಾಗಿತ್ತು.

**ಆರೋಪ:**

ಸರ್ಕಾರಿ ಹಿ.ಪ್ರಾ.ಶಾಲೆ ತಗ್ಗಿಹಳ್ಳಿ ಗುಬ್ಬಿ ತಾಲ್ಲೂಕು ಈ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ದಿನಾಂಕ:24.08.2006 ರಿಂದ ದಿನಾಂಕ:19.09.2006 ರವರೆಗೆ ಮತ್ತು ದಿನಾಂಕ:11.06.2006, ದಿನಾಂಕ:18.10.2006 ದಿನಾಂಕ:19.10.2006 ಹಾಗೂ ದಿನಾಂಕ:25.10.2006 ರಿಂದ ದಿನಾಂಕ:12.01.2007ರವರೆಗೆ ಶಾಲಾ ಕೆಲಸಕ್ಕೆ ಅನಧಿಕೃತ ಗೈರುಹಾಜರಿ ಆಗಿ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ದಕ್ಕೆ ಉಂಟು ಮಾಡಿ ಕರ್ತವ್ಯಲೋಪ ಎಸಗಿರುವುದು.

ವಿಚಾರಣಾಧಿಕಾರಿಗಳು ಈ ಪ್ರಕರಣದ ವಿಚಾರಣೆ ನಡೆಸಿ ಸಮಗ್ರ ವರದಿಯನ್ನು ಉಲ್ಲೇಖ (5)ರಲ್ಲಿ ನೀಡುತ್ತಾ ಸಾಕ್ಷಿದಾರರ ಮತ್ತು ದಾಖಲಾತಿಗಳು ಹಾಗೂ ಶಿಕ್ಷಕರು ವಿಚಾರಣೆ ಸಮಯದಲ್ಲಿ ಸ್ವತಃ ಆರೋಪವನ್ನು ಒಪ್ಪಿರುವುದರಿಂದ ಆರೋಪ ಸಾಬೀತಾಗಿದೆ ಎಂದು ವರದಿ ನೀಡಿರುತ್ತಾರೆ.

ಸದರಿ ವಿಚಾರಣಾ ವರದಿಯನ್ನು ಆರೋಪಿ ಶಿಕ್ಷಕರಿಗೆ ಜಾರಿಗೊಳಿಸಿ ಲಿಖಿತ ಹೇಳಿಕೆ ನೀಡಲು ಉಲ್ಲೇಖ (6)ರಲ್ಲಿ ತಿಳಿಸಲಾಗಿತ್ತು. ಆದರೆ ಶಿಕ್ಷಕರು ರಕ್ಷಣಾ ಹೇಳಿಕೆ ಸಲ್ಲಿಸಿರುವುದಿಲ್ಲ ವಿಚಾರಣಾ ವೇಳೆಯಲ್ಲಿ ಯಾವುದೇ ಸಮಂಜಸ ದಾಖಲೆಗಳನ್ನು ನೀಡದೆ ಸ್ವತಃ ಆರೋಪ ಶಿಕ್ಷಕರು ಶಾಲೆಗೆ ಅನಧಿಕೃತ ಗೈರುಹಾಜರಿ ಆಗಿರುವುದನ್ನು ಒಪ್ಪಿರುವ ಆರೋಪ ವಿಚಾರಣೆಯಲ್ಲಿ ಆರೋಪ ಸಾಬೀತಾಗಿರುವ ವರದಿಯನ್ನು ಒಪ್ಪಿದೆ.

ಮುಂದುವರಿದು ಈ ಶಿಕ್ಷಕರು ಇವರ ಸೇವಾ ಅವಧಿಯಲ್ಲಿ ದಿನಾಂಕ:22.05.1997 ರಿಂದ ದಿನಾಂಕ:23.11.2005ರವರೆಗೆ ಕೆಳಕಂಡಂತೆ ಗೈರುಹಾಜರಾಗಿರುತ್ತಾರೆ.

| | | |
|---|---|---|
| 1. | ದಿನಾಂಕ:22.05.1997 ರಿಂದ 10.06.1997ರವರೆಗೆ | 20 ದಿನಗಳು |
| 2. | ದಿನಾಂಕ:20.09.2000 ರಿಂದ 07.11.2000ರವರೆಗೆ | 49 ದಿನಗಳು |
| 3. | ದಿನಾಂಕ:05.12.2000 ರಿಂದ 18.12.2000ರವರೆಗೆ | 14 ದಿನಗಳು |
| 4. | ದಿನಾಂಕ:10.03.2001 ರಿಂದ 31.08.2001ರವರೆಗೆ | 175 ದಿನಗಳು |
| 5. | ದಿನಾಂಕ:01.09.2001 ರಿಂದ 31.11.2001ರವರೆಗೆ | 91 ದಿನಗಳು |
| 6. | ದಿನಾಂಕ:01.12.2001 ರಿಂದ 25.02.2002ರವರೆಗೆ | 87 ದಿನಗಳು |
| 7. | ದಿನಾಂಕ:02.11.2002 ರಿಂದ 17.06.2003 ರವರೆಗೆ | 228 ದಿನಗಳು |
| 8. | ದಿನಾಂಕ:15.12.2003 ರಿಂದ 30.06.2004ರವರೆಗೆ | 209 ದಿನಗಳು |
| 9. | ದಿನಾಂಕ:17.08.2005 ರಿಂದ 23.11.2005ರವರೆಗೆ | 99 ದಿನಗಳು |
| | **ಒಟ್ಟು** | **906 ದಿನಗಳು** |

ಮೇಲ್ಕಂಡಂತೆ ಶಾಲಾ ಕೆಲಸಕ್ಕೆ ಅನಧಿಕೃತ ಗೈರುಹಾಜರಿ ಆಗಿದ್ದು ಈ ಅವಧಿಗೆ ವೇತನ ರಹಿತ ರಜೆ ಮಂಜೂರು ಮಾಡಿ ಇತ್ಯರ್ಥ ಪಡಿಸಿರುವುದು. ದಿನಾಂಕ:24.01.2007ರಂದು ಕ್ಷೇತ್ರ ಶಿಕ್ಷಣಾಧಿಕಾರಿಗಳು ಗುಬ್ಬಿ ಇವರ ವರದಿಯಿಂದ ಕಂಡುಬಂದಿರುತ್ತದೆ.

ಒಬ್ಬ ಶಿಕ್ಷಕರಾಗಿ ಮುಖ್ಯವಾಗಿ ಶಿಸ್ತು ಪಾಲನೆಯು ಅಗತ್ಯವಾಗಿರುತ್ತದೆ ಹಾಗೂ ಮಕ್ಕಳ ಕಲಿಕೆಯ ಬಗ್ಗೆ ಹೆಚ್ಚು ಒತ್ತು ಕೊಡುವುದು ಶಿಕ್ಷಕರ ಕರ್ತವ್ಯ ಆಗಿರುತ್ತದೆ. ಆದರೆ ಈ ಶಿಕ್ಷಕರು ಇವರ ಸೇವಾ ಅವಧಿಯಲ್ಲಿ ಸಕಾರಣ ಇಲ್ಲದೆ ಪದೇಪದೇ ದೀರ್ಘಕಾಲ ಶಾಲಾ ಕೆಲಸಕ್ಕೆ ಗೈರುಹಾಜರಿ ಮಕ್ಕಳ ಶೈಕ್ಷಣಿಕ ಪ್ರಗತಿಗೆ ದಕ್ಕೆ ಉಂಟು ಮಾಡಿರುವುದು ಒಬ್ಬ ಉತ್ತಮ ಶಿಕ್ಷಕರ ನಡವಳಿಕೆಗಳಿಗೆ ವಿರುದ್ಧವಾಗಿರುತ್ತದೆ. ಆದ್ದರಿಂದ ಈ ಕೆಳಕಂಡಂತೆ ಆದೇಶ ನೀಡಲಾಗಿದೆ.

**ಆದೇಶ**

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಿಂದಾಗಿ ಶ್ರೀ ಗಂಗಾಧರಯ್ಯ ಡಿ. ಸಹಶಿಕ್ಷಕರು ಸರ್ಕಾರಿ ಹಿ.ಪ್ರಾ. ಶಾಲೆ ಹರಿದಾಸನಹಳ್ಳಿ, ತುರುವೇಕೆರೆ ತಾಲ್ಲೂಕು ಇವರು ಈ ಹಿಂದೆ ಸರ್ಕಾರಿ ಹಿ.ಪ್ರಾ.ಶಾಲೆ ತಗ್ಗೀಹಳ್ಳಿ ಗುಬ್ಬಿ ತಾಲ್ಲೂಕು ಈ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಶಾಲಾ ಕೆಲಸಕ್ಕೆ ಅನಧಿಕೃತ ಗೈರುಹಾಜರಾಗಿ ಮಕ್ಕಳ ಶೈಕ್ಷಣಿಕ ಪ್ರಗತಿಗೆ ದಕ್ಕೆ ಉಂಟುಮಾಡಿರುವುದು ವಿಚಾರಣೆಯಲ್ಲಿ ಆಪಾದನೆಗಳು ಸಾಬೀತಾಗಿರುವುದರಿಂದ ಹಾಗೂ ಇದಕ್ಕೂ ಮುಂಚಿತವಾಗಿ ಅಂದರೆ 1997 ರಿಂದ 2005ನೇ ಸಾಲಿನವರೆಗೆ ಪದೇ ಪದೇ ಶಾಲಾ ಕೆಲಸಕ್ಕೆ ಅನಧಿಕೃತ ಗೈರುಹಾಜರಾಗಿ ಮಕ್ಕಳ ಶೈಕ್ಷಣಿಕ ಪ್ರಗತಿ ದಕ್ಕೆ ಉಂಟು ಮಾಡಿ ಶಿಕ್ಷಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದರಿಂದ ಶ್ರೀ ಬಿ.ಎ. ರಾಜಶೇಖರ ಉಪನಿರ್ದೇಶಕರು ಹಾಗೂ ಶಿಸ್ತು ಪ್ರಾಧಿಕಾರಿಗಳು ಸಾ.ಶಿ. ಇಲಾಖೆ, ತುಮಕೂರು (ದ) ಆದ ನಾನು ಕರ್ನಾಟಕ ಸರ್ಕಾರಿ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು 1957ರ ನಿಯಮದಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ತಕ್ಷಣದಿಂದ ಜಾರಿಗೆ ಬರುವಂತೆ ಕೆ.ಸಿ.ಎಸ್. (ಸಿ.ಸಿ.ಎ.) ನಿಯಮ 8(viii)ರ ಪ್ರಕಾರ ಶ್ರೀ ಡಿ. ಗಂಗಾಧರಯ್ಯ ಇವರನ್ನು ಸೇವೆಯಿಂದ ವಜಾಮಾಡಿ ಆದೇಶಿಸಿರುತ್ತೇನೆ.

ಕ್ಷೇತ್ರ ಶಿಕ್ಷಣಾಧಿಕಾರಿಗಳು ತುರುವೇಕೆರೆ ಇವರು ಈ ಆದೇಶವನ್ನು ನೌಕರರ ಸೇವಾವಹಿಯಲ್ಲಿ ನಮೂದಿಸಿ ಮೇಲಿನ ಆದೇಶದಂತೆ ನಿಯಮಾನುಸಾರ ಅಗತ್ಯ ಕ್ರಮಕೈಗೊಳ್ಳಲು ತಿಳಿಸಿದೆ.

**ಬಿ.ಎ. ರಾಜಶೇಖರ**

ಪಿ.ಆರ್.113

ಉಪನಿರ್ದೇಶಕರು ಹಾಗೂ ಶಿಸ್ತುಪ್ರಾಧಿಕಾರಿಗಳು,
ಸಾರ್ವಜನಿಕ ಶಿಕ್ಷಣ ಇಲಾಖೆ, ತುಮಕೂರು (ದ).

**ಜಿಲ್ಲಾ ಪಂಚಾಯತ್, ತುಮಕೂರು**

**ಸಾರ್ವಜನಿಕ ಶಿಕ್ಷಣ ಇಲಾಖೆ, ಉಪನಿರ್ದೇಶಕರ ಕಛೇರಿ, ತುಮಕೂರು (ದ) ಜಿಲ್ಲೆ**

**ಜ್ಞಾಪನಾ**

**ಸಂಖ್ಯೆ: ಇ5/ಅ.ಗೈ.ಹಾ.ದೂರು-107/05-06/6899, ದಿನಾಂಕ:20ನೇ ಜನವರಿ, 2009**

**ವಿಷಯ:** ಶ್ರೀ ಕೆ.ಎನ್. ಭದ್ರಯ್ಯ ಮುಖ್ಯ ಶಿಕ್ಷಕರು, ಸರ್ಕಾರಿ ಹಿ.ಪ್ರಾ.ಶಾಲೆ ಭುವನಹಳ್ಳಿ, ತುರುವೇಕೆರೆ ತಾಲ್ಲೂಕು. ಇವರು ಈ ಹಿಂದೆ ಸರ್ಕಾರಿ ಹಿ.ಪ್ರಾ.ಶಾಲೆ. ಹಂಡನಹಳ್ಳಿ ಗುಬ್ಬಿ ತಾಲ್ಲೂಕು ಇಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ಎಸಗಿರುವ ಆರೋಪಗಳ ಬಗ್ಗೆ ಶಿಸ್ತುಕ್ರಮ ಜರುಗಿಸುವ ಬಗ್ಗೆ.

**ಉಲ್ಲೇಖ:** 1) ಈ ಕಛೇರಿಯ ಜ್ಞಾಪನ ಸಂಖ್ಯೆ: ಇ5/ದೂರು 25/04-05 ದಿನಾಂಕ:29.07.2005.

2) ಈ ಕಛೇರಿಯ ಜ್ಞಾಪನ ಸಂಖ್ಯೆ: ಇ5/ಅ.ಗೈ.ಹಾ107/05-06, ದಿನಾಂಕ:20.01.2006.

3) ಈ ಕಛೇರಿಯ ಸಮಸಂಖ್ಯೆಯ ಪತ್ರದ ದಿನಾಂಕ:04.05.2007ರಲ್ಲಿ ಆರೋಪಪಟ್ಟಿ ಜಾರಿಮಾಡಿದೆ.

4) ಈ ಕಛೇರಿಯ ಸಮಸಂಖ್ಯೆಯ ಪತ್ರದ ದಿನಾಂಕ:22.10.2007ರಲ್ಲಿ ವಿಚಾರಣಾಧಿಕಾರಿಗಳ ನೇಮಕ.

5) ವಿಚಾರಣಾಧಿಕಾರಿಗಳ ವರದಿ ದಿನಾಂಕ:22.09.2008.

6) ಈ ಕಛೇರಿಯ 2ನೇ ಕಾರಣಕೇಳುವ ನೋಟಿಸ್ ದಿನಾಂಕ:13.10.2008.

**ಪ್ರಸ್ತಾವನೆ:**

ಶ್ರೀ ಕೆ.ಎನ್. ಭದ್ರಯ್ಯ, ಮುಖ್ಯಶಿಕ್ಷಕರು, ಸರ್ಕಾರಿ ಹಿ.ಪ್ರಾ.ಶಾಲೆ ಭುವನಹಳ್ಳಿ ತುರುವೇಕೆರೆ ತಾಲ್ಲೂಕು ಇವರು ಈ ಹಿಂದೆ ಸರ್ಕಾರಿ ಹಿ.ಪ್ರಾ.ಶಾಲೆ ಹಂಡನಹಳ್ಳಿ ಗುಬ್ಬಿ ತಾಲ್ಲೂಕು ಈ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಿ ಆಗಿ ಶೈಕ್ಷಣಿಕ ಪ್ರಗತಿಗೆ ದಕ್ಕೆ ಉಂಟು ಮಾಡಿರುವ ಆರೋಪಗಳ ಹಿನ್ನಲೆಯಲ್ಲಿ ಉಲ್ಲೇಖ (1)ರಲ್ಲಿ ಸೇವೆಯಿಂದ ಅಮಾನತ್ತಿನಲ್ಲಿಟ್ಟು ನಂತರ ಇಲಾಖೆ ವಿಚಾರಣೆ ಕಾಯ್ದಿರಿಸಿ ಉಲ್ಲೇಖ (2)ರಲ್ಲಿ ಸೇವೆಯಲ್ಲಿ ಪುನರ್‌ಸ್ಥಾಪಿಸಲಾಗಿತ್ತು. ಇವರ ಮೇಲೆ ಇರುವ ಆರೋಪಗಳ ಬಗ್ಗೆ ಸಿಸಿಎ ನಿಯಮದಡಿ ವಿಚಾರಣೆ ಮಾಡಲು ಉಲ್ಲೇಖ (3)ರಲ್ಲಿ ಆರೋಪಪಟ್ಟಿಯನ್ನು ಶಿಕ್ಷಕರಿಗೆ ಜಾರಿ ಮಾಡಿ ಲಿಖಿತ ರಕ್ಷಣಾ ಹೇಳಿಕೆಯನ್ನು ಸಲ್ಲಿಸುವಂತೆ ತಿಳಿಸಲಾಗಿತ್ತು. ಆರೋಪಿ ಶಿಕ್ಷಕರು ಲಿಖಿತ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲಾ ಪ್ರಕರಣದ ಸತ್ಯಾಸತ್ಯತೆಯನ್ನು ತಿಳಿಯಲು ಉಲ್ಲೇಖ (4) ರಲ್ಲಿ ಶ್ರೀ

ನಂಜಯ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ಕುಣಿಗಲ್ ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಕ ಮಾಡಿ ಸಿಸಿಎ ನಿಯಮ 11ರಡಿಯಲ್ಲಿ ವಿಚಾರಣೆ ನಡೆಸಿ ವರದಿಯನ್ನು ನೀಡುವಂತೆ ತಿಳಿಸಲಾಗಿತ್ತು.

**ಆರೋಪ:**

ಸರ್ಕಾರಿ ಹಿ.ಪ್ರಾ.ಶಾಲೆ ಹಂಡನಹಳ್ಳಿ ಗುಬ್ಬಿ ತಾಲ್ಲೂಕು ಈ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ದಿನಾಂಕ:25.10.2004 ರಿಂದ ದಿನಾಂಕ:04.08.2005ರವರೆಗೆ ಶಾಲಾ ಕೆಲಸಕ್ಕೆ ಅನಧಿಕೃತ ಗೈರುಹಾಜರಿ ಆಗಿ ಮಕ್ಕಳ ಶೈಕ್ಷಣಿಕ ಪ್ರಗತಿಗೆ ದಕ್ಕೆ ಉಂಟು ಮಾಡಿರುವುದು.

ವಿಚಾರಣಾಧಿಕಾರಿಗಳು ಈ ಪ್ರಕರಣದ ಬಗ್ಗೆ ವಿಚಾರಣೆ ನಡೆಸಿ ಸಮಗ್ರ ವರದಿಯನ್ನು ಉಲ್ಲೇಖ (5)ರಲ್ಲಿ ನೀಡುತ್ತಾ ವಿಚಾರಣೆ ವೇಳೆಯಲ್ಲಿ ಆರೋಪಿ ಶಿಕ್ಷಕರು ಸ್ವತಃ ಅನಧಿಕೃತ ಗೈರುಹಾಜರಿಯಾಗಿರುವ ಆರೋಪವನ್ನು ಒಪ್ಪಿರುವುದರಿಂದ ಆರೋಪ ಸಾಬೀತಾಗಿದೆ ಎಂದು ವರದಿ ನೀಡಿರುತ್ತಾರೆ.

ಸದರಿ ವಿಚಾರಣಾ ವರದಿಯನ್ನು ಆರೋಪಿ ಶಿಕ್ಷಕರಿಗೆ ಉಲ್ಲೇಖ (6)ರಲ್ಲಿ ಜಾರಿಗೊಳಿಸಿ ಲಿಖಿತ ಹೇಳಿಕೆ ನೀಡಲು ತಿಳಿಸಲಾಗಿತ್ತು. ಆರೋಪಿ ಶಿಕ್ಷಕರು ಯಾವುದೇ ರಕ್ಷಣಾ ಹೇಳಿಕೆ ಸಲ್ಲಿಸಿರುವುದಿಲ್ಲಾ ವಿಚಾರಣಾ ವೇಳೆಯಲ್ಲಿ ಆರೋಪಿ ಶಿಕ್ಷಕರು ಸ್ವತಃ ಅನಧಿಕೃತ ಗೈರುಹಾಜರಿಯಾಗಿರುವುದನ್ನು ಒಪ್ಪಿರುವುದರಿಂದ, ವಿಚಾರಣೆಯಲ್ಲಿ ಆರೋಪ ಸಾಬೀತಾಗಿರುವ ವರದಿಯನ್ನು ಒಪ್ಪಿದೆ. ಹಾಗೂ ಒಬ್ಬ ಶಿಕ್ಷಕರಾಗಿ ಮುಖ್ಯವಾಗಿ ಶಿಸ್ತುಪಾಲನೆಯು ಅಗತ್ಯವಾಗಿರುತ್ತದೆ. ಆದರೆ ಆರೋಪಿ ಶಿಕ್ಷಕರು ಇವುಗಳನ್ನು ಪಾಲಿಸದೇ ಅನುಚಿತವಾಗಿ ವರ್ತಿಸಿ ಗೈರುಹಾಜರಾಗಿ ಮಕ್ಕಳ ಶೈಕ್ಷಣಿಕ ಪ್ರಗತಿಗೆ ದಕ್ಕೆ ಉಂಟುಮಾಡಿರುವುದು ಒಬ್ಬ ಉತ್ತಮ ಶಿಕ್ಷಕರ ನಡವಳಿಕೆಗಳಿಗೆ ವಿರುದ್ಧವಾಗಿರುತ್ತದೆ ಆದ್ದರಿಂದ ಈ ಕೆಳಕಂಡಂತೆ ಆದೇಶ ನೀಡಲಾಗಿದೆ.

**ಆದೇಶ**

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಿಂದಾಗಿ ಶ್ರೀ ಕೆ.ಎನ್. ಭದ್ರಯ್ಯ, ಮುಖ್ಯಶಿಕ್ಷಕರು ಸರ್ಕಾರಿ ಹಿ.ಪ್ರಾ. ಶಾಲೆ ಭುವನಹಳ್ಳಿ, ತುರುವೇಕೆರೆ ತಾಲ್ಲೂಕು ಇವರು ಈ ಹಿಂದೆ ಸರ್ಕಾರಿ ಹಿ.ಪ್ರಾ.ಶಾಲೆ ಹಂಡನಹಳ್ಳಿ ಗುಬ್ಬಿ ತಾಲ್ಲೂಕು ಈ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ಶಾಲಾ ಕೆಲಸಕ್ಕೆ ಅನಧಿಕೃತ ಗೈರುಹಾಜರಾಗಿ ಮಕ್ಕಳ ಶೈಕ್ಷಣಿಕ ಪ್ರಗತಿಗೆ ದಕ್ಕೆ ಉಂಟುಮಾಡಿ ಶಿಕ್ಷಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ವಿಚಾರಣೆಯಲ್ಲಿ ಆಪಾದನೆಗಳು ಸಾಬೀತಾಗಿರುವುದರಿಂದ ಶ್ರೀ ಬಿ.ಎ. ರಾಜಶೇಖರ ಉಪನಿರ್ದೇಶಕರು ಹಾಗೂ ಶಿಸ್ತು ಪ್ರಾಧಿಕಾರಿಗಳು ಸಾ.ಶಿ. ಇಲಾಖೆ, ತುಮಕೂರು (ದ) ಆದ ನಾನು ಕರ್ನಾಟಕ ಸರ್ಕಾರಿ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು 1957ರ ನಿಯಮದಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ತಕ್ಷಣದಿಂದ ಜಾರಿಗೆ ಬರುವಂತೆ ಕೆ.ಸಿ.ಎಸ್. (ಸಿ.ಸಿ.ಎ.) ನಿಯಮ 8(vii)ರ ಪ್ರಕಾರ ಕೆ.ಎನ್. ಭದ್ರಯ್ಯ ಇವರನ್ನು ಸೇವೆಯಿಂದ ವಜಾಮಾಡಿ ಆದೇಶಿಸಿರುತ್ತೇನೆ.

ಕ್ಷೇತ್ರ ಶಿಕ್ಷಣಾಧಿಕಾರಿಗಳು ತುರುವೇಕೆರೆ ಇವರು ಈ ಆದೇಶವನ್ನು ನೌಕರರ ಸೇವಾವಹಿಯಲ್ಲಿ ನಮೂದಿಸಿ ಮೇಲಿನ ಆದೇಶದಂತೆ ನಿಯಮಾನುಸಾರ ಅಗತ್ಯ ಕ್ರಮಕೈಗೊಳ್ಳಲು ತಿಳಿಸಿದೆ.

**ಬಿ.ಎ. ರಾಜಶೇಖರ**

ಪಿ.ಆರ್.114

ಉಪನಿರ್ದೇಶಕರು ಹಾಗೂ ಶಿಸ್ತುಪ್ರಾಧಿಕಾರಿಗಳು,
ಸಾರ್ವಜನಿಕ ಶಿಕ್ಷಣ ಇಲಾಖೆ, ತುಮಕೂರು (ದ).

**ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು**

**ಸಂಖ್ಯೆ: ಆಸಾಂನಿ.248/ಆಡಳಿತ-2/2008-09/29688-95, ದಿನಾಂಕ:24ನೇ ಜನವರಿ, 2009**

**ವಿಷಯ:** ಶ್ರೀ ಎ. ರಾಜೇಂದ್ರ ಸಾಂಖ್ಯಿಕ ನಿರೀಕ್ಷಕರು, ತಾಲ್ಲೂಕು ಕಛೇರಿ, ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರನ್ನು ಸರ್ಕಾರದ ಸೇವೆಯಿಂದ ಅಮಾನತ್ತುಗೊಳಿಸುವ ಕುರಿತು.

**ಉಲ್ಲೇಖ:** ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ದಾವಣಗೆರೆ ಜಿಲ್ಲೆ, ದಾವಣಗೆರೆ ಇವರ ಅರೆ ಸರ್ಕಾರಿ ಪತ್ರದ ಸಂಖ್ಯೆ: ಜಿಸಂಸಂ/ದಾವ/ಆಡಳಿತ/ ಸಾಂನಿ/ ದಾವ/ 2008-09, ದಿನಾಂಕ:09.01.2009 ಮತ್ತು ಅದರೊಂದಿಗೆ ಲಗತ್ತಿಸಲಾದ 76 ಪುಟಗಳ ದಾಖಲಾತಿಗಳು.

**ಪ್ರಸ್ತಾವನೆ:**

ಶ್ರೀಮತಿ ಎಂ.ಜಿ. ಉಮಾದೇವಿ ಕೋಂ ಸಿ. ನಾಗರಾಜ, ಪ್ರಸ್ತುತ ಜಿಡ್ಡಿಕೇರಿ, ಜಗಳೂರು ಟೌನ್, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರು ವಾಸ್ತವವಾಗಿ ದಿನಾಂಕ:20.06.1988 ರಂದು ಜನನವಾಗಿದ್ದು, ಅವರು ಇದಕ್ಕೆ ಆಧಾರವಾಗಿ ಅವರ ವಾಸ್ತವವಾದ "ಜನನ ದಿನಾಂಕ:20.06.1988"ನ್ನು ಹೊಂದಿದ (1) 1ನೇ ತರಗತಿಯಿಂದ 7ನೇ ತರಗತಿಯವರೆಗೆ ಅವರು ವ್ಯಾಸಂಗ ಮಾಡಿದ ಕುರಿತು ಸಲ್ಲಿಸಿದ್ದ ಪ್ರಮಾಣ ಪತ್ರ (2) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಇವರು ನೀಡಲಾದ ಎಸ್.ಎಸ್.ಎಲ್.ಸಿ. ಪರೀಕ್ಷೆ ತೇರ್ಗಡೆ ಹೊಂದಿದ ಪ್ರಮಾಣ ಪತ್ರ (3) ನಾಲಂದ ಪದವಿ ಪೂರ್ವ ಕಾಲೇಜ್, ಜಗಳೂರು (ದಾವಣಗೆರೆ ಜಿಲ್ಲೆ) ಇವರು ನೀಡಲಾದ ವರ್ಗಾವಣೆ ಪ್ರಮಾಣ ಪತ್ರ ಇತ್ಯಾದಿ ದಾಖಲಾತಿಗಳೊಂದಿಗೆ ಜಿಲ್ಲಾಧಿಕಾರಿಗಳು, ದಾವಣಗೆರೆ ಇವರಿಗೆ ಸಲ್ಲಿಸಿದ ದೂರನ್ನು ಪರಿಶೀಲಿಸಿ ಜಿಲ್ಲಾಧಿಕಾರಿಗಳು,

ದಾವಣಗೆರೆ ಇವರ ಪತ್ರದ ಸಂಖ್ಯೆ: ಎಡಿಎಂ/ಸಿಆರ್/179/08-09, ದಿನಾಂಕ:30.12.2008ರ ಅನ್ವಯ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ದಾವಣಗೆರೆ ಜಿಲ್ಲೆ ಇವರು ಪೂರ್ವಭಾವಿ ವಿಚಾರಣೆ ಕೈಗೊಂಡು ಉಲ್ಲೇಖದಲ್ಲಿ ತಿಳಿಸಲಾದ ಪತ್ರದೊಂದಿಗೆ ಅವರ ಪೂರ್ವಭಾವಿ ವಿಚಾರಣಾ ವರದಿಯನ್ನು ಸಲ್ಲಿಸಿರುತ್ತಾರೆ.

ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ದಾವಣಗೆರೆ ಅವರ ವರದಿಯಲ್ಲಿನ ಮೊದಲನೆಯ ಅಂಶದಲ್ಲಿ ಇನ್ನಿತರ ವಿಷಯಗಳೊಂದಿಗೆ ಸದರಿ ದೂರು ಸಲ್ಲಿಸಿದ ಶ್ರೀಮತಿ ಉಮಾದೇವಿ ಇವರು ಜಗಳೂರು ತಾಲ್ಲೂಕು, ಯರ್ಲಕಟ್ಟೆಯಲ್ಲಿ ದಿನಾಂಕ:20.06.1988 ರಂದು ವಾಸ್ತವವಾಗಿ ಜನನವಾಗಿದ್ದರೂ, ಶ್ರೀ ಎ. ರಾಜೇಂದ್ರ, ಸಾಂಖ್ಯಿಕ ನಿರೀಕ್ಷಕರು ಇವರು ಸದರಿ ದೂರು ನೀಡಿದ ಶ್ರೀಮತಿ ಉಮಾದೇವಿ ಇವರ ತಾಯಿ ಸಲ್ಲಿಸಿದ ಅರ್ಜಿಗೆ ಸಂಬಂಧಿಸಿದಂತೆ ನವೆಂಬರ್ 1986ನೇ ಇಸವಿಯ ನಿಟ್ಟುವಳ್ಳಿ ಗ್ರಾಮ, ದಾವಣಗೆರೆ ತಾಲ್ಲೂಕು ಜನನ ಮತ್ತು ಮರಣ ನೋಂದಣಿಯ ರಿಜಿಸ್ಟರ್‌ನ ಹಳೆಯ ದಾಖಲೆಗಳನ್ನು ತೆಗೆದುಕೊಂಡು ಶ್ರೀಮತಿ ಎಂ.ಜಿ. ಉಮಾದೇವಿಯವರ ಹುಟ್ಟಿದ ದಿನಾಂಕವನ್ನು ಅನಧಿಕೃತವಾಗಿ ಸುಳ್ಳು ದಿನಾಂಕವನ್ನು ನಮೂದಿಸಿ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ ಎಂದೂ, ಎರಡನೆಯ ಅಂಶದಲ್ಲಿ ಸದರಿ ಸಾಂಖ್ಯಿಕ ನಿರೀಕ್ಷಕರಾದ ಶ್ರೀ ಎ. ರಾಜೇಂದ್ರ, ಇವರು ಈ ಘಟನೆ ಜರುಗಿದ ದಿನಾಂಕಗಳಂದು ಪ್ರವಾಸದಲ್ಲಿದ್ದುದಾಗಿ ಹೇಳಿದ್ದರೂ, ಆ ದಿನಗಳಂದು ಕಛೇರಿಯಲ್ಲಿ ಇದ್ದು ಸದರಿ ಅವರೇ ಜನನ ಪ್ರಮಾಣ ಪತ್ರದ ನಕಲನ್ನು ಹಾಗೂ ನಮೂನೆ-11ರ ದೃಢೀಕೃತ ಜೆರಾಕ್ಸ್ ಪ್ರತಿಯನ್ನು ತಯಾರಿಸಿದ್ದಾಗ್ಯೂ, ಸದರಿ ಪ್ರಮಾಣ ಪತ್ರದ ನಕಲನ್ನು ತಯಾರಿಸುವಾಗ ಮೂಲ ದಾಖಲೆಯಾದ ನಮೂನೆ-11 ರಲ್ಲಿನ ವ್ಯತ್ಯಾಸದ ಕುರಿತು ಮೇಲಾಧಿಕಾರಿಗಳ ಗಮನಕ್ಕೆ ತಂದಿರುವುದಿಲ್ಲವೆಂದೂ, ಹಾಗೂ ವರದಿಯ 3ನೇ ಅಂಶದಲ್ಲಿ ಸದರಿ ಸಾಂಖ್ಯಿಕ ನಿರೀಕ್ಷಕರು ಅವರಿಗೆ ವಹಿಸಲಾದ ಸರ್ಕಾರದ ಕರ್ತವ್ಯಗಳ ನಿರ್ವಹಣೆಯಲ್ಲಿಯೂ ಸಹ ನಿರ್ಲಕ್ಷತೆಯನ್ನು ಪ್ರದರ್ಶಿಸಿರುವುದಕ್ಕೆ ಸಂಬಂಧಿಸಿದಂತೆ ಹಾಗೂ ತಾಲ್ಲೂಕು ಕಛೇರಿಗಳಲ್ಲಿ ಮತ್ತು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿಯಲ್ಲಿ ಏರ್ಪಡಿಸಲಾಗುವ ಮಾಸಿಕ ಪ್ರಗತಿ ಪರಿಶೀಲನಾ ಸಭೆಗಳಿಗೆ ಅನುಮತಿ ಪಡೆಯದೇ ಗೈರುಹಾಜರಾಗಿರುವುದಕ್ಕೆ ಮತ್ತು ಪ್ರತಿ ತಿಂಗಳು ದಿನಚರಿ ನೀಡದೇ ಇರುವುದಕ್ಕೆ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ನೀಡಿದ ಕಾರಣ ಕೇಳುವ ಜ್ಞಾಪನಗಳ ಕುರಿತು ವಿವರಿಸಿ, ಸದರಿ ಸಾಂಖ್ಯಿಕ ನಿರೀಕ್ಷಕರು ಸರ್ಕಾರದ ಕರ್ತವ್ಯಗಳ ನಿರ್ವಹಣೆಯಲ್ಲಿ ನಿರ್ಲಕ್ಷತೆ ಮನೋಭಾವನೆಯನ್ನು ಬೆಳೆಸಿಕೊಂಡಿರುವುದಲ್ಲದೆ ಕರ್ತವ್ಯ ಲೋಪವೆಸಗಿರುತ್ತಾರೆಂದು ನಮೂದಿಸಿ ಅವರ ವಿರುದ್ಧ ಶಿಸ್ತು ಕ್ರಮ ಜರುಗಿಸುವಂತೆ ಕೋರಿರುತ್ತಾರೆ.

ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ದಾವಣಗೆರೆ ಇವರು ಉಲ್ಲೇಖದಲ್ಲಿನ ಪ್ರಸ್ತಾವನೆಯಲ್ಲಿ ಒಳಗೊಂಡಿರುವ ಮೇಲೆ ತಿಳಿಸಲಾದ ಅಂಶಗಳನ್ನು ಹಾಗೂ ವರದಿಯೊಂದಿಗೆ ಒದಗಿಸಲಾದ ದಾಖಲಾತಿಗಳನ್ನು ಪರಿಶೀಲಿಸಲಾಗಿ ಶ್ರೀ ಎ. ರಾಜೇಂದ್ರ, ಸಾಂಖ್ಯಿಕ ನಿರೀಕ್ಷಕರನ್ನು ಸರ್ಕಾರದ ಸೇವೆಯಿಂದ ಅಮಾನತ್ತುಗೊಳಿಸುವುದು ಸೂಕ್ತವೆಂದು ಪರಿಗಣಿಸಿ, ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಕಛೇರಿ ಆದೇಶ ಸಂಖ್ಯೆ: ಆಡಳಿತ: 553:2008-09**

ಪ್ರಸ್ತಾವನೆಯಲ್ಲಿ ವಿವರಿಸಲಾದ ಎಲ್ಲಾ ಅಂಶಗಳನ್ನು ಪರಿಗಣಿಸಿ, ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಮತ್ತು ಶಿಸ್ತು ಪ್ರಾಧಿಕಾರವಾದ ನಾನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 10(1-ಎ) ರಲ್ಲಿನ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಎ. ರಾಜೇಂದ್ರ, ಸಾಂಖ್ಯಿಕ ನಿರೀಕ್ಷಕರು, ತಾಲ್ಲೂಕು ಕಛೇರಿ, ದಾವಣಗೆರೆ (ದಾವಣಗೆರೆ ಜಿಲ್ಲೆ) ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಅವರ ವಿರುದ್ಧ ಇಲಾಖಾ ವಿಚಾರಣೆಯನ್ನು ಏರ್ಪಡಿಸುವುದನ್ನು ಕಾಯ್ದಿರಿಸಿ ಸರ್ಕಾರದ ಸೇವೆಯಿಂದ ಅಮಾನತ್ತುಗೊಳಿಸಲಾಗಿದೆ.

ಕರ್ನಾಟಕ ನಾಗರೀಕ ಸೇವಾ ನಿಯಮಗಳು, 1957ರ ನಿಯಮ 98(1), 98(2) ಮತ್ತು ನಿಯಮ:104(2) ರಲ್ಲಿನ ಷರತ್ತುಗಳನ್ನು ಪೂರೈಸಿದಲ್ಲಿ, ಸದರಿ ಅಮಾನತ್ತುಗೊಂಡ ಸಾಂಖ್ಯಿಕ ನಿರೀಕ್ಷಕರಿಗೆ ನಿಯಮಾನುಸಾರ ಅಮಾನತ್ತು ಅವಧಿಯಲ್ಲಿ ಜೀವನ ನಿರ್ವಹಣಾ ಭತ್ಯೆಯನ್ನು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ನೀಡಬಹುದಾಗಿದೆ.

**ಹೆಚ್.ಇ. ರಾಜಶೇಖರಪ್ಪ**

ಪಿ.ಆರ್.118 ನಿರ್ದೇಶಕರು ಮತ್ತು ಶಿಸ್ತು ಪ್ರಾಧಿಕಾರ.

**ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು**

**ಸಂಖ್ಯೆ: ಆಸಾಂನಿ.259/ಆಡಳಿತ-2/2008-09/33684-093, ದಿನಾಂಕ:3ನೇ ಮಾರ್ಚ್, 2009**

**ವಿಷಯ:** ಈ ನಿರ್ದೇಶನಾಲಯದ ಸಮೂಹ "ಸಿ" ಶ್ರೇಣಿಯ ಸಾಂಖ್ಯಿಕ ನಿರೀಕ್ಷಕರ ವೃಂದದವರಾದ ಶ್ರೀ ಆರ್.ಎಂ. ಕುಲಕರ್ಣಿ (ಪ್ರಸ್ತುತ ಅಮಾನತ್ತಿನಲ್ಲಿ) ಇವರನ್ನು ಸೇವೆಗೆ ಪುನರ್ ಸ್ಥಾಪಿಸುವ ಕುರಿತು.

**ಉಲ್ಲೇಖ:** ಈ ನಿರ್ದೇಶನಾಲಯದ ಇದೇ ಕ್ರಮಾಂಕದ ಆದೇಶದ ಸಂಖ್ಯೆ: ಆಡಳಿತ/ 380/2008-09, ದಿನಾಂಕ:13.10.2008.

**ಪ್ರಸ್ತಾವನೆ:**

ಇಲಾಖಾ ವಿಚಾರಣೆ ಎದುರಿಸುತ್ತಿರುವ ಶ್ರೀ ಆರ್.ಎಂ. ಕುಲಕರ್ಣಿ, ಈ ನಿರ್ದೇಶನಾಲಯದ ಸಾಂಖ್ಯಿಕ ನಿರೀಕ್ಷಕರು (ಪ್ರಸ್ತುತ ಅಮಾನತ್ತಿನಲ್ಲಿ) ಇವರು ದಿನಾಂಕ:26.07.2008 ರಂದು ನಮೂದಿಸಿ ದಿನಾಂಕ:02.09.2008 ರಂದು ಈ ನಿರ್ದೇಶನಾಲಯದಲ್ಲಿ ಸ್ವೀಕೃತಿಯಾಗಿದ್ದ ಅವರ ಪತ್ರದಲ್ಲಿ ಇನ್ನಿತರ ಅಸಂಬಂಧಿಸಿದ ವಿಷಯಗಳೊಂದಿಗೆ "ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಹಾವೇರಿ" ಇವರು "ಜಿಲ್ಲಾಧಿಕಾರಿಗಳು, ಹಾವೇರಿ" ಇವರಿಗೆ ಪ್ರಭಾವ ಬೀರಿ ಸತ್ಯಕ್ಕೆ ದೂರವಾದ ಆಪಾದನೆಗಳೊಂದಿಗೆ ವರದಿ ತಯಾರಿಸುವಲ್ಲಿ ಯಶಸ್ವಿಯಾಗಿದ್ದಾರೆಂದು, "ನಿರ್ದೇಶನಾಲಯದ ಅಧಿಕಾರಿಗಳು" ಸಿಬ್ಬಂದಿಗಳ ಮಾತು ಕೇಳಿ ಕರ್ತವ್ಯ ನಿರ್ವಹಿಸುತ್ತಿದ್ದಾರೆಂಬ ರೀತಿಯಲ್ಲಿ ಹಾಗೂ ಸರ್ಕಾರದ ಸೂಚನೆ ಅನ್ವಯ ಪೂರ್ವಭಾವಿ ವಿಚಾರಣೆ ಏರ್ಪಡಿಸಿ ವರದಿ ಸಲ್ಲಿಸಿದ ಅಂದಿನ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡನಾಧಿಕಾರಿಗಳು (Deputy Commissioner and District Magestrate- ಶ್ರೀ ಅಮ್ಮಾನ್ ಆದಿತ್ಯ ಬಿಸ್ವಾಸ್, IAS) ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಹಾವೇರಿ ಇವರು ಬೀರಿದ ಪ್ರಭಾವಕ್ಕೆ ಒಳಗಾಗಿರುವುದಾಗಿ, ಶಿಸ್ತು ಪ್ರಾಧಿಕಾರವಾದ ಇಲಾಖಾ ಮುಖ್ಯಸ್ಥರ ಹಾಗೂ ಜಿಲ್ಲಾಧಿಕಾರಿಗಳು, ಹಾವೇರಿ ಜಿಲ್ಲೆ, ಹಾವೇರಿ ಇವರುಗಳ ಬಗ್ಗೆ ನಿಂದನಾರ್ಹವಾಗಿ ಸರ್ಕಾರಿ ನೌಕರನೊಬ್ಬನಿಗೆ ಸಲ್ಲದ ತರವಲ್ಲದ ರೀತಿಯಲ್ಲಿ ಟೀಕೆಗಳನ್ನು ಮಾಡಿದ್ದರಿಂದಲೂ, ಹಾಗೂ, ಸದರಿ ಶ್ರೀ ಆರ್.ಎಂ. ಕುಲಕರ್ಣಿ, ಸಾಂಖ್ಯಿಕ ನಿರೀಕ್ಷಕರು (ಪ್ರಸ್ತುತ ಅಮಾನತ್ತಿನಲ್ಲಿ) ಅವರ ವಿರುದ್ಧ ಏರ್ಪಡಿಸಲು ಉದ್ದೇಶಿಸಲಾಗಿದ್ದ ಇಲಾಖಾ ವಿಚಾರಣೆಯ ದಾರಿಯನ್ನು ತಪ್ಪಿಸುವಂತಹ ದುರುದ್ದೇಶದಿಂದ ಸರ್ಕಾರಿ ನೌಕರನಿಗೆ ಸಲ್ಲದ ರೀತಿಯಲ್ಲಿ ಹಿರಿಯ ಅಧಿಕಾರಿಗಳನ್ನು ನಿಂದನೆ ಮಾಡಿದ್ದರಿಂದ, ಅವರ ವಿರುದ್ಧ ಉದ್ದೇಶಿಸಲಾಗಿದ್ದ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ಅವರನ್ನು ಉಲ್ಲೇಖದಲ್ಲಿನ ಈ ನಿರ್ದೇಶನಾಲಯದ ಆದೇಶದಲ್ಲಿ ಸರ್ಕಾರದ ಸೇವೆಯಿಂದ ಅಮಾನತ್ತುಗೊಳಿಸಲಾಗಿತ್ತು. ಪ್ರಸ್ತುತ ಅವರ ವಿರುದ್ಧದ ಇಲಾಖಾ ವಿಚಾರಣೆಗೆ ಸಂಬಂಧಿಸಿದಂತೆ, ಇಲಾಖಾ ವಿಚಾರಣಾ ವರದಿ ಸ್ವೀಕೃತಿಯಾಗಿದ್ದು, ಆ ವಿಚಾರಣಾ ವರದಿಯನ್ನು ನಿಯಮಾನುಸಾರ ಪರಿಶೀಲಿಸಿ ವಿಚಾರಣಾ ವರದಿಗೆ ಸಂಬಂಧಿಸಿದಂತೆ ಕ್ರಮ ವಹಿಸುವುದನ್ನು ಕಾಯ್ದಿರಿಸಿ, ಸದರಿ ಅಮಾನತ್ತಿನಲ್ಲಿರುವ ಶ್ರೀ ಆರ್.ಎಂ. ಕುಲಕರ್ಣಿ, ಸಾಂಖ್ಯಿಕ ನಿರೀಕ್ಷಕರನ್ನು ಸರ್ಕಾರದ ಸೇವೆಗೆ ಪುನರ್ ಸ್ಥಾಪಿಸುವ ಕುರಿತು ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

**ಕಛೇರಿ ಆದೇಶ ಸಂಖ್ಯೆ: ಆಡಳಿತ:610:2008–09**

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳಿಂದ ಪ್ರಸ್ತುತ ಸರ್ಕಾರದ ಸೇವೆಯಿಂದ ಅಮಾನತ್ತಿನಲ್ಲಿರುವ ಈ ನಿರ್ದೇಶನಾಲಯದ ಸಾಂಖ್ಯಿಕ ನಿರೀಕ್ಷಕರ ವೃಂದದ ಶ್ರೀ ಆರ್.ಎಂ. ಕುಲಕರ್ಣಿ ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅವರ ಅಮಾನತ್ತನ್ನು ರದ್ದುಗೊಳಿಸಿ ಸರ್ಕಾರದ ಸೇವೆಯಲ್ಲಿ ಪುನರ್ ಸ್ಥಾಪಿಸಿ ಮುಂದಿನ ಆದೇಶದವರೆಗೆ ತಾಲ್ಲೂಕು ಕಛೇರಿ, ರಾಯಚೂರು, ರಾಯಚೂರು ಜಿಲ್ಲೆ, ಇಲ್ಲಿ ಖಾಲಿ ಇರುವ ಸಾಂಖ್ಯಿಕ ನಿರೀಕ್ಷಕರ ಹುದ್ದೆಗೆ ನೇಮಕಾತಿ ಮಾಡಲಾಗಿದೆ.

**ಹೆಚ್.ಇ. ರಾಜಶೇಖರಪ್ಪ**

ಪಿ.ಆರ್.222 ನಿರ್ದೇಶಕರು ಮತ್ತು ಶಿಸ್ತು ಪ್ರಾಧಿಕಾರ.

## ಜಿಲ್ಲಾಧಿಕಾರಿಯವರ ಕಾರ್ಯಾಲಯ, ಶಿವಮೊಗ್ಗ ಜಿಲ್ಲೆ

## ಅಧಿಸೂಚನೆ

**ಸಂಖ್ಯೆ: MAG(2).CR.33/08-09, ದಿನಾಂಕ:30ನೇ ಮಾರ್ಚ್, 2009**

**ವಿಷಯ:** ಸಾಗರ ಟೌನ್ ಸಾಗರ ಹೋಟೆಲ್ ವೃತ್ತದಿಂದ ಮಾರಿಗುಡಿ, ಐತಪ್ಪ ವೃತ್ತ, ವರದ ರಸ್ತೆ ಕ್ರಾಸ್, ಎಸ್.ಬಿ.ಎಂ. ರಸ್ತೆ, ಸಿಂಡಿಕೇಟ್ ಬ್ಯಾಂಕ್ ವೃತ್ತ, ಅಂಬೇಡ್ಕರ್ ವೃತ್ತ, ತಿಲಕ್ ರಸ್ತೆ, ಮಾರ್ಗವಾಗಿ ಸಾಗರ ಹೋಟೆಲ್ ವೃತ್ತದವರೆಗೆ ಏಕಮುಖ ಸಂಚಾರ ಮತ್ತು ಅದರ ವಿರುದ್ಧ ವಾಹನ ಸಂಚಾರ ನಿಷೇದ ಕುರಿತು.

**ಉಲ್ಲೇಖ:** 1) ಪೊಲೀಸ್ ಸೂಪರಿಂಟೆಂಡೆಂಟ್ ಶಿವಮೊಗ್ಗ ಇವರ ಪತ್ರದ ಸಂಖ್ಯೆ: ಹೆಚ್.ಸಿ. 650.ಡಿಸಿಆರ್‌ಬಿ.2009 ದಿನಾಂಕ:03.01.2009.

2) ಉಪವಿಭಾಗಾಧಿಕಾರಿಗಳು, ಸಾಗರ ಉಪವಿಭಾಗ, ಇವರ ಪತ್ರದ ಸಂಖ್ಯೆ: ನ್ಯಾಯಾಂಗ ವಿವ.238/08–09, ದಿನಾಂಕ:13.03.2009.

ಸಾಗರ ನಗರದ ಕಿರಿದಾದ ರಸ್ತೆಗಳಾದ ಕೆ.ಸಿ. ರಸ್ತೆ, ಎಸ್.ಬಿ.ಎಂ. ರಸ್ತೆ, ಎಸ್.ಪಿ.ಎಂ. ರಸ್ತೆಗಳಲ್ಲಿ ವಾಣಿಜ್ಯ ಮಳಿಗೆಗಳು ಹಾಗೂ ದೇವಾಲಯಗಳಿದ್ದು, ವಾಹನ ಹಾಗೂ ಸಾರ್ವಜನಿಕರ ಸಂಚಾರ ದಟ್ಟವಾಗಿದ್ದು ಸಂಚಾರ ವ್ಯವಸ್ಥೆಯಲ್ಲಿ ತೀವ್ರವಾದ ಅಡಚಣೆಯುಂಟಾಗಿರುತ್ತದೆ. ಈ ಕುರಿತಂತೆ ಸುಗಮ ಸಂಚಾರ ಕಲ್ಪಿಸುವ ಸಲುವಾಗಿ ಏಕಮುಖ ಸಂಚಾರ ವ್ಯವಸ್ಥೆ ಕಲ್ಪಿಸಲು ಉಲ್ಲೇಖ (1)ರ ಅನ್ವಯ ಪೊಲೀಸ್ ಸೂಪರಿಂಟೆಂಡೆಂಟ್ ಶಿವಮೊಗ್ಗ ಇವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆ ಕುರಿತಂತೆ ಉಲ್ಲೇಖ (2)ರ ರೀತ್ಯಾ ಉಪವಿಭಾಗಾಧಿಕಾರಿಗಳು ಸಾಗರ, ಉಪವಿಭಾಗ, ಸಾಗರ ಇವರು ಏಕಮುಖ ಸಂಚಾರ ವ್ಯವಸ್ಥೆಗೆ ಅಧಿಸೂಚನೆ ಹೊರಡಿಸಲು ಶಿಫಾರಸ್ಸು ಮಾಡಿರುತ್ತಾರೆ. ಈ ಮೇರೆಗೆ ಸಾರ್ವಜನಿಕ ಹಾಗೂ ವಾಹನ ಸಂಚಾರಕ್ಕೆ ಅಡಚಣೆ ಉಂಟಾಗದಂತೆ ಸುಗಮ ವಾಹನ ಸಂಚಾರ ವ್ಯವಸ್ಥೆ ಕಲ್ಪಿಸುವ ದೃಷ್ಟಿಯಿಂದ ಮೋಟಾರು

ವಾಹನ ಕಾಯ್ದೆ 1988 ಕಲಂ 115, 116ರ ಅನ್ವಯ ಅನುಸೂಚಿಯಲ್ಲಿ ಕಾಣಿಸಿರುವಂತೆ ಏಕಮುಖ ವಾಹನ ಸಂಚಾರ ಮಾರ್ಗವನ್ನು ಕಲ್ಪಿಸಿ ಆದೇಶ ಹೊರಡಿಸಿದೆ.

**ಅನುಸೂಚಿ**

ಸಾಗರ ಟೌನ್ ವ್ಯಾಪ್ತಿಯ ಸಾಗರ ಹೋಟೆಲ್ ವೃತ್ತದಿಂದ, ಮಾರಿಗುಡಿ-ಐತಪ್ಪ ವೃತ್ತ-ವರದ ರಸ್ತೆ ಕ್ರಾಸ್-ಎಸ್.ಬಿ.ಎಂ. ರಸ್ತೆ-ಸಿಂಡಿಕೇಟ್ ಬ್ಯಾಂಕ್ ವೃತ್ತ-ಅಂಬೇಡ್ಕರ್ ವೃತ್ತ-ತಿಲಕ್ ರಸ್ತೆ ಮಾರ್ಗವಾಗಿ ಸಾಗರ್ ಹೋಟೆಲ್ ವೃತ್ತದವರೆಗೆ ಏಕಮುಖ ಸಂಚಾರ ಮತ್ತು ಅದರ ವಿರುದ್ಧ ವಾಹನ ಸಂಚಾರ ನಿಷೇದಿಸಿದೆ.

ಜಿಲ್ಲಾ ದಂಡಾಧಿಕಾರಿ,
ಶಿವಮೊಗ್ಗ ಜಿಲ್ಲೆ.

ಪಿ.ಆರ್.408

**ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಕಾಯ್ದೆಯಡಿ ಆಯುಕ್ತರು, ಗದಗ ಜಿಲ್ಲೆ, ಗದಗ ಇವರ ನ್ಯಾಯಾಲಯದಲ್ಲಿ**

**ಸಂಖ್ಯೆ:ಕಾಅಗ/ಕಾನಪ/ಎಫ್-08/09, ದಿನಾಂಕ:13ನೇ ಫೆಬ್ರವರಿ, 2009**

| **ಅರ್ಜಿದಾರರು:** | | **ಪ್ರತಿವಾದಿಗಳು:** |
|---|---|---|
| 1) ಶ್ರೀಮತಿ ರೇಣವ್ವ ಯೆಲ್ಲಪ್ಪಮಗ್ಗದ @ ಹುಲ್ಲೂರು.<br>2) ಶ್ರೀ ನೀಲಿಪ್ಪಯಲ್ಲಪ್ಪಮಗ್ಗದ್ @ ಹುಲ್ಲೂರು.<br>3) ಶ್ರೀರಾಮಪ್ಪ ಯೆಲ್ಲಪ್ಪಮಗ್ಗದ್ @ ಹುಲ್ಲೂರು.<br>ವಾಸ: ಪೇಟಬಾನ, ಲಕ್ಷ್ಮೇಶ್ವರ, ತಾ:ಶಿರಹಟ್ಟಿ, ಗದಗ. | ವಿರುದ್ಧ | 1) ಮಹಮ್ಮದ್ ರಷೀಕ್ ಸಾಬ ತಂದೆ: ಜೈನೆಸಾಬ ನದಾಫ್, ವಾಸ: ಅಡರಗೂಚಿ, ಹುಬ್ಬಳ್ಳಿ.<br>2) ಡಿವಿಜನಲ್ ಮ್ಯಾನೇಜರ್, ದಿ ನ್ಯಾಶನಲ್ ಇನ್ಸೂರೆನ್ಸ್ ಕಂ.ಲಿ., ಸುಜಾತ ಕಾಂಪ್ಲೆಕ್ಸ್, ಹುಬ್ಬಳ್ಳಿ. |

**ಪ್ರಕಟಣೆ**

ಅರ್ಜಿದಾರರಾದ ಶ್ರೀಮತಿ ರೇಣವ್ವಯಲ್ಲಪ್ಪ ಮಗ್ಗದ್ @ ಹುಲ್ಲೂರು ಹಾಗೂ 2 ಜನ ಇತರರು ಪೇಟೆಬಾನ, ಲಕ್ಷ್ಮೇಶ್ವರ, ಗದಗ ಜಿಲ್ಲೆ, ಇವರು ತಾವು ಮೃತ ಯಲ್ಲಪ್ಪಭರಮಪ್ಪ ಮಗ್ಗದ ಇವರ ಹೆಂಡತಿ ಮತ್ತು ಮಕ್ಕಳು ಎಂದೂ, ಅವರ ಮರಣದಿಂದ ನಷ್ಟಪರಿಹಾರ ಕೋರಿ ಈ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಮೃತ ಯಲ್ಲಪ್ಪಭರಮಪ್ಪ ಮಗ್ಗದ ಇವರು ಒಂದನೇ ಪ್ರತಿವಾದಿಗಳಾದ ಮಹಮ್ಮದ್ ರಫೀಕ್ ಸಾಬ ತಂದೆ ಜೈನೆಸಾಬ್ ನದಾಫ್, ಹುಬ್ಬಳ್ಳಿ ಇವರಲ್ಲಿ ಹಮಾಲಿ ಆಗಿ ಕೆಲಸ ನಿರ್ವಹಿಸುತ್ತಿದ್ದಾಗ ಸಂಭವಿಸಿದ ಅಪಘಾತದಲ್ಲಿ ಮರಣ ಹೊಂದಿದರೆಂದು ಸದರಿ ಅರ್ಜಿದಾರರು ತಿಳಿಸಿರುತ್ತಾರೆ. ಈ ಸಂಬಂಧವಾಗಿ ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ತಿಳಿಸುವುದೇನೆಂದರೆ. ಈ ಬಗ್ಗೆ ಏನಾದರೂ ಆಕ್ಷೇಪಣೆಗಳಾಗಲೀ ಅಥವಾ ಬೇರೆ ಯಾರಾದರೂ ಮೃತರ ಕಾನೂನುಬದ್ಧ ಆಶ್ರಿತರೆಂದು ಪರಿಗಣಿಸಬೇಕೆಂದು ಪ್ರಾರ್ಥಿಸುವುದಾದರೆ, ಅಂತಹವರು ಈ ಪ್ರಕಟಣೆಯನ್ನು ಈ ನ್ಯಾಯಾಲಯದ ನಾಮಫಲಕದಲ್ಲಿ ಪ್ರಕಟಿಸಿದ 30 ದಿನಗಳೊಳಗಾಗಿ ಆಕ್ಷೇಪಣೆಗಳನ್ನಾಗಲೀ ಅಥವಾ ಅರ್ಜಿಯನ್ನಾಗಲೀ ಈ ನ್ಯಾಯಾಲಯದಲ್ಲಿ ಸಲ್ಲಿಸತಕ್ಕದ್ದು. ಅವಧಿ ಮೀರಿ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

**ಎಂ.ಬಿ. ಅನ್ಸಾರಿ**
ಕಾರ್ಮಿಕ ಅಧಿಕಾರಿ ಗದಗ ಜಿಲ್ಲೆ ಗದಗ ಹಾಗೂ
ಕಾರ್ಮಿಕ ನಷ್ಟ ಪರಿಹಾರ ಕಾನೂನು ಅಡಿ ಆಯುಕ್ತರು.

ಪಿ.ಆರ್.198

**IN THE COURT OF COMMISSIONER FOR WORKMEN'S COMPENSATION BIDAR**

**No.LOB/WCA/Cr-F6/2009**

| **Applicants:** | | **Respondents:** |
|---|---|---|
| 1) Reshama W/o Neharu Kallare, Age:22 years/ Occ: House hold R/o Village Katti Tagaon Tq: Bhalki Dist:Bidar. & 4 Others. | **V/s** | 1) Sushila bai W/o Gurbasappa Bashetty, Age: 59 occu: Tractor own KA-39/T-1476.<br>2) United India Insurance Co.,Ltd., Gulbarga.<br>3) United India Insurance Co.Ltd., Bidar. |

**PROCLAIMATION**

Smt. Reshama W/o Late Neharu Kallare R/o Village Katti Tugaon Tq: Bhalki Dist: Bidar, have/has filed application in this court claiming compensation stating that Late: Nehara was working as Driver

Under the Respondent No I he met with an accident arising out of and during the course of employment as a result he died on 11.01.2009.

Wherefore, it is hereby notified for the information of these concerned that other dependents if any may file their claim application and objections within 30 days from the date of publication of this proclaimation, if no applications on objections are received within the specified date the court will proceeded further in the matter.

Commissioner For Workmen's
Compensation, Bidar.

PR-220

**ಕಾರ್ಮಿಕ ಅಧಿಕಾರಿ ವ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ,**
**ಉಪವಿಭಾಗ-2, ಬಿಜಾಪುರ ಜಿಲ್ಲೆ, ಬಿಜಾಪುರ**
**ಪ್ರಕರಣ ಸಂಖ್ಯೆ:ಡಬ್ಲ್ಯೂಸಿಎ:ಮರಣಪ್ರ:ಎಸ್ಆರ್-27:2009, ದಿನಾಂಕ:4ನೇ ಮಾರ್ಚ್, 2009**

**ಅರ್ಜಿದಾರರು:**
ಶ್ರೀ ಬಾಶಾಸಾಬ ತಂದೆ ಸಾಹೇಬಹುಸೇನಿ ಯರನಾಳ, ಮತ್ತು ಇತರರು ಸಾ: ಟಕ್ಕಳಕಿ, ತಾ: ಬಸವನ ಬಾಗೇವಾಡಿ, ಜಿಲ್ಲೆ: ಬಿಜಾಪುರ.

**ವಿರುದ್ಧ**

**ಪ್ರತಿವಾದಿಗಳು:**
1) ಶ್ರೀ ಮಲ್ಲಿಕಾರ್ಜುನ ತಂದೆ ಗುರುಪ್ಪ ಪ್ಯಾಟಿ, ಸಾ: ಮಸಬಿನಾಳ, ತಾ: ಬಸವನ ಬಾಗೇವಾಡಿ, ಜಿಲ್ಲೆ: ಬಿಜಾಪುರ.
2) ಬ್ರ್ಯಾಂಚ್ ಮ್ಯಾನೇಜರ್, ಚೋಲಮಂಡಲಂ ಎಂ ಎಸ್. ಜನರಲ್ ಇನ್ಶೂರೆನ್ಸ್ ಕಂ.ಲಿ., ಬಳ್ಳಾರಿ.

**ಪ್ರಕಟಣೆ**

ಮೇಲ್ಕಾಣಿಸಿದ ಅರ್ಜಿದಾರರು ಈ ನ್ಯಾಯಾಲಯದಲ್ಲಿ ಅರ್ಜಿಯೊಂದನ್ನು ಸಲ್ಲಿಸಿ, ಶ್ರೀ ಜಾವೀದ ಅಹ್ಮದ ಇವರು ಪ್ರತಿವಾದಿಗಳ ಬಳಿ ಕೆಲಸ ನಿರ್ವಹಿಸುವಾಗ ಮತ್ತು ಕೆಲಸದ ಪರಿಣಾಮದಿಂದಾಗಿ ದಿನಾಂಕ:16.01.2009 ರಂದು ಅಪಘಾತಕ್ಕೀಡಾಗಿ ಮೃತನಾಗಿರುತ್ತಾನೆಂದು, ಅಲ್ಲದೇ ತಾವು ಮೃತರ ಅವಲಂಬಿತರಾಗಿರುವುದರಿಂದ ಕಾಯ್ದೆಯನ್ವಯ ತಮಗೆ ಬರಬೇಕಾದ ಪರಿಹಾರದ ಹಣವನ್ನು ಪ್ರತಿವಾದಿಗಳಿಂದ ಕೊಡಿಸಿಕೊಡಬೇಕೆಂದು ವಿನಂತಿಸಿರುತ್ತಾರೆ.

ಆದ್ದರಿಂದ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಸುವುದೇನೆಂದರೆ, ಈ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದರೆ, ಹಾಗೂ ಅರ್ಜಿದಾರರಲ್ಲದೇ ತಾವೇನಾದರೂ ಮೃತರ ನಿಜವಾದ ಅವಲಂಬಿತರು ಎಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೇ, ಅಂಥವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿನಗಳೊಳಗಾಗಿ ತಮ್ಮಪರ ಆಕ್ಷೇಪಣೆಯಾಗಲೀ ಅಥವಾ ಅರ್ಜಿಯಾಗಲೀ ಈ ನ್ಯಾಯಾಲಯದಲ್ಲಿ ಸಲ್ಲಿಸಬೇಕು. ಹಾಗೂ ನಿಗದಿಪಡಿಸಿದ ಅವಧಿಯಲ್ಲಿ ಯಾರಿಂದಲೂ ಆಕ್ಷೇಪಣೆ ಹಾಗೂ ಅರ್ಜಿಗಳು ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಕ್ಲೈಮ್ ಅರ್ಜಿಯ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುವುದು. ತದನಂತರ ಬಂದ ಅರ್ಜಿಗಳನ್ನು ಮತ್ತು ಆಕ್ಷೇಪಣೆಗಳನ್ನು ಸ್ವೀಕರಿಸಲಾಗುವುದಿಲ್ಲ.

**ಜಿ. ಸಿದ್ಧಲಿಂಗಪ್ಪ ಆಲೂರು**
ಕಾರ್ಮಿಕ ಪರಿಹಾರ ಆಯುಕ್ತರು,
ಉಪವಿಭಾಗ-2, ಬಿಜಾಪುರ ಜಿಲ್ಲೆ, ಬಿಜಾಪುರ.

**ಕಾರ್ಮಿಕ ಅಧಿಕಾರಿ ವ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ,**
**ಉಪವಿಭಾಗ-2, ಬಿಜಾಪುರ ಜಿಲ್ಲೆ, ಬಿಜಾಪುರ**
**ಪ್ರಕರಣ ಸಂಖ್ಯೆ:ಡಬ್ಲ್ಯೂಸಿಎ:ಮರಣಪ್ರ:ಎಸ್ಆರ್-22:2009, ದಿನಾಂಕ:2ನೇ ಮಾರ್ಚ್, 2009**

**ಅರ್ಜಿದಾರರು:**
ಶ್ರೀ ಭಾರತ ತಂದೆ ರಾಮರಾಜ ಜಾಧವ, ಮತ್ತು ಇನ್ನೊಬ್ಬರು, ಸಾ: ಬಿಜಾಪುರ.

**ವಿರುದ್ಧ**

**ಪ್ರತಿವಾದಿಗಳು:**
1) ರೂಬಿ ಕ್ರೆನ್ಸ್, ಸಾಯಿ ಉದ್ಯಾನ, ಪ್ಲಾಟ್ ನಂ.15, ಸೆಕ್ಷನ್, ನಂ.17, ವಾಶಿ, ನವಿ ಮುಂಬೈ-ಥಾನೆ.
2) ದಿ ಬ್ರ್ಯಾಂಚ್ ಮ್ಯಾನೇಜರ್, ಬಜಾಜ್ ಅಲಿಯಾಂಜ್ ಜನರಲ್ ಇನ್ಶೂರೆನ್ಸ್ ಕಂ.ಲಿ., ಮುಂಬೈ.

**ಪ್ರಕಟಣೆ**

ಮೇಲ್ಕಾಣಿಸಿದ ಅರ್ಜಿದಾರರು ಈ ನ್ಯಾಯಾಲಯದಲ್ಲಿ ಅರ್ಜಿಯೊಂದನ್ನು ಸಲ್ಲಿಸಿ, ಶ್ರೀ ನೀತಿನ ತಂದೆ ಭಾರತ ಜಾಧವ ಇವರು ಪ್ರತಿವಾದಿಗಳ ಬಳಿ ಕೆಲಸ ನಿರ್ವಹಿಸುವಾಗ ಮತ್ತು ಕೆಲಸದ ಪರಿಣಾಮದಿಂದಾಗಿ ದಿನಾಂಕ:22.12.2008 ರಂದು ಅಪಘಾತಕ್ಕೀಡಾಗಿ ಮೃತನಾಗಿರುತ್ತಾನೆಂದು, ಅಲ್ಲದೇ ತಾವು ಮೃತರ ಅವಲಂಬಿತರಾಗಿರುವುದರಿಂದ ಕಾಯ್ದೆಯನ್ವಯ ತಮಗೆ ಬರಬೇಕಾದ ಪರಿಹಾರದ ಹಣವನ್ನು ಪ್ರತಿವಾದಿಗಳಿಂದ ಕೊಡಿಸಿಕೊಡಬೇಕೆಂದು ವಿನಂತಿಸಿರುತ್ತಾರೆ.

ಆದ್ದರಿಂದ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಸುವುದೇನೆಂದರೆ, ಈ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದರೆ, ಹಾಗೂ ಅರ್ಜಿದಾರರಲ್ಲದೇ ತಾವೇನಾದರೂ ಮೃತರ ನಿಜವಾದ ಅವಲಂಬಿತರು ಎಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೇ, ಅಂಥವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿನಗಳೊಳಗಾಗಿ ತಮ್ಮಪರ ಆಕ್ಷೇಪಣೆಯಾಗಲೀ ಅಥವಾ ಅರ್ಜಿಯಾಗಲೀ ಈ ನ್ಯಾಯಾಲಯದಲ್ಲಿ ಸಲ್ಲಿಸಬೇಕು. ಹಾಗೂ ನಿಗದಿಪಡಿಸಿದ ಅವಧಿಯಲ್ಲಿ ಯಾರಿಂದಲೂ ಆಕ್ಷೇಪಣೆ ಹಾಗೂ ಅರ್ಜಿಗಳು ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಕ್ಲೈಮ್ ಅರ್ಜಿಯ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುವುದು. ತದನಂತರ ಬಂದ ಅರ್ಜಿಗಳನ್ನು ಮತ್ತು ಆಕ್ಷೇಪಣೆಗಳನ್ನು ಸ್ವೀಕರಿಸಲಾಗುವುದಿಲ್ಲ.

**ಜಿ. ಸಿದ್ಧಲಿಂಗಪ್ಪ ಆಲೂರು**
ಕಾರ್ಮಿಕ ಪರಿಹಾರ ಆಯುಕ್ತರು,
ಉಪವಿಭಾಗ-2, ಬಿಜಾಪುರ ಜಿಲ್ಲೆ, ಬಿಜಾಪುರ.

**ಕಾರ್ಮಿಕ ಅಧಿಕಾರಿ ವ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ,**
**ಉಪವಿಭಾಗ-2, ಬಿಜಾಪುರ ಜಿಲ್ಲೆ, ಬಿಜಾಪುರ**
**ಪ್ರಕರಣ ಸಂಖ್ಯೆ:ಡಬ್ಲ್ಯೂಸಿಎ:ಮರಣಪ್ರ:ಎಸ್‌ಆರ್-21:2009, ದಿನಾಂಕ:26ನೇ ಫೆಬ್ರವರಿ, 2009**

**ಅರ್ಜಿದಾರರು:**
ಶ್ರೀಮತಿ ಕಮಲಾಬಾಯಿ ಕೋಂ ರುದ್ರಪ್ಪ, ಡೋಮನಾಳ, ಮತ್ತು ಇತರರು, ಸಾ: ಮಿಣಜಗಿ, ತಾ: ಮುದ್ದೇಬಿಹಾಳ, ಜಿಲ್ಲೆ: ಬಿಜಾಪುರ.

**ವಿರುದ್ಧ**

**ಪ್ರತಿವಾದಿಗಳು:**
1) ಶ್ರೀ ರುದ್ರಪ್ಪ ತಂದೆ ಬಸಪ್ಪ ಡೋಮನಾಳ ಸಾ: ಮಿಣಜಗಿ, ತಾ:ಮುದ್ದೇಬಿಹಾಳ, ಜಿಲ್ಲೆ: ಬಿಜಾಪುರ.
2) ದಿ ಬ್ರ್ಯಾಂಚ್ ಮ್ಯಾನೇಜರ್ ರಿಲಾಯನ್ಸ್ ಜನರಲ್ ಇನ್ಶೂರೆನ್ಸ್ ಕಂ.ಲಿ., ಹುಬ್ಬಳ್ಳಿ.

**ಪ್ರಕಟಣೆ**

ಮೇಲ್ಕಾಣಿಸಿದ ಅರ್ಜಿದಾರರು ಈ ನ್ಯಾಯಾಲಯದಲ್ಲಿ ಅರ್ಜಿಯೊಂದನ್ನು ಸಲ್ಲಿಸಿ, ಶ್ರೀ ರಾಜು ತಂದೆ ರುದ್ರಪ್ಪ ಡೋಮನಾಳ ಇವರು ಪ್ರತಿವಾದಿಗಳ ಬಳಿ ಕೆಲಸ ನಿರ್ವಹಿಸುವಾಗ ಮತ್ತು ಕೆಲಸದ ಪರಿಣಾಮದಿಂದಾಗಿ ದಿನಾಂಕ: 21.02.2009 ರಂದು ಅಪಘಾತಕ್ಕೀಡಾಗಿ ಮೃತನಾಗಿರುತ್ತಾನೆಂದು, ಅಲ್ಲದೇ ತಾವು ಮೃತರ ಅವಲಂಬಿತರಾಗಿರುವುದರಿಂದ ಕಾಯ್ದೆಯನ್ವಯ ತಮಗೆ ಬರಬೇಕಾದ ಪರಿಹಾರದ ಹಣವನ್ನು ಪ್ರತಿವಾದಿಗಳಿಂದ ಕೊಡಿಸಿಕೊಡಬೇಕೆಂದು ವಿನಂತಿಸಿರುತ್ತಾರೆ.

ಆದ್ದರಿಂದ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಸುವುದೇನೆಂದರೆ, ಈ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದರೆ, ಹಾಗೂ ಅರ್ಜಿದಾರರಲ್ಲದೇ ತಾವೇನಾದರೂ ಮೃತರ ನಿಜವಾದ ಅವಲಂಬಿತರು ಎಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೇ, ಅಂಥವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿನಗಳೊಳಗಾಗಿ ತಮ್ಮಪರ ಆಕ್ಷೇಪಣೆಯಾಗಲೀ ಅಥವಾ ಅರ್ಜಿಯಾಗಲೀ ಈ ನ್ಯಾಯಾಲಯದಲ್ಲಿ ಸಲ್ಲಿಸಬೇಕು. ಹಾಗೂ ನಿಗದಿಪಡಿಸಿದ ಅವಧಿಯಲ್ಲಿ ಯಾರಿಂದಲೂ ಆಕ್ಷೇಪಣೆ ಹಾಗೂ ಅರ್ಜಿಗಳು ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಕ್ಲೈಮ್ ಅರ್ಜಿಯ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುವುದು. ತದನಂತರ ಬಂದ ಅರ್ಜಿಗಳನ್ನು ಮತ್ತು ಆಕ್ಷೇಪಣೆಗಳನ್ನು ಸ್ವೀಕರಿಸಲಾಗುವುದಿಲ್ಲ.

**ಜಿ. ಸಿದ್ಧಲಿಂಗಪ್ಪ ಆಲೂರು**
ಕಾರ್ಮಿಕ ಪರಿಹಾರ ಆಯುಕ್ತರು,
ಉಪವಿಭಾಗ-2, ಬಿಜಾಪುರ ಜಿಲ್ಲೆ, ಬಿಜಾಪುರ.

ಪಿ.ಆರ್.223

**ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕರ ನಷ್ಟ ಪರಿಹಾರ ಆಯುಕ್ತರವರ ನ್ಯಾಯಾಲಯ, ದಾವಣಗೆರೆ ಜಿಲ್ಲೆ, ದಾವಣಗೆರೆ**
**ಪ್ರಕರಣ ಸಂಖ್ಯೆ:ಕಾಅದಾ:ಕಾನಪ:ಸಿಆರ್-01:2009, ದಿನಾಂಕ:11ನೇ ಫೆಬ್ರವರಿ, 2009**

**ಅರ್ಜಿದಾರರು:**
ಶಿಲ್ಪಶ್ರೀ ಕೋಂ ಲೇಟ್ ಎಂ. ಕೃಷ್ಣಮೂರ್ತಿ, ಮುತ್ತತ್ತಿ ನಿಲಯ ಬಿಬಿಎಂ ಕಾಲೇಜ್ ಹಿಂಭಾಗ, ವಿದ್ಯಾನಗರ, ಶಿವಮೊಗ್ಗ.

**ವಿರುದ್ಧ**

**ಪ್ರತಿವಾದಿಗಳು:**
ಬೆಂಗಳೂರು ವಿದ್ಯುತ್ ಸರಬರಾಜು ಕಂ.ನಿಯಮಿತ ಕಾರ್ಯನಿರ್ವಾಹಕ ಎಂಜಿನಿಯರ್(ವಿ) ಕಾರ್ಯ ಮತ್ತು ಪಾಲನಾ ವಿಭಾಗ, ಜೆ.ವಿ.ಕಂ. ಹರಿಹರ.

**ಪ್ರಕಟಣೆ**

ಶ್ರೀ:ಶ್ರೀಮತಿ ಶಿಲ್ಪಶ್ರೀ ಕೋಂ ಲೇಟ್ ಎಂ. ಕೃಷ್ಣಮೂರ್ತಿ ಇವರುಗಳಾದ ತಾವು ಮೃತ ಎಂ.ಕೃಷ್ಣಮೂರ್ತಿ ಇವರ ಹೆಂಡತಿ ಮತ್ತು ಎಂದೂ, ಅವರ ಸಾವಿಗಾಗಿ ನಷ್ಟ ಪರಿಹಾರ ಕೋರಿ ಈ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಮೃತ ಎಂ.ಕೃಷ್ಣಮೂರ್ತಿ ರವರು ಒಂದನೇ ಪ್ರತಿವಾದಿಗಳಾದ ಬೆಂಗಳೂರು ವಿದ್ಯುತ್ ಸರಬರಾಜು ಕಂ.ನಿ., ಹರಿಹರ ಇವರಲ್ಲಿ ಜೂನಿಯರ್ ಲೈನ್‌ಮನ್ ಆಗಿ ಕೆಲಸ ನಿರ್ವಹಿಸುತ್ತಿದ್ದಾಗ ಸಂಭವಿಸಿದ ಅಪಘಾತದಲ್ಲಿ ಮರಣ ಹೊಂದಿದರೆಂದು ಸದರಿ

ಅರ್ಜಿದಾರರು ತಿಳಿಸಿರುತ್ತಾರೆ. ಈ ಸಂಬಂಧವಾಗಿ ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ತಿಳಿಸುವುದೇನೆಂದರೆ ಈ ಬಗ್ಗೆ ಏನಾದರೂ ಆಕ್ಷೇಪಣೆಗಳಾಗಲೀ ಅಥವಾ ಬೇರೆ ಯಾರಾದರೂ ಮೃತರ ಶಾಸನಬದ್ಧ ವಾರಸುದಾರರು ಎಂದು ಪರಿಗಣಿಸಬೇಕೆಂದು ಪ್ರಾರ್ಥಿಸುವುದಾದರೇ, ಅಂತಹವರು ಪ್ರಕಟಣೆಯು ಈ ನ್ಯಾಯಾಲಯದ ನಾಮಫಲಕದಲ್ಲಿ ಪ್ರಕಟಿಸಿದ 30 ದಿನಗಳೊಳಗಾಗಿ ಅಂತಹ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಯನ್ನಾಗಲೀ ಈ ನ್ಯಾಯಾಲಯದಲ್ಲಿ ಸಲ್ಲಿಸತಕ್ಕದ್ದು. ಅವಧಿ ಮೀರಿ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

ಕಾರ್ಮಿಕ ಅಧಿಕಾರಿ ಮತ್ತು ಆಯುಕ್ತರು
ಕಾರ್ಮಿಕ ನಷ್ಟ ಪರಿಹಾರ,
ದಾವಣಗೆರೆ ಜಿಲ್ಲೆ, ದಾವಣಗೆರೆ.

**ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕರ ನಷ್ಟ ಪರಿಹಾರ ಆಯುಕ್ತರವರ ನ್ಯಾಯಾಲಯ, ದಾವಣಗೆರೆ ಜಿಲ್ಲೆ, ದಾವಣಗೆರೆ**
**ಪ್ರಕರಣ ಸಂಖ್ಯೆ:ಕಾಅದಾ:ಕಾನಪ:ಸಿಆರ್-258:08, ದಿನಾಂಕ:23ನೇ ಜನವರಿ, 2009**

**ಅರ್ಜಿದಾರರು:**

1) ಅಬ್ದುಲ್ ಘನಿಸಾಬ್ ಬಿನ್ ಬಿ. ನಭೀಸಾಬ್, 58 ವರ್ಷ.
2) ರಮಿಜಾಬೀ ಕೋಂ ಅಬ್ದುಲ್ ಘನಿಸಾಬ್, 55 ವರ್ಷ.
3) ಶಬೀನಾ ಬಾನು ಬಿನ್ ಅಬ್ದುಲ್ ಘನಿಸಾಬ್, 25 ವರ್ಷ.
ಗೋಪಗೊಂಡನಹಳ್ಳಿ ಗ್ರಾಮ, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ.

**ವಿರುದ್ಧ**

**ಪ್ರತಿವಾದಿಗಳು:**

1) ಸಿ. ಮಹ್ಮದ್ ನೂರುಲ್ಲಾ ಬಿನ್ ಅಬ್ದುಲ್ ಜಬ್ಬರ್ ಸಾಬ್, ಲಾರಿ ಮಾಲೀಕರು ನಂ.ಕೆಎ-14-6564, ಹೌಸಿಂಗ್ ಬೋರ್ಡ್ ಕಾಲೋನಿ, ಹೊಳಲ್ಕೆರೆ ರಸ್ತೆ, ಚಿತ್ರದುರ್ಗ.
2) ದಿ ಮ್ಯಾನೇಜರ್, ಬಜಾಜ್ ಅಲಿಯಾಂಜ್ ಜನರಲ್ ಇನ್ಸೂರೆನ್ಸ್ ಕಂ.ಲಿ., ನಂ.105(ಎ) 1ನೇ ಪ್ಲೋರ್, ಸಿಜಿಯರ್ಸ್ ಪ್ಲಾಜಾ, 136, ರೆಸಿಡೆನ್ಸಿ ರೋಡ್, ಬೆಂಗಳೂರು.

**ಪ್ರಕಟಣೆ**

ಶ್ರೀ ಅಬ್ದುಲ್ ಘನಿಸಾಬ್ ರಮ್ಮಿಜಾಭೀ ಮತ್ತು ಶಭೀನಾ ಬಾನು ಇವರುಗಳಾದ ನಾವು ಮೃತ ಸುಬಾನ್ ಉಲ್ಲಾ ಇವರ ತಂದೆ, ತಾಯಿ ಮತ್ತು ಸಹೋದರಿ ಎಂದೂ, ಅವರ ಸಾವಿಗಾಗಿ ನಷ್ಟ ಪರಿಹಾರ ಕೋರಿ ಈ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಮೃತ ಸುಬಾನ್ ಉಲ್ಲಾ ರವರು ಒಂದನೇ ಪ್ರತಿವಾದಿಗಳಾದ ಸಿ. ಮೊಹ್ಮದ್ ನೂರುಲ್ಲಾ ಇವರ ಲಾರಿಯಲ್ಲಿ ಕ್ಲೀನರ್ ಆಗಿ ಕೆಲಸ ನಿರ್ವಹಿಸುತ್ತಿದ್ದಾಗ ಸಂಭವಿಸಿದ ಅಪಘಾತದಲ್ಲಿ ಮರಣ ಹೊಂದಿದರೆಂದು ಸದರಿ ಅರ್ಜಿದಾರರು ತಿಳಿಸಿರುತ್ತಾರೆ. ಈ ಸಂಬಂಧವಾಗಿ ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ತಿಳಿಸುವುದೇನೆಂದರೆ ಈ ಬಗ್ಗೆ ಏನಾದರೂ ಆಕ್ಷೇಪಣೆಗಳಾಗಲೀ ಅಥವಾ ಬೇರೆ ಯಾರಾದರೂ ಮೃತರ ಶಾಸನಬದ್ಧ ವಾರಸುದಾರರು ಎಂದು ಪರಿಗಣಿಸಬೇಕೆಂದು ಪ್ರಾರ್ಥಿಸುವುದಾದರೇ, ಅಂತಹವರು ಪ್ರಕಟಣೆಯು ಈ ನ್ಯಾಯಾಲಯದ ನಾಮಫಲಕದಲ್ಲಿ ಪ್ರಕಟಿಸಿದ 30 ದಿನಗಳೊಳಗಾಗಿ ಅಂತಹ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಯನ್ನಾಗಲೀ ಈ ನ್ಯಾಯಾಲಯದಲ್ಲಿ ಸಲ್ಲಿಸತಕ್ಕದ್ದು. ಅವಧಿ ಮೀರಿ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

ಕಾರ್ಮಿಕ ಅಧಿಕಾರಿ ಮತ್ತು ಆಯುಕ್ತರು
ಕಾರ್ಮಿಕ ನಷ್ಟ ಪರಿಹಾರ,
ದಾವಣಗೆರೆ ಜಿಲ್ಲೆ, ದಾವಣಗೆರೆ.

**ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕರ ನಷ್ಟ ಪರಿಹಾರ ಆಯುಕ್ತರವರ ನ್ಯಾಯಾಲಯ, ದಾವಣಗೆರೆ ಜಿಲ್ಲೆ, ದಾವಣಗೆರೆ**
**ಪ್ರಕರಣ ಸಂಖ್ಯೆ:ಕಾಅದಾ:ಕಾನಪ:ಸಿಆರ್-237:08, ದಿನಾಂಕ:30ನೇ ಡಿಸೆಂಬರ್, 2008**

**ಅರ್ಜಿದಾರರು:**

1) ಶ್ರೀಮತಿ ಕೊಟ್ರಮ್ಮ ಕೋಂ ಲೇಟ್ ಲೋಕಪ್ಪ
2) ಕು: ಕರಿಯಮ್ಮ ಬಿನ್ ಲೇಟ್ ಲೋಕಪ್ಪ, 8 ವರ್ಷ.
3) ಕು: ಪೂಜಾ ಬಿನ್ ಲೇಟ್ ಲೋಕಪ್ಪ, 6 ವರ್ಷ.
4) ಕು: ಸಹನಾ ಬಿನ್ ಲೇಟ್ ಲೋಕಪ್ಪ, 4 ವರ್ಷ.
5) ಬಡಮ್ಮನವ ಹನುಮಪ್ಪ ಬಿನ್ ಲೇಟ್ ಹನುಮಪ್ಪ 60 ವರ್ಷ. ಬಾಗಳಿ ಗ್ರಾಮ, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ.

**ವಿರುದ್ಧ**

**ಪ್ರತಿವಾದಿಗಳು:**

1) ಬಿ.ಹೆಚ್. ಹನುಮಂತಪ್ಪ ಬಿನ್ ಕರಿಯಪ್ಪ ಬಿ.ಹೆಚ್. ಮ್ಯಾಕ್ಸಿಕ್ಯಾಬ್ ಮಾಲೀಕರು ನಂ. ಕೆಎ-27/3720 ಬಾಗಳಿ ಗ್ರಾಮ, ಹರಪನಹಳ್ಳಿ ತಾಲ್ಲೂಕು.
2) ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂ.ಲಿ., ನರಸರಾಜ ರಸ್ತೆ, ದಾವಣಗೆರೆ.

**ಪ್ರಕಟಣೆ**

ಶ್ರೀಮತಿ ಕೊಟ್ರಮ್ಮ, ಕರಿಯಮ್ಮ, ಪೂಜಾ, ಸಹನಾ, ಬಡಮ್ಮನವರ ಹನುಮಪ್ಪ ಇವರುಗಳಾದ ನಾವು ಮೃತ ಲೋಕಪ್ಪ ಇವರ ಹೆಂಡತಿ, ಮಕ್ಕಳು ಮತ್ತು ತಂದೆ ಎಂದೂ, ಅವರ ಸಾವಿಗಾಗಿ ನಷ್ಟ ಪರಿಹಾರ ಕೋರಿ ಈ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಮೃತ ಲೋಕಪ್ಪ ರವರು ಒಂದನೇ ಪ್ರತಿವಾದಿಗಳಾದ ಬಿ.ಹೆಚ್. ಹನುಮಂತಪ್ಪ ಇವರ ಮ್ಯಾಕ್ಸಿಕ್ಯಾಬ್ ರಲ್ಲಿ ಚಾಲಕನಾಗಿ ಕೆಲಸ ನಿರ್ವಹಿಸುತ್ತಿದ್ದಾಗ ಸಂಭವಿಸಿದ ಅಪಘಾತದಲ್ಲಿ ಮರಣ ಹೊಂದಿದರೆಂದು ಸದರಿ ಅರ್ಜಿದಾರರು ತಿಳಿಸಿರುತ್ತಾರೆ. ಈ ಸಂಬಂಧವಾಗಿ ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ತಿಳಿಸುವುದೇನೆಂದರೆ ಈ ಬಗ್ಗೆ ಏನಾದರೂ ಆಕ್ಷೇಪಣೆಗಳಾಗಲೀ ಅಥವಾ ಬೇರೆ ಯಾರಾದರೂ ಮೃತರ ಶಾಸನಬದ್ಧ ವಾರಸುದಾರರು ಎಂದು ಪರಿಗಣಿಸಬೇಕೆಂದು ಪ್ರಾರ್ಥಿಸುವುದಾದರೇ, ಅಂತಹವರು ಪ್ರಕಟಣೆಯು ಈ ನ್ಯಾಯಾಲಯದ ನಾಮಫಲಕದಲ್ಲಿ ಪ್ರಕಟಿಸಿದ 30 ದಿನಗಳೊಳಗಾಗಿ ಅಂತಹ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಯನ್ನಾಗಲೀ ಈ ನ್ಯಾಯಾಲಯದಲ್ಲಿ ಸಲ್ಲಿಸತಕ್ಕದ್ದು. ಅವಧಿ ಮೀರಿ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

ಕಾರ್ಮಿಕ ಅಧಿಕಾರಿ ಮತ್ತು ಆಯುಕ್ತರು
ಕಾರ್ಮಿಕ ನಷ್ಟ ಪರಿಹಾರ,
ದಾವಣಗೆರೆ ಜಿಲ್ಲೆ, ದಾವಣಗೆರೆ.

ಪಿ.ಆರ್.224

**IN THE COURT OF COMMISSIONER FOR WORKMEN'S COMPENSATION BIDAR**

**No.LOB/WCA/Cr-F7/2009**

**Applicants:**

1) Arjun S/o Mallappa, Jamadar, Age about 60 yers, Occ: Agr. R/o Nandgaon Tq: Humnabad, Dist: Bidar & One Other.

**V/s**

**Respondents:**

1) Md. Salahuddin S/o Md. Nooruddin, Age:40 yrs. Occ: Business, R/o Shop No.3 & 4-A-17 O.I.E. Balnagar, Distri. Ranga reddy (A.P.)

2) National Insurance Co.Ltd.,Gulbarga.

**PROCLAIMATION**

Sri Arjun W/o.F/o.S/o. Sanjev R/o Nandgaon Tq: Humnabad, Dist: Bidar, have/has filed application in this court claiming compensation stating that Late: Sanjev was working as Driver Under the Respondent No I he met with an accident arising out of and during the course of employment as a result he died on 12.06.2008.

Wherefore, it is hereby notified for the information of these concerned that other dependents if any may file their claim application and objections within 30 days from the date of publication of this proclaimation, if no applications on objections are received within the specified date the court will proceeded further in the matter.

Commissioner For Workmen's
Compensation, Bidar.

PR-235

**ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಹಾಸನ ಉಪವಿಭಾಗ, ಹಾಸನ**

**ಸಂಖ್ಯೆ:ಕಾನಪ:ಎಫ್:ಎಸ್‌ಆರ್-06:2009, ದಿನಾಂಕ:2ನೇ ಮಾರ್ಚ್, 2009**

**ಅರ್ಜಿದಾರರು:**

1) ಕಮಲಮ್ಮ ಬಿನ್ ಲೇಟ್ ತಿಮ್ಮೇಗೌಡ, ಗಾಯತ್ರಿ ಬಡಾವಣೆ, ಚನ್ನರಾಯಪಟ್ಟಣ.

2) ಲಕ್ಷ್ಮಮ್ಮ ಕೋಂ ಲೇಟ್ ಕಾಳೇಗೌಡ, ಕಾರ್ಲೆ ಗ್ರಾಮ, ಕಟ್ಟಾಯ ಹೋಬಳಿ, ಹಾಸನ ತಾಲ್ಲೂಕು.

**ವಿರುದ್ಧ**

**ಪ್ರತಿವಾದಿಗಳು:**

1) ಹೆಚ್.ಎಂ. ಪ್ರಕಾಶ ಬಿನ್ ಮೊಗಣ್ಣಗೌಡ, ಹರದೂರಗ್ರಾಮ, ಗಂಜಲಗೂಡು ಅಂಚೆ, ಅರಕಲಗೂಡು ತಾ:

2) ದಿ ರಿಲೆಯನ್ಸ್ ಜನರಲ್ ಇನ್‌ಶೂರೆನ್ಸ್ ಕಂ.ಲಿ., ಹಾಸನ.

**ಪ್ರಕಟಣೆ**

ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೃತ ತಿಮ್ಮೇಗೌಡ ರವರು ಪ್ರತಿವಾದಿಯಲ್ಲಿ ಕೆಲಸದ ಮೇಲಿದ್ದಾಗ ದಿನಾಂಕ:06.09.2008 ರಂದು ಸಾವನ್ನಪ್ಪಿರುತ್ತಾರೆ ಎಂದು ಕಾರ್ಮಿಕ ನಷ್ಟ ಪರಿಹಾರವನ್ನು ಕೋರಿ ಮೇಲ್ಕಂಡ ಮೃತರ ಅವಲಂಬಿತರು ಈ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ತಿಳಿಯಪಡಿಸುವುದೇನೆಂದರೆ, ಈ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದರೆ ಅಥವಾ ತಾವೇನಾದರೂ ಮೃತರ ನಿಜವಾದ ವಾರಸುದಾರರೆಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೆ ಅಂತಹವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿನಗಳೊಳಗಾಗಿ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಯನ್ನಾಗಲೀ ಈ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದು, ಮೇಲೆ ನಿಗದಿಪಡಿಸಿರುವ ಅವಧಿಯಲ್ಲಿ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಯನ್ನಾಗಲೀ ಈ ನ್ಯಾಯಾಲಯಕ್ಕೆ ಸಲ್ಲಿಸತಕ್ಕದು. ಮೇಲೆ ನಿಗದಿಪಡಿಸಿರುವ ಅವಧಿಯಲ್ಲಿ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಗಳಾಗಲೀ ಯಾರಿಂದಲೂ ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಅರ್ಜಿಯನ್ನೇ ವಿಚಾರಣೆಗೆ ತೆಗೆದುಕೊಳ್ಳಲಾಗುವುದು.

**ಹೆಚ್.ಎಲ್. ಗುರುಪ್ರಸಾದ್**
ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ
ಪರಿಹಾರ ಆಯುಕ್ತರು,
ಹಾಸನ ಉಪವಿಭಾಗ, ಹಾಸನ.

**ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಹಾಸನ ಉಪವಿಭಾಗ, ಹಾಸನ**
**ಸಂಖ್ಯೆ:ಕಾನಪ:ಎಫ್:ಎಸ್‌ಆರ್-07:2009, ದಿನಾಂಕ:2ನೇ ಮಾರ್ಚ್, 2009**

**ಅರ್ಜಿದಾರರು:**
1) ಶ್ರೀ ಶಿವೇಗೌಡ ಬಿನ್ ಲೇಟ್ ಬೀರೆಗೌಡ.
2) ಶ್ರೀಮತಿ ಶಿವಮ್ಮ ಕೋಂ ಶಿವೇಗೌಡ
ವಾಸ: ಸಿಂಗಟಗೆರೆ ಗ್ರಾಮ, ಸಾಲಗಾಮೆ ಹೋಬಳಿ, ಹಾಸನ ತಾಲ್ಲೂಕು.

ವಿರುದ್ಧ

**ಪ್ರತಿವಾದಿಗಳು:**
1) ಎಂ.ಡಿ. ಶ್ರೀನಿವಾಸ ಬಿನ್ ದೇವೇಗೌಡ, ಸೂರನಹಳ್ಳಿ ಗ್ರಾಮ, ಹೊಳೆನರಸೀಪುರ ತಾ:
2) ದಿ ಬಜಾಜ್ ಅಲಿಯಾನ್ಸ್ ಜನರಲ್ ಇನ್‌ಶೂರೆನ್ಸ್ ಕಂ.ಲಿ., ಬಿ.ಎಂ. ರಸ್ತೆ, ಹಾಸನ.

**ಪ್ರಕಟಣೆ**

ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೃತ ಮೋಹನ ರವರು ಪ್ರತಿವಾದಿಯಲ್ಲಿ ಕೆಲಸದ ಮೇಲಿದ್ದಾಗ ದಿನಾಂಕ:28.07.2008 ರಂದು ಸಾವನ್ನಪ್ಪಿರುತ್ತಾರೆ ಎಂದು ಕಾರ್ಮಿಕ ನಷ್ಟ ಪರಿಹಾರವನ್ನು ಕೋರಿ ಮೇಲ್ಕಂಡ ಮೃತರ ಅವಲಂಬಿತರು ಈ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ತಿಳಿಯಪಡಿಸುವುದೇನೆಂದರೆ, ಈ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದರೆ ಅಥವಾ ತಾವೇನಾದರೂ ಮೃತರ ನಿಜವಾದ ವಾರಸುದಾರರೆಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೆ ಅಂತಹವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿನಗಳೊಳಗಾಗಿ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಯನ್ನಾಗಲೀ ಈ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದು, ಮೇಲೆ ನಿಗದಿಪಡಿಸಿರುವ ಅವಧಿಯಲ್ಲಿ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಯನ್ನಾಗಲೀ ಈ ನ್ಯಾಯಾಲಯಕ್ಕೆ ಸಲ್ಲಿಸತಕ್ಕದು. ಮೇಲೆ ನಿಗದಿಪಡಿಸಿರುವ ಅವಧಿಯಲ್ಲಿ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಗಳಾಗಲೀ ಯಾರಿಂದಲೂ ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಅರ್ಜಿಯನ್ನೇ ವಿಚಾರಣೆಗೆ ತೆಗೆದುಕೊಳ್ಳಲಾಗುವುದು.

**ಹೆಚ್.ಎಲ್. ಗುರುಪ್ರಸಾದ್**
ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ
ಪರಿಹಾರ ಆಯುಕ್ತರು,
ಹಾಸನ ಉಪವಿಭಾಗ, ಹಾಸನ.

**ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಹಾಸನ ಉಪವಿಭಾಗ, ಹಾಸನ**
**ಸಂಖ್ಯೆ:ಕಾನಪ:ಎಫ್:ಎಸ್‌ಆರ್-08:2009, ದಿನಾಂಕ:2ನೇ ಮಾರ್ಚ್, 2009**

**ಅರ್ಜಿದಾರರು:**
1) ಶ್ರೀಮತಿ ಶಾರದಮ್ಮ ಕೋಂ ಲೇಟ್ ಶಿವಲಿಂಗಪ್ಪ
2) ಜಿ.ಎನ್. ದೇವರಾಜ್ ಬಿನ್ ಕೋಂ ಲೇಟ್ ಶಿವಲಿಂಗಪ್ಪ
3) ಜಿ.ಎನ್. ಪುಟ್ಟರಾಜ್ ಬಿನ್ ಕೋಂ ಲೇಟ್ ಶಿವಲಿಂಗಪ್ಪ
ವಾಸ: ಜವನಹಳ್ಳಿ, ಯಾದಾಪುರ ಅಂಚೆ, ಕಸಬಾ ಹೋಬಳಿ, ಅರಸೀಕೆರೆ ತಾಲ್ಲೂಕು.

ವಿರುದ್ಧ

**ಪ್ರತಿವಾದಿಗಳು:**
1) ಶ್ರೀನಿವಾಸ ಬಿನ್ ಲೇಟ್ ದ್ಯಾವೇಗೌಡ, ಜವನಹಳ್ಳಿ ಗ್ರಾಮ, ಯಾದಾಪುರ ಅಂಚೆ, ಅರಸೀಕೆರೆ ತಾಲ್ಲೂಕು.
2) ದಿ ನ್ಯಾಷನಲ್ ಇನ್‌ಶೂರೆನ್ಸ್ ಕಂ.ಲಿ., ಬಸ್‌ಸ್ಟ್ಯಾಂಡ್ ರಸ್ತೆ, ಹಾಸನ.

**ಪ್ರಕಟಣೆ**

ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೃತ ಶಿವಲಿಂಗಪ್ಪ ರವರು ಪ್ರತಿವಾದಿಯಲ್ಲಿ ಕೆಲಸದ ಮೇಲಿದ್ದಾಗ ದಿನಾಂಕ:29.07.2008 ರಂದು ಸಾವನ್ನಪ್ಪಿರುತ್ತಾರೆ ಎಂದು ಕಾರ್ಮಿಕ ನಷ್ಟ ಪರಿಹಾರವನ್ನು ಕೋರಿ ಮೇಲ್ಕಂಡ ಮೃತರ ಅವಲಂಬಿತರು ಈ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ತಿಳಿಯಪಡಿಸುವುದೇನೆಂದರೆ, ಈ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದರೆ ಅಥವಾ ತಾವೇನಾದರೂ ಮೃತರ ನಿಜವಾದ ವಾರಸುದಾರರೆಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೆ ಅಂತಹವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿನಗಳೊಳಗಾಗಿ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಯನ್ನಾಗಲೀ ಈ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದು, ಮೇಲೆ ನಿಗದಿಪಡಿಸಿರುವ ಅವಧಿಯಲ್ಲಿ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಯನ್ನಾಗಲೀ ಈ ನ್ಯಾಯಾಲಯಕ್ಕೆ ಸಲ್ಲಿಸತಕ್ಕದು. ಮೇಲೆ ನಿಗದಿಪಡಿಸಿರುವ ಅವಧಿಯಲ್ಲಿ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಗಳಾಗಲೀ ಯಾರಿಂದಲೂ ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಅರ್ಜಿಯನ್ನೇ ವಿಚಾರಣೆಗೆ ತೆಗೆದುಕೊಳ್ಳಲಾಗುವುದು.

**ಹೆಚ್.ಎಲ್. ಗುರುಪ್ರಸಾದ್**
ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ
ಪರಿಹಾರ ಆಯುಕ್ತರು,
ಹಾಸನ ಉಪವಿಭಾಗ, ಹಾಸನ.

**ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಹಾಸನ ಉಪವಿಭಾಗ, ಹಾಸನ**

**ಸಂಖ್ಯೆ:ಕಾನಪ:ಎಫ್:ಎಸ್‌ಆರ್-09:2009, ದಿನಾಂಕ:2ನೇ ಮಾರ್ಚ್, 2009**

| ಅರ್ಜಿದಾರರು: | | ಪ್ರತಿವಾದಿಗಳು: |
|---|---|---|
| 1) ಭಾಗ್ಯ ಕೋಂ ಲೇಟ್ ನಿಂಗೇಗೌಡ.<br>2) ಜೆ.ಎಂ. ಪ್ರದೀಪ, ಮತ್ತು ಇತರೆ 2 ಜನ.<br>ವಾಸ: ಜವನಹಳ್ಳಿ, ಯಾದಾಪುರ ಅಂಚೆ, ಅರಸೀಕೆರೆ ತಾಲ್ಲೂಕು. | ವಿರುದ್ಧ | 1) ಶ್ರೀನಿವಾಸ ಬಿನ್ ಲೇಟ್ ದ್ಯಾವೇಗೌಡ, ಜವನಹಳ್ಳಿ ಗ್ರಾಮ, ಯಾದಾಪುರ ಅಂಚೆ, ಅರಸೀಕೆರೆ ತಾಲ್ಲೂಕು.<br>2) ದಿ ನ್ಯಾಷನಲ್ ಇನ್‌ಶೂರೆನ್ಸ್ ಕಂ.ಲಿ., ಬಸ್‌ಸ್ಟ್ಯಾಂಡ್ ರಸ್ತೆ, ಹಾಸನ. |

**ಪ್ರಕಟಣೆ**

ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೃತ ನಿಂಗೇಗೌಡ ರವರು ಪ್ರತಿವಾದಿಯಲ್ಲಿ ಕೆಲಸದ ಮೇಲಿದ್ದಾಗ ದಿನಾಂಕ:29.07.2008 ರಂದು ಸಾವನ್ನಪ್ಪಿರುತ್ತಾರೆ ಎಂದು ಕಾರ್ಮಿಕ ನಷ್ಟ ಪರಿಹಾರವನ್ನು ಕೋರಿ ಮೇಲ್ಕಂಡ ಮೃತರ ಅವಲಂಬಿತರು ಈ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ತಿಳಿಯಪಡಿಸುವುದೇನೆಂದರೆ, ಈ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದರೆ ಅಥವಾ ತಾವೇನಾದರೂ ಮೃತರ ನಿಜವಾದ ವಾರಸುದಾರರೆಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೆ ಅಂತಹವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿನಗಳೊಳಗಾಗಿ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಯನ್ನಾಗಲೀ ಈ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದು, ಮೇಲೆ ನಿಗದಿಪಡಿಸಿರುವ ಅವಧಿಯಲ್ಲಿ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಯನ್ನಾಗಲೀ ಈ ನ್ಯಾಯಾಲಯಕ್ಕೆ ಸಲ್ಲಿಸತಕ್ಕದು. ಮೇಲೆ ನಿಗದಿಪಡಿಸಿರುವ ಅವಧಿಯಲ್ಲಿ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಗಳಾಗಲೀ ಯಾರಿಂದಲೂ ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಅರ್ಜಿಯನ್ನೇ ವಿಚಾರಣೆಗೆ ತೆಗೆದುಕೊಳ್ಳಲಾಗುವುದು.

**ಹೆಚ್.ಎಲ್. ಗುರುಪ್ರಸಾದ್**
ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ
ಪರಿಹಾರ ಆಯುಕ್ತರು,
ಹಾಸನ ಉಪವಿಭಾಗ, ಹಾಸನ.

ಪಿ.ಆರ್.236

**ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ಪರಿಹಾರ ಆಯುಕ್ತರ ನ್ಯಾಯಾಲಯ, ತಿಲಕ್‌ನಗರ, ನೆಹರು ಕ್ರೀಡಾಂಗಣ ಎದುರು, ಶಿವಮೊಗ್ಗ**

**ಸಂಖ್ಯೆ:ಡಬ್ಲೂಸಿಎ:ಸಿಆರ್-11/2009, ದಿನಾಂಕ:6ನೇ ಮಾರ್ಚ್, 2009**

| ಅರ್ಜಿದಾರರು: | | ಪ್ರತಿವಾದಿಗಳು: |
|---|---|---|
| 1) ರುದ್ರೇಶ್ ಬಿನ್ ಚೆನ್ನಪ್ಪ.<br>2) ನಿಕಿತಾ ಬಿನ್ ರುದ್ರೇಶ್,<br>3) ಸ್ನೇಹ ಬಿನ್ ರುದ್ರೇಶ್ | ವಿರುದ್ಧ | 1) ಬಾಬು ಖಾನ್ ಬಿನ್ ಅನ್ವರ್ ಖಾನ್, ಬಿಲ್ಡಿಂಗ್ ಕಂಟ್ರಾಕ್ಟರ್, ಮೋಮಿನ್ ಮೊಹಲ್ಲಾ ಅನ್ವರ್ ಕಾಲೋನಿ, ಭದ್ರಾವತಿ. |

2ನೇ ತಿರುವು ಬಲಭಾಗ, ಬೋವಿಕಾಲೋನಿ, ಭದ್ರಾವತಿ.

2) ಶೇಷಪ್ಪ ಬಿನ್ ಮಾರಾಬೋವಿ, ಕಾಂಕ್ರೀಟ್ ಕಂಟ್ರಾಕ್ಟರ್, ಬೋವಿ ಕಾಲೋನಿ ಎಡಭಾಗ, 2ನೇ ತಿರುವು, ಭದ್ರಾವತಿ.

3) ಸಯ್ಯದ್ ನಜೀವುಲ್ಲಾ ಬಿನ್ ಸಯ್ಯದ್ ಇಬ್ರಾಹಿಂ, ಮನೆ ಮಾಲೀಕರು, ಅನ್ವರ್ ಕಾಲೋನಿ, ಮೊಮಿನ್ ಮೊಹಲ್ಲಾ, ಭದ್ರಾವತಿ.

**ಅಧಿಸೂಚನೆ**

ಅರ್ಜಿದಾರರು ದಿ:ಸುಮತಿ, ಪ್ರತಿವಾದಿಗಳಲ್ಲಿ ಕೆಲಸಗಾರರಾಗಿದ್ದು, ಕೆಲಸದಲ್ಲಿ ನಿರತರಾಗಿದ್ದಾಗ ದಿನಾಂಕ: 15.02.2007ರಂದು ಸಂಭವಿಸಿದ ಅಪಘಾತಕ್ಕೀಡಾಗಿ ಮೃತರಾದರೆಂದು ಹೇಳಿ ಆಶ್ರಿತರಾದ ತಮಗೆ ಪ್ರತಿವಾದಿಯವರಿಂದ ಪರಿಹಾರವನ್ನು ಕೊಡಿಸಿಕೊಡಬೇಕೆಂದು ಈ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಆದ್ದರಿಂದ ಈ ವಿಷಯದಲ್ಲಿ ಈ ಅರ್ಜಿದಾರರಲ್ಲದೇ ಬೇರೆ ಯಾರಾದರೂ ಅರ್ಜಿದಾರರಾಗಿದ್ದು, ಅವರ ಅರ್ಜಿ ಅಥವಾ ತಕರಾರು ಏನಾದರೂ ಇದ್ದಲ್ಲಿ ಮತ್ತು ಈ ಅರ್ಜಿಗೆ ಸಂಬಂಧಿಸಿದ ಇನ್ನಿತರೇ ಯಾವುದೇ ರೀತಿಯ ತಕರಾರು ಇದ್ದಲ್ಲಿ ಈ ಅಧಿಸೂಚನೆ ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಯಾದಾಗಿನಿಂದ 30 ದಿನಗಳೊಳಗೆ ಈ ನ್ಯಾಯಾಲಯಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಈ ನಿಗದಿತ ಸಮಯದಲ್ಲಿ ಈ ನ್ಯಾಯಾಲಯವು ಯಾವ ಕ್ಲೈಮ್ ಅರ್ಜಿ/ ತಕರಾರು ಅರ್ಜಿ ಸ್ವೀಕರಿಸದಿದ್ದಲ್ಲಿ ಈ ನ್ಯಾಯಾಲಯವು ಮುಂದಿನ ಕ್ರಮವನ್ನು ಜರುಗಿಸಲಾಗುವುದು ಎಂದು ತಿಳಿಸಲಾಗಿದೆ.

**ಎಸ್. ವಿಜಯ್‌ಕುಮಾರ್**

ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ
ಪರಿಹಾರ ಆಯುಕ್ತರು, ಶಿವಮೊಗ್ಗ.

**ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ಪರಿಹಾರ ಆಯುಕ್ತರ ನ್ಯಾಯಾಲಯ, ತಿಲಕ್‌ನಗರ,**
**ನೆಹರು ಕ್ರೀಡಾಂಗಣ ಎದುರು, ಶಿವಮೊಗ್ಗ**

**ಸಂಖ್ಯೆ:ಡಬ್ಲ್ಯೂಸಿಎ:ಸಿಆರ್-12/2009, ದಿನಾಂಕ:6ನೇ ಮಾರ್ಚ್, 2009**

**ಅರ್ಜಿದಾರರು:**

ಶ್ರೀಮತಿ ಇಂದಿರಮ್ಮ @ ಇಂದ್ರಮ್ಮ, ಕೋಂ ದಿ:ಗದ್ದಿಗೇಶಪ್ಪ, ಹೋತನಕಟ್ಟೆ ಗ್ರಾಮ, ಶಿಕಾರಿಪುರ.

ವಿರುದ್ಧ

**ಪ್ರತಿವಾದಿಗಳು:**

1) ಶ್ರೀಮತಿ ಬಸಮ್ಮ ಕೋಂ [illegible] ಹೋತನಕಟ್ಟೆ ಗ್ರಾಮ, ಶಿಕಾರಿಪುರ.

2) ವ್ಯವಸ್ಥಾಪಕರು, ಯುನೈಟೆಡ್ ಇಂಡಿಯಾ ಇನ್ಸೂರೆನ್ಸ್ ಕಂ.ಲಿ., ಪಿ.ಬಿ.ನಂ.21, ಗೋವಿಂದ ಕೃಪ, ಟ್ರಸ್ಟ್‌ಬಿಲ್ಡಿಂಗ್, ಜೆ.ಸಿ. ರಸ್ತೆ, ಸಾಗರ.

**ಅಧಿಸೂಚನೆ**

ಅರ್ಜಿದಾರರು ದಿ: ಗದ್ದಿಗೇಶಪ್ಪ, ಪ್ರತಿವಾದಿಗಳಲ್ಲಿ ಕೆಲಸಗಾರರಾಗಿದ್ದು, ಕೆಲಸದಲ್ಲಿ ನಿರತರಾಗಿದ್ದಾಗ ದಿನಾಂಕ: 28.10.2007ರಂದು ಸಂಭವಿಸಿದ ಅಪಘಾತಕ್ಕೀಡಾಗಿ ಮೃತರಾದರೆಂದು ಹೇಳಿ ಆಶ್ರಿತರಾದ ತಮಗೆ ಪ್ರತಿವಾದಿಯವರಿಂದ ಪರಿಹಾರವನ್ನು ಕೊಡಿಸಿಕೊಡಬೇಕೆಂದು ಈ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಆದ್ದರಿಂದ ಈ ವಿಷಯದಲ್ಲಿ ಈ ಅರ್ಜಿದಾರರಲ್ಲದೇ ಬೇರೆ ಯಾರಾದರೂ ಅರ್ಜಿದಾರರಾಗಿದ್ದು, ಅವರ ಅರ್ಜಿ ಅಥವಾ ತಕರಾರು ಏನಾದರೂ ಇದ್ದಲ್ಲಿ ಮತ್ತು ಈ ಅರ್ಜಿಗೆ ಸಂಬಂಧಿಸಿದ ಇನ್ನಿತರೇ ಯಾವುದೇ ರೀತಿಯ ತಕರಾರು ಇದ್ದಲ್ಲಿ ಈ ಅಧಿಸೂಚನೆ ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಯಾದಾಗಿನಿಂದ 30 ದಿನಗಳೊಳಗೆ ಈ ನ್ಯಾಯಾಲಯಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಈ ನಿಗದಿತ ಸಮಯದಲ್ಲಿ ಈ ನ್ಯಾಯಾಲಯವು ಯಾವ ಕ್ಲೈಮ್ ಅರ್ಜಿ/ ತಕರಾರು ಅರ್ಜಿ ಸ್ವೀಕರಿಸದಿದ್ದಲ್ಲಿ ಈ ನ್ಯಾಯಾಲಯವು ಮುಂದಿನ ಕ್ರಮವನ್ನು ಜರುಗಿಸಲಾಗುವುದು ಎಂದು ತಿಳಿಸಲಾಗಿದೆ.

**ಎಸ್. ವಿಜಯ್‌ಕುಮಾರ್**

ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ
ಪರಿಹಾರ ಆಯುಕ್ತರು, ಶಿವಮೊಗ್ಗ.

**ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ಪರಿಹಾರ ಆಯುಕ್ತರ ನ್ಯಾಯಾಲಯ, ತಿಲಕ್‌ನಗರ,**
**ನೆಹರು ಕ್ರೀಡಾಂಗಣ ಎದುರು, ಶಿವಮೊಗ್ಗ**

**ಸಂಖ್ಯೆ:ಡಬ್ಲ್ಯೂಸಿಎ:ಸಿಆರ್-14/2009, ದಿನಾಂಕ:6ನೇ ಮಾರ್ಚ್, 2009**

**ಅರ್ಜಿದಾರರು:**

1) ಶ್ರೀಮತಿ ಭಾಗ್ಯ, ಕೋಂ ದಿ: ಹೆಚ್.ಶೇಖರ್.

2) ಸುದೀಪ್ ಬಿನ್ ದಿ: ಹೆಚ್.ಶೇಖರ್.

ವಿರುದ್ಧ

**ಪ್ರತಿವಾದಿಗಳು:**

1) ಮೆ: ಸುಭಾಷ್ ಪ್ರಾಜೆಕ್ಟ್ ಮತ್ತು ಮಾರ್ಕೆಟಿಂಗ್ ಲಿ., ನಂ.8/02, ಅಲಸೂರು ರಸ್ತೆ, ಬೆಂಗಳೂರು.

3) ಸ್ಫೂರ್ತಿ ಬಿನ್ ದಿ: ಹೆಚ್.ಶೇಖರ್,
4) ಮೈಲಾರಪ್ಪ ಬಿನ್ ಮರಿಯಪ್ಪ
5) ಶ್ರೀಮತಿ ಬಸಮ್ಮ ಕೋಂ ಮೈಲಾರಪ್ಪ
ವಾಸ: ಹತ್ತೂರು ಗ್ರಾಮ, ಹೊನ್ನಾಳಿ ತಾಲ್ಲೂಕು.

2) ಡಿ. ವಾಸುದೇವ ರಾವ್ ಬಿನ್ ಡಿ. ಮಲ್ಲಿಕಾರ್ಜುನ ರಾವ್, ಸಬ್ ಕಂಟ್ರಾಕ್ಟರ್, ಮೆ: ಸುಭಾಷ್ ಪ್ರಾಜೆಕ್ಟ್ ಮತ್ತು ಮಾರ್ಕೆಟಿಂಗ್ ಲಿ., ನಂ.8/02, ಅಲಸೂರು ರಸ್ತೆ, ಬೆಂಗಳೂರು.

**ಅಧಿಸೂಚನೆ**

ಅರ್ಜಿದಾರರು ದಿ:ಶೇಖರ್ ಪ್ರತಿವಾದಿಗಳಲ್ಲಿ ಕೆಲಸಗಾರರಾಗಿದ್ದು, ಕೆಲಸದಲ್ಲಿ ನಿರತರಾಗಿದ್ದಾಗ ದಿನಾಂಕ: 03.03.2008ರಂದು ಸಂಭವಿಸಿದ ಅಪಘಾತಕ್ಕೀಡಾಗಿ ಮೃತರಾದರೆಂದು ಹೇಳಿ ಆಶ್ರಿತರಾದ ತಮಗೆ ಪ್ರತಿವಾದಿಯವರಿಂದ ಪರಿಹಾರವನ್ನು ಕೊಡಿಸಿಕೊಡಬೇಕೆಂದು ಈ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಆದ್ದರಿಂದ ಈ ವಿಷಯದಲ್ಲಿ ಈ ಅರ್ಜಿದಾರರಲ್ಲದೇ ಬೇರೆ ಯಾರಾದರೂ ಅರ್ಜಿದಾರರಾಗಿದ್ದು, ಅವರ ಅರ್ಜಿ ಅಥವಾ ತಕರಾರು ಏನಾದರೂ ಇದ್ದಲ್ಲಿ ಮತ್ತು ಈ ಅರ್ಜಿಗೆ ಸಂಬಂಧಿಸಿದ ಇನ್ನಿತರೇ ಯಾವುದೇ ರೀತಿಯ ತಕರಾರು ಇದ್ದಲ್ಲಿ ಈ ಅಧಿಸೂಚನೆ ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಯಾದಾಗಿನಿಂದ 30 ದಿನಗಳೊಳಗೆ ಈ ನ್ಯಾಯಾಲಯಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಈ ನಿಗದಿತ ಸಮಯದಲ್ಲಿ ಈ ನ್ಯಾಯಾಲಯವು ಯಾವ ಕ್ಲೈಮ್ ಅರ್ಜಿ/ ತಕರಾರು ಅರ್ಜಿ ಸ್ವೀಕರಿಸದಿದ್ದಲ್ಲಿ ಈ ನ್ಯಾಯಾಲಯವು ಮುಂದಿನ ಕ್ರಮವನ್ನು ಜರುಗಿಸಲಾಗುವುದು ಎಂದು ತಿಳಿಸಲಾಗಿದೆ.

**ಎಸ್. ವಿಜಯ್‌ಕುಮಾರ್**

ಪಿ.ಆರ್.244

ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ಪರಿಹಾರ ಆಯುಕ್ತರು, ಶಿವಮೊಗ್ಗ.

**ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ಪರಿಹಾರ ಆಯುಕ್ತರ ನ್ಯಾಯಾಲಯ, ತಿಲಕ್‌ನಗರ, ನೆಹರು ಕ್ರೀಡಾಂಗಣ ಎದುರು, ಶಿವಮೊಗ್ಗ**

**ಸಂಖ್ಯೆ:ಡಬ್ಲ್ಯೂಸಿಎ:ಸಿಆರ್-17/2009, ದಿನಾಂಕ:21ನೇ ಮಾರ್ಚ್, 2009**

**ಅರ್ಜಿದಾರರು:**

1) ಶ್ರೀಮತಿ ಖೈರುಂಬಿ ಕೋಂ ಅಬ್ದುಲ್ ಖಲೀಲ್ ಸಾಬ್.
2) ಹೀನಾ ಬಿನ್ ಅಬ್ದುಲ್ ಖಲೀಲ್ ಸಾಬ್,
3) ಅಕ್ಬರ್ ಬಾಷ ಬಿನ್ ಅಬ್ದುಲ್ ಖಲೀಲ್ ಸಾಬ್,
4) ನಾಜಿಯಾ ಬಿನ್ ಅಬ್ದುಲ್ ಖಲೀಲ್ ಸಾಬ್,
5) ಉಸ್ಮಾನ್ ಬಿನ್ ಅಬ್ದುಲ್ ಖಲೀಲ್ ಸಾಬ್.
ಎಲ್ಲರ ವಾಸ: ಬೈಪಾಸ್ ರಸ್ತೆ, ವಾದಿಯೇಹುದಾ ಬಡಾವಣೆ, ಶಿವಮೊಗ್ಗ.

**ವಿರುದ್ಧ**

**ಪ್ರತಿವಾದಿಗಳು:**

1) ವಿ.ಪಿ. ರವಿ ಬಿನ್ ಗೋವಿಂದನ್, ಲಾರಿ ಚಾಲಕ ಕೇರ್‌ಆಫ್ ಕೆ. ನಾಣು, ವೆಟ್ಟನಗಾರಿ, ರಬ್ಬರ್ ಎಸ್ಟೇಟ್, ರಿಪ್ಪನ್‌ಪೇಟೆ.
2) ಕೆ. ನಾಣು ಬಿನ್ ಕುಂಜಪ್ಪ, ಕೆಎ-15/4809ರ ಲಾರಿ ಮಾಲೀಕರು, ವೆಟ್ಟನಗಾರಿ ರಬ್ಬರ್ ಎಸ್ಟೇಟ್, ರಿಪ್ಪನ್‌ಪೇಟೆ, ಹೊಸನಗರ ತಾಲ್ಲೂಕು.
3) ಮೆ: ಓರಿಯೆಂಟಲ್ ಇನ್ಸೂರೆನ್ಸ್ ಕಂ.ಲಿ., ಗಾರ್ಡನ್ ಏರಿಯಾ, 2ನೇ ತಿರುವು, ಶಿವಮೊಗ್ಗ.

**ಅಧಿಸೂಚನೆ**

ಅರ್ಜಿದಾರರು ದಿ:ಶೇಖರ್ ಪ್ರತಿವಾದಿಗಳಲ್ಲಿ ಕೆಲಸಗಾರರಾಗಿದ್ದು, ಕೆಲಸದಲ್ಲಿ ನಿರತರಾಗಿದ್ದಾಗ ದಿನಾಂಕ: 03.03.2008ರಂದು ಸಂಭವಿಸಿದ ಅಪಘಾತಕ್ಕೀಡಾಗಿ ಮೃತರಾದರೆಂದು ಹೇಳಿ ಆಶ್ರಿತರಾದ ತಮಗೆ ಪ್ರತಿವಾದಿಯವರಿಂದ ಪರಿಹಾರವನ್ನು ಕೊಡಿಸಿಕೊಡಬೇಕೆಂದು ಈ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಆದ್ದರಿಂದ ಈ ವಿಷಯದಲ್ಲಿ ಈ ಅರ್ಜಿದಾರರಲ್ಲದೇ ಬೇರೆ ಯಾರಾದರೂ ಅರ್ಜಿದಾರರಾಗಿದ್ದು, ಅವರ ಅರ್ಜಿ ಅಥವಾ ತಕರಾರು ಏನಾದರೂ ಇದ್ದಲ್ಲಿ ಮತ್ತು ಈ ಅರ್ಜಿಗೆ ಸಂಬಂಧಿಸಿದ ಇನ್ನಿತರೇ ಯಾವುದೇ ರೀತಿಯ ತಕರಾರು ಇದ್ದಲ್ಲಿ ಈ ಅಧಿಸೂಚನೆ ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಯಾದಾಗಿನಿಂದ 30 ದಿನಗಳೊಳಗೆ ಈ ನ್ಯಾಯಾಲಯಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಈ ನಿಗದಿತ ಸಮಯದಲ್ಲಿ ಈ ನ್ಯಾಯಾಲಯವು ಯಾವ ಕ್ಲೈಮ್ ಅರ್ಜಿ/ ತಕರಾರು ಅರ್ಜಿ ಸ್ವೀಕರಿಸದಿದ್ದಲ್ಲಿ ಈ ನ್ಯಾಯಾಲಯವು ಮುಂದಿನ ಕ್ರಮವನ್ನು ಜರುಗಿಸಲಾಗುವುದು ಎಂದು ತಿಳಿಸಲಾಗಿದೆ.

**ಎಸ್. ವಿಜಯ್‌ಕುಮಾರ್**

ಪಿ.ಆರ್.275

ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ಪರಿಹಾರ ಆಯುಕ್ತರು, ಶಿವಮೊಗ್ಗ.

**ಕಾರ್ಮಿಕ ಅಧಿಕಾರಿಗಳು ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರವರ ನ್ಯಾಯಾಲಯ, ರಾಮನಗರ ಜಿಲ್ಲೆ, ರಾಮನಗರ**

**ಪ್ರಕಟಣೆ ಸಂಖ್ಯೆ:ಕಾಅರಾ/ಕಾನಪ/ಮರಣ/ಸಿಆರ್-106/2008, ದಿನಾಂಕ:23ನೇ ಮಾರ್ಚ್, 2009**

**ಅರ್ಜಿದಾರರು:**

1) ಶ್ರೀ ಎಂ.ಪಿ.ಸಿ. ನಾಗರಾಜು ಬಿನ್ ಚೂಡೇಗೌಡ @ ಬಕ್ಕೇಗೌಡ.

**ವಿರುದ್ಧ**

**ಪ್ರತಿವಾದಿಗಳು:**

1) ಶ್ರೀ ರವಿಕುಮಾರ್ ಬಿನ್ ಗಂಗಾಧರ್, ನಂ.366, 9ನೇ ಮೇನ್, 2ನೇ ಕ್ರಾಸ್, ವಿಜಯನಗರ, ಬೆಂಗಳೂರು-560040.

2) ಶ್ರೀಮತಿ ಲಕ್ಷ್ಮಮ್ಮ ಕೋಂ ಶ್ರೀ ಎಂ.ಪಿ.ಸಿ. ನಾಗರಾಜು.
ವಾಸ: ನಂ.156, ಮಾರುತಿನಗರ, ಕಾಮಾಕ್ಷಿಪಾಳ್ಯ, ಬೆಂಗಳೂರು.

2) ಬಜಾಜ್ ಅಲಿಯಾನ್ಸ್ ಜನರಲ್ ಇನ್ಷೂರೆನ್ಸ್ ಕಂ.ಲಿ., 105ಎ/107ಎ, 136, ರೆಸಿಡೆನ್ಸಿ ರಸ್ತೆ, ಬೆಂಗಳೂರು-560 025.

**ಪ್ರಕಟಣೆ**

ಈ ಮೇಲೆ ವಿಳಾಸಿಸಿರುವ ಅರ್ಜಿದಾರರು ದಿನಾಂಕ:08.12.2008 ರಂದು ಈ ನ್ಯಾಯಾಲಯಕ್ಕೆ ಅರ್ಜಿಯೊಂದನ್ನು ಸಲ್ಲಿಸಿ, 1ನೇ ಮತ್ತು 2ನೇ ಅರ್ಜಿದಾರರ ಮಗನಾದ ಲೇಟ್ ಅನಿಲ್‌ಕುಮಾರ್ @ ಅನಿಲ್‌ರಾಜ್ ಎಂಬುವವರು ಮೇಲೆ ವಿಳಾಸಿಸಿರುವ 1ನೇ ಪ್ರತಿವಾದಿಯವರ ಬಳಿ ಕೆಲಸ ನಿರ್ವಹಿಸುತ್ತಿದ್ದಾಗ ಉದ್ಯೋಗ ಸಮಯದಲ್ಲಿ ಅಪಘಾತ ಸಂಭವಿಸಿ, ಮರಣ ಹೊಂದಿರುತ್ತಾರೆಂದು ತಿಳಿಸಿ, ಮೇಲೆ ವಿಳಾಸಿಸಿರುವ ಪ್ರತಿವಾದಿಗಳ ವಿರುದ್ಧ ಕ್ರಮ ತೆಗೆದುಕೊಂಡು ತಮಗೆ ಕಾಯ್ದೆಯನ್ವಯ ಕಾರ್ಮಿಕ ನಷ್ಟ ಪರಿಹಾರ ಕೊಡಿಸಿಕೊಡಬೇಕೆಂದು ಈ ನ್ಯಾಯಾಲಯವನ್ನು ಪ್ರಾರ್ಥಿಸಿರುತ್ತಾರೆ.

ಆದ್ದರಿಂದ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಪ್ರಕಟಣೆ ಮೂಲಕ ತಿಳಿಸುವುದೇನೆಂದರೆ ಈ ಬಗ್ಗೆ ತಮ್ಮ ಆಕ್ಷೇಪಣೆಗಳೇನಾದರೂ ಇದ್ದರೆ ಹಾಗೂ ಅರ್ಜಿದಾರರಲ್ಲದೆ ತಾವೇನಾದರೂ ಮೃತರ ನಿಜವಾದ "ಅವಲಂಬಿತರು" ಎಂದು ಕೇಳಿಕೊಳ್ಳುವುದಾದರೆ ಅಂಥವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿವಸಗಳೊಳಗಾಗಿ ತಮ್ಮ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಗಳನ್ನು ಈ ನ್ಯಾಯಾಲಯಕ್ಕೆ ಸಲ್ಲಿಸಬೇಕು. ನಿಗದಿಪಡಿಸಿದ ಅವಧಿಯಲ್ಲಿ ಯಾರಿಂದಲೂ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಗಳಾಗಲೀ ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಕ್ಲೈಮ್ ಅರ್ಜಿಯ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುವುದು. ತದನಂತರ ಬಂದ ಆಕ್ಷೇಪಣೆ ಅಥವಾ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ.

**ಮೀನಾಪಾಟೀಲ್**
ಕಾರ್ಮಿಕ ಅಧಿಕಾರಿಗಳು ಹಾಗೂ ಕಾರ್ಮಿಕ ನಷ್ಟ
ಪರಿಹಾರ ಆಯುಕ್ತರವರ ನ್ಯಾಯಾಲಯ,
ರಾಮನಗರ ಜಿಲ್ಲೆ, ರಾಮನಗರ.

**ಕಾರ್ಮಿಕ ಅಧಿಕಾರಿಗಳು ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರವರ ನ್ಯಾಯಾಲಯ,**
**ರಾಮನಗರ ಜಿಲ್ಲೆ, ರಾಮನಗರ**

**ಪ್ರಕಟಣೆ ಸಂಖ್ಯೆ:ಕಾಅರಾ/ಕಾನಪ/ಮರಣ/ಸಿಆರ್-19/2009, ದಿನಾಂಕ:23ನೇ ಮಾರ್ಚ್, 2009**

**ಅರ್ಜಿದಾರರು:**

1) ಕಸ್ತಿ ಚಿಂಚಾನಿ ಬಿನ್ ಅರ್ಜುನ ಚಿಂಚಾನಿ,
2) ಮೇರಿ ಚಿಂಚಾನಿ, ಕೋಂ ಕಸ್ತಿ ಚಿಂಚಾನಿ,
ಪರಿಮಳ ವಿಲೇಜ್, ಉದಯಗಿರಿ ತಾಲ್ಲೂಕು, ಗಣಪತಿ ಜಿಲ್ಲೆ.
ಹಾಲಿ ವಾಸ: ರೆವಿನ್ಯೂ ಆಫೀಸ್ ಕಾಂಪ್ಲೆಕ್ಸ್, ನಿರ್ಮಾಣ ಸ್ಥಳದ ಹತ್ತಿರ, ಉಪವಿಭಾಗ, ಪಿ.ಡಬ್ಲ್ಯೂಡಿ. ಕ್ವಾರ್ಟಸ್, ರಾಮನಗರ.

**ವಿರುದ್ಧ**

**ಪ್ರತಿವಾದಿಗಳು:**

1) ಮೆ: ರಾಮ್ಕಿ ಇನ್‌ಫ್ರಾಸ್ಟ್ರಕ್ಚರ್ ಲಿ., ನಂ.10, 4ನೇ ಕ್ರಾಸ್, ಸಮೃದ್ಧಿ ಕಾಂಪ್ಲೆಕ್ಸ್ ಇಸ್ರೋ ರಸ್ತೆ, ಮಯೂರಿ ಹೋಟೆಲ್ ಹತ್ತಿರ, ಬಿ.ಇ.ಎಲ್. ರಸ್ತೆ, ಬೆಂಗಳೂರು-94.
2) ದಿ ಮ್ಯಾನೇಜರ್, ಬಜಾಜ್ ಅಲೈನ್ಸ್ ಜನರಲ್ ಇನ್ಷೂರೆನ್ಸ್ ಕಂ.ಲಿ., ನಂ.31, ಗ್ರೌಂಡ್ ಫ್ಲೋರ್, ಟಿಬಿಆರ್ ಟವರ್, 1ನೇ ಕ್ರಾಸ್, ಮಿಷನ್ ರಸ್ತೆ, ಹತ್ತಿರ, ಬೆಂಗಳೂರು.

**ಪ್ರಕಟಣೆ**

ಈ ಮೇಲೆ ವಿಳಾಸಿಸಿರುವ ಅರ್ಜಿದಾರರು ದಿನಾಂಕ:19.03.2009 ರಂದು ಈ ನ್ಯಾಯಾಲಯಕ್ಕೆ ಅರ್ಜಿಯೊಂದನ್ನು ಸಲ್ಲಿಸಿ, 1ನೇ ಮತ್ತು 2ನೇ ಅರ್ಜಿದಾರರ ಮಗನಾದ ಲೇಟ್ ಸುಶಾಂತ್ ಚಿಂಚಾನಿ ಎಂಬುವವರು ಮೇಲೆ ವಿಳಾಸಿಸಿರುವ 1ನೇ ಪ್ರತಿವಾದಿಯವರ ಬಳಿ ಕೆಲಸ ನಿರ್ವಹಿಸುತ್ತಿದ್ದಾಗ ಉದ್ಯೋಗ ಸಮಯದಲ್ಲಿ ಅಪಘಾತ ಸಂಭವಿಸಿ, ಮರಣ ಹೊಂದಿರುತ್ತಾರೆಂದು ತಿಳಿಸಿ, ಮೇಲೆ ವಿಳಾಸಿಸಿರುವ ಪ್ರತಿವಾದಿಗಳ ವಿರುದ್ಧ ಕ್ರಮ ತೆಗೆದುಕೊಂಡು ತಮಗೆ ಕಾಯ್ದೆಯನ್ವಯ ಕಾರ್ಮಿಕ ನಷ್ಟ ಪರಿಹಾರ ಕೊಡಿಸಿಕೊಡಬೇಕೆಂದು ಈ ನ್ಯಾಯಾಲಯವನ್ನು ಪ್ರಾರ್ಥಿಸಿರುತ್ತಾರೆ.

ಆದ್ದರಿಂದ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಪ್ರಕಟಣೆ ಮೂಲಕ ತಿಳಿಸುವುದೇನೆಂದರೆ ಈ ಬಗ್ಗೆ ತಮ್ಮ ಆಕ್ಷೇಪಣೆಗಳೇನಾದರೂ ಇದ್ದರೆ ಹಾಗೂ ಅರ್ಜಿದಾರರಲ್ಲದೆ ತಾವೇನಾದರೂ ಮೃತರ ನಿಜವಾದ "ಅವಲಂಬಿತರು" ಎಂದು ಕೇಳಿಕೊಳ್ಳುವುದಾದರೆ ಅಂಥವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿವಸಗಳೊಳಗಾಗಿ ತಮ್ಮ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಗಳನ್ನು ಈ ನ್ಯಾಯಾಲಯಕ್ಕೆ ಸಲ್ಲಿಸಬೇಕು. ನಿಗದಿಪಡಿಸಿದ ಅವಧಿಯಲ್ಲಿ ಯಾರಿಂದಲೂ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಗಳಾಗಲೀ ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಕ್ಲೈಮ್ ಅರ್ಜಿಯ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುವುದು. ತದನಂತರ ಬಂದ ಆಕ್ಷೇಪಣೆ ಅಥವಾ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ.

**ಮೀನಾಪಾಟೀಲ್**
ಕಾರ್ಮಿಕ ಅಧಿಕಾರಿಗಳು ಹಾಗೂ ಕಾರ್ಮಿಕ ನಷ್ಟ
ಪರಿಹಾರ ಆಯುಕ್ತರವರ ನ್ಯಾಯಾಲಯ,
ರಾಮನಗರ ಜಿಲ್ಲೆ, ರಾಮನಗರ.

ಕಾರ್ಮಿಕ ಅಧಿಕಾರಿಗಳು ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರವರ ನ್ಯಾಯಾಲಯ, ರಾಮನಗರ ಜಿಲ್ಲೆ, ರಾಮನಗರ

ಪ್ರಕಟಣೆ ಸಂಖ್ಯೆ:ಕಾಅರಾ/ಕಾನಪ/ಮರಣ/ಸಿಆರ್-20/2009, ದಿನಾಂಕ:23ನೇ ಮಾರ್ಚ್, 2009

ಅರ್ಜಿದಾರರು:
1) ಶ್ರೀಮತಿ ಸುಶೀಲಮ್ಮ ಕೋಂ ಲೇಟ್ ಮರಿಗೋವಿಂದೇಗೌಡ,
2) ಸುಧಾ ಬಿನ್ ಲೇಟ್ ಮರಿಗೋವಿಂದೇಗೌಡ.
3) ಪುಟ್ಟಸ್ವಾಮಿ ಬಿನ್ ಲೇಟ್ ಮರಿಗೋವಿಂದೇಗೌಡ.
4) ಲಕ್ಷ್ಮಿ ಬಿನ್ ಲೇಟ್ ಮರಿಗೋವಿಂದೇಗೌಡ.
ಕುಡ್ಲೂರು, ಚನ್ನಪಟ್ಟಣ, ರಾಮನಗರ.

ವಿರುದ್ಧ

ಪ್ರತಿವಾದಿಗಳು:
1) ನ್ಯಾಷನಲ್ ಇನ್ಸೂರೆನ್ಸ್ ಕಂ.ಲಿ., 1ನೇ ಫ್ಲೋರ್, ನಂ.1576, ವಿಶ್ವೇಶ್ವರಯ್ಯ ರಸ್ತೆ, ಪೋಸ್ಟ್ ಬಾಕ್ಸ್ ನಂ.51, ಮಂಡ್ಯ.
2) ಶ್ರೀ ಎಸ್. ಸಿದ್ದಪ್ಪ ಬಿನ್ ಸಿದ್ದಯ್ಯ, ಅಳುಕೆರೆ ಪೋಸ್ಟ್, ಮಂಡ್ಯ, ಆಲಕೆರೆ ಗ್ರಾಮ.

**ಪ್ರಕಟಣೆ**

ಈ ಮೇಲೆ ವಿಳಾಸಿಸಿರುವ ಅರ್ಜಿದಾರರು ದಿನಾಂಕ:17.03.2009 ರಂದು ಈ ನ್ಯಾಯಾಲಯಕ್ಕೆ ಅರ್ಜಿಯೊಂದನ್ನು ಸಲ್ಲಿಸಿ, 1ನೇ ಅರ್ಜಿದಾರರ ಮಗ ಹಾಗೂ 2ನೇ, 3ನೇ ಮತ್ತು 4ನೇ ಅರ್ಜಿದಾರರ ಸಹೋದರನಾದ ಲೇಟ್ ಗೋವಿಂದೇಗೌಡ ಎಂಬುವವರು ಮೇಲೆ ವಿಳಾಸಿಸಿರುವ 2ನೇ ಪ್ರತಿವಾದಿಯವರ ಬಳಿ ಕೆಲಸ ನಿರ್ವಹಿಸುತ್ತಿದ್ದಾಗ ಉದ್ಯೋಗ ಸಮಯದಲ್ಲಿ ಅಪಘಾತ ಸಂಭವಿಸಿ, ಮರಣ ಹೊಂದಿರುತ್ತಾರೆಂದು ತಿಳಿಸಿ, ಮೇಲೆ ವಿಳಾಸಿಸಿರುವ ಪ್ರತಿವಾದಿಗಳ ವಿರುದ್ಧ ಕ್ರಮ ತೆಗೆದುಕೊಂಡು ತಮಗೆ ಕಾಯ್ದೆಯನ್ವಯ ಕಾರ್ಮಿಕ ನಷ್ಟ ಪರಿಹಾರ ಕೊಡಿಸಿಕೊಡಬೇಕೆಂದು ಈ ನ್ಯಾಯಾಲಯವನ್ನು ಪ್ರಾರ್ಥಿಸಿರುತ್ತಾರೆ.

ಆದ್ದರಿಂದ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಪ್ರಕಟಣೆ ಮೂಲಕ ತಿಳಿಸುವುದೇನೆಂದರೆ ಈ ಬಗ್ಗೆ ತಮ್ಮ ಆಕ್ಷೇಪಣೆಗಳೇನಾದರೂ ಇದ್ದರೆ ಹಾಗೂ ಅರ್ಜಿದಾರರಲ್ಲದೆ ತಾವೇನಾದರೂ ಮೃತರ ನಿಜವಾದ "ಅವಲಂಬಿತರು" ಎಂದು ಕೇಳಿಕೊಳ್ಳುವುದಾದರೆ ಅಂಥವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿವಸಗಳೊಳಗಾಗಿ ತಮ್ಮ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಗಳನ್ನು ಈ ನ್ಯಾಯಾಲಯಕ್ಕೆ ಸಲ್ಲಿಸಬೇಕು. ನಿಗದಿಪಡಿಸಿದ ಅವಧಿಯಲ್ಲಿ ಯಾರಿಂದಲೂ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಗಳಾಗಲೀ ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಕ್ಲೈಮ್ ಅರ್ಜಿಯ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುವುದು. ತದನಂತರ ಬಂದ ಆಕ್ಷೇಪಣೆ ಅಥವಾ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ.

**ಮೀನಾಪಾಟೀಲ್**
ಕಾರ್ಮಿಕ ಅಧಿಕಾರಿಗಳು ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರವರ ನ್ಯಾಯಾಲಯ, ರಾಮನಗರ ಜಿಲ್ಲೆ, ರಾಮನಗರ.

ಪಿ.ಆರ್.282

## DEPARTMENT OF COMMERCIAL TAXES

**Office of the Commissioner of Commercial Taxes in Karnataka, Gandhinagar, Bangalore**

**NOTIFICATION**

**No.KSA CR.155/2007-08, Dated:8th June, 2009**

In exercise of the powers under clause (b) of sub-rule (3) of Rule 33 of the Karnataka value Added Tax Rules, 2005, it is hereby notified that, commencing from the tax period of the month of June, 2009,-

1) every dealer registered under the Karnataka Value Added Tax Act, 2003 who is effecting sale of any goods in the course of export outside the territory of India; and

2) every dealer registered under the Karnataka Value Added Tax Act, 2003 who is claiming deduction of input tax of five lakh rupees or more under section 10 of the said Act for the year ending 31st March, 2008 or in any subsequent year as declared in the monthly returns filed for that year, shall enter in the website: http://vat.kar.nic.in/, the details of-

i) his purchase of goods made within the State from other registered dealers in respect of which he is eligible to claim refund or deduction of input tax,

ii) his sales of goods in the course of export outside the territory of India, and

iii) his sales of goods made to other registered dealers in the State,

on or before the 20th day of the succeeding month in the following manner:

(a) The dealer shall operate his account in the website using the user name and password communicated to him by the Commissioner and in case such user name and password is not communicated by 30th June, 2009, he shall obtain the same from the Commissioner or from the jurisdictional Local VAT officer or VAT sub-officer.

(b) He shall follow the procedure and instructions as specified in the website to enter the details specified in clauses (i), (ii) and (iii) above.

**Explanation:** This notification shall not be applicable to those dealers who are covered by earlier notifications already issued under clause (b) of sub-rule (3) of Rule 33 of the Karnataka value Added Tax Rules, 2005.

**B.A. HARISH GOWDA**
Commissioner of Commercial Taxes in Karnataka, Bangalore.

PR-529

KA / BG-GPO/2515/WPP-47/2009-2011

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು


| ಸಂಪುಟ ೧೪೪ | ಬೆಂಗಳೂರು, ಗುರುವಾರ, ಜುಲೈ ೨, ೨೦೦೯ (ಆಷಾಢ ೧೧, ಶಕ ವರ್ಷ ೧೯೩೧) | ಸಂಚಿಕೆ ೨೭ |
|---|---|---|


## ಭಾಗ–೪

## ಕೇಂದ್ರದ ವಿಧೇಯಕಗಳು ಮತ್ತು ಅವುಗಳ ಮೇಲೆ ಪರಿಶೀಲನಾ ಸಮಿತಿಯ ವರದಿಗಳು, ಕೇಂದ್ರದ ಅಧಿನಿಯಮಗಳು ಮತ್ತು ಅಧ್ಯಾದೇಶಗಳು, ಕೇಂದ್ರ ಸರ್ಕಾರದವರು ಹೊರಡಿಸಿದ ಸಾಮಾನ್ಯ ಶಾಸನಬದ್ಧ ನಿಯಮಗಳು ಮತ್ತು ಶಾಸನಬದ್ಧ ಆದೇಶಗಳು ಮತ್ತು ರಾಷ್ಟ್ರಪತಿಯವರಿಂದ ರಚಿತವಾಗಿ ರಾಜ್ಯ ಸರ್ಕಾರದವರಿಂದ ಪುನಃ ಪ್ರಕಟವಾದ ಆದೇಶಗಳು.

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

ಅಧಿಸೂಚನೆ

**ಸಂಖ್ಯೆ: ಸಂವ್ಯಶಾಇ 33 ಕೇಶಾಪ್ರ 2009, ಬೆಂಗಳೂರು, ದಿನಾಂಕ: 13ನೇ ಮೇ 2009**

2009ನೇ ಸಾಲಿನ ಮಾರ್ಚ್ 20ನೇ ದಿನಾಂಕದ ಭಾರತ ಸರ್ಕಾರದ ಗೆಜೆಟ್‌ನ ವಿಶೇಷ ಸಂಚಿಕೆಯ ಭಾಗ–II ಸೆಕ್ಷನ್ 1 ರಲ್ಲಿ ಪ್ರಕಟವಾದ ಈ ಕೆಳಕಂಡ The Finance Act, 2009 (Act No.26 of 2009) ಅನ್ನು ಸಾರ್ವಜನಿಕರ ಮಾಹಿತಿಗಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಮರು ಪ್ರಕಟಿಸಲಾಗಿದೆ.

**MINISTRY OF LAW AND JUSTICE**

**(Legislative Department)**

**New Delhi, the 20th March, 2009/Phalguna, 29, 1930 (Saka)**

The following Act of Parliament received the assent of the President on the 20th March, 2009, and is hereby published for general information:

**THE FINANCE ACT, 2009,**

**No.26 OF 2009**

[20th March, 2009]

An Act to continue the existing rates of income-tax for the financial year 2009-10.

BE it enacted by Parliament in the Sixtieth year of the Republic of India as follows:

**1. Short title and commencement:** (1) This Act may be called the Finance Act, 2009

(2) Section 2 shall come into force on the 1st day of April 2009.

